విజయ

కన్నెర దిన వర్తి పత్రిక

ప్రారంభ	మంగళవారం తారీఖు	౧ తే	డిశంబరు ౨౦'	౧౯౫౩.	ఎండ
	బుధవారం	౨ తే	"	౧౯౫౩	ఎండ.
	గురువారం	౩ తే	"	"	"
	శుక్రవారం	౪ తే	"	"	ఎండగా
	శనివారం	౫ తే	"	"	ఎండ
	ఆదివారం	౬ తే	"	"	"
	సోమవారం	౭ తే	"	"	"
	మంగళవారం	౮ తే	"	"	మబ్బు
	బుధవారం	౯ తే	"	"	మంచు
	గురువారం	౧౦ తే	"	"	"
	శుక్రవారం	౧౧ తే	"	"	"
	శనివారం	౧౨ తే	"	"	"
	ఆదివారం	౧౩ తే	"	"	ఎండగా
	సోమవారం	౧౪ తే	"	"	"
	మంగళవారం	౧౫ తే	"	"	"
	బుధవారం	౧౬ తే	"	"	ఎండ
	గురువారం	౧౭ తే	"	"	"
	శుక్రవారం	౧౮ తే	"	"	"
	శనివారం	౧౯ తే	"	"	"
	ఆదివారం	౨౦ తే	"	"	"
	సోమవారం	౨౧ తే	"	"	"
	మంగళవారం	౨౨ తే	"	"	ఎండగా
	బుధవారం	౨౩ తే	"	"	ఎండ
	గురువారం	౨౪ తే	"	"	"
	శుక్రవారం	౨౫ తే	"	"	"
	శనివారం	౨౬ తే	"	"	"
	ఆదివారం	౨౭ తే	"	"	"
	సోమవారం	౨౮ తే	"	"	"
	మంగళవారం	౨౯ తే	"	"	ఎండగా
	బుధవారం	౩౦ తే	"	"	"
	గురువారం	౩౧ తే	"	"	ఎండ

ಟ್ಟುಕೊಂಡು ೪ ತಾಸು ೬|| ಮಿನೀಟುಗಳಲ್ಲಿ ಯುವ ನಾ ನದಿಯನ್ನು ೩೫ ಮೈಲುಗಳ ವರೆಗೂ ಈಸಿ ಹತಂ ತ ಳಲಕಲ್ಪೆಯಲ್ಲಿ ನಡೆಯುತಕ್ಕ ೨೮ ತಾಸಿನ ಈಸಿನ ಪಂದ್ಯಾಟದಲ್ಲಿ ಭಾಗ ತೆಗೆದುಕೊಳ್ಳಲು ಹೋಗಿ ದ್ದಾನೆ. ನಮ್ಮಲ್ಲಿಯ ತರುಣರು—?

ನೋಟೀಸು.

—(೧)—

ಫಕೀರವ್ವಾ ಕೋಂ ಯಲ್ಲಪ್ಪಾ ತಾಸಿಲದಾ ರ ಸಾ|| ಹಿರೇಗುಂಜಾಳ ತಾಲೂಕ ಶಿಂಹಟ್ಟಿ ಇವಳಿಗೆ

ಕೆಳಗೆ ಸಹಿಮಾಡುವ ನಾನು ಈ ನೋಟೀಸಿ ನಿಂದ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಹೆಂಡತಿ ಇದ್ದು ಲಗ್ನವಾಗಿ ಅಜಮಾಸ ನಾಲ್ಕು ವ ರ್ಷವಾಯಿತು ಅಷ್ಟರೊಳಗಾಗಿ ನಿನ್ನನ್ನು ಒಂದು ಸಾರೆ ನನ್ನ ಮನೆಗೆ ಪ್ರಪಂಚಮಾಡಲಿಕ್ಕೆ ಕರಕೊಂ ಡು ಬಂದೆನು ನೀನು ನನ್ನ ಕೂಡ ಯೋಗ್ಯ ರೀ ತಿಯಿಂದ ಪ್ರಪಂಚಮಾಡದೆ ನನಗೆ ಬಹಳ ತ್ರಾಸ ಕೊಟ್ಟಿ ಆದರೂ ಒಂದು ವರ್ಷ ನನ್ನಲ್ಲಿ ಇಟ್ಟು ಕೊಂಡು ಮುಂದೆ ನಿಮ್ಮ ತಂದೆ ನಿಂಗಪ್ಪಾ ಇವ ನು ಪಂಚಮಿ ಹಬ್ಬದ ದೆಸೆಯಿಂದ ಕರೆಯಲಿಕ್ಕೆ ಬಂ ದನು ಅದಕ್ಕೆ ಅವನ ಸಂಗಡ ಕಳಿಸಿಕೊಟ್ಟೆ ಮುಂ ದೆ ನಾನು ಮತ್ತು ನಮ್ಮ ತಂದಿ ಧೂಳಪ್ಪಾ ಉ ಭಯತರು ಕೂಡಿ ಕರೆಯಲಿಕ್ಕೆ ಬಂದೆವು ಆ ವ್ಯಾ ಕ್ಯೆ ಈಗ ನಮಗೆ ಸವಡು ಇಲ್ಲಾ ಇನ್ನೊಂದು ತಿಂಗಳ ಬಿಟ್ಟು ಬಂದರೆ ಕಳಿಸುತ್ತೇವೆ ಅಂತಾ ನಿ ಮ್ಮ ತಂದೆಯವರು ಹೇಳಿದರು. ಮತ್ತು ನೀನು ಬರುವದಿಲ್ಲಾ ಅಂತಾ ಅಂದಿ ಮುಂದೆ ನಾಲ್ಕು ಜನ ಸಭ್ಯಗೃಹಸ್ಥರನ್ನು ಕರಕೊಂಡು ಸ್ವತಃ ನಾ ನು ಬಂದೆ ಆ ವ್ಯಾಳ್ಯಕ್ಕೆ ಈಗ ನಾನು ಕಳಿಸಿಕೊ ಡುವದಿಲ್ಲಾ ಹೋಗಿರಿ ಅಂತಾ ತಂದಿ ಅಂದಾ ಆ ದಕ್ಕೆ ಸಭ್ಯ ಗೃಹಸ್ಥರು ನಿನ್ನನ್ನು ವಿಚಾರಮಾಡ ಲಾಗಿ ನೀನು ಬರುವದಿಲ್ಲಾ ಅಂತಾ ಅಂದಿ ಆ ದಕ್ಕೆ ನೀನು ಊರಿಗೆ ಹೋಗುವ ಕಾಲಕ್ಕೆ ನಿನ್ನ ಮೈಮೇಲೆ ಇದ್ದ ದಾಗೀನೆಗಳ ವಿವರ- ೫ ತೊಲಿ ಭಂಗಾರದ ಬಳಿ ಜೋಡು ೧, ೨೪ ತೊಲಿ ಭಂಗಾ ರದ ವಂಕಿ ಜೋಡು ೧, ಬೆಳ್ಳಿ ಕಾಲ ಸರಪಳಿ ಜೋ ಡು ೧, ಬೆಳ್ಳಿ ಪಟ್ಟಿ ೧, ಇವುಗಳನ್ನು ತೆಗೆದುಕೊಂ ಡು ಇವತ್ತಿನಿಂದ ೮ ದಿವಸದೊಳಗಾಗಿ ನನ್ನ ಮ ನೆಗೆ ಬಂದು ಸುರಳೀತ ರೀತಿಯಿಂದ ಬಾಳ್ವೆಮಾಡ ಬೇಕು ಇದಕ್ಕೆ ತಪ್ಪಿದರೆ ಇದೇ ಸೋಡಚೀಟಿ ಅಂತಾ ತಿಳಿ ಇನ್ನು ಮೇಲೆ ನೀನು ಹಾಗೂ ನಿನ್ನಿಂ ದ ಹುಟ್ಟಿದ ಗಂಡು ಹೆಣ್ಣು ಕೂಸುಗಳು ಸ್ಥಾವರ ಜಂಗಮ ಆಸ್ತಿಗೆ ಹಕ್ಕದಾರರಲ್ಲಾ ನಾನು ನನ್ನ ದಾಗೀನೆಗಳ ಸಲುವಾಗಿ ನಿನ್ನ ಮೇಲೂ ನಿನ್ನ ತಂ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಸೆರೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧ ... ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿ ಗಳ ಅಮೃತ ಪ್ರತಾಪ! ವೃದ್ಧರ ಅನೇಕ ವರ್ಷ... ಅನುಭವ!! ಬೆಲೆ ಎರಡೇ ರೂಪಾಯಿ. ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾ ಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು

ವಿಳಾಸ:—ಶ್ರೀ. ಜಾನಕೀಬಾಯಿ ದೀಕ್ಷಿತ

C/o ವೈದ್ಯಬ್ಯಾಂಕ ಧಾರವಾಡ

ಸೂಚನೆ ಈ ಔಷಧ ... ಉಚಿತ ವರ್ತಮಾನಪತ್ರಿಕೆ ... ಈ ಜಾಹೀರಾತನ್ನು ಓದಿ ... ಬರೆಯಬೇಕು.

ದೇಶಾಯಿಗಳ ವೇಲೂ ರೀತಿ ಪ್ರಕಾರ ಇಲಾಜಮಾ ಡಿ ತೊಗೊಳ್ಳುವೆನು. ತಿಳಿಯುವದು

ತಾ|| ೩೦-೯-೧೯ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಎಲ್ಲಪ್ಪಾ ಧೂಳಪ್ಪಾ ತಾಸಿಲದಾರ ಸಾ|| ಕುಂದಗೋಳ ಈತನ ದ್ದು ಅದೆ

ಜಾಹೀರ ನೋಟೀಸು

ರಾ|| ರಾ|| ಮಲ್ಲಪ್ಪಾ ನೀಲಪ್ಪಾ ಬನ್ನಿಹ ಳ್ಳಿ ಸಾ|| ಹಿರೇಹಳ್ಳಿ ತಾ|| ಕೋಡ ಇವರಿಗೆ-

ಕೆಳಗೆ ಸಹಿ ಮಾಡಿದವಳ ಕಡೆಯಿಂದ ತಿಳಿ ಸುವದೇನಂದರೆ- ನೀನು ನನ್ನ ಲಗ್ನದ ಗಂಡನಿ ದ್ದು ನಾನು ಮೈನೆರೆತ ನಂತರ ಎರಡು ಸಾರೆ ಕರೆದುಕೊಂಡು ಹೋಗಿ ಸರಿಯಾಗಿ ಪ್ರಪಂಚ ಮಾ ಡಿದಿ ಮುಂದೆ ನೀನು ದುರ್ಜನರಕ್ಕೆ ಬಿದ್ದು ಅಂದಿ ಯ ಮಾತು ಕೇಳಿ ನನ್ನನ್ನು ಹೊಡಿದು ಬಡಿದು ಅತಿ ತ್ರಾಸು ಕೊಟ್ಟು ನನ್ನ ಮೈಮೇಲಿ ಇದ್ದ ಚಿನ್ನ ಬೆಳ್ಳಿ ಭಂಗಾರದ ದಾಗೀನುಗಳನ್ನು ಕಸಕೊಂಡು ಮನಿಯಿಂದ ಹೊರಗೆ ಹಾಕಿದಿ ಆ ಮೇಲೆ ನಾನು ನನ್ನ ತಾಯಿಮನಿಗೆ ಬಂದು ಒಂದಲಾಗಾಯಿತು ಇವ ತ್ತಿನವರೆಗೂ ನೀನು ಬಂದು ಕರಕೊಂಡು ಹೋಗ ಲಿಲ್ಲಾ ನನ್ನ ತೌರಮನಿಯವರು ನನ್ನನ್ನು ಒಂದು ವರ್ಷದ ಲಾಗಾಯಿತು ಇಟ್ಟುಕೊಂಡು ನನ್ನ ಹೊ ಟ್ಟೆ ಬಟ್ಟೆ ನೋಡಿದರು ಆದರೆ ನನ್ನ ತೌರಮನಿ ಯವರು ಅತಿ ಬಡವರಿದ್ದು ತಮ್ಮಗಳ ಪ್ರಪಂಚ ಮಾಡುವದು ಅತಿ ತ್ರಾಸು ಆದರೂ ನನ್ನನ್ನು ಮ ರ್ಯಾದಿಯಿಂದ ಜೋಪಾನ ಮಾಡಿದರು. ಈಗ ಒಂದು ವರ್ಷದ ಲಾಗಾಯಿತು ನನ್ನ ಹೊಟ್ಟೆ ಬ ಟ್ಟೆ ಸಲುವಾಗಿ ಸನತಿ ರಕಂ (೩೦೦) ರೂಪಾಯಿ ಸಾಲ ಮಾಡಿರುತ್ತೇನೆ ನೀನು ಬಂದು ನಾನು ಮಾಡಿದ ಸಾಲಾ ತೀರಿಸಿ ನನ್ನ ಜನ್ಮದ ಸಂಮಂ ಧಿ ಯೋಗ್ಯ ಜನರ ಜಾಮೀನ ಕೊಟ್ಟು ಕರೆದು ಕೊಂಡು ಹೋಗಿ ಯೋಗ್ಯ ಸಂಸಾರ ಮಾಡಬೇಕು ಇಲ್ಲವೆ ನನಗೆ ಒಂದು ವರ್ಷಕ್ಕೆ (೧೦೦) ರೂಪಾ ಯದಂತೆ ಪೋಟಗಿ ಕೊಡುತ್ತಾ ಹೋಗಬೇಕು ಈ ರ ನೋಟೀಸು ಮುಟ್ಟಿದ ಹದಿನೈದು ದಿವಸಗಳಲ್ಲಿ ಮೇಲಿನಂತೆ ಮಾಡದಿದ್ದರೆ ಕೋರ್ಟಿನಲ್ಲಿ ನಿನ್ನ ಮೇ ಲೆ ದಾವೆ ಹಂದು ಪೋಟಗಿ ತೆಗೆದುಕೊಳ್ಳುವದರಲ್ಲಿ ಬರುವದು ನನಗೆ ಪುನಃ ವಗೈರೆ ಮಾಡಿಕೊಳ್ಳಲಿ ಕ್ಕೆ ನನ್ನ ಕಬೂಲು ಇಲ್ಲಾ ಯಾವದಕ್ಕೂ ಕೂ ಡ್ಲೆ ತಿಳಿಸತಕ್ಕದ್ದು ಈ ನೋಟೀಸಿನ ಖರ್ಚು ನಿನ್ನ ಮೇಲೆ ಅದೆ ತಾ|| ೧೩-೯-೧೯೨೯

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಸಿಂಗವ್ವಾ ಕೋಂ ಮಲ್ಲಪ್ಪಾ ಬನ್ನಿಹಳ್ಳಿ ಸಾಕೀನ ಮಡ್ಲೂರ ತಾಲೂಕ ಕೋಡ ಈಕಿ ಮಾಡಿದ್ದು ಅದೆ

ಸೂಚನೆಯು

ಎ ಆರ್. ಶ್ರೀನಿವಾಸಯ್ಯಂಗಾರ್, ಗೌರ ವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಅಂಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿನಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಬುಧವಾರ ತಾರೀಖು ೩ ನೇ ಅಕ್ಟೋಬರ ೧೯೨೮ (ಸಂಚಿಕೆ [illegible]

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಮುಂಜಾನೆ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ.

ಚಾಲೂ ಖಾತೆಗಳು:— ಪುಕ್ಕಟೆಯಾಗಿ ತೆಗೆಯಲ್ಪಡುವವು.

ಸೇವಿಂಗ್ಸ ಬ್ಯಾಂಕು:— ಬಡ್ಡೀ ದರದಿಂದ ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ [illegible] ರೂ.

ಮುದತಿ ಠೇವುಗಳು:— ಒಂದು ವರ್ಷದ ಮುದ್ದತಿನಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ [illegible] ರೂ.

ಪೇಟು:— ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡೀದರ [illegible] ರೂ. ಹತ್ತಿ ಮತ್ತು ಧಾನ್ಯಗಳ ಅಡವಿನ ಮೇಲೂ ಸರಕಾರೀ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ವ ನಿಯುಮಿತ ಕಂಪನಿಯ ಶೇರುಗಳ ನಫೆ ವಸೂಲ ಮಾಡಿ ಅದನ್ನು ಖಾತೆಗೆ ಜಮೆ ಹಿಡಿಯುವದಕ್ಕೂ ಅಥವಾ ಕಳಿಸಿ ಕೊಡುವದಕ್ಕೂ ಮತ್ತು ಯೋಗ್ಯ ಕಮಿಶನ್ ತೆಗೆದುಕೊಂಡು ಗಿರಾಕಿಗಳಿಗೆ ಅವುಗಳ ಖರೀದಿ ವ ವಿಕ್ರಿ ಮಾಡುವದರಲ್ಲಿಯೂ ಬರುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವದರಲ್ಲಿಯೂ ಮತ್ತು ಚಕ್ಕು ಹುಂಡಿಗಳನ್ನು ವಸೂಲು ಮಾಡುವದರಲ್ಲಿಯೂ ಬರುವದು.

ಬ್ಯಾಂಕಿಗೆ ಮೇಲ್ಕಾಣಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲ ಕಾಲದ ಅಧಿಕಾರವಿರುವದು.

ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಬಂದಲ್ಲಿ ತಿಳಿಸಲ್ಪಡುವದು.

ಆರ್. ಎಚ್. ರಿಕಾರ್ಡ,
ಏಜಂಟರು.

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಹಳೆ ಮಂಗಳವಾರಪೇಟೆ, ಆಕವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಕಡಿಮೆ ಮುದ್ದತಿಯ ಕನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತೆಗೆದುಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ [illegible]ಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ,
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

[illegible] ವೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಎಂಟು ಲಕ್ಷದ ಮೇಲುಂಟು. ಚಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು [illegible] ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ [illegible]

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳಲಾಗುವ. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟುಕೊಳು ವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. [illegible]
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-[illegible]
೬ ,,	[illegible]
೩ ,,	[illegible]
ವಾರ ಪತ್ರಕ್ಕೆ ೧ ವರ್ಷಕ್ಕೆ	[illegible]

ವಿಶೇಷ ಮಾಹಿತಿ ಕೆಳಗಿನ [illegible] ಕೊಳ್ಳಿರಿ.

ಮ್ಯಾನೇಜರ ವಿಜಯ [illegible]

ವಿಜಯ.

ಧಾರವಾಡ ತಾ-೩-೧೦-೨೪ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಟ್ರಿಯು
ಶ್ರೀ ವಸುಮತಿಯು ನೆಲಸಿರೆ ನುಹಿತಚರಿತೆಗಳಿಂ ಶ
ಬ್ದ " ವಿಜಯಂ " ಶ್ರೀಕರಮುಣ ।
ಪ್ರಾವಿರ್ಥಕಂಗಳ ವಿವರಿಸನಲಿವು ಸು ಸಾಹು ॥೧॥

ಮಹಾತ್ಮರ ಜನ್ಮದಿನೋತ್ಸವವು.

ಇಂದಿನ ದಿನವು ಭರತಖಂಡದ ಭಾಗ್ಯೋದಯದ ದಿವಸವಾಗಿರುವದಲ್ಲದೆ, ಶ್ರಾವಣವದ್ಯ ಗೋಕುಲಾಷ್ಟಮಿ, ಮೊದಲಾದ ದಿನಗಳಂತೆ ಅತ್ಯಂತ ಪವಿತ್ರವೂ ಮಂಗಲಕರವೂ ಆದ ದಿವಸವಾಗಿರುವದು. ರಾಮನವಮಿ, ಗೋಕುಲಾಷ್ಟಮಿ ಮೊದಲಾದವುಗಳು ಹಿಂದೂ ಧರ್ಮೀಯರಿಗಷ್ಟೇ ಪವಿತ್ರವಾಗಿರುವವು ಆದರೆ ಈ ದಿನವು ಮಾತ್ರ ಹಾಗಲ್ಲ. ಇದು ಹಿಂದುಸ್ಥಾನದಲ್ಲಿ ನೆಲೆಸಿರುವ ಎಲ್ಲ ಪಂಥದವರಿಗೂ ಅಷ್ಟೇ ಪವಿತ್ರವಾದುದು. ಯಾಕೆಂದರೆ ಮಹಾತ್ಮಾ ಗಾಂಧಿಯವರು ಹುಟ್ಟಿ ಬಂದು ಇಂದಿಗೆ ೫೬ ನೆಯ ವರ್ಷವು ಪ್ರಾರಂಭವಾಯಿತು. ಮಹಾತ್ಮಾ ಗಾಂಧಿಯವರೆಂದರೆ ಸರ್ವಸಾಧಾರಣ ಪುರುಷರಲ್ಲ. ಅಖಿಲ ಪ್ರಪಂಚಕ್ಕೂ ಪೂಜ್ಯರಾದವರು. ಶುದ್ಧಾಚರಣೆಯುಳ್ಳವರು. ಜಾತಿನೀತಿಗಳಲ್ಲಿ ಭೇದವಿಲ್ಲದವರು. ಧರ್ಮರಾಜನಂತೆ ಸತ್ಯಾಭಿಮಾನಿಗಳೂ ಧರ್ಮಾಚರಣೆ ತಪ್ಪದ ಧರ್ಮಿಷ್ಠರೂ ಆಗಿರುವರು. ಆಳರಸರ ಪಾಶವೀಶಕ್ತಿಯುತ ದರ್ಪವನ್ನು ಸತ್ಯಾಗ್ರಹವೆಂಬ ಶಸ್ತ್ರದಿಂದ ನಂದಿಸಿ ಅಖಿಲ ಜಗತ್ತಿಗೆ ಹೊಸ ಹಾದಿಯನ್ನು ತೋರಿಸಿಕೊಟ್ಟವರು. ಹಿಂದೂ, ಮುಸಲ್ಮಾನ, ಪಾರಸಿ, ಕ್ರಿಶ್ಚನ್ ಮೊದಲಾದ ಪ್ರಜಾವರ್ಗವನ್ನು ಐಕ್ಯಗೊಳಿಸಿ, ಎಲ್ಲರ ಪ್ರೀತಿಗೂ ಪಾತ್ರರಾದವರು. ಪಶ್ಚಿಮ ಸೀಮೆಯಿಂದ ಪೂರ್ವದವರೆಗೆ ಅಲ್ಲದೆ ತಮ್ಮಲ್ಲಿಯೇ ಬಳಲುತ್ತಿರುವವರ ದುಃಖಗಳನ್ನು ಹೊತ್ತುಕೊಂಡು ಜನತೆಯ ಜನಾರ್ದನಸೇವೆಗಾಗಿ ಸದಾ ಸರ್ವದಾ ಹಂಬಲಿಸುತ್ತಿರುವ ಪುಣ್ಯಪುರುಷರು. ಅಹಿಂಸಾ ಮೂರ್ತಿಗಳು. ಮೈಯೆಲ್ಲ ನಿಸ್ವಾರ್ಥತ್ಯಾಗಿಗಳು. ಒಟ್ಟಿನಲ್ಲಿ ಹೇಳಬೇಕೆಂದರೆ ಪೂಜ್ಯ ಪೂರ್ಣಪುರುಷರೆನಿಸಿಕೊಳ್ಳುವ ಈ ಧರ್ಮಾತ್ಮರು ಭಾರತಾಂಬೆಯ ದಾಸ್ಯಶೃಂಖಲೆಯಿಂದ ಬಿಡಿಸಿ ಉದ್ಧರಿಸಲು ದೇವಾಂಶ ಸಂಭೂತರಾಗಿ ಅವತರಿಸಿ ಬಂದವರು.

ಇಂತಹ ವಿಭೂತಿಗಳ ಹುಟ್ಟಿದ ದಿನವನ್ನು ಅತ್ಯಂತ ವಿಜೃಂಭಣೆಯಿಂದ ಜರುಗಿಸುವದು ಪ್ರತಿಯೊಬ್ಬ ಮಾನವನ ಕರ್ತವ್ಯವೇ ಆಗಿದೆ. ಇಂದು ಎಲ್ಲೆಡೆಯಲ್ಲಿಯೂ ಭಾರತೀಯರಾದ ನಾವು ನಮ್ಮೊಳಗಿನ ಜಾತಿ ಮತಭೇದಗಳನ್ನು ಬದಿಗಿಟ್ಟು ಆಬಾಲವೃದ್ಧರೆಲ್ಲರೂ ಒಂದೆಡೆಗೆ ಕಲೆತು ಪರಿಶುದ್ಧಾಂತಃಕರಣದಿಂದ ಮಹಾತ್ಮರ ದಿವ್ಯ ನಾಮಸ್ಮರಣ ಮಾಡಿ, ಅವರಿಗೆ ಆಯುರಾರೋಗ್ಯಗಳನ್ನು ದಯಪಾಲಿಸೆಂದು ಪರಮಾತ್ಮನಿಗೆ ಅನನ್ಯಭಾವದಿಂದ ಪ್ರಾರ್ಥಿಸಬೇಕು.

ಅವರ ದಿವ್ಯ ನಾಮಸ್ಮರಣೆಯನ್ನು ಪ್ರಾರ್ಥನೆಯನ್ನು ಮುಗಿಸಿದರೆ ನಮ್ಮ ಕರ್ತವ್ಯಕರ್ಮವು ಮುಗಿದಂತಾಗಲಿಲ್ಲ. ಅವರು ಹಗಲಿರುಳೆನ್ನದೆ ಯಾವ ಕಾರ್ಯಕ್ಕಾಗಿ ದುಡಿಯುತ್ತಿರುವರೋ, ಆ ಕಾರ್ಯದ ಭಾರವನ್ನು ನಾವಾದರೂ ಅಂತಃ ವಹಿಸಿಕೊಳ್ಳಬೇಕು. ಹೊಟ್ಟೆಗೆ ಹಿಟ್ಟಿಲ್ಲದೆಯೂ ಉಡತೊಡಲು ಸಾಕಷ್ಟು ಬಟ್ಟೆಗಳಿಲ್ಲದೆಯೂ ಬಳಲುತ್ತಿರುವ ದೀನಬಂಧುಗಳನ್ನು ಉದ್ಧರಿಸಲು ನಾವೂ ಟೊಂಕ ಕಟ್ಟಬೇಕು. ನಮ್ಮಲ್ಲಿಯೇ ಸಿದ್ಧವಾಗುತ್ತಿರುವ ಖಾದೀ ಬಟ್ಟೆಗಳನ್ನು ಕೊಂಡುಕೊಂಡು ಪರದೇಶಕ್ಕೆ ಹೋಗುತ್ತಿರುವ ಕೋಟ್ಯನುಗಟ್ಟಲೆ ರೂಪಾಯಿಗಳನ್ನು ಉಳಿಸುವದಲ್ಲದೆ ನಮ್ಮ ಕೈಗಾರಿಕೆಗಾರರ ಹೊಟ್ಟೆಯನ್ನು ತುಂಬಬೇಕು. ಅಸ್ಪೃಶ್ಯತೆಯನ್ನು ಅಳಿಸಿಬಿಡಲು ಸಿದ್ಧರಾಗಬೇಕು. ಭರತಖಂಡಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಂಡೇ ಬಿಡುವೆವೆಂಬುದಾಗಿ ಪ್ರತಿಯೊಬ್ಬರೂ ಪಣತೊಡಬೇಕು. ಇವೆಲ್ಲ ಕಾರ್ಯಕ್ರಮಗಳನ್ನು ಕೈಕೊಂಡು ಮುಂದಡಿಯನ್ನಿಟ್ಟಲ್ಲಿ ಮಹಾತ್ಮಾ ಗಾಂಧಿಯವರ ಜನ್ಮಮಹೋತ್ಸವವನ್ನು ಜರುಗಿಸಿದಂತಾಗುವದು.

ಸ್ಕೂಲ ಬೋರ್ಡ ನಾಮಿನೇಶನ್

—o—

ಧಾರವಾಡ ಜಿಲ್ಹಾ ಸ್ಕೂಲಬೋರ್ಡಿಗೆ ಕೆಳಗಿನ ಜನರು ಆರಿಸಲ್ಪಟ್ಟಿದ್ದಾರೆ.

೧ ಮಿ. ತಾಳಿಕೋಟಿ ೨ ಮಿ.ಸೆಕ್ರೆಟರಿ ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಶನ್ ಬೆಳಗಾವಿ ೩ ಮಿ. ಡಿ. ಎಸ್. ಪಾಟೀಲ ೪ ಹನುಮಗೌಡರ ೫ ಮಿ. ಸೆಟ್ಟರ. ಬ್ಯಾಡಗಿ ೬ ಸಿದ್ಧನಗೌಡಾ ಪಾಟೀಲ ೭ ಚನ್ನಪ್ಪಗೌಡಾ ಪಾಟೀಲ. ೧೦ ರುದ್ರಗೌಡಾ ಪಾಟೀಲ. ೧೧ ಮಿ. ಗುಂಚೇಕರ. ೧೨ ಮಿ. ಹುರಳೀಕುಪ್ಪಿ. ೧೩ ಮಿ. ಹಣ್ಣಗಿ.

ಕೌನ್ಸಿಲ ಅಧಿವೇಶನದಲ್ಲಿ ಹಿಂದಿನವರ ಕಾಯಿದೆಯು.

ತಾ|| ೨೬ನೇ ದಿವಸ ಕೌಂಸಿಲ ಬಿಲ್ಲಿನ ಬಗ್ಗೆ ವಿಚಾರಿಸುವದನ್ನು ಆರಿಸು ರಾಮಭಾವ ಹೊಂಬಳರವರು ಸೂಚನೆಯನ್ನು ತಂದರು. ಈ ಬಿಲ್ಲಿನಿಂದ ಹಾನಿಗಳಿಗಿಂತ ಲಾಭಗಳು ಹೆಚ್ಚಾಗಿ ಆಗುವವು. ಧಾರ್ಮಿಕ ವಿಷಯಗಳ ಸಂಬಂಧವಾಗಿ ಈ ಮೊದಲು ಎಷ್ಟೋ ಕಾನೂನುಗಳು ಮಾಡಲ್ಪಟ್ಟಿವೆ. ಸತಿ ಹೋಗುವ ಪದ್ಧತಿಯು ಕಾನೂನಿನಿಂದಲೇ ನಿಲ್ಲಿಸಲ್ಪಟ್ಟಿದೆ. ಕುರ್ಬಾನವೂ, ಇಜಸ್ತವೂ ಇಂತಹ ಎಷ್ಟೋ ಕಾಯಿದೆಗಳನ್ನು ನಾವು ಮಾಡಿಕೊಂಡಿರುವೆವು. ಸಮಾಜದಲ್ಲಿಯ ದೋಷಗಳನ್ನು ಸುಧಾರಿಸಲು, ಎಷ್ಟೋ ಎಷ್ಟು ಧಾರ್ಮಿಕ ಗುರುಗಳ ಕಡೆಗೆ ನಾವು ಲಕ್ಷ್ಯ ಕೊಡತಕ್ಕದ್ದಲ್ಲ. ಪರಿಸ್ಥಿತಿಯು ಬದಲಾದಂತೆ ಧರ್ಮವೂ ಬದಲಾಗಲಿಕ್ಕೇಬೇಕು. ಆದುದರಿಂದ ಈಗಿನ ಪರಿಸ್ಥಿತಿಗನುಸರಿಸಿ ಧಾರ್ಮಿಕ ಕಾಯಿದೆಗಳಲ್ಲಿ ಹೆಚ್ಚು ಕಡಿಮೆ ಮಾಡಲಿಕ್ಕೆ ಈ ಮಂಡಳಕ್ಕೆ ಹಕ್ಕು ಇದೆ. ಎಂದು ರಾವಸಾಹೇಬರು ಹೇಳಿದರು. ಈ ಬಿಲ್ಲನ್ನು ಪಾಸು ಮಾಡುವದರಿಂದ ಹಿಂದೂ ಮತ್ತು ಮುಸಲ್ಮಾನರ ವಿವಾಹವಿಧಿಗಳಿಗೆ ಧಕ್ಕೆ ತಗಲುವ ಸಂಭವವೇ ಇಲ್ಲ. ಯಾಕೆಂದರೆ ಧಾರ್ಮಿಕ ವಿಷಯಗಳಲ್ಲಿ ಕೈ ಹಾಕುವದಿಲ್ಲವೆಂದು ವಚನ ಕೊಟ್ಟು ಈಗ ಹೀಗೆ ಮಾಡುವದೆಂದರೆ ಕಾಯಿದೆಗೆ ವಿರುದ್ಧವಾಗಿ ವರ್ತಿಸಿದಂತಾಗುವದೆಂದೂ, ಇದು ಈಗ ಅನವಶ್ಯಕವಾಗಿತ್ತೆಂದೂ ಬ್ರಾಹ್ಮಣರು ವಿರೋಧಿಸಿದರು. ಈ ವಿಷಯವನ್ನು ಮುಂದಿನ ಅಧಿವೇಶನದಲ್ಲಿ ವಿಚಾರಕ್ಕೆ ತೆಗೆದುಕೊಳ್ಳಬೇಕೆಂದು ಬೇಡಿಕೊಳ್ಳುವೆವು. ಉಪಸೂಚನೆಯನ್ನು ತಂದಿದ್ದಲ್ಲದೆ ೧೩ ವರ್ಷಕ್ಕೆ ಹದಿನಾರರ ಮದುವೆಯನ್ನು ಮಾಡಬೇಕೆಂದು ಸೂಚಿಸಿದರು. ತಂದೆ ತಾಯಿಗಳು ವಿರೋಧಿಗಳೂ ಗಟ್ಟಿಗರೂ ಇದ್ದರೆ ಮಾತ್ರ ಸದ್ಯದ ಶಿಶುಗಳು ಇರುವವು. ಪ್ರತಿವರ್ಷವೂ ಹುಟ್ಟಿದ ಶಿಶುಗಳಲ್ಲಿ ೧/೩ ಶಿಶುಗಳು ೧ ವರ್ಷದಲ್ಲಿಯೇ ಸಾಯುವವು. ಇದಕ್ಕೆ ಬಾಲ್ಯವಿವಾಹವೇ ಕಾರಣವಾಗಿದೆ. ನ್ಯಾಯಮೂರ್ತಿ ದೃಷ್ಟಿಯಿಂದ ವಿಚಾರಿಸಲು ಹುಡುಗಿಯರ ವಿವಾಹದ ವಯಸ್ಸು ೧೪ ಇರುವದು ಯೋಗ್ಯವಾಗಿ ತೋರುತ್ತದೆ. ಎಂದು ರಾವಸಾಹೇಬರು ಮೇಲಿನ ಸೂಚನೆಯನ್ನು ವಿರೋಧಿಸಿದರು. ಮೇಲಿನಂತೆಯೇ ಇನ್ನು ೫-೬ ಉಪಸೂಚನೆಗಳು ಕೆಲವು ಸಭಾಸದರಿಂದ ತರಲ್ಪಟ್ಟವು. ಈ ಎಲ್ಲ ಉಪಸೂಚನೆಗಳು ನಿರಾಕರಿಸಲ್ಪಟ್ಟವು. ಬಳಿಕ ರಾಮಭಾವ ಪಂತರವರು ತಂದ ಸೂಚನೆಯ ಬಗ್ಗೆ ಚರ್ಚೆ ನಡೆಯಿತು. ಸುಪತ್ತಿಗೆ, ಬಾಪಟ್ಲೆ, ... ಮೊದಲಾದವರು ಕೆಲವರು ವಿರೋಧಿ

ಧಿಸಿದರು. ಅಟ್ರಾಡಿಗೆ ನಾಲು ಸೂಚನೆಯು ಮೇಲೆ ಪಾಸಾಗಿಗಳನ್ನು ತೆಗೆದುಕೊಳ್ಳಲಾಗಿ, ಎರಡನೆಯ ಬಹುಮತದಿಂದ ಒಪ್ಪಿತವಾಯಿತು.

— —

ಪಂಡಿತ ಜವಾಹಿರಲಾಲರು ಕಾಂಗ್ರೆಸದ ಅಧ್ಯಕ್ಷರಾದರು.

ಲಾಹೋರದಲ್ಲಿ ಕೂಡಲಿಕ್ಕಿರುವ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನು ಆರಿಸುವ ಕುರಿತು ವಿಚಾರಿಸುವದಕ್ಕಾಗಿ ೨೮ನೇ ತಾ॥ ದಿವಸ ಲಖನೌದಲ್ಲಿ ಅ. ಇ. ಕಾಂ. ಕಮೀಟಿಯ ಸಭೆಯು ನೆರೆದಿತ್ತು. ಪಂಡಿತ ಮೋತಿಲಾಲ ನೆಹರೂರವರು ಈ ಕೆಳಗಿನ ಗೊತ್ತನ್ನು ಸಭೆಯ ಮುಂದಿಟ್ಟರು:-

"ನಮ್ಮ ಧ್ಯೇಯಗಳಿಗಾಗಿ ಆತ್ಮಾರ್ಪಣೆ ಮಾಡಿದ ಜತೀಂದ್ರನಾಥ ದಾಸ ಫಾಂಗಿ ವಿಜಯಾ ಇವರನ್ನು ಈ ಸಭೆಯು ಸಂಸ್ಮರಿಸುತ್ತದೆ."

ಗೊತ್ತು ಸರ್ವಾನುಮತದಿಂದ ಸ್ವೀಕೃತವಾಯಿತು. ಬಳಿಕ ಮೋತೀಲಾಲರು ಲಾಹೋರ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವ ಬಗ್ಗೆ ಕಾರಣಗಳನ್ನು ವಿಶದ ಪಡಿಸಲು ಗಾಂಧಿಯವರನ್ನು ಕೇಳಿಕೊಂಡರು. ಗಾಂಧಿಯವರು ಹೇಳಿದ್ದೇನಂದರೆ:-

ನಾನು ಅಧ್ಯಕ್ಷಸ್ಥಾನವನ್ನು ಸ್ವೀಕರಿಸದಿರುವದನ್ನು ನೋಡಿ ಎಷ್ಟೋ ಜನರು ನಿರಾಶರಾಗಬಹುದು. ಪಂಡಿತ ಮಾಲವಿಯಾ ಅವರು ನನ್ನ ಮನವೊಲಿಸಲೋಸುಗ ಬನಾರಸದಿಂದ ಇಲ್ಲಿಯ ವರೆಗೆ ಬಂದಿದ್ದಾರೆ. ನಾನು ಇದರ ಬಗ್ಗೆ ವಿಚಾರ ಮಾಡಿ ನೋಡಿದ್ದೇನೆ. ರಾಷ್ಟ್ರೀಯ ಸಭೆಯ ಲಗಾಮನ್ನು ಹಿಡಿಯುವಷ್ಟು ಸಾಮರ್ಥ್ಯವು ನನ್ನಲ್ಲಿ ಇಲ್ಲವೆಂಬುದು ನನಗೆ ಕಂಡು ಬಂದಿದೆ. ನಾನು ನಿರಾಕರಿಸುವದು ದೇಶದ ಕಲ್ಯಾಣಕ್ಕಾಗಿಯೇ. ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನದಿಂದ ದೂರ ನಿಲ್ಲುವದರಿಂದ ನನ್ನಿಂದ ಹೆಚ್ಚು ಕಾರ್ಯವಾಗಬಹುದು. ನಾನು ರಾಷ್ಟ್ರೀಯ ಸಭೆಯಿಂದ ಸರಿದು ಹೋಗಿರುವೆನೆಂದು ಯಾರೂ ತಿಳಿಯಗೊಳ್ಳಬಾರದು. ನಾನು ನನ್ನ ಶಕ್ತಿಸರ್ವಸ್ವವನ್ನೆಲ್ಲ ರಾಷ್ಟ್ರೀಯ ಸಭೆಯವರು ಹಾಕಿಕೊಡುವ ಕಾರ್ಯಗಳಲ್ಲಿಯೇ ವೆಚ್ಚ ಮಾಡುವೆನು !!

ಗಾಂಧಿಯವರ ಸ್ಪಷ್ಟೀಕರಣದ ನಂತರದಲ್ಲಿ ಅಧ್ಯಕ್ಷಸ್ಥಾನಕ್ಕೆ ಜವಾಹಿರಲಾಲ ನೆಹರೂರವರನ್ನು ಆರಿಸಬೇಕೆಂದು ಬಾಳಕೃಷ್ಣರು ಸೂಚಿಸಿದರು. ಗಾಂಧಿಯವರನ್ನು ಮನವೊಲಿಸಲು ಅ. ಇ. ಕಾ. ಕಮೀಟಿಯವರು ಯತ್ನಿಸಬೇಕೆಂದು ಗೌರೀಶಂಕರರು ಹೇಳಿದರು. ನಾವೆಲ್ಲರೂ ಈಗ ಎಲ್ಲ ಬಗೆಗಳಿಂದ ಯತ್ನಿಸಿದರೂ ಅದು ಸಾಧ್ಯವಾಗಿಲ್ಲ. ಮತ್ತು ಸಾಧ್ಯವಾಗುವದಿಲ್ಲವೆಂದು ಮೋತೀಲಾಲರು ಉತ್ತರ ಕೊಟ್ಟರು. ಗೌರೀಶಂಕರರು ತಮ್ಮ ಸೂಚನೆಗೆ ತಿರುಗಿ ಮಾಣಿಯವರು "ಗಾಂಧಿಯವರು ಮಹಾವಿಭೂತಿಗಳೇನೂ ನಿಜ ಆದರೆ ರಾಷ್ಟ್ರೀಯ ಸಭೆಯು ಗಾಂಧಿಯವರಿಗಿಂತಲೂ ಮಹತ್ವದ್ದು. ಗಾಂಧಿಯವರು ಅಧ್ಯಕ್ಷಪದವನ್ನು ನಿರಾಕರಿಸಿದ್ದಾರೆ ರಾಷ್ಟ್ರಸಭೆಯ ಕೀರ್ತಿವು ಎಂದೂ ಭಿನ್ನವಿಲ್ಲ" ಎಂದೂ ತಿರುಗಿಸಿದರು. ಎಂದು ಹೇಳಿ ವಿರೋಧಿಸಿದರು. ಸರದಾರ ವಲ್ಲಭಭಾಯಿಯವರ ಹೆಸರ ಗೌರೀಶಂಕರರವರಿಂದ ಸೂಚಿತವಾಯಿತು. ವಲ್ಲಭಭಾಯಿಯವರೂ ಗಾಂಧಿಯವರಂತೆ ನಿರಾಕರಿಸಿದುದರಿಂದ ಜವಾಹಿರಲಾಲ ನೆಹರೂರವರೇ ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

— —

ವಿ ಶದ ಕೈದಿಗಳಿಗೆ ಸರಕಾರದ ಸಕಾರ

——)(೦)(——

ವಿರಕ ಪಟ್ಟಿಯ ಕೈದಿಗಳು ಹುರಂಗದಲ್ಲಿಯ ರಾಜಕೀಯ ಕೈದಿಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಲು ಹಿಂದುಸ್ಥಾನ ಸರಕಾರದ ಕಡೆಗೆ ಅರ್ಜಿ ಮಾಡಿಕೊಂಡಿದ್ದರಷ್ಟೇ. ಸರಕಾರದವರು ಕೆಳಗಿನಂತೆ ಉತ್ತರಕೊಟ್ಟಿದ್ದಾರೆ:-

ಬೇರೆ ಬೇರೆ ವರ್ಗದ ಕೈದಿಗಳಿಗಾಗಿ ಮಾಡಿದ ಕಟ್ಟಳೆಗಳನ್ನು ವಿಚಾರಿಸಲು ಆ ಆ ಸರಕಾರಗಳಿಗೆ (ಪ್ರಾಂತಿಕ) ಕೇಳಿಕೊಂಡಿದೆ. ಸಂಯುಕ್ತ ಪ್ರಾಂತದ ಸರಕಾರದವರು ಒಂದು ಜೇಲ ವಿಚಾರಣಾ ಮಂಡಳಿಯನ್ನು ನಿಯಮಿಸಿದ್ದರು. ಆ ಮಂಡಳಿಯವರು ಕೆಲವು ಸೂಚನೆಗಳನ್ನು ಮಾಡಿದ್ದು, ಅವುಗಳ ಮೇಲೆ ನಾಗರಿಕರ ಅಭಿಪ್ರಾಯಗಳನ್ನು ವಿಚಾರಿಸಲಾಗಿದೆ. ಬರುವ ಕಾಯದೆ ಮಂಡಳದ ಅಧಿವೇಶನದಲ್ಲಿ ಇದರ ಸಂಬಂಧವಾಗಿ ವಿಚಾರವಾಗಬಹುದು. ಪಂಜಾಬ ಸರಕಾರದವರು ಇತ್ತೀಚೆಗೆ ಒಂದು ಮಂಡಳವನ್ನು ನಿಯಮಿಸಿರುವರು. ಪ್ರಾಂತಿಕ ಸರಕಾರದವರ ಸೂಚನೆಗಳು ಬಂದಬಳಿಕ ಆ ಆ ಪ್ರಾಂತದ ಪ್ರತಿನಿಧಿಗಳ ಸಭೆಯನ್ನು ಕರೆಯುವೆವು ಮತ್ತು ಅವರವರ ಅಭಿಪ್ರಾಯಗಳನ್ನು ಕೇಳಿಕೊಳ್ಳುವೆವು. ಆದುದರಿಂದ ಅವರ ಬೇಡಿಕೆಗಳನ್ನು ಕುರಿತು ನಿರ್ಣಯಮಾಡುವದು ಈಗ ಅಶಕ್ಯವಿದೆ. ಜೇಲ ಕಮಿಟಿಯ ಸೂಚನೆಗಳಿಗನುಸರಿಸಿ ಪಂಜಾಬ ಸರಕಾರದವರು ಈಗ ಭಗತಸಿಂಗ ಮತ್ತು ದತ್ತ ಇವರೀರ್ವರನ್ನು ಎ ವರ್ಗದ ವರ್ಗದಲ್ಲಿಡಲು ಒಪ್ಪಿಕೊಂಡಿದ್ದು ಇವರಿಗೆ ಮತ್ತು ಲಾಹೋರದ ಇನ್ನುಳಿದ ಕೈದಿಗಳಿಗೂ ವಿಶಿಷ್ಟ ಆಹಾರವನ್ನು, ಓದಲಿಕ್ಕೆ ಪುಸ್ತಕಗಳನ್ನು ವೃತ್ತಪತ್ರಗಳನ್ನು ಮೇಜು, ಕುರ್ಚಿ ದೀಪಗಳನ್ನು ಮತ್ತು ರಾತ್ರಿ ೧೦ ಗಂಟೆಯವರೆಗೆ ದೀಪವನ್ನು ಕೊಡಲಿಕ್ಕೆ ಒಪ್ಪಿಕೊಂಡಿದ್ದಾರೆ. ಭಗತಸಿಂಗ ಮತ್ತು ದತ್ತ ಇವರಿಬ್ಬರು ಉಪವಾಸ ವ್ರತವನ್ನು ಎಂದು ಮುರಿಯುವರೋ ಅಂದಿನಿಂದಲೇ ಈ ಸವಲತ್ತುಗಳು ಅವರಿಗೆ ಸಿಗುವವು.

— —

ಗಾಂಧಿಯವರ ಉಪದೇಶ

—(೦)

ಗಂಗಾಧರರಾವ ದೇಶಪಾಂಡೆ ಕೇಳಿರಿ

ಲಖನೌ ವಿಶ್ವವಿದ್ಯಾಲಯದ ವಿದ್ಯಾರ್ಥಿಮಂಡಳದವರು ಮಹಾತ್ಮಾ ಗಾಂಧಿಯವರಿಗೆ ೨೮ನೇ ತಾ॥ ದಿವಸ ೧೦೦೦ರು ಗಳೊಂದಿಗೆ ಒಂದು ಮಾನಪತ್ರವನ್ನರ್ಪಿಸಿದರು. ಗಾಂಧಿಯವರು ಮಾನಪತ್ರಕ್ಕೆ ಉತ್ತರ ಕೊಡುವಾಗ ಮಾತೃಭಾಷೆಯ ಮಹತ್ವವನ್ನು ಕುರಿತು ಮಾತಾಡಿದ್ದೇನಂದರೆ —

ಮಾನಪತ್ರವನ್ನು ನಿಮ್ಮ ಮಾತೃಭಾಷೆಯಾದ ಹಿಂದೀಭಾಷೆಯಲ್ಲಿ ಬರೆಯದೆ ಇಂಗ್ಲಿಷದಲ್ಲಿ ಬರೆದಿರುವಿರಿ. ಲಖನೌ ಪಟ್ಟಣವು ಹಿಂದೀ ಸಂಸ್ಕೃತಿಯ ಕೇಂದ್ರಸ್ಥಾನವಿರುತ್ತದೆ. ಮಾನಪತ್ರವನ್ನು ದೇವನಾಗರಿ ಮತ್ತು ಉರ್ದುಲಿಪಿಯಲ್ಲಿ ಬರೆದಿದ್ದರೆ ಯೋಗ್ಯವಾಗುತ್ತಿತ್ತು. ಪರಕೀಯ ಭಾಷೆಯನ್ನು ಕಲಿಯುವದರಲ್ಲಿಯೇ ಮಗ್ನರಾಗಿ ಮಾತೃಭಾಷೆಯನ್ನು ಮರೆತಿದ್ದುದನ್ನು ಕಂಡು ವಿಷಾದವೆನಿಸುತ್ತದೆ.

ಜನರಲ್ ಬೋಥಾ ಇವನು ಅರಸನನ್ನು ಕಾಣಲು ಹೋದಾಗ್ಗೆ ತನ್ನ ಸಂಗಡ ಒಬ್ಬ ಇಂಗ್ಲಿಷ ಭಾಷೆಯನ್ನು ಬಲ್ಲವನನ್ನು ಕರಕೊಂಡು ಹೋಗಿದ್ದನು. ಜನರಲ್ ಬೋಥಾ ಇವನಿಗೆ ಇಂಗ್ಲಿಷ ಬರುತ್ತಿದ್ದಿಲ್ಲ. ಆದರೆ ತಾನು ದೇಶ ಸಂಸ್ಕೃತಿಯ ಭಕ್ತನೂ, ಪರಕೀಯ ಭಾಷೆಗಿಂತಲೂ ತನ್ನ ಮಾತೃಭಾಷೆಯಾದ ಡಚ್ಚ ಭಾಷೆಯನ್ನು ಹೆಚ್ಚಾಗಿ ಪ್ರೀತಿಸುವವನಾಗಿರುವನೆಂಬುದನ್ನು ಅರಸನ ನಿದರ್ಶನಕ್ಕೆ ತರುವುದಕ್ಕೋಸ್ಕರ ಕರೆದುಕೊಂಡು ಹೋಗಿದ್ದನು, ಇನ್ನು ಮುಂದೆಯಾದರೂ ನೀವೆಲ್ಲರೂ ಮಾತೃಭಾಷೆಯ ಮೇಲೆ ಪ್ರೀತಿಯನ್ನು ತೋರಿಸುವಿರೆಂದು ನಾನು ನಂಬಿರುತ್ತೇನೆ,

ಕನ್ನಡ ಭಾಷೆಯನ್ನು ಹೆಜ್ಜೆ ಹೆಜ್ಜೆಗೂ ತಿರಸ್ಕರಿಸುತ್ತಿರುವ ಕರ್ನಾಟಕ ಸೋದರರು ಇತ್ತ ಕಿವಿಗೊಡುವರೋ?

ಅಲಹಾಬಾದ ವಿಶ್ವವಿದ್ಯಾಲಯದಲ್ಲಿ ರೊಬಿನ ಚಟರ್ಜಿ ಯೆಂಬ ಹೆಸರಿನ ಒರ್ವ ವಿದ್ಯಾರ್ಥಿಯಿರುತ್ತಾನೆ ಇವನು ಈಜುವದರಲ್ಲಿ ಬಹು ನಿಷ್ಣಾತನಿದ್ದಾನೆ. ಇವನು ೧೯೨೮ನೇ ಇಸ್ವಿಯಲ್ಲಿ ೧೯ ತಾಸಿನ ವಿನಿಟುಗಳಲ್ಲಿ ಗಂಗಾನದಿಯನ್ನು ೪೨ ಮೈಲುಗಳವರೆಗೂ, ೧೯೨೭ರಲ್ಲಿ ೧೨ ತಾಸು ೭॥ ವಿನಿಟುಗಳಲ್ಲಿ ಅರಬೀ ಸಮುದ್ರವನ್ನು ೩೦ ಮೈಲು ... ವರೆಗೂ, ಇದೇ ತಿಂಗಳಲ್ಲಿ ಚನ್ನೈ ಕಾ... ...

ಚಾರದಲ್ಲಿದ್ದವುಗಳು. ಅವುಗಳನ್ನು ಸಂಗ್ರಹಿಸಿ ತ ಮ್ಮವುಗಳನ್ನೂ ಸೇರಿಸಿ ಈಗ ಈ ಗ್ರಂಥವನ್ನು ಅ ಚ್ಚು ಹಾಕಿಸಿದ್ದಾರೆ. ಅವುಗಳಲ್ಲಿ ಅನೇಕ ವ್ರತಗಳ ಮಹಿಮೆಯನ್ನು ಹೊಗಳುವ ಕಥೆಗಳೂ ಇವೆ. ಒರ ಹಗಾರರು ಪ್ರಸ್ತಾವನೆಯಲ್ಲಿ ಹೇಳಿದಂತೆ ಬಾಲಕ ಬಾಲಿಕೆಯರು ಸ್ತ್ರೀಯರು ಮತ್ತು ಸಾಮಾನ್ಯ ಶಿ ಕ್ಷಣ ಹೊಂದಿದವರು ಈ ಪುಸ್ತಕವನ್ನು ಓದಿ ಜ್ಞಾನ ಪಡೆದುಕೊಳ್ಳಬಹುದು ಲಿಂಗವಂತರೆಲ್ಲರೂ ಈ ಪುಸ್ತಕವನ್ನು ಓದಲೇಬೇಕು.

ಹಲವೆಡೆಗಳಲ್ಲಿ ವಾಕ್ಯಾರಂಭಕ್ಕೆ ಸೇರಿರುವ ಆಗ, ಅದ್ದರಿಂದ ಈ ಪ್ರಕಾರ ಮುಂತಾದ ಕೆಲವು ಅನವಶ್ಯಕ ಶಬ್ದಗಳನ್ನು ವರ್ಜಿಸಿದರೆ ಶ್ರೀಯುತರ ಭಾಷಾಶೈಲಿಯು ಇದಕ್ಕೂ ಹೆಚ್ಚು ಹೃದಯಂಗಮ ವಾಗುವದರಲ್ಲಿ ಸಂದೇಹವಿಲ್ಲ.

ವಿಮರ್ಶಕ

ಉಳಿದೆರಡು ಪುಸ್ತಕಗಳ ವಿಮರ್ಶೆ ಮ.ಧಾ ವಕಾಶ. ಸಂ ವಿಜಯ.

ಮುನಸಿಪಾಲಿಟಿ ಕಾಯದೆಯಲ್ಲಿ ಬದಲಾವಣೆ.

ಈಗ ಸಧ್ಯಕ್ಕೆ ಯಾವದಾದರೊಂದು ಮುನ ಸಿಪಾಲಿಟಿಯಲ್ಲಿಯ ಚೀಫ ಆಫೀಸರ, ಹೆಲ್ಥ ಆಫೀ ಸರ ಮೊದಲಾದವರನ್ನು ಕೆಲಸದಿಂದ ತೆಗೆಯಬೇಕಾ ದರೆ ಮುನಸಿಪಾಲಿಟಿಯ ಸದಸ್ಯರ ೨/೩ ಮತಗ ಳು ಬೇಕಾಗುತ್ತವೆ. ಇದನ್ನು ೨/೩ ದ ಬದಲಾಗಿ ಬಹುಮತದಿಂದ ಎಂದು ತಿದ್ದಬೇಕಾಗಿ ಮುಂಬಯಿ ಕಾಯದೇ ಮಂಡಳದಲ್ಲಿ ಒಂದು ಠರಾವು ಒಂದಿ ತ್ತದೆ.

ನಾಳಿನ ರಜೆ—

ವಾರ್ಷಿಕ ಪದ್ಧತಿ ಪ್ರಕಾರ ನವರಾತ್ರಿಯ (ಘಟಸ್ಥಾಪನೆ) ಪ್ರತಿಪದೆಯ ಹಬ್ಬದ ದಸೆಯಿಂದ ಇಂದು ಮುದ್ರಾಲಯಕ್ಕೆ ರಜೆ ಇರುವದರಿಂದ, ನಾ ಳಿನ ನಿತ್ಯದ ವಿಜಯವು ಪ್ರಕಟಿಸಲ್ಪಡಲಾರದು.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂ ವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋ ರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ. ಇಂಗ್ಲಿಷದಿಂ ದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳ ಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾ. ವಿಜಯ ಧಾರವಾಡ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸುವಾರ್ತೆ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ... ಬಣ್ಣದ ಸೆರಗು ಹೋಗುವ ರೋಗಕ್ಕೆ ನಮ್ಮ ಮುಕ್ತಾಂಬರ ... ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ... ಗುಣವಾಗುವದು. ಇದಲ್ಲಿ ಕೇವಲ ವನಸ್ಪತಿ ಗಳ ಅದ್ಭುತ ಪ್ರಕಾಶ ... ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆ ... ಮನಿ ಆರ್ಡರದಿಂದಾ ಗಲಿ, ವ್ಹೀ.ಪಿ. ರೂಪದಿಂದಾಗಲಿ ಮುಂಗಡ ಕಳಿಸತಕ್ಕದ್ದು.

ವಿಳಾಸ—ವೈ. ... ದೀಕ್ಷಿತ
(...) ಧಾರವಾಡ

... ಜಾಹೀರಾತು ...
... ಈ ಪತ್ರಿಕೆಯನ್ನು ನಮೂದಿಸಿ ಬರೆಯಬೇಕು.

ನೋಟೀಸು

ನಬೀಸಾಹೇಬ ವ|| ಒಚ್ಚಾಸಾಹೇಬ ನ ದಾಫ ಸಾಕೀನ ಹೇರಿಗಿವಾಡ ತಾಲೂಕ ಧಾರ ವಾಡ ಇವರಿಗೆ—

ಕೆಳಗೆ ಹೆಬ್ಬಟ್ಟಿನ ಗುರ್ತ ಮಾಡುವ ಚಾಂದಬಾ ಕೋಂ ನಬೀಸಾಹೇಬ ನದಾಫ ಈ ಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇ ನೆಂದರೆ—

ನೀನು ನನ್ನ ಮದಿವೆಯ ಗಂಡನಿರುತ್ತಿದಿ ನ ನ್ನ ಚಿಕ್ಕಂದಿನಲ್ಲಿಯೇ ಮದಿವೆಯಾಯಿತು. ಆ ನಂ ತರ ನಾನು ನೆರೆದು ಆರೇಳು ವರ್ಷವಾಯಿತು. ಆದರೂ ನೀನು ನನ್ನನ್ನು ಕರಕೊಂಡು ಹೋಗಿ ಪ್ರಪಂಚ ಮಾಡಲಿಲ್ಲ. ನೀನು ಅದುವು ಮನು ಷ್ಯನಾಗಿರುತ್ತೀದಿ. ನಿನ್ನನ್ನು ಬೈಲ ಕಡಿಗೆ ಸಹ ಎ ತ್ತಿಕೊಂಡು ಹೋಗುವರು ಹೀಗೆ ನೀನು ಪ್ರಪಂ ಚ ಮಾಡಲಿಕ್ಕೆ ಅಸಮರ್ಥನಾದ್ದರಿಂದ ನಾನು ನೆ ರೆತ ಮೇಲೆ ಸಹ ಕರಕೊಂಡು ಹೋಗಲಿಲ್ಲ ನೀ ನು ನನ್ನನ್ನು ಕರಕೊಂಡು ಹೋಗಬೇಕೆಂದು ಹಲ ವು ಸಾರೆ ಹೇಳಿ ಕಳಿಸಿದೆ ನಿನ್ನ ಹೆಸರಿನಿಂದ ಈ ಪರ್ಯಂತರ ಅಂದರೆ ಕಳೆದ ಮೂರು ವರ್ಷಗಳಿಂದ ಸಾಲಾ ಮಾಡಿ, ಉಪಜೀವನ ಮಾಡಿದೆ ಈಗ ಸಾಲಗಾರರ ತಗಾದಿ ಆಗಿದೆ ಕಾರಣ ಈ ನೋ ಟೀಸು ಕೊಡುವ ಭಾಗಬಿತ್ತು ಇದು ಮುಟ್ಟಿದ ಕೂಡಲೆ ಈ ಸಾಲಾ ತೀರಿಸಿ, ನನ್ನ ಉಪಜೀವನ ದ ವ್ಯವಸ್ಥೆ ಮಾಡಬೇಕು ಇಲ್ಲವಾದರೆ ನಾ ನು ನನ್ನ ಉಪಜೀವನದ ವ್ಯವಸ್ಥೆಯ ದೆಸೆಯಿಂ ದ ಎರಡನೆಯವನನ್ನು ಉಡಿಕೆ ಮಾಡಿಕೊಳ್ಳುವೆನು ಅನಂತರ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಿಕೆಯ ಗಂಡನ ಮೇಲೆ ಏನೂ ನಡೆಯಲಾ ರದು ಮತ್ತು ಈಗಾದ ಸಾಲದ ರಕಮು ಮೂರು ನೂರು ರೂಪಾಯಿ ಮತ್ತು ಮಹಾರಿನ ರಕಮು ೧೨೫ ಅಂತೂ ೪೨೫ ರೂಪಾಯಿ ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಕೊಡಬೇಕು ಇದ ಕ್ಕೆ ತಪ್ಪಿದರೆ ನಿನ್ನ ಮನಸ್ಸಿನಲ್ಲಿ ನನ್ನ ಕೂಡ ಬಾ ಳುವೆ ಮಾಡುವ ಇಚ್ಛಾ ಇಲ್ಲೆಂದು ತಿಳಿದು ನಾನು ಮೇಲೆ ಹೇಳಿದ ಪ್ರಕಾರ ಬೇರೆಯವನನ್ನು ಉಡಿಕೆ ಮಾಡಿಕೊಳ್ಳುವೆನು ಮತ್ತು ಈ ನೋಟೀಸೇ ಸೋ ಡಪತ್ರವೆಂದು ತಿಳಿಯಬೇಕು ಈ ನೋಟೀಸಿನ ಖ ರ್ಚು ನಿನ್ನ ತಲೆಯ ಮೇಲೆ ಅದೆ ತಿಳಿಯುವದು

ತಾ|| ೨ ಅಕ್ಟೋಬರ ೧೯೨೯

ಈ ಎಡಗೈ ಹೆಬ್ಬಟ್ಟಿನ ಗುರ್ತ ಚಾಂದಬಾ ಕೋಂ ನಬೀಸಾಹೇಬ ನದಾಫ ಈಕೆ ಕೈದು ಇರು ತ್ತದೆ

ಸೂಚನೆ

ವಿ. ರ್. ಶ್ರೀನಿವಾಸಯ್ಯಂಗಾರ್, ಗೌರ ವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಅಂಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಲಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಗುರುವಾರ ತಾರೀಖು ೩ ನೇ ಅಕ್ಟೋಬರ ೧೯೩೫ (ಸಂಚಿಕೆ ೨೧೯

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಮುಂಜಾನೆ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ

ಚಾಲೂ ಖಾತೆಗಳು:— ಪುಕ್ಕಟೆಯಾಗಿ ತೆರೆಯಲ್ಪಡುವವು.

ಸೇವ್ಹಿಂಗ್ಸ ಬ್ಯಾಂಕ:— ಒಡ್ಡೀ ದರದಿಂದ ತೆಗೆದುಕೊಳ್ಳಲ್ಪಡುವದು ಬಡ್ಡೀ ದರ ೩ ರೂ.

ಮುದತಿ ಠೇವುಗಳು:— ಒಂದು ವರ್ಷದ ಮುದ್ದತಿಯಿಂದ ಠೇವು ತೆಗೆದುಕೊಳ್ಳಲ್ಪಡುವದು. ಬಡ್ಡೀ ದರ ೩॥ ರೂ.

ಜೋಡ:— ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಬಡ್ಡೀದರ ೬ ರೂ. ಶಕ್ತಿ ಮತ್ತು ಧನ್ಯಗಳ ಆಧಾರದ ಮೇಲೂ ಸರಕಾರೀ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ಮತ್ತು ಇತರ ಶೇರುಗಳ ಖರೀದಿ ಮಾಡಿ ಇಂಡಿಯಾ ಖಾತೆಗೆ ಒಮ್ಮೆ ಹಿಡಿಯುವದರಲ್ಲಿಯೂ ಅಥವಾ ಕಳಿಸಿಕೊಡುವದರಲ್ಲಿಯೂ ಮತ್ತು ಯೋಗ್ಯ ಕಮೀಶನ್ ತಕ್ಕೊಂಡು ಗಿರಾಕಿಗಳಿಗೆ ಅವುಗಳ ಖರೀದಿ ವಿಕ್ರಿ ಮಾಡುವದರಲ್ಲಿಯೂ ಬರುವದು ವ್ಯಾಪಾರೀ ಹುಂಡಿಗಳನ್ನು ಕೊಡುವ ಕೊಳ್ಳುವದರಲ್ಲಿಯೂ ಮತ್ತು ಚೆಕ್ಕು ಹುಂಡಿಗಳನ್ನು ವಸೂಲಮಾಡುವದರಲ್ಲಿಯೂ ಬರುವದು.

ಬ್ಯಾಂಕಿಗೆ ಮೇಲ್ಕಾಣಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲ ಕಾಲದ ಅಧಿಕಾರವಿರುವದು.

ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಬಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್. ದಿಕಾರ್ಟ.
ಏಜಂಟರು.

ದಿ ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ-

ಗಳ- ಮಂಗಳವಾರಪೇಟೆ, ದೇವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಬಹು ಮತ್ತು ಚಿಕ್ಕ ಮುದ್ದತಿಯ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸಂಬಂಧ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಖರೀದಿ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಛಂದಿವಾಡ.
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಐದು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ತರದ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚೆನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ್ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ-೬-೧೦-೨೨ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಪ್ರಿಯ
ಶ್ರೀ ನವ್ಯನುತಿಯ ನವಿಗೆ ಸುಖಕರವೆನಿಸಿಂ ತಿ
ದೀ "ವಿಜಯಂ" ಶ್ರೀಶಕರುಣ।
ನಾ ವಿಹಿತಂಗಳ ವಿನಾಶಿಸಲಿವುದು ಸಾಜಾ ॥೧॥

ವೈಸೂರಲ್ಲಿಯ ರಾಜದ್ರೋಹದ ಭೂತ.

"ಇಳೆಯೊಳಿದು ಪೂರಾವರಿ ವೈಸೂರು" ಎಂದು ಹೊಗಳಿಸಿಕೊಂಡ ವೈಸೂರು ಇತ್ತೀಚೆಗೆ ಎಲ್ಲರಿಂದ ಲೂ, ಮೂದಲಿಸಿಕೊಳ್ಳುತ್ತಲಿದೆ. ೧೯೨೦ ರಲ್ಲಿಯ ಗಣಪತಿಯ ಗಲಭೆಯು ಆರಂಭವಾದ ಇಲ್ಲಿಯವರೆಗೂ ಅಲ್ಲಿಯ ಪ್ರಜೆಗಳಲ್ಲಿ ಅಸಂತೋಷವು ಹಬ್ಬಿ ಹೋಗಿದೆ. ಇದಕ್ಕೆ ಕಾರಣವು ಈಗಿನ ದಿವಾನರೂ ಅವರ ತಂತ್ರಕ್ಕೊಳಪಟ್ಟ ಅಧಿಕಾರಿಗಳೂ ಎಂದು ಎಲ್ಲರೂ ಮುಕ್ತ ಕಂಠದಿಂದ ಹೇಳುತ್ತಲಿದ್ದರೂ ಮಹಾರಾಜರು ಈ ಕಡೆ ತಮ್ಮ ದೃಷ್ಟಿಯನ್ನು ತಿರುಗಿಸಿಲ್ಲ. ಹೀಗೆ ಮಾಡದಿರುವದಕ್ಕೆ ಮುಸುಕಿನೊಳಗೆ ಗುದ್ದುಗಳೇನಾದರೂ ಉಂಟೇ? ಎಂಬ ಸಂಶಯ ಬರುತ್ತಲಿದೆ.

ಈ ಎರಡು ವರ್ಷಗಳಿಂದ ಅಲ್ಲಿ ವೃತ್ತಪತ್ರಿಕಾ ಶಾಸನವನ್ನು ಕಿತ್ತೊಗೆದು ಅವುಗಳಿಗೆ ಸ್ವಾತಂತ್ರ್ಯವನ್ನೀಯಬೇಕೆಂದು ಅಲ್ಲಿಯ ಜನರು ಅನೇಕ ವಿಧಗಳಿಂದ ಸರಕಾರವನ್ನು ಕೇಳಿಕೊಂಡರು. "ವಿಶ್ವಕರ್ನಾಟಕ"ವು ತಾನು ಈ "ಕರಾಳ ಶಾಸನವನ್ನು ಹಿಂದೆಗೆ ಹಾಕುವ ವರೆಗೂ ಅಗ್ರಲೇಖವನ್ನೇ ಬರೆಯುವದಿಲ್ಲ"ವೆಂದು ಸಂಕಲ್ಪ ಮಾಡಿತು. ಶ್ರೀ॥ ತಗಡೂರ ರಾಮಚಂದ್ರರಾಯರೂ ಅವರ ಅನುಯಾಯಿಗಳಲ್ಲನೇಕರೂ ಈ ಕರಾಳ ಶಾಸನವನ್ನು ಹೊಗೆಯ ಹಾಕುವದಕ್ಕೋಸ್ಕರ ದಂಡ ಶಿಕ್ಷೆಗಳಿಗೊಳಗಾದರು. ಇದರಿಂದ ದೇಶದಲ್ಲೆಲ್ಲ ಪ್ರಾತಾನದ ಇವು ವಿಚಿತ್ರವಾಗಿ, ಅಳಿಸರ ತಂತ್ರಗಳ ಬಳೆಯನ್ನು ನೋಡಿ "ಇಳೆಯೊಳಿದು ಪೂರಾವರಿ ವೈಸೂರು" ಎಂದು ಹೇಳಿದ ಸರನಾದಿನವನ್ನೊಬ್ಬನು "ಇದೆಯೆ, ಇಳೆಯೊಳಿದು ಪೂರಾವರಿ ವೈಸೂರು" ಎಂದು ವಿಸ್ಮಯ ಪಡುವಷ್ಟು ಅಲ್ಲಿನ ರಾಜ್ಯಾಡಳಿತೆಯು ಹದಗೆಟ್ಟು ಹೋಗಿದೆ.

ಈ ತರಹದ ರಾಜ್ಯಾಡಳಿತೆಯೊಳಗಾದ ವ್ಯಂಗಗಳನ್ನು ಬೈಲಿಗೆಳೆದ ವೃತ್ತಪತ್ರಿಕೆಗಳು "ಇನ್ನು ಮುಂದೆ ನೀವು ನಿಮ್ಮ ಪತ್ರಿಕೆಯನ್ನು ಹೊರಡಿಸಲಾಗದು" ಎಂಬದೊಂದು ವಾಕ್ಯದಿಂದ ಮಾತ್ರ ತಮ್ಮ ವ್ಯಂಗಗಳನ್ನು ಹೊರಗೆಳೆದರಾಗದೆಂದು ಆಳರಸರು ತಿಳಿದಿದ್ದಾರೆ. ಆದರೆ ಅವರು ಈ ಮೂಲಭೂತವಾದ ತಿಳುವಳಿಕೆಯೇ ಮೋಸದಿಂದ ವಿಸ್ಮಯಕರವಾದ ಕಾರಣವಾಗಿದೆ. ರಾಜದ್ರೋಹದ ಅಸ್ತ್ರವಂತೂ ಅವರನ್ನು ಪೂರ್ಣವಾಗಿ ನಂಬಿಕೊಂಡು ಹೋಗಿದೆ. ಈ ರಾಜದ್ರೋಹಾಸ್ತ್ರದ ಆಘಾತದಲ್ಲಿ ಅನೇಕ ಸಂಗತಿಗಳು ಸಂಭವಿಸಿವೆ.

ಈ ಅಸ್ತ್ರಾಘಾತಕ್ಕೆ ಶ್ರೀ ಸೀತಾರಾಮ ಶಾಸ್ತ್ರಿ ಮತ್ತು ಶ್ರೀ ಅಶ್ವತ್ಥನಾರಾಯಣರಾಯರು ಸಿಲುಕಿದರು. ಇವರ ಮೇಲೆ ರಾಜದ್ರೋಹಾರೋಪವಿಂದ ಖಟ್ಲೆಯಾಗಿತ್ತು. ಅದರಲ್ಲಿ ಇವರಿಗೆ ಶಿಕ್ಷೆಯೂ ಆಯಿತು. ಇವರು ಚೀಫ ಕೋರ್ಟಿಗೆ ಅಪೀಲು ಮಾಡಿದರು. ಈ ಅಪೀಲಿನ ವಿಚಾರಣೆಯು ಸದ್ಯಕ್ಕೆ ಅಲ್ಲಿ ನಡೆದಿದೆ. ಆರೋಪಿಗಳ ಪರವಾಗಿದ್ದ ವಕೀಲ ಶ್ರೀ॥ ಸಿ. ವ್ಹಿ. ನರಸಿಂಹ ಅಯ್ಯಂಗಾರರು ಸರಕಾರವು ಈ ಖಟ್ಲೆ ಹಾಕುವ ಮುಂಚೆ ಅವರ ಮೇಲೆ ಕಾಯದೇಶೀರ ಆರೋಪಗಳನ್ನಿಟ್ಟಿಲ್ಲವೆಂದೂ ರಾಜದ್ರೋಹಾತ್ಮಕವೆನಿಸಿದ ಲೇಖಗಳನ್ನೂ ಅವುಗಳ ಭಾಗಗಳನ್ನೂ ಸ್ಪಷ್ಟವಾಗಿ ಹೇಳಿಲ್ಲವೆಂದು ವಾದಿಸಿದರು. ಕೆಳ ಕೋರ್ಟಿನಲ್ಲಿ ದಯಾ ವಾದಿಪಕ್ಷದವನೇ ಸಾಕ್ಷಿಯಾಗಿ ಉಳಿದ ಸ್ವತಂತ್ರ ಸಾಕ್ಷಿಗಳಾವವೂ ಇಲ್ಲದ್ದರಿಂದ, ಆರೋಪಿಗಳು ಈ ಖಟ್ಲೆಯು ಸೆಶನ ಕೋರ್ಟಿನಲ್ಲಿ ವಿಚಾರಿಸಲ್ಪಡಬೇಕೆಂದು ವಿಶ್ವಪ್ರಯತ್ನ ಮಾಡಿದರೂ ಹಾಗಾಗಗೊಡಲಿಲ್ಲ. ಮತ್ತು ಆರೋಪಿತರಿಗೆ ಬೇಕಾಗಿದ್ದ ಸಾಕ್ಷಿದಾರರನ್ನು ಕೋರ್ಟಿನವರು ಕರೆಯಿಸಲಿಲ್ಲವೆಂದು ಆಕ್ಷೇಪಣೆಯೆತ್ತಿದರು.

ಕೆಳಗಿನ ಕೋರ್ಟಿನೊಳಗೆ ರಾಜದ್ರೋಹಾರೋಪದ ಬಗ್ಗೆ ಇದ್ದ ಕಾರಣಗಳನ್ನು ಓದುತ್ತ ಪ್ರತಿವಾದಿ ವಕೀಲರು ಬ್ರಿಟಿಶ ಹಾಗೂ ವೈಸೂರು ಸರಕಾರಗಳೆರಡೂ ಒಂದೇ ಕಾಲಕ್ಕೆ ಆರೋಪಿಸಲ್ಪಟ್ಟಿದ್ದರೆ ಮಾತ್ರ ಅದು ರಾಜದ್ರೋಹವಾಗುತ್ತದೆಂದು ವೈಸೂರು ಪಿನಲಕೋಡಿನಲ್ಲಿ ಹೇಳಿದೆ. ಆದರೆ ಈಗ ದಿವಾನರ ಮೇಲೆ ಮಾತ್ರ ಟೀಕೆಯಾಗಿದೆ. ಆದುದರಿಂದ ಅದು ರಾಜದ್ರೋಹಾತ್ಮಕವಾಗಲಾರದೆಂದರು. "ಕಾಯದೆಯಿಂದ ಸ್ಥಾಪಿಸಲ್ಪಟ್ಟ ವೈಸೂರ ಮತ್ತು ಬ್ರಿಟಿಶ ಸರಕಾರಗಳು ಆರೋಪಿಸಲ್ಪಟ್ಟಿದ್ದ ಪಕ್ಷದಲ್ಲಿ" ಎಂಬ ವಾಕ್ಯದೊಳಗಿನ "ಮತ್ತು" ಎಂಬ ಶಬ್ದವು ಇಲ್ಲವೆ ಎಂಬರ್ಥದಲ್ಲಿ ತೆಗೆದುಕೊಳ್ಳಲ್ಪಡಲಾರದೆಂದು ಹೇಳಿದರು.

ಸರಕಾರೀ ಅಧಿಕಾರಿಗಳು ಇವರಿಗೆ ಉತ್ತರವಾಗಿ ಮತ್ತು ಎಂಬುದು ಇಲ್ಲವೆ ಎಂಬರ್ಥದಲ್ಲಿ ಉಪಯೋಗಿಸಲ್ಪಡಬಹುದೆಂದೂ ವೈಸೂರಲ್ಲಿ ಮಹಾರಾಜರೇ ಸರ್ವಾಧಿಕಾರಿಗಳೆಂದೂ, ದಿವಾನರು ಸರಕಾರದ ಒಂದು ಭಾಗವಾದ್ದರಿಂದ ಸರಕಾರವನ್ನೇ ಟೀಕಿಸಿದಂತಾದ್ದರಿಂದ ಈ ಖಟ್ಲೆಯು ಕಾಯದೇಶೀರವಿದೆಯೆಂದು ಹೇಳಿದರು. ಯಾವುದಾದರೊಬ್ಬ ಅಧಿಕಾರಿಯು ಟೀಕಿಸಲ್ಪಟ್ಟಿದ್ದಾಗ ಅದು ರಾಜದ್ರೋಹಾತ್ಮಕವಾಗಿ ಹಿಡಿಯಲ್ಪಟ್ಟಿದೆಯೇ? ಎಂಬ ನ್ಯಾಯಾಧೀಶರ ಪ್ರಶ್ನೆಗೆ ನಿರುತ್ತರರಾದರು. ಆರೋಪಿಗಳು ಅನೇಕ ಸಾರೆ ವೃತ್ತಪತ್ರಿಕಾ ಶಾಸನವನ್ನು ಮುರಿಯುವಂತೆ ಜನರ ಮನಸ್ಸೊಳಗಿಲ್ಲ ಯತ್ನಿಸಿದ್ದು ರಾಜದ್ರೋಹವೇ ಅದ್ದರಿಂದ ಇವರ ಮೇಲಿನ ಆರೋಪವು ನಿಜವಿದೆಯೆಂದರು.

ನ್ಯಾಯಾಧೀಶರು ಕೆಳಕೋರ್ಟಿನಲ್ಲಿ ನಡೆದ ವಿಚಾರಣಾ ಕ್ರಮವು ಅಕ್ರಮವಾಗಿದೆಯೆಂದು "ತೀರ್ಪು" ಕೊಡಲಿದ್ದಾರೆ. ತೀರ್ಪು ಇಷ್ಟರಲ್ಲಿಯೇ ಹೇಳಲ್ಪಡುವದು.

ಮದಿವೆಯ ಕಾಯದೆಯೊಳಗಿನ ಮುಖ್ಯ ಕಲಮುಗಳು.

೧ ಈ ಕಾಯದೆಯಲ್ಲಿ ಬಾಲಕನೆಂದರೆ ೧೮ ವರ್ಷದೊಳಗಿನವನು ಬಾಲಿಕೆಯೆಂದರೆ ೧೪ ವರ್ಷದೊಳಗಿನವಳೆಂದರ್ಥ. ಬಾಲ್ಯವಿವಾಹವೆಂದರೆ ಮೇಲೆ ಹೇಳಿದ ವಯಸ್ಸಿನೊಳಗಿನ ಹುಡುಗ ಹುಡುಗಿಯರ ಮದುವೆ ೧೮ ವರ್ಷಕ್ಕಿಂತಲೂ ಕಡಿಮೆ ವಯಸ್ಸಿನವರು ಅಪ್ರಬುದ್ಧರೆಂದು ತಿಳಿಯತಕ್ಕದ್ದು.

೨ ೧೮ ರಿಂದ ೨೧ ವರ್ಷದೊಳಗಿನವನು ೧೪ ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗಿಯನ್ನು ಲಗ್ನವಾದರೆ ೧೦೦೦ ರೂಪಾಯಿ ದಂಡ ಕೊಡಲು ತಕ್ಕವನು.

೩ ೨೧ ವರ್ಷ ಮೀರಿದವನು ಬಾಲ್ಯವಿವಾಹ ಮಾಡಿಕೊಂಡರೆ ಸಾದಾ ಶಿಕ್ಷೆಗಾಗಲೀ, ೧೦೦೦ ರೂ. ದಂಡಕ್ಕಾಗಲೀ, ಇಲ್ಲವೆ ಶಿಕ್ಷೆ, ದಂಡಗಳೆರಡಕ್ಕೂ ಕೂಡಿಯೇ ಪಾತ್ರನಾಗುವನು.

೪ ಬಾಲ್ಯವಿವಾಹವಲ್ಲವೆಂದು ಸಕಾರಣವಾಗಿ ಸಿದ್ಧ ಪಡಿಸದೆ ಹಾಗೆಯೇ ಬಾಲ್ಯವಿವಾಹ ಮಾಡಿಕೊಂಡರೆ ೧೦೦೦ ರೂ. ದಂಡಕ್ಕಾಗಲೀ ಸಾದಾ ಶಿಕ್ಷೆಗಾಗಲೀ ಇಲ್ಲವೆ ಎರಡಕ್ಕೂ ಕೂಡಿಯೇ ಪಾತ್ರನಾಗುವನು.

೫ ಅಪ್ರಬುದ್ಧ ಬಾಲಕ ಬಾಲಿಕೆಯರು ಪಾಲಕರ ವಶದಲ್ಲಿ ಅವನ್ನು ಅಲ್ಲಿ ಮಾಡುವ ಪ್ರೊ

ಶ್ಯಾಪಿಸುವ ತಂದೆ ತಾಯಿಗಳು ಇಲ್ಲವೆ ಪೋಷಕರು ೧೦೦೦ ರೂ. ದಂಡ ಅಥವಾ ಸಾದಾ ಶಿಕ್ಷೆಗಾಗಲೀ ಎರಡಕ್ಕೂ ಆಗಲಿ ಪಾತ್ರರಾಗುವರು. ಸ್ತ್ರೀಯರೇ ಈ ಅಪರಾಧ ಮಾಡಿದರೆ ಅವರು ಶಿಕ್ಷೆಗೆ ಪಾತ್ರರಾಗಲಾರರು. ಅಪ್ರಬುದ್ಧ ಬಾಲಕ ಬಾಲಿಕೆಯರು ಮದುವೆಯಾದಲ್ಲಿ ಅದು ಅವರ ಪಾಲಕರ ಅಶ್ರದ್ಧೆಯ ಫಲವೆಂದು ಭಾವಿಸಲ್ಪಡಬೇಕು.

೬ ಮದುವೆಯಾದ ಒಂದು ವರ್ಷದಲ್ಲಿ ಮಾತ್ರ ಕೋರ್ಟಿನಲ್ಲಿ ಫಿರ್ಯಾದಿ ಮಾಡಿದರೆ ಅದು ವಿಚಾರಿಸಲ್ಪಡುವದು. ವರ್ಷ ಹೋದನಂತರ ಅದರ ವಿಚಾರಣೆಯಾಗುವಂತಿಲ್ಲ.

ಮೈಸೂರಲ್ಲಿ ಡಾ॥ ಅನಸಾರಿಯವರು.

—)(o)(—

ಮೈಸೂರಲ್ಲಿ ತೃತೀಯ ಅಖಿಲ ಕರ್ನಾಟಕ ಹಿಂದೀ ಪರಿಷತ್ತು ಡಾ॥ ಅನಸಾರಿಯವರ ಅಧ್ಯಕ್ಷತೆಯಲ್ಲಿ ಸೇರಿದೆ. ಮೈಸೂರು, ಬೆಂಗಳೂರು ನಗರ ಸಭೆಯವರು ಇವರಿಗೆ ಬಿನ್ನವತ್ತಳಿಕೆಯನ್ನರ್ಪಿಸುವರು. ಇವರು ಮೈಸೂರು ಸಂಸ್ಥಾನದಲ್ಲಿರುವವರೆಗೆ ಶ್ರೀ॥ ಮಹಾರಾಜರವರ ಅತಿಥಿಗಳಾಗಿರುವರು.

ಮದ್ರಾಸದಲ್ಲಿ ಮೈಸೂರಿನ ದಿವಾಣರು.

—(o)—

ಮೈಸೂರ ಸಂಸ್ಥಾನದ ದಿವಾಣರಾದ ಸ॥ ಮಿರ್ಜಾ ಇಸ್ಮಾಯಿಲರವರು ಕಳೆದ ವಾರ ಮದ್ರಾಸಿಗೆ ಪಯಣ ಬೆಳೆಸಿದ್ದರು. ಇವರಿಗೆ ಮದ್ರಾಸ ನಗರ ಸಭೆಯವರು ಬಿನ್ನವತ್ತಳಿಕೆಯನ್ನರ್ಪಿಸಿದರು. ಇದಕ್ಕುತ್ತರವಾಗಿ ದಿವಾಣರು, ಹಿಂದೂ ಮುಸಲ್ಮಾನರ ಐಕ್ಯವಾಗಿ ಭಾರತದ ಅಭ್ಯುದಯವಾಗಬೇಕೆಂದು ಹಾರೈಸಿದರು.

ಹೆಡ್ ಮಾಸ್ತರರ ಮೇಲೆ ವಿದ್ಯಾರ್ಥಿಯ ದಾವೆ

—o—

ಅಹಮ್ಮದಾಬಾದದ ಹಾಯಸ್ಕೂಲಿನ ಎಳನೆಯ ವರ್ಗದಲ್ಲಿ ದಲಸುಖಭಾಯಿ ಎಂಬ ವಿದ್ಯಾರ್ಥಿಯು ಓದುತ್ತಿದ್ದಾನೆ. ಒಂದು ದಿನ ಆ ಶಾಲೆಯ ಮುಖ್ಯಾಧ್ಯಾಪಕರು ಆ ವರ್ಗಕ್ಕೆ ಹೋದಾಗ ಅಲ್ಲಿ ಅವನಿಗೆ ಬೆತ್ತದಿಂದ ಹೊಡೆದು ಶಿಕ್ಷಿಸಿದರು. ಆದ್ದರಿಂದ ಆ ವಿದ್ಯಾರ್ಥಿಯು ಅವರ ಮೇಲೆ ದಾವೆ ಮಾಡಿದ್ದಾನೆ.

ಮದುವೆಯಲ್ಲಿ ಮಂಗನ ಹಾವಳಿ

ಇಂಗ್ಲಂಡದ ಒಂದು ಹಳ್ಳಿಯ ಚರ್ಚಿನಲ್ಲಿ ಮದುವೆಯ ಸಮಾರಂಭವಾಗುವದಿತ್ತು. ವಧೂವರರು ಲಗ್ನವಾಗುವಷ್ಟರಲ್ಲಿ ಒಂದು ದೊಡ್ಡ ಮಂಗವು ಬಂದು, ವಧುವಿನ ಅತ್ತೆಯ ಮೇಲೆ ಹಾರತೊಡಗಿತು. ಅವಳು ಚೀರಲು ಮದುವೆಯ ಸಮಾರಂಭಕ್ಕಾಗಿ ನೆರೆದಿದ್ದ ಜನರು ಅಲ್ಲಿಗೆ ಹೋಗಿ ಮಂಗನನ್ನು ಬೆನ್ನಟ್ಟಿದರು.

ಜಾಣತನವೋ? ಕೋತಿತನವೋ?

—o—

ಇದುವರೆಗೆ ಗದಗ ವಿ... ಯ ಸುದ್ದಿಗಳು, ಅದರಲ್ಲಿಯೂ ಗದಗ ... ಯ ಸ್ಕೂಲ ಬೋರ್ಡಿನ ಸುದ್ದಿಗಳು ತಮ್ಮ ... ಪತ್ರಗಳಲ್ಲಿ ಪ್ರಕಟವಾಗಿರಲಿಲ್ಲ. ಇಂದು ಅಂಥ ಸುಯೋಗವು ಒದಗಿದುದು ಯೋಗದ ಶ್ರೇಷ್ಠವಾಗಿದೆ. ಸಾಧಾರಣ ಸಂಗತಿಯಿದ್ದರೆ ಯಾರೂ ತೊಂದರೆಯಾಗುತ್ತಿದ್ದಿಲ್ಲ. ನಾವೂ ತಲೆಹಾಕುತ್ತಿರಲಿಲ್ಲ. ಈ ಮೊದಲೇ ಹೇಳಬೇಕೆಂದಿದ್ದೆವು. ಸಣ್ಣ ಪುಟ್ಟ, ಅಲ್ಪ, ಸ್ವಲ್ಪ ತಪ್ಪುಗಳು, ಅನ್ಯಾಯಗಳು, ತಿಳಿಯದೆ ಆಗಬಹುದು. ತಪ್ಪು ತಿಳುವಳಿಕೆಯಿಂದಾಗಿರಬಹುದು. ಎಂದು ಗ್ರಹಿಸಿ ತಮ್ಮ ತನಕ ಬರಲಿಲ್ಲ. ಇಂದು ಬರಲೇಬೇಕಾಯಿತು. ಸ್ಥಳ ಕೊಡುವಿರಾ?

ತಾ॥ ೧-೨ನೇ ದಿವಸ ಗದಗ ಸೆಂಟ್ರಲ್ ಸ್ಕೂಲಿನಲ್ಲಿ ಪ್ಲೇಗರಾಜನ ಪ್ರತಿಬಂಧಕೋಪಾಯವನ್ನು ಕೈಕೊಳ್ಳಬೇಕಾಯಿತು. ಆ ಬಳಿಕ ಪ್ಲೇಗರಾಜನ ಎಚ್ಚರಿಕೆಗಳು ಎರಡು ದಿವಸ ವಿಶ್ರಾಂತಿಗೆಯ್ಯುವ ಸನ್ನಿವೇಶ ಬಂದಿತು. ಇದೇನು ಅರ್ಥಗರ್ಭಿತವಾಗದ ಇಷ್ಟೊಂದು ಉಪನ್ಯಾಸವೆನ್ನುವಿರಾ? ಇನಾಕ್ಯುಲೇಶನ್ ಆಯಿತು. ಎರಡು ದಿವಸ ಸೂಟಿಯಾಯಿತು. ಆಗ ಹಾಕ್ಯಾರೂ ಅಡ್ಮಿನಿಸ್ಟ್ರೇಟಿವ್ಹ ಆಫೀಸರರೂ ತಮ್ಮ (?) ಪರಾಂಡಿಕ್ಯತೆ ತೋರಿಸಿದರು. ಅದೆಂತಹ (?) ಪರಾಕ್ರಮವೋ;

“ಇನಾಕ್ಯುಲೇಶನ್ ಮಾಡಿಸಿಕೊಂಡವರು ಹುಡುಗರು, ಅದಕ್ಕಾಗಿ ಹುಡುಗರ ಸಲುವಾಗಿ ೨ ದಿವಸಗಳ ಸೂಟಿಯೆಂದು ದಾಕ್ತರರು ತರಾ ಬರೆದರೆ, ಅದಕ್ಕೆ “ಎಲ್ಲಾ” ವಿದ್ಯಾರ್ಥಿಗಳಿಗೇ ಸೂಟಿ ... ಸಾಧ್ಯವಿಲ್ಲ.” ವೆಂದು ಡ್ಯಾಡ್ ಮಿನಿಸ್ಟ್ರೇಟಿವ ಅಂದರು,

“ಒಡೆಯನ ಹೇಳಿಕೆ; ಬಡಿಗೆಯ ಮಾಟ” ಹುಡುಗರು ಇಲ್ಲದಿದ್ದರೂ ಮಾಸ್ತರರು ಶಾಲೆಗೆ ಬರಬೇಕಾಯಿತು. ಒಂದೇದು.

ಡ್ಯಾಡ ಮಿನಿಸ್ಟ್ರೇಟಿವ್ಹ ಆಫೀಸರರು ಹೊಸದಾಗಿ ಬಂದಿರುವರು. ಹೊಸಬರು ಪಾಪ! ಶಾಲೆಯ ಅವಸ್ಥೆಯನ್ನೂ ಶಾಲೆಯೊಳಗಿನ ಬೆಂಚ ಮೇಜು ಮೊದಲಾದ ಉಪಕರಣಗಳನ್ನೂ ಕಾಯುವದೇ ಶಿಕ್ಷಕರ ಪರಮ ಕರ್ತವ್ಯವೆಂದೂ ತಿಳಿದುಕೊಂಡಿರಬಹುದು. ತಪ್ಪೇನು? ಇಲ್ಲವೆ ಎರಡು ದಿವಸ ಹುಡುಗರೂ ಇಲ್ಲ ಮಾಸ್ತರರೂ ಇಲ್ಲ. ಶಾಲೆಯೊಳಗಿನ ಸಾಮಾನುಗಳೂ ಕಳವಾಗಿ ಹೋದರೆ ಮುಂದೆ ಫಿರ್ಯಾದಿ ಮೊದಲಾದ ಗೊಂದಲಕ್ಕೇಕೆ ಬೀಳಬೇಕು? ಪೋಲೀಸರ ಕೂಡ ಏಕೆ ಗುದ್ದಾಡಬೇಕು? ಈ ವಿಚಾರದಿಂದ ಮೊದಲೇ ಜಾಗ್ರತೆಯ ಉಪಾಯವೆಂದು ರಕ್ಷಣೆಗಾಗಿ ಮಾಸ್ತರರಿಗೆ (ಹಾಗೆ ಹೇಳಿ) ಇರಹೇಳಿದ್ದರೆ ಇದೊಂದು ಅಪರಾಧವೇ? ಈ ಮುಂಜಾಗ್ರತೆಯ ಜುರುಕು ಬುದ್ಧಿಗಾಗಿ ಡ್ಯಾಡ ಮಿನಿಸ್ಟ್ರೇಟಿವ್ಹ ಆಫೀಸರರನ್ನು ಎಷ್ಟು ಹೊಗಳಿದರೂ ಕಡಿಮೆಯೇ ಸರಿ.

ಶಿಕ್ಷಕರು ಶಿಕ್ಷಣಕ್ಕಾಗಿಯಲ್ಲದೆ (ಕೆಲವರು ದನ ಕಾಯುವವರೆನ್ನುವರು) ಕಾವಲಿಕ್ಕಲ್ಲವೆಂಬುದನ್ನು ಎಲ್ಲರೂ ಬಲ್ಲರು. ಹೊಸಬರಾದ ಡ್ಯಾಡ ಮಿನಿಸ್ಟ್ರೇಟರು ಇದನ್ನರಿಯರು. ಆ ಕಾರಣದಲ್ಲಿ ಮಾಡತಕ್ಕ ಸುಧಾರಣೆಗಳನ್ನು ಮಾಡಿದ್ದರೆ- ಇದ್ದ ಫಲವೇನು? ನಮ್ಮ ಹೊಸಬರಾದ ಆಫೀಸರರು ಈ ಬಗೆಯ ಸುಧಾರಣೆಗಳನ್ನು ಬಹುಕಾಲ ಮಾಡುತ್ತ ಬಾಳಲೆಂದು ದೇವರನ್ನು ಪ್ರಾರ್ಥಿಸುತ್ತ ನಮ್ಮ ಅಪ್ಪಣೆ ಬೇಡುವ

ಒಬ್ಬ ಗದಗ ನಿವಾಸಿ.

ಒಪ್ಪಿಗೆ.

—(o)—

೧ ಶಿವಲೀಲಾಮೃತ ಕಥೆಗಳು.

೨ ತುಂಟ ಗಂಡ, ಮೊಂಡ ಹೆಂಡತಿ.

೩ ಬಸವೇಶ್ವರ ಚರಿತ್ರೆ.

ಲೇಖಕರು-

ಹೊನ್ನಾಪೂರಮಠದ ಗದಿಗೆಯ್ಯನವರು

ಸಿಗುವ ಸ್ಥಳ-

ಮನೋದಯ ಮುದ್ರಾಲಯ ಧಾರವಾಡ

[illegible]

೧ ಶಿವಲೀಲಾಮೃತ ಕಥೆಗಳು:-

ಬಾಗ್ಲೋಡಿ ಗ್ರಂಥಮಾಲೆಯ ಮೂರನೆಯ ಪುಷ್ಪವಿದು. ಇದರಲ್ಲಿ ೮೦ ಪುಟಗಳು. ದಪ್ಪಾದ ಕಾಗದ, ಒಳಗೊಂದು ಶ್ರೀ॥ ಶಂಕರ ಪಾರ್ವತಿಯರ ಚಿತ್ರವಿದೆ. ಬೆಲೆ ೧೦ ಆಣೆ.

ಒಟ್ಟಿನಲ್ಲಿ ಇದರಲ್ಲಿ ೨೦ ಕಥೆಗಳಿವೆ ಇವುಗಳಲ್ಲಿ ಕೆಲವು ಈ ಮೊದಲೆ ಹೆಸ್ಸು ಮಕ್ಕಳಲ್ಲಿ ಪ್ರ

ಮಹಾನವಮಿ ಉತ್ಸವ ಧಾರವಾಡ

೧೯೩೫

ಕಾರ್ಯಕ್ರಮ

ಶನಿವಾರ ೫ನೇ ಅಕ್ಟೋಬರ— ಸಂಜೆಯ ೪॥ ಗಂಟೆಗೆ ಹೊಸ ನಗರ ಸಭೆಯ ಕಟ್ಟಡದ ಮೇಲ್ಮಟ್ಟದಲ್ಲಿ ಕರ್ನಾಟಕ ಲಲಿತ ಕಲಾಪ್ರದರ್ಶನದ ಉದ್ಘಾಟನವು ವ್ಯಾಖ್ಯಾತರು- ಬಳ್ಳಾರಿಯ ಸುಪ್ರಸಿದ್ಧ ನಟರೂ ಕಲಾಪ್ರೇಮಿಗಳೂ ಆದ ಶ್ರೀ ತಾಡಪತ್ರಿ ರಾಘವಾಚಾರ್ಯರು. ಸ್ಥಳ- ಮುನಿಸಿಪಾಲಿಟಿಯ ಬೈಲು.

ರವಿವಾರ ೬ನೇ ಅಕ್ಟೋಬರ-

ಸಂಜೆಯ ೫ ಗಂಟೆಗೆ ಗಾಯನ, ವಾದನ ಬೈಠಕಗಳು ಮುಂ. ದೇಶಪಾಂಡೆ ಗುರುರಾಯರು, ಕಾಲಕೂರ ಕೃಷ್ಣಾಚಾರ್ಯರು ಮುಂತಾದವರಿಂದ ಸ್ಥಳ- ಸದರ್ನ ಮರಾಠಾ ಬ್ಯಾಂಕಿನ ಕಟ್ಟೆ.

ಸೋಮವಾರ ೭ನೇ ಅಕ್ಟೋಬರ-

ಸಂಜೆಯ ೬॥ ಗಂಟೆಗೆ ಕರ್ನಾಟಕ ಐತಿಹಾಸಿಕ ಮ್ಯಾಜಿಕ್ ಲ್ಯಾಂಟರ್ನ. ವ್ಯಾಖ್ಯಾತರು- ಶ್ರೀ. ದ. ಪ. ಕರಮರಕರ

ಸ್ಥಳ- ಸದರ್ನ ಮರಾಠಾ ಬ್ಯಾಂಕಿನ ಕಟ್ಟೆ.

ಮಂಗಳವಾರ ೮ನೇ ಅಕ್ಟೋಬರ-

ಸಂಜೆಯ ೬ ಗಂಟೆಗೆ ಉಪನ್ಯಾಸ. ಸ್ಥಳ- ಸದರ್ನ ಮರಾಠಾ ಬ್ಯಾಂಕಿನ ಕಟ್ಟೆ.

ಬುಧವಾರ ೯ನೇ ಅಕ್ಟೋಬರ-

ಸಂಜೆಯ ೬ ಗಂಟೆಗೆ ಕೀರ್ತನಕೇಸರಿ ಬಿ. ಶಿವಮೂರ್ತಿಗಳ ಕೀರ್ತನ. ಸ್ಥಳ- ವಿಕ್ಟೋರಿಯಾ ಹಾಯಸ್ಕೂಲಿನ ಬೈಲು.

ಗುರುವಾರ ೧೦ನೇ ಅಕ್ಟೋಬರ-

ಸಂಜೆಯ ೬ ಗಂಟೆಗೆ ಕವಿಸಮ್ಮೇಲನ. ಸ್ಥಳ- ಸದರ್ನ ಮರಾಠಾ ಬ್ಯಾಂಕಿನ ಕಟ್ಟೆ.

ಶುಕ್ರವಾರ ೧೧ನೇ ಅಕ್ಟೋಬರ-

ಸಾಯಂಕಾಲದ ೪ ಗಂಟೆಗೆ ಶಕ್ತಿ ಸಂವರ್ಧಕ ಆಟಗಳು. ಸ್ಥಳ- ದುರ್ಗಾದೇವತೆಯ ಬೈಲು.

ಶನಿವಾರ ೧೨ನೇ ಅಕ್ಟೋಬರ-

ಸಾಯಂಕಾಲದ ೫ ಗಂಟೆಗೆ ಮೆರವಣಿಗೆ, ಬನ್ನೀ ಮುಡಿಯುವದು, ಬಹುಮಾನಗಳನ್ನು ಹಂಚುವದು, ಸಮಾರೋಪ ಮುಂ.

ಪ್ರದರ್ಶನಗಳು ೧೧ನೇ ತಾ॥ ಸಂಜೆಯವರೆಗೆ ನಡೆಯುವವು. ಕಲಾಪ್ರದರ್ಶನವು ಬೆಳಿಗ್ಗೆ ೮ ರಿಂದ ೧೦॥ ಯ ವರೆಗೂ ಮಧ್ಯಾನ್ಹ ೩ ರಿಂದ ರಾತ್ರಿ ೮ ರ ವರೆಗೂ ತೆರೆದಿರುವದು. ಇದಕ್ಕೆ ೧ ಆಣೆಯ ಟಿಕೀಟ ಇಡಲಾಗಿದೆ.

[illegible]ಗಳ ಪ್ರದರ್ಶನವು ಬೆಳಿಗ್ಗೆ ೮ ರಿಂದ ೧೧ ರವರೆಗೆ ಹಾಗೂ ಮಧ್ಯಾನ್ಹದ ೩ ರಿಂದ ಸಂಜೆಯ ೭ ರ ವರೆಗೆ ತೆರೆದಿರುವದುಂಟು. ಇದಕ್ಕೆ ಟಿಕ್ಕೀಟು ಇಲ್ಲ.

ಎಲ್ಲ ನಾಗರಿಕರು ಅವಶ್ಯವಾಗಿ ಸರಿಯಾದ ವೇಳೆಗೆ ಬಂದು, ಉತ್ಸವದ ಕಾರ್ಯಗಳನ್ನೆಲ್ಲ ಯಶಸ್ವಿಯಾಗಿ ಕೊನೆಗಾಣಿಸಬೇಕೆಂದು ಸವಿನಯ ಪ್ರಾರ್ಥನೆ.

ರಾಂ. ಶ್ರೀ. ಕಮಲಾಪೂರ ಗುಂಡೇ ಕೃಷ್ಣರಾಯರು
ಗು. ವೆ. ಕುಲಕರ್ಣಿ. ಅಧ್ಯಕ್ಷರು.
ಕಾರ್ಯದರ್ಶಿಗಳು.

ನವರಾತ್ರಿ ಉತ್ಸವ ಮಂಡಲ ಧಾರವಾಡ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ರೋಗಿಗಳಿಗೆ ಅಮೃತ ಸಂಜೀವ

ಸು[illegible]ಂಬರ

[illegible]

ವಿಳಾಸ— ರಾ. [illegible] ದೀಕ್ಷಿತ
C/o [illegible] ಧಾರವಾಡ

[illegible]

ಬೇಕಾಗಿದೆ.

ಬ್ಯಾಂಕಿನ ಲೆಕ್ಕ ಮೊದಲಾದವುಗಳಲ್ಲಿ ಅನುಭವಿಕರಾಗಿದ್ದ ಒಬ್ಬ ಸೇಕ್ರೇಟರಿಯು ಭಾವಸಾರ ಕ್ಷತ್ರಿಯ ಕೋ ಅಪರೇಟಿವ್ಹ ಬ್ಯಾಂಕಿಗೆ ಬೇಕಾಗಿದ್ದಾರೆ. ಪಗಾರ ೩೦ ರಿಂದ ೩೫ ರ ವರೆಗೆ ಬೇಕಾದವರು ಚೇರಮನ್ನರಿಗೆ ಲಾಯಖಿ ಸರ್ಟಿಫಿಕೇಟ ಸಹಿತ ಸ್ವಮುಖ್ಖಮು ಭೆಟ್ಟಿಯಾಗಬೇಕು. ಇಲ್ಲವೆ, ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕು.

ಎಸ್. ಡಿ. ಟಿಕಾರೆ,
ಚೇರಮನ್ನ.
ಭಾ. ಕ್ಷ. ಕೋ ಅಪರೇಟಿವ್ಹ ಸೊಸಾಯಿಟಿ.

ಜಾಹೀರ ನೋಟೀಸು

ಈ ಕೆಳಗೆ ಸಹಿಮಾಡಿದವನು ಈ ನೋಟೀಸಿನಿಂದ ತಿಳಿಸುವದೇನಂದರೆ-

ನಮ್ಮಲ್ಲಿ ಗೋಂದಿಯಾದಿಂದ ಬಂದ ತಂಬಾಕಿನ ಚೀಲಗಳು ೧೮೯ ಇವುಗಳನ್ನು ಒಡ್ಡರ ಗೌಸಮಿಯ್ಯಾ ಜವಳಿ ಸಾ॥ ಧಾರವಾಡ ಇವರ ಮುಖಾಂತರ [illegible] ಲಿಲಾವಿನಿಂದ ತಾ॥ ೧೩-೧೦-೩೫ ನೇ ರವಿವಾರ ದಿವಸ ಮುಂಜಾನೆ ೮ ಗಂಟೆಯಿಂದಾ ಲಿಲಾವಮಾಡಿಸುತ್ತೇವೆ. ತೆಗೆದುಕೊಳ್ಳಲಿಚ್ಛಿಸುವವರು ಧಾರವಾಡ ಮಾರ್ಕೆಟಿನ ಹತ್ತರ ಅವಾನಿಗಲ್ಲಿಯಲ್ಲಿರುವ (ಗೋದಾಮಿನ) ಮನೆಗೆ ಬರಬೇಕು. ಲಿಲಾವಿನ ಶರ್ತುಗಳು ಲಿಲಾವಿನ ಕಾಲಕ್ಕೆ ಲಿಲಾವ ಮಾಡುವವರು ಹೇಳುವರು. ತಿಳಿಯಬೇಕು.

ತಾ॥ ೪-೧೦-೧೯೩೫

ಸಹಿ- ಮಹಾಬೂಬಸಾಬ ಮಕ್ತುಮಸಾಬ ದಾಸನಕೊಪ್ಪ

ಚಂದಾದಾರರಿಗೆ ಸೂಚನೆ

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:— ಅನಂತ ಬಾಲಾಜಿ ಜಹಾಗೀರದಾರ ಹೂಗಾರ.

ವರ್ಷ ೧೦) ಧಾರವಾಡ ಶನಿವಾರ ತಾರೀಖು ೫ ನೇ ಅಕ್ಟೋಬರ ೧೯೨೯ (ಸಂಖ್ಯೆ [illegible]

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಸೋಮವಾರ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ.

ಚಾಲೂ ಖಾತೆಗಳು:— ಪುಕ್ಕಟೆಯಾಗಿ ತೆರೆಯಲ್ಪಡುವವು.

ಸೇವಿಂಗ್ಸ ಖಾತೆಗಳು:— ರೂ ೫ ರಿಂದ ತೆಗೆಯಲ್ಪಡುವವು. ಬಡ್ಡೀ ದರ ೩ ರೂ.

ಮುದ್ದತಿ ಠೇವಗಳು:— ಒಂದು ವರ್ಷದ ಮುದ್ದತಿಯಿಂದ ಠೇವು ತೆಗೆದುಕೊಳ್ಳಲಾಗುವದು. ಬಡ್ಡೀ ದರ ೫॥ ರೂ.

ಸಾಲ:— ಬಂಗಾರ ದಾಗಿನೆಗಳ ಮೇಲೆ ಸಾಲವನ್ನು ಕೊಡಲಾಗುವದು [illegible] ಮತ್ತು [illegible] ಸಾಲವನ್ನು ಕೊಡಲಾಗುವದು. [illegible] ಗಳ [illegible] ಕೊಳ್ಳುವದರಲ್ಲಿಯೂ [illegible] ಮತ್ತು ಯೋಗ್ಯ ಕಮೀಶನ್ ತೆಗೆದುಕೊಂಡು ಗಿರಾಕಿಗಳಿಗೆ ಅವುಗಳ [illegible] ವಿಕ್ರಿ ಮಾಡುವದರಲ್ಲಿಯೂ [illegible] ವ್ಯವಹಾರ [illegible] ಕೊಳ್ಳುವದರಲ್ಲಿಯೂ ಮತ್ತು [illegible] ಮಾಡುವದರಲ್ಲಿಯೂ [illegible] ವದು.

ಬ್ಯಾಂಕಿಗೆ ಸಂಬಂಧಿಸಿದ [illegible] ಎಲ್ಲ [illegible] ನಡೆ[illegible] ವದು.

ವಿಶೇಷ ಮಾಹಿತಿಯನ್ನು ಪತ್ರವ್ಯವಹಾರದಿಂದ ಅಥವಾ ಸಮಕ್ಷಮ ಒಳಗೆ ತಿಳಿಸಲ್ಪಡುವದು.

ಆರ್. ಎಫ್. [illegible]
ಏಜಂಟರು.

ದಿ ಧಾರವಾಡ [illegible] ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

[illegible] ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು [illegible] ಲಕ್ಷದ [illegible], [illegible] ಹುಂಡಿ [illegible] ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು. ಠೇವಿಯು ಮತ್ತು [illegible] ಕರ್ಜ [illegible] ಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಲ್ಹಾರರಾವ ಬಿ. [illegible]
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗಿನೆಗಳನ್ನು ಸೇಫ್ ಇಟ್ಟುಕೊಳ್ಳುವ ಪದ್ಧತಿಯು ದರವು ಸಾಲಿಗೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶಾಸ್ತ್ರಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ— ಮಂಗಳವಾರಪೇಟೆ, ಆರಾಮಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯು ದರದಿಂದ ಸಾಲ ಮತ್ತು ಬಹಳ ಮುದ್ದತಿಯ ಕರ್ಜ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸಂಬಂಧ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪತ್ರಮಿಗರ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಖರೀದಿ ವಿಕ್ರಿ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಸೋದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಧಂಡಿವಾಡ.
ಮ್ಯಾನೇಜಿಂಗ ಏಜಂಟ.

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೮-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ಗಾಂಧೀ ಜಯಂತ್ಯುತ್ಸವವು.

ಗಾಂಧೀ ಜಯಂತ್ಯುತ್ಸವಕ್ಕಾಗಿ ಮುಂಬಯಿಯ ಸುಪ್ರಸಿದ್ಧರಾದ ಖಾದೀ ವಸ್ತ್ರ ಬಹಿಷ್ಕಾರ ಸಮಿತಿಯ ಕಾರ್ಯದರ್ಶಿಗಳಾದ ದೌಲತರಾಮರು ಧಾರವಾಡಕ್ಕೆ ಬಂದಿದ್ದರು. ಆ ಕಾಲಕ್ಕೆ ಇವರು ಮಾಡಿದ ಭಾಷಣದ ಸಾರವನ್ನು ಇದರಡಿ ಕೊಟ್ಟಿದ್ದೇವೆ.

ಹಿಂದುಸ್ಥಾನದ ಸದ್ಯದ ಸ್ಥಿತಿಯು ಬಹಳ ಶೋಚನೀಯವಾಗಿದೆ. ಇದನ್ನು ಸುಧಾರಿಸಲು ನಾವೆಲ್ಲರೂ ಯತ್ನಿಸಬೇಕು. ನನ್ನೆದುರಿನ ಮುನಸಿಪಾಲಿಟಿಯ ಕಟ್ಟಡವನ್ನು ನೋಡಿ ನನಗಾನಂದವಾಗುತ್ತದೆ. ಆದರೆ ಅದರ ಮೇಲೆ ರಾಷ್ಟ್ರ ನಿಶಾನೆ ಹಾರಾಡುವದಿಲ್ಲ. ಇದಕ್ಕಾಗಿ ಖೇದವೆನಿಸುತ್ತದೆ. ಇಂಥ ಮಂಗಲ ಪ್ರಸಂಗದಲ್ಲಿ ರಾಷ್ಟ್ರಧ್ವಜವನ್ನೇರಿಸುವದು ಮುನಸಿಪಾಲಿಟಿಯ ಕರ್ತವ್ಯವು. ನಿನ್ನಿನ ದಿನ ವಿಸರ್ಜಿಸಿದ ಸ್ಕೌಟರ ಸಮಾರಂಭದಲ್ಲಿ ಯೂನಿಯನ್ ಜಾಕಿಗೆ ಎಲ್ಲರೂ ಸಲಾಮು ಹೊಡೆದದ್ದೂ, ನಮ್ಮ ರಾಷ್ಟ್ರೀಯ ನಿಶಾನೆಯನ್ನು ಮರೆತದ್ದೂ ಕೇವಲ ನಾಚಿಗ್ಗೇಡಿತನವು. ನಾವು ಇಡೀ ಜಗತ್ತಿನ ಜನಸಂಖ್ಯೆಯಲ್ಲಿ ಒಂದು ಆರಾಂಶ ಭಾಗವನ್ನು ಪಡೆಯುತ್ತೇವೆ. ಹೀಗಿದ್ದರೂ ನಮಗೆ ಸ್ವಾತಂತ್ರ್ಯವಿಲ್ಲ. ಪರರಾಷ್ಟ್ರಗಳಲ್ಲಿ ತರುಣರು ರಾಷ್ಟ್ರಕಾರ್ಯಕ್ಕಾಗಿ ತಮ್ಮ ಜೀವಗಳನ್ನು ಕೊಟ್ಟಂತೆ ಹಿಂದುಸ್ಥಾನದ ತರುಣರಾದರೂ ಆತ್ಮಸಮರ್ಪಣಮಾಡಬೇಕು. ಸಣ್ಣ ಪ್ರಾಂತಗಳ ವಿಶಿಷ್ಟ ಸಂಸ್ಕೃತಿಗಳಿಗಾಗಿ ಬಡಿದಾಡುವದರಿಂದ ಅಖಂಡವಾದ ಹಿಂದೀ ರಾಷ್ಟ್ರಕ್ಕೆ ಹಾನಿಯಾಗುವದೆಂದು ನನ್ನ ಅಂಜಿಕೆ. (ಇಲ್ಲ, ಇಲ್ಲ.) ಇರಲಿ, ಇದರ ವಿಷಯವಾಗಿ ನಾನು ಹೆಚ್ಚಾಗಿ ವೇಳೆ ಕಳೆಯುವದಿಲ್ಲ. ಸದ್ಯಕ್ಕೆ ದೇಶದ ಮುಂದೆ ಎರಡು ಕಾರ್ಯಕ್ರಮಗಳಿವೆ. ಒಂದು ಹಿಂಸಾಮಯ ಮತ್ತೊಂದು ಅಹಿಂಸಾಮಯ. ಹಿಂಸಾಮಯಮಾರ್ಗದಿಂದ ಸ್ವರಾಜ್ಯ ಸಿಕ್ಕುವದು ಸದ್ಯದ ನಮ್ಮ ಸ್ಥಿತಿಯಲ್ಲಿ ಅತ್ಯಂತ ಕಠಿಣವಾದದ್ದು. ನಮಗೆ ಯುದ್ಧಕ್ಕೆ ಬೇಕಾದ ಸಾಧನಸಾಮಗ್ರಿಗಳಾವವೂ ಇರುವದಿಲ್ಲ. ಆ ಸಾಮಗ್ರಿಗಳನ್ನು ಒದಗಿಸಿಕೊಳ್ಳಲು ನಮ್ಮಲ್ಲಿ ಶಕ್ತಿಯಿಲ್ಲ. ಆದ್ದರಿಂದ ಹಿಂಸಾಮಯ ಮಾರ್ಗವು ಸದ್ಯಕ್ಕೆ ಅನುಪಯುಕ್ತವು. ಅಂದಮೇಲೆ ಮಹಾತ್ಮರು ಹೇಳಿದ ಅಹಿಂಸಾಮಾರ್ಗವನ್ನೇ ನಾವೆಲ್ಲರೂ ಅನುಸರಿಸತಕ್ಕದ್ದು. ನಮ್ಮ ಹಳ್ಳಿಗಳ ಜನರನ್ನು ಸುಧಾರಿಸಬೇಕು. ಅವರು ಸುಧಾರಿಸದ ಹೊರತು ನಮಗೆ ಸ್ವರಾಜ್ಯ ಸಿಕ್ಕುವದಿಲ್ಲ. ಬಾರ್ಡೋಲಿಯವರು ಯಾವ ಪ್ರಕಾರ ಸರಕಾರವನ್ನು ಬಗ್ಗುಬಡಿದರೋ ಆ ಪ್ರಕಾರ ನಾವೆಲ್ಲರೂ ಸಂಘಟಿತರಾಗಬೇಕು. ನಮ್ಮ ಹಳ್ಳಿಗರಿಗೆ ಹೊಟ್ಟೆಗೆ ಸಾಕಷ್ಟು ಅನ್ನ ಸಿಕ್ಕುವದಿಲ್ಲ. ಆದ್ದರಿಂದ ಅವರ ಹೊಟ್ಟೆಗಾಗಿ ನಾವು ಚರಖಾ ರೂಪದಿಂದ ಸಹಾಯ ಮಾಡುವಾ. ಖಾದಿಯಿಂದಲೇ ನಾವು ಹಳ್ಳಿಯ ಜನರಲ್ಲಿ ಸಂಘಟನೆಮಾಡಬಹುದೆಂದು ತೋರುತ್ತದೆ. ಆದ್ದರಿಂದ ಎಲ್ಲರೂ ಖಾದಿಯನ್ನು ಧರಿಸಿರಿ. ಹಳ್ಳಿಯವರನ್ನು ಜಾಗ್ರತ ಮಾಡಿರಿ. ಅಂದರೆ ಸ್ವರಾಜ್ಯವು ತಾನಾಗಿಯೇ ಬರುವದು.

ಈ ಪ್ರಕಾರ ಭಾಷಣವಾದ ಮೇಲೆ ಅತಿಥಿಗಳಿಗೆ ಮಾಲೆಯು ಹಾಕಲ್ಪಟ್ಟಿತು. ಶ್ರೀ ಕರಮರಕರರು ನಾವು ಕರ್ನಾಟಕದ ಅಭಿಮಾನವನ್ನು ಹೆಚ್ಚಾಗಿ ತಾಳಿದ್ದರೂ ಭಾರತಾಂಬೆಯ ಹೋರಾಟದಲ್ಲಿ ಸ್ವಲ್ಪದರೂ ಹಿಂದೆ ಬೀಳುವದಿಲ್ಲವೆಂದು ಶ್ರೀ|| ಜಯರಾಮದಾಸರಿಗೆ ಅಭಯವನ್ನು ಕೊಟ್ಟು ಅವರ ಆಭಾರ ಮನ್ನಿಸಿದರು. ಇದೇ ಕಾಲಕ್ಕೆ ವರುಣಿವಸದ ಕಾರ್ಯಕ್ರಮವು ಹೇಳಲ್ಪಟ್ಟು ರಾಷ್ಟ್ರಗೀತೆ, ಜಯಜಯಕಾರಗಳೊಂದಿಗೆ ಆ ದಿವಸದ ಕಾರ್ಯಕ್ರಮವು ಕೊನೆಗೊಂಡಿತು. ಇದೆಲ್ಲ ಕಾರ್ಯಕ್ರಮವು ಇಲ್ಲಿಯ ಭಾರತೀಯ ತರುಣರ ಸಂಘದಿಂದಲೇ ನೆರವೇರಿಸಲ್ಪಟ್ಟಿತೆಂದು ಬೇರೆ ಹೇಳಬೇಕಾಗಿಲ್ಲ. ಇವರಿಗೆ ಬಾಕಿ ಜನರ ಸಹಾಯವಾದರೂ ಚನ್ನಾಗಿ ಸಿಕ್ಕಿತ್ತು.

ಗಾಂಧಿ ಜನ್ಮದಿನೋತ್ಸವವು.

—(೦)—

೧-೧೦-೧೯೨೯

ಬೆಳಗಿನ ಜಾವದಲ್ಲಿ ಕನ್ನಡಿಗರ ಕೂಟದ ಸದಸ್ಯರೂ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳೂ ಬೇರೆ ಕೆಲವು ತರುಣರೂ ಸೇರಿ ನಗರ ಸಂಕೀರ್ತನೆ ಮಾಡಿದರು.

ಬೆಳಗಿನ ಮುಂಜಾನೆ ೮ ಗಂಟೆಗೆ ನಗರದ ಏಳೆಂಟು ಭಾಗಗಳಲ್ಲಿ ರಾಷ್ಟ್ರೀಯ ನಾಡಗುಡಿಯು ಏರಿಸಲ್ಪಟ್ಟಿತು. ಚಿಕ್ಕ ಬಾಲಕರಿಗೆ ಪೇಡೆ ಮೊದಲಾದ ಖಾದ್ಯಗಳೂ, ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಖಾದೀ ಟೊಪ್ಪಿಗೆ, ಪಾಟಿ, ಪುಸ್ತಕಗಳೂ ಹಂಚಲ್ಪಟ್ಟವು. ಊರಲ್ಲೆಲ್ಲ ಖಾದಿಯು ಮನೆಮನೆಗೆ ಮಾರಲ್ಪಟ್ಟಿತು.

ಸಾಯಂಕಾಲ ೪ ಗಂಟೆಗೆ ಕಾಂಗ್ರೆಸ ಕಮಿಟಿಯಿಂದ ಮಹಾತ್ಮರ ಭಾವಚಿತ್ರದ ಮೆರವಣಿಗೆಯು ಹೊರಟಿತು. ಮೆರವಣಿಗೆಯಲ್ಲಿ ಶ್ರೀ ಜಯರಾಮದಾಸರೂ ಇದ್ದರು. ಮೆರವಣಿಗೆಯು ಊರ ಮುಖ್ಯ ಬೀದಿಗಳಲ್ಲಿ ಹಾಯ್ದು ಜಜ್ಜ ಕೋರ್ಟಿನ ಮೈದಾನಕ್ಕೆ ಬಂದಿತು. ಅಲ್ಲಿ ಸಭೆ ಸೇರಿತು. ಜಯರಾಮದಾಸರ ಭಾಷಣದ ಸಾರವನ್ನು ಬೇರೆ ಕಡೆಗೆ ಕೊಟ್ಟಿದ್ದಾರೆ.

ಸಭೆಗೆ ಸಾವಿರದ ಮೇಲೆ ಜನರು ಸೇರಿದ್ದರು.

ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯ

—(೦)—

ಸಾಯಮನ್ ಕಮೀಶನ್‌ದವರು ಈ ವರ್ಷಾಂತ್ಯದೊಳಗಾಗಿ ತಮ್ಮ ರಿಪೋರ್ಟು ಮುಗಿಸುವರು. ಆದರೆ ಅದು ಕೆಲವು ದಿನಗಳ ವರೆಗೆ ಪ್ರಕಟಿಸಲ್ಪಡುವದಿಲ್ಲವೆಂದು ತಿಳಿಯುತ್ತದೆ.

ಮುಂದಿನ ಪಾರ್ಲಮೆಂಟು ಸೇರುವ ಕಾಲಕ್ಕೆ ಕಾಮಗಾರ ಪಕ್ಷದವರು ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯ ಕೊಡುವಂತೆ ಒಂದು ಜಾಹೀರನಾಮೆಯನ್ನು ಪ್ರಸಿದ್ಧ ಪಡಿಸುವರೆಂದು ತಿಳಿಯುತ್ತದೆ. ಈ ಜಾಹೀರನಾಮೆಯು ಪ್ರಸಿದ್ಧವಾಗುವ ಮೊದಲು ಬ್ರಿಟಿಶ ಸರಕಾರವು ಈ ದೇಶದ ಎಲ್ಲ ರಾಜಕೀಯ ಪಂಗಡಗಳ ಮುಖಂಡರನ್ನೂ, ದೇಶಿ ಸಂಸ್ಥಾನಿಕರಲ್ಲಿ ಕೆಲವರನ್ನೂ ಇಂಗ್ಲಂಡಕ್ಕೆ ಕರೆಯಿಸಿ ಅವರೊಡನೆ ವಿಚಾರ ಮಾಡುವಂತೆ ವಿಶ್ವಸನೀಯವಾಗಿ ತಿಳಿದಿದೆ.

ಸದ್ಯಕ್ಕೆ ಸೇರುವ ಕಾಮಗಾರರ ಪರಿಷತ್ತಿನಲ್ಲಿ ಫೆನರ ಬ್ರಾಕವೆಯವರು ಹಿಂದುಸ್ಥಾನದ ಬಗ್ಗೆ ಕಾಮಗಾರ ಸರಕಾರದ ಧೋರಣವನ್ನು ವಿಚಾರಿಸಿದರು. ಅಸಿಸ್ಟಂಟ ಸ್ಟೇಟ ಸೆಕ್ರೆಟರಿಯವರು, ಕಾಮಗಾರರು ಅಧಿಕಾರಾರೂಢರಾಗುವ ಪೂರ್ವದಲ್ಲಿದ್ದಂಥ ಧೋರಣವೇ ಈಗಲೂ ಇರುವದೆಂದು ಹೇಳಿದರು.

ಕರ್ನಾಟಕಕ್ಕೆ ವ್ಹಾಯಿಸರಾಯರ ಭೆಟ್ಟಿ.

—(೦)—

ಸದ್ಯಕ್ಕೆ ಇಂಗ್ಲಂಡದಲ್ಲಿದ್ದ ಲಾರ್ಡ ಆಯರ್ವಿನರು ಇದೇ ತಿಂಗಳ ೨೭ ಕ್ಕೆ ಹಿಂದುಸ್ಥಾನಕ್ಕೆ ಬರುವರು. ಅಲ್ಲಿಂದ ನವ್ಹಂಬರ ೧೫ ಕ್ಕೆ ಸಾಂಗಲಿಗೆ ಬಂದು ೧೯ ಕ್ಕೆ ಕೊಲ್ಹಾಪುರಕ್ಕೆ ಹೋಗುವರು. ೨೨ ಕ್ಕೆ ಶಿವಮೊಗ್ಗೆಗೆ ಹೋಗಿ ೨೩ ರಿಂದ ೨೮ ರ ವರೆಗೆ ಮೈಸೂರಲ್ಲಿರುವರು. ೨೯ ಕ್ಕೆ ಮಡಿಕೇರಿಗೆ ಹೋಗಿ ಮುಂದೆ ಕಾಲೀಕತ ಮದ್ರಾಸ ಮಾರ್ಗವಾಗಿ ದಿಲ್ಲಿಗೆ ಹೋಗುವರು.

ಮುಂಬೈ ಮುನಸಿಪಾಲಿಟಿಯವರು ಫಾಯರ ಬ್ರಿಗೇಡದ ಮುಖ್ಯಾಧಿಕಾರಿಯ ಕೆಲಸವನ್ನು ಕಲಿಯಲು, [illegible] ಅಧಿಕಾರಿಯನ್ನು ಕಳಿಸುವರು.

ಧಾರವಾಡದಲ್ಲಿ ಗಾಂಧೀ ಷಷ್ಟ್ಯಬ್ದಿ ಪೂರ್ತಿ ಉತ್ಸವ.

—೦—

ಇಲ್ಲಿಯ ಕರ್ನಾಟಕ ಕಾಲೇಜ ಕರ್ನಾಟಕ ಹಾಯಸ್ಕೂಲ ಮಾಡರ್ನ ಸ್ಕೂಲುಗಳಲ್ಲಿ ಇದು ನೆರವೇರಿಸಲ್ಪಟ್ಟಿತು. ಶಿಕ್ಷಕರೂ ವಿದ್ಯಾರ್ಥಿಗಳೂ ಮಹಾತ್ಮರ ಗುಣಗಾನ ಮಾಡಿದರು.

ಡಿ|| ಜಡ್ಜರ ಅಧ್ಯಕ್ಷತೆಯಲ್ಲಿ

ಇಲ್ಲಿಯ ಡಿಸ್ಟ್ರಿಕ್ಟ ಜಡ್ಜರೂ ಜಿಲ್ಲಾ ಖಾಟಿ ಕಮೀಶನರರೂ ಆದ ಶ್ರೀ|| ಶೋಲಾಪುರಕರರವರ ಅಧ್ಯಕ್ಷತೆಯಲ್ಲಿ ೧ನೇಯ ತಾರೀಖಿನ ದಿನ ೯ ಊರ ಸ್ಟಾಟರಲ್ಲಿ ನೇರ ಈ ಉತ್ಸವವನ್ನು ನೆರವೇರಿಸಿದರು. ಶ್ರೀ|| ಶೋಲಾಪುರಕರರು ಮಹಾತ್ಮರ ಅದ್ವಿತೀಯ ಗುಣಗಳನ್ನು [illegible] ಅನುಕರಿಸಲು ಹೇಳಿದರು.

ಇಲ್ಲಿಯ [illegible] ಅರ್ಬನ ಕೋ-ಆಪರೇಟಿವ್ ಬ್ಯಾಂಕಿನವರು ಗಾಂಧಿ ಜಯಂತ್ಯುತ್ಸವದ ನಿಮಿತ್ತವಾಗಿ ೮ ತಿಂಗಳ ಠೇವುಗಳನ್ನು ಸ್ವೀಕರಿಸಿದ್ದಾರೆ.

೧ ತಿಂಗಳಾವಧಿಯ ಮೇಲಿನ ಜನರ, ೯೧ ತಾರೀಖಿನ [illegible] ಬ್ಯಾಂಕಿಗೆ ಕೊಟ್ಟರೆ ರೂಢಿಯ ಠೇವುಗಳಿಗಿಂತ ೧೦೧ ಕ್ಕೆ ೧ ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು.

೨ ತಿಂಗಳಾವಧಿಯ ಮೇಲಿನ ಜನರು ಕೈನೂಲನ್ನು ನೂತು ಕೊಟ್ಟರೆ, ಅದನ್ನು ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ಅವರ ಹೆಸರಿನಿಂದ ಠೇವಿನ ರೂಪವಾಗಿಟ್ಟುಕೊಂಡು ರೂಢಿಯ ಠೇವುಗಳಿಗಿಂತ ೧೦೦ ಕ್ಕೆ ೧ ರಂತೆ ಹೆಚ್ಚು ಬಡ್ಡಿ ಕೊಡಬೇಕು.

ನಾಡಹಬ್ಬದ ಆರಂಭ.

ಗುರುವಾರ ೨-೧೦-೧೯೩೫

ಇಂದು ಸಾಯಂಕಾಲ ೪ ಗಂಟೆಗೆ ಮುಂಬೈ ಸ್ವದೇಶಿ ವಸ್ತ್ರ ಪ್ರಚಾರ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಜಮನಾದಾಸ ದೌಲತರಾಯರು ಖಾದೀ ಪ್ರದರ್ಶನದ ಉದ್ಘಾಟನ ಸಮಾರಂಭವನ್ನು ನೆರವೇರಿಸಿದರು. ಪ್ರದರ್ಶನವು ಲಿಂಗಾಯತ ಟೌನ ಹಾಲಿನಲ್ಲಿ ಹೂಡಿಸಲ್ಪಟ್ಟಿತ್ತು.

ಪ್ರದರ್ಶನ.

ಖಾದಿಯ ಪ್ರದರ್ಶನವು ಅಚ್ಚುಕಟ್ಟಾಗಿ ಮಾಡಿಸಲ್ಪಟ್ಟಿತ್ತು. ನಾನಾವಿಧ ಕಟ್ಟಿಯ ಮೇಲೆ ರೇಶಿಮೆಯ ವಸ್ತ್ರಗಳೂ ಒಂದು ಬದಿಗೆ ಉಣ್ಣೆಯ ವಸ್ತ್ರಗಳೂ ಇನ್ನೊಂದು ಬದಿಗೆ ಅರಳಿಯ ವಸ್ತ್ರಗಳೂ ಪ್ರದರ್ಶಿಸಲ್ಪಟ್ಟಿದ್ದವು. ರೇಶಿಮೆಯ ಅರಿವೆಗಳು ತಾಳಿಕೆಯುಳ್ಳವೂ ನಯವೂ ಇವೆ. ಉಣ್ಣೆಯ ಅರಿವೆಯು ಕೋಟು ಒವ್ಹರ ಕೋಟುಗಳಿಗೆ ಚನ್ನಾಗಿವೆ. ೩೮-೦-೦ ರೂ ಬೆಲೆಯದೊಂದು ಒವ್ಹರ ಕೋಟೂ ಇಡಲ್ಪಟ್ಟಿತ್ತು. ಗೋಡೆಗಳಿಗೆ ತಗಲಿಸಲ್ಪಟ್ಟಿದ್ದ ಭಾವಚಿತ್ರಗಳು ನಮ್ಮ ಜನರ ದಾರಿದ್ರ್ಯವನ್ನೂ, ಖಾದಿಯಿಂದ ಹೋಗಲಾಡಿಸುವ ಬಗೆಯನ್ನೂ ಚನ್ನಾಗಿ ತೋರಿಸುತ್ತಿದ್ದವು.

ಮಹಾನವಮೀ ಉತ್ಸವ.

—(೯)—

ಹುಬ್ಬಳ್ಳಿ, ಬಳ್ಳಾರಿ, ವಿಜಾಪುರ, ಬಾಗಲಕೋಟೆ, ಬೆಳಗಾವಿ, ಹಾವೇರಿ, ಮುಂಡಗೋಡ ಮೊದಲಾದ ಊರುಗಳಲ್ಲಿ ನಾಡಹಬ್ಬವು ನೆರವೇರುವದು. ಇಲ್ಲಿಯ ನವರಾತ್ರಿ ಉತ್ಸವ ಮಂಡಲದವರು ೫೪ ಊರುಗಳ ಮಹಾಜನರಿಗೆ ಈ ಹಬ್ಬವನ್ನು ನಡೆಸುವಂತೆ ಬರೆದುಕೊಂಡಿದ್ದರು. ೧೫ ಊರುಗಳ ಜನರು ನೆರವೇರಿಸುವದಾಗಿ ಉತ್ತರ ಕೊಟ್ಟಿದ್ದರು. ಈ ಮಹೋತ್ಸವವು ಎಲ್ಲ ಕಡೆಗೆ ನೆರವೇರುವದನ್ನು ನೋಡಬೇಕು.

ಶಕ್ತಿ ಸಂಪ್ರದಾಯ [illegible].

—(೦)—

ದುರ್ಗಾಷ್ಟಮಿಯ ದಿನ ಈ ಊರಿನ ಮಹಾನವಮಿಯ ಉತ್ಸವ ಮಂಡಲದವರು ಕೆಳಗಿನ ಪಂದ್ಯಾಟಗಳನ್ನು ಏರ್ಪಡಿಸಿದ್ದಾರೆ. ಪಂದ್ಯಾಟಗಳಲ್ಲಿ ಗೆದ್ದವರಿಗೆ ಬೆಳ್ಳಿ ಬಂಗಾರದ ಪದಕಗಳನ್ನು ಕೊಡುವದನ್ನು ಗೊತ್ತು ಮಾಡಿದ್ದಾರೆ. ಶ್ರೀ|| ದೀಕ್ಷಿತ ಕೃಷ್ಣರಾಯರು, ಹಿಂದುಸ್ಥಾನೀ [illegible] ದ [illegible] ನಮಸ್ಕಾರ ಹಾಕಿ, ಮೊದಲಿಗರಾದವರಿಗೆ ಒಂದು ಬಂಗಾರದ ಪದಕ ಕೊಡುವರು. ಇದರಲ್ಲಿ ಭಾಗ ತೆಗೆದುಕೊಳ್ಳಬಿಚ್ಛಿಸುವವರು ಆರನೆಯ ತಾರೀಖಿನೊಳಗಾಗಿ ಲಿಂಗಾಯತ ನಗರ ಭವನದಲ್ಲಿ ಕಾರ್ಯದರ್ಶಿಗಳಿಗೆ ತಿಳಿಸಬೇಕು.

ಪಂದ್ಯಾಟಗಳು

೧ ನಮಸ್ಕಾರ.
೨ ಓಟ ಮೂರು ಮೈಲು.
೩ ಎತ್ತರ ಹಾರುವದು ಉದ್ದ ಜಿಗಿಯುವದು.
೪ ಕುಸ್ತಿ.

ಸಾಂಘಿಕ ಆಟ—

೧ [illegible].

ಈ ಎಲ್ಲ ಪಂದ್ಯಾಟಗಳು ವಿಕ್ಟೋರಿಯಾ ಹಾಯಸ್ಕೂಲಿನಲ್ಲಿ ಬೆಳಗಿನ ಏಳರಿಂದ ಒಂಬತ್ತರವರೆಗೆ ಜರಗುವವು. ಅಂದು ಸಾಯಂಕಾಲ ೪|| ಗಂಟೆಗೆ ಶ್ರೀ ಗುಂಜಿ ಕೃಷ್ಣರಾಯರ ನೇತೃತ್ವದಲ್ಲಿ ಶ್ರೀ| ದುರ್ಗಾದೇವಿ ಗುಡಿಯ ಬೈಲಿನಲ್ಲಿ ಅನೇಕ ವ್ಯಾಯಾಮ ಸಂಸ್ಥೆಯವರು ತಮ್ಮ ಆಟಗಳನ್ನು ಆಡಿ ತೋರಿಸುವರು. ವ್ಯಾಯಾಮ ಪ್ರಿಯರು ಅಗತ್ಯವಾಗಿ ಬರಬೇಕು.

ಕಾರ್ಯದರ್ಶಿಗಳು
ನ. ಉ. ಮಂಡಲ.

ಮಹಾ ಮಹೋಪಾಧ್ಯಾಯರ ಶೋಕ

—(೦)—

ನಾಗಪೂರದಲ್ಲಿ ಶ್ರೀ|| ಅನಂತ ವಾಸುದೇವ[illegible]ರವರಿಗೆ [illegible] ಮಹಾಮಹೋಪಾಧ್ಯಾಯ ಪದವನ್ನು ಕೊಟ್ಟಿದ್ದರು. ಈ ಮಹೋಪಾಧ್ಯಾಯರು [illegible] ತಮ್ಮ ಪದವಿಗೆ [illegible] ಬಿಟ್ಟರು.

[illegible] ಸತ್ತದ್ದಕ್ಕಾಗಿ ಸರಕಾರದ ಮೇಲೆ [illegible]ಸಾಹೇಬರ ದಾವೆ

—(೨)—

ಯುರೋಪದಲ್ಲಿ [illegible] ಸುಪರಿಂಟೆಂಡೆಂಟರಿದ್ದರೆ. ಅವರ ಕುದುರೆಯು ಬೇನೆ ಬಿದ್ದಿತು. ಅಲ್ಲಿಯ ಸರಕಾರದ ಆಸ್ಪತ್ರೆಯ [illegible] ಇದಕ್ಕೆ ಉಪಚಾರ ಮಾಡಿದರು ಆದರೆ ಅದು ಸತ್ತಿತು. ಸರಕಾರವು [illegible] ದ ಕಾರ್ಯವನ್ನು [illegible] ಆ ಸಾಹೇಬರು [illegible] ದಾವೆ ಮಾಡಿದ್ದಾರೆ.

ಧಾರವಾಡ—

ನಿನ್ನೆ ಅಕ್ಟೋಬರ ೩ ರ ನ. ಮು. ಬ್ಯಾಂಕಿನ ಅಟ್ಟದ ಮೇಲೆ ದೇಶಪಾಂಡೆ ಗುರುರಾಯರು, ಮತ್ತು ಮುಲಗುಂದ ಕೃಷ್ಣಾಚಾರ್ಯರ ಗಾಯನ ವಾದನ ಆಗುವದು. ಹಾಗೂ ಶಿಂಘಣಾಹೇಬರ ಪದಗಳನ್ನು ಅನ್ನುವದರಲ್ಲಿ ಹೆಸರಾದ ದೇಶಪಾಂಡೆ ಗಂಗಾಧರರಾಯರು (ಕುಂದಗೋಳ) ಪದಗಳನ್ನನ್ನುವರು.

ಮಹಾನವಮಿ ಉತ್ಸವ ಮಂಡಲದವರ ಬಿನ್ನಹಕ್ಕೆ ಮನ್ನಣೆಯಿತ್ತು, ಧಾರವಾಡ [illegible] ನ. ಮು. ಬ್ಯಾಂಕಿನವರು, ೧೦ [illegible] ೨೫ ರೂಪಾಯಿ ಕೊಟ್ಟಿದ್ದಾರೆ. ಉದಾರಾತ್ಮರಾದ ಶ್ರೀ|| ಶಿರೋಳಕರ ಲಕ್ಷ್ಮಣರಾಯರೂ, ಲಕ್ಷ್ಮೀ ಕಲಾ[illegible]ದ ಉದ್ಘಾಟನ ಸಮಾರಂಭಕ್ಕೆ ಶ್ರೀ|| ಬಿ. [illegible]ಮಾಚಾರ್ಯರೂ ಬಂದಿದ್ದಾರೆ.

ಗುಳೇದ ಗುಡ್ಡದಲ್ಲಿ ಗಾಂಧೀ ಜಯಂತಿ.

—೦—

ಅಕ್ಟೋಬರ ೨ನೇ ತಾರೀಖಿನ ದಿವಸ ಮಹಾತ್ಮಾಜಿಯವರ ಜನ್ಮತಿಥಿಯನ್ನು ಗೋವಿಂದರಾವ ಕುಂಬಾರೆ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ನೆರವೇರಿಸಲ್ಪಟ್ಟಿತು. ಸಭೆಗೆ ನೂರಾರು ಜನರು ನೆರೆದಿದ್ದರು. ಖಾದಿ ಭಕ್ತರಾದ ಸಾಹುಕಾರ ಫಕೀರಪ್ಪಾ ಸಿಂಗದ ಇವರು ಮಹಾತ್ಮಾಜಿಯವರ ವಿಷಯಕ್ಕೆ ನಾಲ್ಕು ಮಾತುಗಳನ್ನು ಹೇಳಿದರು. ರಾಮಚಂದ್ರ ಬಾಸೂತಕರ ಇವರು ರಾಷ್ಟ್ರಗೀತವನ್ನು ಅಂದರು. ಮಹಾತ್ಮಾಜಿಯವರ ಜಯಜಯಕಾರದಲ್ಲಿ ಸಭೆಯು ಸಮಾಪ್ತಿಯಾಯಿತು.

ಓರ್ವ ಪ್ರತ್ಯಕ್ಷ ದರ್ಶಿ

ಮಹಾನವಮಿ ಉತ್ಸವ ಧಾರವಾಡ

೧೯೪೦

ಕಾರ್ಯಕ್ರಮ

—(೦)—

ರವಿವಾರ ೬ನೇ ಅಕ್ಟೋಬರ-

ಸಂಜೆಯು ೫ ಗಂಟೆಗೆ ಗಾಯನ, ವಾದನ ಮೇಳಗಳು ಮುಂ. ದೇಶಪಾಂಡೆ ಗುರುರಾಯರು, ಮುಲಗೂರ ಕೃಷ್ಣಾಚಾರ್ಯರು ಮುಂತಾದವರಿಂದ ಸ್ಥಳ- ಸದರ್ನ ಮರಾಠಾ ಬ್ಯಾಂಕಿನ ಅಟ್ಟ.

ಸೋಮವಾರ ೭ನೇ ಅಕ್ಟೋಬರ-

ಸಂಜೆಯು ೬॥ ಗಂಟೆಗೆ ಕರ್ನಾಟಕ ಐತಿಹಾಸಿಕ ಪ್ಯಾಚಿಕ್ ಅಸ್ಪೆಕ್ಟರ್ಸ. ವ್ಯಾಖ್ಯಾತರು ಶ್ರೀ. ದ. ಪ. ಕರಮರಕರ.

ಸ್ಥಳ- ಸದರ್ನ ಮರಾಠಾ ಬ್ಯಾಂಕಿನ ಅಟ್ಟ.

ಮಂಗಳವಾರ ೮ನೇ ಅಕ್ಟೋಬರ-

ಸಂಜೆಯು ೬ ಗಂಟೆಗೆ ಉಪನ್ಯಾಸ. ಸ್ಥಳ- ಸದರ್ನ ಮರಾಠಾ ಬ್ಯಾಂಕಿನ ಅಟ್ಟ.

ಬುಧವಾರ ೯ನೇ ಅಕ್ಟೋಬರ-

ಸಂಜೆಯು ೬ ಗಂಟೆಗೆ ಕೀರ್ತನಕೇಸರಿ ಬಿ. ಶಿವಮೂರ್ತಿಗಳ ಕೀರ್ತನ. ಸ್ಥಳ- ವಿಕ್ಟೋರಿಯಾ ಹಾಯಸ್ಕೂಲಿನ ಬೈಲು.

ಗುರುವಾರ ೧೦ನೇ ಅಕ್ಟೋಬರ-

ಸಂಜೆಯು ೬ ಗಂಟೆಗೆ ಕವಿಸಮ್ಮೇಲನ. ಸ್ಥಳ- ಸದರ್ನ ಮರಾಠಾ ಬ್ಯಾಂಕಿನ ಅಟ್ಟ.

ಶುಕ್ರವಾರ ೧೧ನೇ ಅಕ್ಟೋಬರ-

ಸಾಯಂಕಾಲದ ೪ ಗಂಟೆಗೆ ಶಕ್ತಿ ಸಂವರ್ಧಕ ಆಟಗಳು. ಸ್ಥಳ- ದುರ್ಗಾದೇವತಿಯ ಬೈಲು.

ಶನಿವಾರ ೧೨ನೇ ಅಕ್ಟೋಬರ-

ಸಾಯಂಕಾಲದ ೫ ಗಂಟೆಗೆ ಮೆರವಣಿಗೆ. ಬನ್ನೀ ಮುಡಿಯುವದು, ಬಹುಮಾನಗಳನು ಹಂಚುವದು, ಸಮಾರೋಪ ಮುಂ.

ಪ್ರದರ್ಶನಗಳು ೧೧ನೇ ತಾ॥ ಸಂಜೆಯವರೆಗೆ ನಡೆಯುವವು ಕಲಾಪ್ರದರ್ಶನವು ಬೆಳಿಗ್ಗೆ ೮ ರಿಂದ ೧೧॥ ಯ ವರೆಗೂ ಮಧ್ಯಾಹ್ನ ೩ ರಿಂದ ರಾತ್ರಿ ೮ ರ ವರೆಗೂ ತೆರೆದಿರುವದು. ಇದಕ್ಕೆ ೧ ಆಣೆಯ ಟಿಕೀಟು ಇಡಲಾಗಿದೆ.

ಔದ್ಯೋಗಿಕ ಪ್ರದರ್ಶನವು ಬೆಳಿಗ್ಗೆ ೮ ರಿಂದ ೧೧ ರವರೆಗೆ ಹಾಗೂ ಮಧ್ಯಾಹ್ನದ ೩ ರಿಂದ ಸಂಜೆಯ ೭ ರ ವರೆಗೆ ತೆರೆದಿರುವದುಂಟು. ಇದಕ್ಕೆ ಟಿಕೀಟು ಇಲ್ಲ.

ಎಲ್ಲ ನಾಗರಿಕರು ಅವಶ್ಯವಾಗಿ ಸರಿಯಾದ ವೇಳೆಗೆ ಬಂದು, ಉತ್ಸವದ ಕಾರ್ಯವನ್ನೆಲ್ಲ ಯಶಸ್ವಿಯಾಗಿ ಕೊನೆಗಾಣಿಸಬೇಕೆಂದು ಸವಿನಯ ಪ್ರಾರ್ಥನೆ.

ರಾಂ. ಶ್ರಿ. ಕಮಲಾಪೂರ ಗುಂ. ಕೃಷ್ಣರಾಯರು

ಗು. ವೆ. ಕುಲಕರ್ಣಿ. ಅಧ್ಯಕ್ಷರು.

ಕಾರ್ಯದರ್ಶಿಗಳು.

ನವರಾತ್ರಿ ಉತ್ಸವ ಮಂಡಲ ಧಾರವಾಡ.

ಮಾಂಡ್ರೆಯಕ್ಕೆ ಸೇರಿದ ಸ್ಕೂಲಬೋರ್ಡ ಪ್ರವೃತ್ತಿಗೆ ರಾ॥ ಸಾ॥ ಹಳಕಟ್ಟಿಯವರೂ ಶ್ರೀ ಸಜ್ಜನರೂ ಹೋಗಿದ್ದಾರೆ.

ಬಬಲೇಶ್ವರದಲ್ಲಿ "ಪ್ರಜಾಮಿತ್ರ" ವೆಂಬ ವಾರ ಪತ್ರಿಕೆ ಹೊರಡುವದು. ಬೆಳಗಾವಿಯಲ್ಲಿ ವಿಜಯದಶಮಿಯಿಂದ "ಸಂಯುಕ್ತಕರ್ನಾಟಕ" ವು ಬೆಳಕಿಗೆ ಬರುವದು.

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಹರಿಯು ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಗುಣವಾಗುವದು. ಇದು ಕೇವಲ ವನಸ್ಪತಿಗಳ ... ಸ್ವತಃ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ. ... ರೋಗಿಗಳನ್ನು ... ಮುಂಗಡ ತಿಳಿಸತಕ್ಕದ್ದು.

ವಿ. ಸ.—ಶ್ರೀ. ಜಾನಕೀಬಾಯಿ ದೀಕ್ಷಿತ

C/o ಕರ್ನಾಟಕ ಬ್ಯಾಂಕ ಧಾರವಾಡ

[illegible]

ಬೇಕಾಗಿದೆ.

—೦—

ಬ್ಯಾಂಕಿನ ಲೆಕ್ಕ ಮೊದಲಾದವುಗಳಲ್ಲಿ ಅನುಭವಿಕರಾಗಿದ್ದ ಒಬ್ಬ ಸೆಕ್ರೇಟರಿಯು ಭಾವಸಾರ ಕ್ಷತ್ರಿಯ ಕೋ ಆಪರೇಟಿವ್ಹ ಬ್ಯಾಂಕಿಗೆ ಬೇಕಾಗಿದ್ದಾರೆ. ಪಗಾರ ೩೦ ರಿಂದ ೩೫ ರ ವರೆಗೆ. ಬೇಕಾದವರು ಚೇರಮನ್ನರಿಗೆ ಲಾಯಖಿ ಸರ್ಟಿಫಿಕೇಟ ಸಹಿತ ಸಮಕ್ಷಮ ಭೆಟ್ಟಿಯಾಗಬೇಕು. ಇಲ್ಲವೆ, ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕು.

ಎಸ್. ಡಿ. ಟಿಕಾರೆ,

ಚೇರಮನ್ನ.

ಭಾ. ಕ್ಷ. ಕೋ ಆಪರೇಟಿವ್ಹ ಸೊಸಾಯಿಟಿ.

ಚಂದಾದಾರರಿಗೆ ಸೂಚನೆ

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಜೋಶಿ(?)

ವರ್ಷ ೧೦) ಧಾರವಾಡ ರವಿವಾರ ತಾರೀಖು ೭ ನೇ ಅಕ್ಟೋಬರ ೧೯೨೮ (ಸಂಚಿಕೆ [illegible]

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಸೋಮವಾರದಿಂದ [illegible] ವರೆಗೆ [illegible] ಮುಂಜಾನೆ ೧೦ ರಿಂದ ೧ ರ ವರೆಗೆ.

ಚಾಲೂ ಖಾತೆಗಳು:— ಪತ್ರ ಮುಖಾಂತರ ತೆರೆಯಲ್ಪಡುವವು.

ಸೇವಿಂಗ್ಸ್ ಬ್ಯಾಂಕು:— [illegible] ತೆರೆಯಲ್ಪಡುವದು. ಬಡ್ಡಿ ದರ [illegible].

ಮುದ್ದತಿ ಠೇವುಗಳು:— [illegible] ತೆರೆಯಲ್ಪಡುವದು. ಬಡ್ಡಿ ದರ [illegible].

ಸೂಚನೆ:— [illegible]

ಬ್ಯಾಂಕಿಗೆ [illegible] ಎಲ್ಲ [illegible] ಅಧಿಕಾರವಿರುವದು.

ವಿಶೇಷ ಮಾಹಿತಿಯನ್ನು [illegible] ತಿಳಿಸಲ್ಪಡುವದು.

ಆರ್. ಎಫ್. ರಿಕಾರ್ಡ(?).
ಏಜಂಟರು.

ದಿ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ, ಧಾರವಾಡ.

[illegible] ಮಂಗಳವಾರಪೇಟೆ, [illegible]

೧ ಈ ಬ್ಯಾಂಕಿನಲ್ಲಿ ದಾಗೀನಗಳ ಮೇಲೆ [illegible] ಬಡ್ಡಿಯ ದರ [illegible] ತಿಳಕೊಳ್ಳಬೇಕು.

೨ ಸರಕಾರಿ [illegible] ನಡೆಯುವದು. [illegible] ಮೇಲೆ ಸಾಲ ದೊರೆಯುವದು. [illegible] ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿಗಳನ್ನು ಇಟ್ಟುಕೊಳ್ಳಲಾಗುವದು. [illegible] ಬಡ್ಡಿಯ ದರವನ್ನು [illegible] ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ [illegible] ವ್ಯವಹಾರ [illegible] ಎಲ್ಲ [illegible] ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ [illegible] ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಧಂಡಿವಾಡ(?).
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯು ಅಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. [illegible] ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ(?).
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ [illegible] ಇಟ್ಟುಕೊಳ್ಳಲಾಗುವದು. ದರವನ್ನು [illegible] ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು [illegible] ಇಟ್ಟುಕೊಳ್ಳುವ [illegible] ಸಾಲಕ್ಕೆ ತಿಂಗಳಿಗೆ [illegible] ಹಚ್ಚಲಾಗುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-[illegible]-೦
೬ ,,	[illegible]-೦
೪ ,,	[illegible]
ವಾರ ಪತ್ರಕ್ಕೆ ೧ ವರ್ಷಕ್ಕೆ	[illegible]-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ನಾಡಹಬ್ಬದ ಎರಡನೆಯ ದಿನ.

೪-೧೦-೧೯೨೪.

ಇಂದು ಸಾಯಂಕಾಲ ೫ ಗಂಟೆಗೆ ಲಿಂಗಾಯತ ನಗರ ಭವನದಲ್ಲಿ ಶ್ರೀ|| ಕಿರ್ಲೋಸ್ಕರ ಲಕ್ಷ್ಮಣರಾಯರು ಔದ್ಯೋಗಿಕ ಪ್ರದರ್ಶನದ ಅನಾವರಣ ಸಮಾರಂಭ ಮಾಡಿದರು. ಆಗ ಇವರು ಓದಿದ ಭಾಷಣದ ಸಾರಾಂಶವನ್ನು ಇದರಡಿ ಕೊಡುತ್ತೇನೆ.

ಈಗ ನೀವು ಕೈಕೊಂಡ ನವರಾತ್ರಿ ಉತ್ಸವದ ನಿಮಿತ್ತ ಧಾರವಾಡಕ್ಕೆ ಬರುವ ಸುಸಂಧಿಯು ದೊರೆತ ಬಗ್ಗೆ ನನಗೆ ಅತಿಶಯ ಆನಂದವಾಗುತ್ತದೆ. ನನ್ನ ಮೇಲೆ ಹೊರಿಸಿದ ಜವಾಬದಾರಿಯನ್ನು ಕೊನೆಗಾಣಿಸಲು ನನ್ನಲ್ಲಿ ಶಕ್ತಿ ಇರುವದೋ ಇಲ್ಲವೋ ಎಂಬ ಬಗ್ಗೆ ಯೋಚನೆ ಮಾಡದೆ ನಾನಿಲ್ಲಿಗೆ ಬಂದೆನು. ನನ್ನ ಊರಿನ ಕಡೆಯು ಏಕರವು ಅಪೂರ್ವವಾದದ್ದು.

ಕಿರ್ಲೋಸ್ಕರ ಬಂಧುಗಳ ಕಾರಖಾನೆಯು ಸದ್ಯಕ್ಕೆ ಮಹಾರಾಷ್ಟ್ರದಲ್ಲಿದ್ದರೂ ಅದರ ಉಗಮವು ಕರ್ನಾಟಕದಲ್ಲಿಯ ಬೆಳಗಾವಿಯಲ್ಲಿಯೇ ಆಗಿರುವದು. ನಾನು ಕರ್ನಾಟಕದವನು, ತಮ್ಮ ಊರಿನವನು ಹಾಗೂ ಕರ್ನಾಟಕಸ್ಥನು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆದಾಗ್ಯೂ ತಮ್ಮ ಮುಂದೆ ನಿಂತು ಕನ್ನಡದಲ್ಲಿ ಭಾಷಣ ಮಾಡಲು ಅತಿಶಯ ಕಠಿಣ ಹೋಗುವದು. ಅದಕ್ಕಾಗಿ ಈ ಭಾಷಣವನ್ನು ಬರೆದು ಓದುವ ಪ್ರಸಂಗ ಬರುತ್ತದೆ. ಇದಕ್ಕಾಗಿ ನನ್ನನ್ನು ಕ್ಷಮಿಸಬೇಕು.

ಈ ಪ್ರಾಂತದಲ್ಲಿ ಉಂಟಾದಂತೆ ಬೇರೆ ಪ್ರಾಂತಗಳಲ್ಲಿಯೂ ಜಾಗೃತಿಯುಂಟಾಗಿ, ಭಾಷೆ, ಸಾಮಾಜಿಕ ಸುಧಾರಣೆ, ಔದ್ಯೋಗಿಕ ಉನ್ನತಿ ಮುಂತಾದವುಗಳುಂಟಾದರೆ ದೇಶದ ಭಾಗ್ಯೋದಯ ಕಾಲವೇ ಸಮೀಪಿಸಿತೆಂದು ಹೇಳಬಹುದು. ಕರ್ನಾಟಕವು ಮೊದಲಿನಿಂದಲೂ ಕಲಾಕೌಶಲ್ಯ ವಿಷಯದ ತವರುಮನೆಯು. ಬದಾಮಿ, ಹಂಪಿ, ಹಳೇಬೀಡು, ವೇರೂಳ, ಅಜಂತಾ ಮುಂತಾದ ಪ್ರಾಚೀನ ಸ್ಥಳಗಳಲ್ಲಿಯ ಅವಶೇಷಗಳೇ ಇದಕ್ಕೆ ಸಾಕ್ಷಿಯು. ಅದರಂತೆ ಶಿಲ್ಪಶಾಸ್ತ್ರವು ಚಿತ್ರಕಲೆಯೂ ಒಳ್ಳೇ ಪ್ರಗತಿಯನ್ನು ಹೊಂದಿತ್ತೆಂಬುದು ತಾನೇ ಗೊತ್ತಾಗುವದು. ಒಕ್ಕಲತನದ ಬಗ್ಗೆ ನೋಡಿದಲ್ಲಿ ತುಂಗಭದ್ರಾ ಕಾವೇರಿ ನದಿಗಳಿಂದ ಕಾಲುವೆಗಳನ್ನು ತೆಗೆದು ಅದರ ಸುಧಾರಣೆ ಮಾಡಿದ್ದು ಕಂಡುಬರುವದು. ಅದರಂತೆಯೇ ರೇಶಿಮೆಯ ಪ್ರಸಾರವಾದರೂ ಚನ್ನಾಗಿತ್ತು. ಗಂಧದ ಕಟ್ಟಿಗೆ, ಸಾಗವಾನಿ ಕೆತ್ತಿಗೆಯ ಕೆಲಸವು ಕರ್ನಾಟಕದಲ್ಲಿ ಜರುಗಿದಂತೆ ಮಿಕ್ಕ ಯಾವ ದೇಶದಲ್ಲೂ ಆಗುವದಿಲ್ಲ.

ಹಾಗಷ್ಟು ಸಾಕ್ಷರ ಜ್ಞಾನವನ್ನು ಪಡೆದು ಔದ್ಯೋಗಿಕ ಧಂದೆಯನ್ನು ಸ್ವೀಕರಿಸತಕ್ಕದ್ದು. ಅಲ್ಲಲ್ಲಿ ಔದ್ಯೋಗಿಕ ಶಾಲೆಗಳು ಸ್ಥಾಪನೆಯಾಗಬೇಕು. ಅಂದರೆ ನಮ್ಮ ದೇಶವು ತೀವ್ರವೇ ಮುಂದಕ್ಕೆ ಬರುವದು. ವಿಶೇಷತಃ ತರುಣರು ಈ ಕಾರ್ಯಕ್ಕೆ ಹತ್ತಬೇಕಾಗಿ ಅವರಿಗೆ ನನ್ನ ವಿನಂತಿಯು.

ನವರಾತ್ರಿ ಮಂಡಳದವರಾದರೂ ಇದರಂತೆ ಪ್ರತಿವರ್ಷ ಇಂಥ ಪ್ರದರ್ಶನಗಳನ್ನೇರ್ಪಡಿಸಿ ಜನರಲ್ಲಿ ಜಾಗೃತಿಯನ್ನುಂಟುಮಾಡಬೇಕು. ಮತ್ತು ಬೇರೆ ಬೇರೆ ಉದ್ಯೋಗ ಮಾಡುವಂಥ ಜನರಿಗೆ ಅವಶ್ಯ ಸಹಾಯ ಮಾಡಬೇಕು. ನಮ್ಮ ಜನರು ತಯಾರ ಮಾಡಿದ ಮಾಲು ಎಷ್ಟು ಕನಿಷ್ಠವಾಗಿದ್ದರೂ ಅವು [illegible], ಪರದೇಶದ ಮಾಲು ಹೇಗಿದ್ದರೂ ಅದು ಚನ್ನಾಗಿರುವದೆಂದೂ ಜನರ ಅಭಿಪ್ರಾಯ. ಈ ೩೦-೪೦ ವರ್ಷ ಅನುಭವದಿಂದ ದೇಶೀ ಕಾರಖಾನೆದಾರರ ಪ್ರಾರಂಭಕ್ಕೆ ತೀಡುವ ಶ್ರೀ ಗಣೇಶಾಯನಮಃ ಸಹ ಮಾಡಿಯುವಂತೆ ತೀರದು ನವಿಲ್ಲೆಂಬ ಜನರ ತಕರಾರು ಇರುವದು. ಇದರಿಂದ ದೇಶೀ ಕಾರಖಾನೆದಾರರಿಗೆ ಬಹಳ ತೊಂದರೆಯಾಗುವದು. ಹೀಗೆ ಮಾಡದೆ ಎಲ್ಲರೂ ದೇಶೀ ಕಾರಖಾನೆಗಳಿಗೆ ಹೆಚ್ಚು ಉತ್ತೇಜನ ಕೊಡಬೇಕಾಗಿ ಬೇಡಿಕೆ.

ಪ್ರತ್ಯಕ್ಷವಾಗಿದೆ. ಆದರೆ ಯಾತ ಬರಲಿಲ್ಲ. ಮೊದಲ ದಿನದ ಸಭೆಯ ಕೆಲಸ ಪ್ರಾರಂಭವಾದ ಕೂಡಲೆ ಬರಿಗಾಲಿನ ವ್ಯಕ್ತಿಯೊಬ್ಬ ದೇಸಾಯಿಯಿಂದ ಎಲ್ಲರೂ ಕಾಂಗ್ರೆಸ ವ್ಯಕ್ತಿಯಿಂದ ಎದ್ದು ನಿಂತು, ಅವರ ಪ್ರದರ್ಶನವಾಯಿತು. ಇಷ್ಟಾದ ಕೂಡಲೆ ಸಭೆಯು ಶಾಂತ ಗೊಂದಲವೆದ್ದಿತು. ಕಾಂಗ್ರೆಸ ಪಕ್ಷದವರು ಸಭೆಯನ್ನು ಮುರಿಯುವ ಪಂಥ ಗಟ್ಟಿದರು ಕಿಟಕಿ [illegible]. ಇವರ ಕಾರ್ಯದ ಪ್ರಭಾವವು ಆತ್ಮಘಾತದಲ್ಲಿ ಪರಿಣಮಿಸುವದನ್ನು ಕಂಡು ಅಧ್ಯಕ್ಷರು ಸಭೆಯ ವಿಸರ್ಜನೆ ಮಾಡಿದರು. ಹೀಗೆ ಸಭೆಯು ಯಾವ ಕೆಲಸವೂ ಆಗದೆ, ವಿಸರ್ಜನೆಯೊಂದಿತು. ಅನಂತರ ಅನೇಕ ಶಿಷ್ಟ ಪ್ರಮುಖರು ಕಾಂಗ್ರೆಸಕ್ಕೆ ಅನುಕೂಲವಾಗಿ ಅದರಲ್ಲಿ ಸೇರುವಂತೆ ಪಣತೊಟ್ಟಿದ್ದಾರೆಂದು ಸರದಾರ ಕರಣಿಂಗರು ಜಾಹೀರಪಡಿಸಿದ್ದಾರೆ

ಮೈಸೂರಲ್ಲಿ ಕೂಡಿದ ಬ್ರಾಹ್ಮಣೇತರ ಪರಿಷತ್ತು

——(೦)——

ಕ್ಷತ್ರಿಯರ ಉಗುಳೇ ಹೆಚ್ಚು

—(೦)—

ಮೈಸೂರಲ್ಲಿ ಕೂಡಿದ ಬ್ರಾಹ್ಮಣೇತರ ಪರಿಷತ್ತಿಗೆ ಅಲ್ಲಿಯ ಪ್ರಮುಖರಾದಂಥ ಅನೇಕ ಬ್ರಾಹ್ಮಣೇತರರು ಅನುಕೂಲರಿಲ್ಲೆಂಬ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಬ್ರಾಹ್ಮಣೇತರವೆಂಬುದು ಅನೇಕ ವರ್ಗಕ್ಕೆ ಸೇರಿದ ಬಹು ಸಂಖ್ಯಾಕರ ಸ್ವಾರ್ಥಸಾಧನೆಗೆ ಒಂದು ಮಾರ್ಗವಾಗಿದ್ದದ್ದು ಪ್ರತ್ಯಕ್ಷ ಕಣ್ಣಿಗೆ ಕಾಣುತ್ತಿರುವದರಿಂದ, ಇದರಲ್ಲಿ ಅಲ್ಪಸಂಖ್ಯಾಕರು ಸೇರಬಯಸುವದಿಲ್ಲ. ಆದ್ದರಿಂದ ಇವರ ಸಭೆಯ ಪರಿಣಾಮವು ಮಾತ್ರ ತಮ್ಮ ಉಗುಳು ಬಹಳವೆಂಬಂತಾಗಿ, ಅವರ ಆಟವೆಲ್ಲ ನಿರರ್ಥಕವಾಗುತ್ತದೆ.

ಬಹು ಸಂಖ್ಯಾಕರೆಂಬುವರು ಅಲ್ಪ ಸಂಖ್ಯಾಕರನ್ನು ಹೇಗೆ ತುಳಿಯುತ್ತಾರೆಂಬುದಕ್ಕೆ ಧಾರವಾಡ ಜಿಲ್ಲೆಯ ಸ್ಕೂಲಬೋರ್ಡಿನ ಚುನಾವಣೆಯು ಒಂದು ಸಾಕ್ಷಿಯಾಗಿದೆ. ಬೋರ್ಡಿನಲ್ಲಿ ವೀರಶೈವರ ಬಹುಮತವುಂಟು. ಈ ಅವರ ಬಹುಮತವು ಎಂದಿಗೂ ಹೋಗದು. ಇಂತಹದರಲ್ಲಿ ಇವರು ಬೋರ್ಡನ್ನು, ಹ್ಯಾಯಿಸ್ಕೂಲ ಚೇರಮನ್ನ ಕೆಲಸಗಳನ್ನು ತಮ್ಮ ಪಾಲಿಗೇ ಮಾಡಿಕೊಂಡರು. ಅಷ್ಟೇ ಅಲ್ಲ, ವಿಶ್ವಾಸೇತರರಿಗೆನ್ನುವಂತೆ!! ಚೇರಮನ್ನ ಪಿಠ್ಠಲ ಹ್ಯಾಯಿಸ್ಕೂಲ ಕಮಿಟಿಯ ಕೆಲಸವನ್ನಾದರೂ ರಡ್ಡಿಯರೆಂಬ ಶ್ರೀ॥ ವ್ಯಾಸನಗೌಡರಿಗೆ, ಅಥವಾ ಪೈಶಿನವರು. ದಿ ಲಕ್ಷ್ಮಣರಾವ ಶ್ರೀ॥ ಗುಂಜೀಕರರಿಗೆ, ಕೊಡಬೇಕಾಗಿತ್ತೆಂದು ವೀರಶೈವರಾದಂಥ ಲೋಕಮತದವರೇ ಬರೆದಿದ್ದಾರೆ. ಇದು ಅಗನಾಳಿಗನ ಕೇಳೇ

ಹುಚ್ಚಿನಂತೆ ಹೇಳುವವರಾದರೂ, ಆದರ ನೀವೇ ಅಳ್ಳಾಗುವವರುಂಟು? ವೀರಶೈವರು ಕೇವಲ ಸ್ವಾರ್ಥಪರಾಯಣರಾಗದೆ, ತಮ್ಮಂತೆ ಬೇರೆ ಕುಲದವರೂ ಈ ದೇಶದ ಸುಖದುಃಖ ಹಾಗೂ ಅಧಿಕಾರಗಳ ಭಾಗಿಯಾಗಿದ್ದಾರೆಂದು ತಿಳಿದು, ಆ ಪ್ರಕಾರ ಅವರನ್ನು ನಡಿಸಿಕೊಳ್ಳುವದರಿಂದ, ತಮಗೆಂದಿಗೂ ಗೌರವ ಬರಬಹುದೆಂದು ಆತ್ಮಸಾಕ್ಷಿಯಾಗಿ ತಿಳಕೊಳ್ಳಬೇಕು. ಹಿರಿಯಲ್ಲಿ ಮರಿ ಹಿರಿದು ಮೇರೆಮೀರಿ ತೋರಿದರೂ, ಅದು ಶುದ್ಧಿಯಾಗಲಾರದೆಂದು ಸೋಮೇಶ್ವರಶತಕದಲ್ಲಿ ಹೇಳಿಲ್ಲವೇ?

ಗಾಳಿ ಬಂದಾಗ ತೂರಿಕೊಳ್ಳುವಿಕೆ.

ಮುಂಬಯಿ ಸರಕಾರದ ಕೌನ್ಸಿಲರಾದ ಮೆಹಮೂದ ತುಲ್ಲಾಸಾಹೇಬರು ಮಂತ್ರಿಯಾಗಿದ್ದಾಗ, ಸಿಂಧ ಸಕ್ಕರ ಕಾಲುವೆಯ ಕೆಳಗಿನ ಭೂಮಿಯನ್ನು ಪುಷ್ಕಳವಾಗಿ ತಕ್ಕೊಂಡರು. ಇದರಲ್ಲಿ ಒಬ್ಬ ಪೋಲಿಸಸಾಹೇಬರೂ ಸೇರಿದ್ದಾರೆ. ಸರಕಾರೀ ಕಾಮದಾರರಾಗಿದ್ದವರು ಹೀಗೆ ಹೊಲ ಮನೆಗಳನ್ನು ಕೊಳ್ಳಬಾರದೆಂಬ ಕಾಯದೆಯುಂಟು. ಆದರೆ ಈ ಕಾಯದೆಯು ಮಂತ್ರಿಗಳಿಗೆ ಅನ್ವಯಿಸುವದಿಲ್ಲ. ಏಕಂದರೆ ಇವರು ಸರಕಾರದ ಕಾಯಮ ಭೃತ್ಯರಲ್ಲ. ಈ ಪೋಸ್ಟಿನ ಲಾಭ ತಕ್ಕೊಂಡು ನಾಮದಾರ ಹಿದಾಯತುಲ್ಲಾಸಾಹೇಬರು ಪುಷ್ಕಳವಾಗಿ ಭೂಮಿಯನ್ನು ತಕ್ಕೊಂಡರು. ಈ ಬಗ್ಗೆ ಈ ಮುಂದಾಗಿ ಅಧಿಕಾರಾರೂಢರಾದ ಶ್ರೀ. ಸ್ವಾಮಿನಾರಾಯಣರು ಗವ್ಹರ್ನರರಾಗಿದ್ದ ಮೆ. ಸಿಕ್ಸಸಾಹೇಬರಿಗೆ ಪತ್ರ ಕೂಡ ಬರೆದು ಕೇಳಿದ್ದರು. ಆದರೂ ನಾಮದಾರ ಹಿದಾಯತುಲ್ಲಾಸಾಹೇಬರು ಗಾಳಿ ಬಂದಾಗ ತೂರಿಕೊಳ್ಳುವದನ್ನು ಬಿಡಲಿಲ್ಲ. ಅನಾಯಾಸವಾಗಿ ಲಕ್ಷ್ಮಿಯು ಮನೆಗೆ ಬರುತ್ತಿದ್ದರೆ ಯಾರು ಬಿಡುವರು? ಆದರೆ ತಾವು ತಮ್ಮ ಅಧಿಕಾರದ ದುರುಪಯೋಗ ಮಾಡುತ್ತೇವೆಂದು ಇವರು ತಿಳಿಯಲಿಲ್ಲ. ಈ ಬಗ್ಗೆ ಅಸೆಂಬ್ಲಿಯದು ನೀನೇ ಬಂಟನೆಂದು ಖ್ಯಾತಿ ಪಡೆದ ಶ್ರೀ॥ ನರೀಮನ್ನರು ಕೌನ್ಸಿಲದಲ್ಲಿ ದೊಡ್ಡ ವಾದ ಹೂಡಿದರು. ಆಗ ಮೆ. ಹಿದಾಯತುಲ್ಲಾಸಾಹೇಬರು ಕಣ್ಣು ಕೆಂಪಗೆ ಮಾಡಿದರು. ಸರಕಾರ ಪಕ್ಷದ ಮುಸಲ್ಮಾನ ಮೆಂಬರರು ಇವರನ್ನು ಬೆಂಬಲಿಸಿದರು. ವಾದವಿವಾದವು ಘನಘೋರ ಸಂಗ್ರಾಮದಂತಾಯಿತು. ಆದರೆ ಫಲವೇನು? ಹಿದಾಯತುಲ್ಲಾಸಾಹೇಬರ ಬಂದು ಅಂಗುಲ ಭೂಮಿಯು ಸಹ ಅವರ ಕೈಬಿಟ್ಟು ಹೋಗಲಿಲ್ಲ?

ವಿಶಾಲತೆಯ ಪಟ್ಟಿಯನ್ನು ಬಹಿಷ್ಕರಿಸಿದ ಆಥಣಿಯ ವ್ಯಾಪಾರಸ್ಥರು

——(೦)——

೧ ನರಸಿಂಹ ದತ್ತಾತ್ರೇಯ ಮುತಾಲಿಕ ದೇಸಾಯಿ.
೨ ರೇವಣಸಿದ್ದಪ್ಪಾ ಗುರುಲಿಂಗಪ್ಪ ಕಲಬುರ್ಗಿ.
೩ ಕೃಷ್ಣರಾವ ಮಿರಜಿ ಹೆಸ್ಕರ.
೪ ಭರಮಪ್ಪಾ ಸಿದ್ದಪ್ಪಾ ಮೊಕಗುಡಿ.
೫ ದುಂಡಪ್ಪಾ ಅಯ್ಯಪ್ಪಾ ಕೊಪ್ಪದ
೬ ದುಂಡಪ್ಪಾ ದೇವಪ್ಪಾ ತೆಲಸಂಗ.
೭ ಹರಿ ಪಂಢರೀನಾಥ ಪಿಸೆ.
೮ ಈಶ್ವರಪ್ಪಾ ಸಕ್ರೆಪ್ಪಾ ಶಿವಾಗಿ.
೯ ಮಾಳಪ್ಪ ಬೇವಿ.
೧೦ ಬಾಳಕೃಷ್ಣ ನಾರಾಯಣ ಗುರ್ರಾ.
೧೧ ಶಿವಾಜಿ ಗಣೇಶ ಮೋರೆ.

ಸರಕಾರ ಮುಕ್ತ ಹುಟ್ಟ ಹಿಡಿದ ಆಸೆ.

—(೦)—

ಶ್ರೀ ಮುಕ ಜಯರಾಮ ದಾಸರು ಬೆಳಗಾವಿಯಲ್ಲಿದ್ದಾಗ ಅಲ್ಲಿಯ ಕೆಲವು ಜನರಿಗೆ ಆ ಮರಾಠಾ ಸಂಸ್ಕೃತಿಯ ಬಗ್ಗೆ ಪತ್ರಿಕೋತ್ತರಗಳು ನಡೆದವು. ಆ ಸಮಯದಲ್ಲಿ ಸರಕಾರದ ಮರಿ ಮಂದಿರ ಹುಟ್ಟಹಿಡಿದ ಆಸೆ, ಇವನ್ನು ಹಾವಿಗೆ ತರಲು ಅಂಕುಶ ಬರೀ ಮುಂದಾದ ಅಧಿಕಾರಗಳು ಉಪಯೋಗಬೀಳದೇ ಇಲ್ಲ. ಅದನ್ನು ಒಕ್ಕಿಟ್ಟು ಬೆಣ್ಣೆಹಚ್ಚಿದ ಅಳವಾದ ತಗ್ಗಿನಲ್ಲಿ ಕಟ್ಟಬೇಕೆಂದು ದಾಸರು ಉದ್ಗಾರ ತೆಗೆದರು.

ವಿವಿಧ ವರ್ತಮಾನಗಳು.

——(೦)——

ಹೋದ ವರ್ಷ ಸಿಲೋನ ಸರಕಾರಕ್ಕೆ ಒಂಟು ಕೋಟಿ ೪೧ ಲಕ್ಷದ ಆದಾಯವಾಯಿತು. ಮತ್ತು ಏಳು ಕೋಟಿ ಆರು ಲಕ್ಷದ ವೆಚ್ಚವಾಯಿತು. ನಡೆಯುವ ವರ್ಷದ ವೆಚ್ಚ [illegible] ಸರಾಸರಿ ಬಂದಾಗ [illegible] ದು ಲಕ್ಷವನ್ನು ವೆಚ್ಚ ಮಾಡಿದರು.

ಭಾವನಗರದಲ್ಲಿ ಒಬ್ಬ ಬ್ರಾಹ್ಮಣನು ಸತ್ತನು. ಸುಮ್ಮನೆ ಸಾಮಾನ್ಯ ಜನರಿಗೆ ಪ್ರಾಣಭೀತಿ ಬರ ಹಾಕಿದರೆ ಮೃತನಿಗೆ ಸಿದ್ಧ ಯಾಗಲಾರದು ತರುಣ ಸಂಘದವರು ಹೇಳಿ ಟೀಕಿಸಿ [illegible] ಬೇಕಿನ ಮಾಡಗೊಡಲಿಲ್ಲ

ನೋಟೀಸು

೧ ಶಿವಲಿಂಗಪ್ಪ ಸಂಗಪ್ಪ ಚಿವಟಿ
೨ ಫಕೀರಪ್ಪ ಸಂಗಪ್ಪ ಚಿವಟಿ
೩ ವೀರಪ್ಪ ಸಂಗಪ್ಪ ಚಿವಟಿ
೪ ನಾಗಪ್ಪ ಸಂಗಪ್ಪ ಚಿವಟಿ
೫ ಸಂಗಪ್ಪ ಶಿವಲಿಂಗಪ್ಪ ಚಿವಟಿ ಸಾ|| ನಲವ
ಡಿ ತಾಲೂಕ ನವಲಗುಂದ ಇವರಿಗೆ-

ಕೆಳಗೆ ಸಹಿ ಮಾಡುವವರು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ-

ನವಲಗುಂದ ತಾಲೂಕ ಪೈಕಿ ನಲವಡಿ ಗ್ರಾಮದಲ್ಲಿರುವ ಮೇಲೆ ಹೆಸರಿಸಿದ ಜನರು ಸಮೂಹ ಕುಟುಂಬದವರಾಗಿರುವಾಗ ನೇವಡಿ ಶೂ. ಶ್ರೀ. ಗೋಸಾಯಿಟಿಯಲ್ಲಿ ತಮ್ಮ ಕುಟುಂಬದ ಸಲುವಾಗಿ ಶಿವಲಿಂಗಪ್ಪನ ಹೆಸರಿನ ಸಾಲಾ ತೆಗೆದಿರುತ್ತಾರೆ. ಇದಕ್ಕೆ ನಮ್ಮ ತಂದೆಯವರಾದ ವೀರಪ್ಪ ಲಿಂಗಪ್ಪ ನಾಯ್ಕರ ಇವರು ಜಾಮೀನು ಆಗಿದ್ದರು. ಈಗ ನಮ್ಮ ತಂದೆಯು ಮೃತನಾಗಿರುತ್ತಾನೆ ಸದರ ಶಿವಲಿಂಗಪ್ಪ ಮತ್ತು ಉಳಿದ ಭಾವಂದಿರು ಸದರ ಸಾಲಾ ತೀರಿಸಲಿಲ್ಲ. ಒಳ ದಾರಿ ಆಗಿ ಕೋರ್ಟಿನ ಡಿಕ್ರಿ ಆಯಿತು. ಸೋಸಾಯಿಟಿ ದೆಸೆಯಿಂದ ಮ|| ಮಾಮಲೇದಾರಸಾಹೇಬ ತಾಲೂಕ ನವಲಗುಂದ ಇವರು ನನ್ನ ಸ್ಥಾವರ ಜಂಗಮ ಮಿಳ್ಕತಿಯ ಮೇಲೆ ಜಪ್ತಿ ನಡಿಸಹೊರಟಿದ್ದಾರೆ ಇದು ಅನ್ಯಾಯದ್ದೇ ಇರುತ್ತದೆ. ಈ ಮಧ್ಯ ಮೂಲ ಸಾಲಗಾರ ಆದ ಶಿವಲಿಂಗಪ್ಪ ಚಿವಟಿ ಮೊದಲಾದವರು ಈ ಸಾಲದ ದೆಸೆಯಿಂದ ತನ್ನನ್ನು ತಪ್ಪಿಸುವ ದೃಷ್ಟಿಯಿಂದ ನವಲಗುಂದ ತಾಲೂಕ ಪೈಕಿ ನಲವಡಿ ಗ್ರಾಮದಲ್ಲಿರುವ ತಮ್ಮ ಮಾಲ್ಕಿಯ ಮನೆ ಮನ್ನೆ ಜಮೀನು, ಹೊಲ, ಬಳ್ಳಿ ಅಥವಾ ಬೇರೆ ರೀತಿಯಿಂದ ಪರಾಧೀನ ಮಾಡಬೇಕೆಂದು ಮಾಡಿದ್ದಾರೆ. ಇದನ್ನು ಯಾರೂ ಕೊಂಡು ವಗೈರೆ ಯಾವ ರೀತಿಯಿಂದಲೂ ಹಿಡಿಯಬಾರದು. ಯಾಕಂದರೆ ನಾನು ಫೇಡ ಮಾಡುವ ಸಾಲದ ಬೋಜಾ ಈ ಮನೆಯ ಮೇಲೆ ಇರುತ್ತದೆ. ಈ ನೋಟೀಸಿನ ವಿರುದ್ಧ ಯಾರಾದರೂ ನಡೆದರೆ ಸದರ ಮನೆಯ ಸಂಬಂಧ ನಷ್ಟದಾಕ್ಕೆ ನಾನು ಜವಾಬದಾರನಲ್ಲ. ಅಂತಾ ಜಾಹೀರವಾಗಿದ ನೋಟೀಸು.

ತಾ|| ೧೬-೧೦-೧೯೨೯ ನೇ ಇಸ್ವಿ.
ಸಹಿ- ಪ್ರಧಾನಪ್ಪಾ ವೀರಪ್ಪಾ ನಾಯ್ಕರ

ಸುಸಮಯ

ವಿ. ಆರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರ್ಯಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಸೆರಗು ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಪ್ರತ್ಯಕ್ಷ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

[illegible]

ನೋಟೀಸಿಗೆ ಉತ್ತರಾ

ನಿಂಗಿ ಕೋಂ ಮಲ್ಲಪ್ಪಾ ಒಣ್ಣಿಹಳ್ಳಿ ಸಾ|| ಮುಡಸೂರು ತಾಲ್ಲೂಕ ಕೋಡ ಇವಳಿಗೆ-

ಮಲ್ಲಪ್ಪಾ ಚಿನ್ನ ನೀಲಪ್ಪಾ ಒಣ್ಣಿಹಳ್ಳಿ ಸಾ|| ಹಿರೇಹಳ್ಳಿ ತಾಲ್ಲೂಕ ಕೋಡ ಈ ನೋಟೀಸಿನ ಮೂಲಕ ತಿಳಿಸೋದೇನಂದರೆ- ನೀನು ತಾರೀಖು ೨-೧೦-೨೯ನೇ ವಿಜಯ ಪತ್ರದಲ್ಲಿ ಕೊಟ್ಟ ನೋಟೀಸ ಮುಟ್ಟಿತು ಮಜಕೂರು ತಿಳಿಯಿತು ನೀನು ನೋಟೀಸಿನಲ್ಲಿ ಬರೆದ ಯಾವತ್ತು ಮಜಕೂರು ಸುಳ್ಳು ಇರುತ್ತವೆ ನಿನ್ನ ಕಾರ್ಯ ಮಾಡಿಕೊಂಡು ೨ ವರ್ಷ ಆಯಿತು ನೀನು ಈಗ ೨ ತಿಂಗಳ ಕೆಳಗೆ ಮಗುವು ಹುಟ್ಟಿದಾಗಿಂದ ತವರುಮನಿಗೆ ಹೋದಿ ಹೋಗುವ ಕಾಲಕ್ಕೆ ಅಜಮಾಸು ೪೦೦-೫೦೦ ರೂಪಾಯಿ ದಾಗೀನಗಳು ಇದ್ದವು ನಂತರ ಸಮ್ಮನಾ ಕಳಿಸಿ ಕೊಟ್ಟೆ ಮಗುವು ಹುಟ್ಟಿದ ಬಳಿಕ ೨-೩ ಸಾರೆ ಕರಿಯಲಿಕ್ಕೆ ಬಂದರೂ ಇಲ್ಲದ ಸಬಬು ಹೇಳಿಸಿಕೊಳ್ಳಾ ಬಂದು ಈಗ ನೋಟೀಸ ಕೊಡಲಿಕ್ಕೆ ಕಾರಣವೇನು ಇದರ ಮೇಲಿಂದ ನಿನ್ನ ಮನಸ್ಸು ಗಂಡನ ಮೇಲೆ ಇಲ್ಲಾ ಹಿಂಗೆ ಕಾಣುತ್ತದೆ ಹ್ಯಾಗೆ ಇರಲಿ ನಾನೇನು ನಿನ್ನ ಬಿಟ್ಟವನು ಅಲ್ಲಾ ನನಗೆ ನೀನು ಬೇಕೆ ಬೇಕು ೨ ತಿಂಗಳಲ್ಲಿ ತವರುಮನಿಯಲ್ಲಿ ಇದ್ದವಳಿಗೆ ೫೦೦ ರೂಪಾಯಿ ಸಾಲಾ ಮಾಡಲಿಕ್ಕೆ ಕಾರಣವೇನು? ಮತ್ತು ನಾನಾಗಿ ನಿನ್ನ ಬಿಟ್ಟಿದ್ದರೆ ನನ್ನ ಮೇಲೆ ಪೋಟಗಿ ದಾವಾ ಮಾಡಲಿಕ್ಕೆ ನಿನಗೆ ಹಕ್ಕು ಬರುತ್ತಿತ್ತು ಇದು ಯಾವತ್ತು ವಿಚಾರ ಮಾಡಿ ಇದು ಮುಟ್ಟಿದ ೮ ದಿವಸದಲ್ಲಿ ನಿನ್ನ ಲಗ್ನದ ಕಾಲಕ್ಕೆ ನಿನ್ನ ಮೈಮೇಲೆ ಇಟ್ಟ ಯಾವತ್ತು ದಾಗೀನ ತಗೊಂಡು ಬರಬೇಕು ಇದಕ್ಕೆ ತಪ್ಪಿದರೆ- ನಾನಾದರೂ ನಿನ್ನ ಹಾಗು ನಿನ್ನ ತಾಯಿ ತಂದಿ ಮೇಲೆ ರೀತಿಪ್ರಕಾರ ಕೋರ್ಟಿನಲ್ಲಿ ದಾವಾ ಮಾಡಿ ಖರ್ಚಾ ಪಡಕೊಂಡೇನು ಇಷ್ಟರ ಮೇಲಿಂದಾ ತಿಳಕೊಂಡು ಸುಮ್ಮನೆ ಹೋಗಿ ಬರಬೇಕು ತಿಳಿಯುವದು

ತಾರೀಖು ೧೭-೧೦-೧೯೨೯
ಸಹಿ- ಮಲ್ಲಪ್ಪಾ ಚಿನ್ನ ನೀಲಪ್ಪಾ ಒಣ್ಣಿಹಳ್ಳಿ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಙ್ಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಙ್ಕ್ತಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ಪಙ್ಕ್ತಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ- ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕಬೇಕಿದ್ದರೆ ಎರಡು ಆಣೆ ಹೆಚ್ಚಿನ ಒಳಗಾಗಿ ಇಷ್ಟು ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾ. ವಿಜಯ ಧಾರವಾಡ.

ಈ ಪತ್ರವನ್ನು ರಂಗಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

R N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಕ್ಕಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶುಕ್ರವಾರ ತಾರೀಖು ೧೮ ನೇ ಅಕ್ಟೋಬರ ೧೯೨೯ (ಸಂಚಿಕೆ ೨೩೯

ಸೆಂಟ್ರಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಮುಂಜಾನೆ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ

ಚಾಲೂ ಖಾತೆಗಳು:— ಪುಕ್ಕಟೆಯಾಗಿ ತೆರೆಯಲ್ಪಡುವವು

ಸೇವಿಂಗ್ಸ್ ಬ್ಯಾಂಕು:— ಒಂದು ರೂಪಾಯಿಂದ ತೆರೆಯಲ್ಪಡುವದು. ಬಡ್ಡಿ ದರ ೩ ರೂ.

ಮುದತ ಠೇವುಗಳು:— ಒಂದು ವರ್ಷದ ಮುದ್ದತಿಗೆ ಠೇವು ತೆಗೆದುಕೊಳ್ಳಲಾಗುವದು. ಬಡ್ಡಿ ದರ ೩॥ ರೂ.

ಕರ್ಜು:— ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲಾಗುವದು. ಬಡ್ಡಿ ದರ ೬ ರೂ. ಹತ್ತಿ ಮತ್ತು ಧಾನ್ಯಗಳ ಆಡತಿ ಮೇಲೂ ಸಹ ಸರಕಾರಿ ನೋಟುಗಳ ಮೇಲೂ ಸಾಲವನ್ನು ಕೊಡಲಾಗುವದು. ಸರಕಾರಿ ಪ್ರಾಮಿಸರಿ ನೋಟುಗಳ ವ ಮುನಿಸಿಪಾಲಿಟಿ ಡಿಬೆಂಚರುಗಳ ಬಡ್ಡಿ ವಸೂಲ ಮಾಡುವ ಕೆಲಸಕ್ಕೆ ಹಾಗು ಅವುಗಳನ್ನು ಖರೀದಿ ಮಾಡುವದಕ್ಕೂ ವಿಕ್ರೀ ಮಾಡುವದಕ್ಕೂ ಮತ್ತು ಬೋರ್ಡ್ ಕಮಿಶನ್ ತಕ್ಕೊಂಡು ಗಿರಾಕಿಗಳಿಗೆ ಅವುಗಳ ಖರೀದಿ ವ ವಿಕ್ರಿ ಮಾಡುವದಕ್ಕೂ ಬರುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವದಕ್ಕೂ ಮತ್ತು ಚಕ್ಕು ಹುಂಡಿಗಳನ್ನು ವಸೂಲ ಮಾಡುವದಕ್ಕೂ ಬರುವದು.

ಬ್ಯಾಂಕಿಗೆ ಮುಂದ್ಯಾಗಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲ ತರದ ಅಧಿಕಾರವಿರುವದು.

ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಬಂದಕ್ಕೆ ತಿಳಿಸಲ್ಪಡುವದು.

ಆರ್. ಎಫ್. ರಿಕಾಟ್ಟ.
ಏಜಂಟರು.

ದಿ ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ.

ನಂ ೪- ಮಂಗಳವಾರಪೇಟೆ, ರಾವಬಹಾದೂರ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಹಾಗು ಮತ್ತು ಚಿಕ್ಕ ಮುದ್ದತಿಯ ಕಡೆ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಬಾಧಕವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ,

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಸ್ಥಾಪನೆ ೧೯೧೨ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗಿಯು ಒಂದು ಲಕ್ಷದ ಮೇಲಿರುವದು. ಚಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು. ಠೇವು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಗೀರದಾರ,
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತ ಕರಾರಿನಿಂದ ಹಣವನ್ನು ಡಿಪಾಜಿಟ್ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೬-೭-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ. ೧೫-೧೦-೨೫ನೇ ಇಸ್ವಿ.

ಶ್ರೀ.

ವಿಜಯೋಂ ಶ್ರೀಶಪ್ರಿಯ
ಶ್ರೀ ವಿಜಯಾತ್ಮನೇ ನಮಃ ಸುಖಕರಸತೇಸೆ ।
ದ " ವಿಜಯಂ " ಶ್ರೀಕಕವಾ ।
ನಾವಿಕರಗಳ ವಿವಾಹವನ್ನು ಸಾಜಾ ॥ ೧ ॥

ಸ್ವರಾಜ್ಯದ ಗೌಡಬಂಗಾಲ.

ಹಿಂದುಸ್ಥಾನಕ್ಕೆ ದೊರೆಯುವ ಸ್ವರಾಜ್ಯದ ವಿಚಾರವು ಸಧ್ಯಕ್ಕೆ ಕನಸಿನಲ್ಲಿ ಸಹಾ ಅನ್ನಿಸಲಾರದಂತಾಗಿದೆ. ಉದಾರಮತದ ಎಷ್ಟೋ ಮಂದಿ ಮುತ್ಸದ್ದಿ ಮಂತ್ರಿಗಳ ಬದಲು ಲಾರ್ಡ ಆಯರ್ವಿನ್ ಸಾಹೇಬರು ಸ್ಪೇಶಲ್ ಅಸೆಂಬ್ಲಿಯನ್ನು ಕರೆದು, ಸ್ವರಾಜ್ಯದ ಅಶ್ವಾಸನ ಕೊಡುವರೆಂದು ವರ್ತಮಾನವು ಹಬ್ಬಿದ್ದಿತಷ್ಟೇ; ಈ ಮಧ್ಯದಲ್ಲಿ ಭಾರತ ಮಂತ್ರಿಯಾದ ಮಿ. ಬೆರ್ ಕೆನ್‌ಹೆಡ್ ಸಾಹೇಬರು ಈ ದೇಶಕ್ಕೆ ಬಂದು ರಾಯಲ ಕಮಿಶನ ನೇಮಿಸಿ ತನ್ನ ಕಾರಿಸುವರೆಂದು ಹಾರಸುದ್ದಿಯಾಗಿತ್ತು ಆದರೆ ಇದು ಸುಳ್ಳೆಂದು ಇಂದು ಪ್ರಸಿದ್ಧವಾಗಿದೆ. ಸಾಯಮನ್ ಕಮೀಶನದ ರಿಪೋರ್ಟ ಪ್ರಸಿದ್ಧವಾಗುವವರೆಗೆ ಯಾರೂ ಏನೂ ಹೇಳಲು ಸಮರ್ಥರಾಗಲಾರರೆಂಬುದು ಸಹಜವಾದದ್ದು. ಕಲ್ಕತ್ತೆಯಲ್ಲಿ ಲಾರ್ಡ ಆಯರ್ವಿನ್ ಸಾಹೇಬರು ಹಿಂದುಸ್ಥಾನಕ್ಕೆ ಪೂರ್ಣಪ್ರಮಾಣದ ಸ್ವರಾಜ್ಯ ಕೊಡುವುದೇ ಬ್ರಿಟಿಶ ಸರಕಾರದ ಮನಃಪೂರ್ವಕವಾದ ಅಪೇಕ್ಷೆಯಾಗಿರುತ್ತದೆಂದು ಸಾರಿ ಹೇಳಬಹುದು. ಹೀಗೆ ಹೇಳುವದು ಮತ್ತು ಅದಕ್ಕೆ ಕೊಡಿಸುವದು ಎಷ್ಟರ ಮಟ್ಟಿಗೆ ಸಾಧ್ಯವಿಲ್ಲ. ಹತ್ತು ವರ್ಷಗಳ ಹಿಂದೆ ಮಾಂಟೆಗ್ಯು ಚೆಮ್ಸಫರ್ಡ ಸಾಹೇಬರು ದಿಲ್ಲಿಯಲ್ಲಿ ಇದನ್ನೇ ಹೇಳಿದ್ದರು. ಆ ನಿಶಾನೆ ಹಿಡಿದು ಅವರು ಕಾರ್ಯ ಮಾಡಿದರು. ಮಾಡಿದ್ದೆಂಬುದನ್ನು ಈ ನಿಶಾನೆಯು ಸ್ವಲ್ಪ ಕಡಿಮೆ ಸುಧಾರಣೆಗಳನ್ನು ಜಾರಿಗೆ ತಂದ ಮೇಲೆ ಅವನ್ನು ಹಿಂದಿರುಗಿಸಿ, ಅದರಿಂದ ಹೆಚ್ಚಿಗೆ ಕೊಡಲು ಸಾಯ ಮನ್ ಕಮೀಶನದ ಘಟನೆಯಾಯಿತು. ಬಳಿಕ ದಿಲ್ಲಿಯ ಸಭೆಯಲ್ಲಿ ಲೋಕ ಪಕ್ಷದ ಬಗ್ಗೆ ಶಿಕ್ಷಣ ಪ್ರಸಂಗ ಲಾರ್ಡ ಸಾಹೇಬರು ಮೇಲೆ ಹೇಳಿದಂತೆ ಸ್ಪೇಶಲ್ ಅಸೆಂಬ್ಲಿಯನ್ನು ಕರೆದು ಭಾಷಣ ಮಾಡಬಹುದು. ಕಾಂಗ್ರೆಸದ ಅಧ್ಯಕ್ಷಸ್ಥಾನವನ್ನು ತರುಣರೂ ಸ್ವಾತಂತ್ರ್ಯವಾದಿಗಳೂ ಆದಂಥ ಪಂಡಿತ ಜವಾಹರಲಾಲರು ಸ್ವೀಕರಿಸುವರು. ಇವರು ದೇಶದ ತುಂಬ ಯಾವ ವಿಷಗಾಳಿಯನ್ನು ಬಿಡುವರೆಂಬ ನೆಚ್ಚಿಗೆ ಇಲ್ಲ. ಜನಿವಾರಿ ೧ನೆಯ ತಾರೀಖಿನ ಉದಯವಾದ ಕೂಡಲೆ- ಮಹಾತ್ಮರ ಆಸಹಕಾರದ ಬೇರು ಹೆಡೆಯನ್ನೆತ್ತುವದು. ಈ ಮಾತುಗಳ ನಡುವೆ ತಾವು ಟೀಕೆಗೆ ಹಾಕುವದಕ್ಕೆ, ಮಾತುಗಳನ್ನು ಪೂರಣಗೊಳಿಸುವದಕ್ಕೆ ಲಾರ್ಡ ಸಾಹೇಬರು ಮುತ್ಸದ್ದಿತನದ ಭಾಷಣ ಮಾಡುವರೆಂದು ಭಾರತೀಯ ಮುತ್ಸದ್ದಿಗಳು ತರ್ಕ ಮಾಡಿ, ಈಗಿನಿಂದಲೇ ಸಾವಧಾನವೆಂದು ಎಚ್ಚರಿಕೆ ಕೊಟ್ಟಿರುತ್ತಾರೆ. ಸ್ವರಾಜ್ಯ ಪಕ್ಷೀಯರು ಮುಂದಾಗುವ ಭವಿಷ್ಯವನ್ನು ಇಂದೇ ಕಂಡುಹಿಡಿಯುವರು ಇಂಥ ಧೂರ್ತತನದ ಮಾತುಗಳಲ್ಲಿರುವದಿಲ್ಲ. ಆದ್ದರಿಂದ ಆದಾಗಲಿ ಸಾವಧಾನ, ಎಚ್ಚರಿಕೆ ಎಂದು ಹೇಳಬೇಕಾಗುತ್ತದೆ.

ಶಾರದಾ ಬಿಲ್ಲಿಗೆ ಮುಸಲಮಾನರ ಪ್ರತಿಷ್ಠೆಯ ಅನುಕೂಲ ಮಾತು

ಮಧ್ಯವರ್ತಿ ಕಾಯದೆಯ ಅಸೆಂಬ್ಲಿಯಲ್ಲಿ ಪಾಸಾಗುವಾಗ- ಅನೇಕ ಪ್ರತಿಷ್ಠಿತ ಮೌಲಾನಾ ಜನರು ಸೇರಿ, ಈ ಬಿಲ್ಲನ್ನು ವಿರೋಧಿಸಿದರಷ್ಟೆ; ಗವರ್ನರ ಜನರಲ್ಲರು ಇದಕ್ಕೆ ಸಮ್ಮತಿ ಕೊಟ್ಟಿದ್ದು, ಬರುವ ಎಪ್ರಿಲ ತಿಂಗಳಿಂದ ಅಮಲಿನಲ್ಲಿ ಸಹ ಬರುವದು. ಆದರೆ ಇದನ್ನು ನಿಷೇಧಿಸುವ ಕುರಿತು ಲಖನೋರಿನಲ್ಲಿ ಮುಸಲಮಾನರ ದೊಡ್ಡ ಸಭೆಯು ಕೂಡಿತು. ಅಸಹಕಾರದ ವೇಳೆಯಲ್ಲಿ ಜನರು ಪದವಿಗಳನ್ನು ಬಿಟ್ಟರು. ಕೌನ್ಸಿಲಗಳಿಗೆ ಬಹಿಷ್ಕಾರ ಹಾಕಿದರು. ಸರಕಾರದ ಕೂಡ ಬೇರೆ ರೀತಿಯಿಂದಲೂ ಅಸಹಕಾರ ಮಾಡಿದರು. ಅದೇ ಮೇರೆಗೆ ಮುಸಲಮಾನ ಗೃಹಸ್ಥರು ಪದವಿಗಳಿಗೆ ರಾಜೀನಾಮೆ ಕೊಡಬೇಕು. ಕೌನ್ಸಿಲ ಅಸೆಂಬ್ಲಿಯ ಮೆಂಬರ ಕೆಲಸವನ್ನು ಧಿಕ್ಕರಿಸಬೇಕು. ಅಸಹಕಾರದ ಚಳವಳಿ ಹಿಡಿಯಬೇಕೆಂದು ಸಭೆಯಲ್ಲಿ ಠರಾವು ಬಂತು. ಆದರೆ ಇದು ವಿಷಯಾಂತರವೆಂದು ಅಧ್ಯಕ್ಷರು ಹೇಳಿ, ಅದನ್ನು ಸಭೆಯ ಮುಂದೆ ತರಗೊಡಲಿಲ್ಲ. ಇದರಿಂದ ಸಭೆಯಲ್ಲಿ ಗುಸು ಗೊಂದಲವೆದ್ದಿತು. ಕೊನೆಗೇ ಉರಿ ಅದರ ಮೇಲೆ ಉಗುಳುವೆನ್ನುವಂತೆ ಮೌಲಾನಾ ಆಜಾದ ಸಾಹೇಬರು ಮುಂದೆ ಕುಳಿತು ಭಾಷಣ ಮಾಡಿದರು.

ಬಾಲವಿವಾಹವನ್ನೇ ಮಾಡಬೇಕು; ಪ್ರೌಢ ವಿವಾಹ ಮಾಡಬಾರದೆಂದು ಕುರಾಣ ಮತ್ತು ವೇದ ಧರ್ಮಗ್ರಂಥಗಳಲ್ಲೆಲ್ಲಿಯೂ ಹೇಳಿಲ್ಲ. ಪ್ರೌಢವಿವಾಹ ಮಾಡಬೇಕೆನ್ನುವದಕ್ಕೆ ಧರ್ಮಶಾಸ್ತ್ರದ ಸೂತ್ರ, ಅವುಗಳ ಸ್ಪಷ್ಟೀಕರಣದ ಟೀಕೆ ಟಿಪ್ಪಣಿ ಮತ್ತು ಬೇಕಾದಷ್ಟು ಆಜ್ಞೆಗಳುಂಟು.

ಪೈಗಂಬರರ ಆಜ್ಞೆಯ ಪ್ರಕಾರ ಬಾಲವಿವಾಹ ಮಾಡದವರು ಪಾಪಕೃತ್ಯವಾಗುತ್ತದೆ ಈ ವಿಚಾರವು ಪೈಗಂಬರರಿಗೆ ಎಂದೂ ಸಮ್ಮತವಾಗಿರಲಿಲ್ಲ. ಅದ್ದರಿಂದ ಪೈಗಂಬರರ ಆಜ್ಞೆಯನ್ನು ಮೀರಿ ಯಾರಾದರೂ ಬಾಲವಿವಾಹ ಮಾಡಕೂಡದು. ಪೈಗಂಬರರು ಏಳು ವರ್ಷದ ಹುಡುಗಿಯನ್ನು ಮದುವೆ ಮಾಡಿಕೊಂಡರೆಂದು ಹೇಳುವದು ಪೂರಾ ತಪ್ಪು."

ಈ ಪ್ರಕಾರ ಇವರ ಭಾಷಣವು ಸಭಿಕರ ಮೇಲೆ ಪರಿಣಾಮವನ್ನುಂಟುಮಾಡಿದರೂ, ಸರಕಾರದ ಧರ್ಮದಲ್ಲಿ ಕೈಹಾಕಿರುವ ಬಗ್ಗೆ ವಿರೋಧದಿಂದ ಸಭೆಯಲ್ಲಿ ದೊಡ್ಡ ಗೊಂದಲವೆದ್ದು, ಕೊಡುವ ಟೀಕೆಗಳ ಪ್ರಸಂಗ ಬಂದು, ಸಭೆಯು ಮುರಿದು ಹೋಯಿತು.

ರೇಲ್ವೆ ಮತ್ತು ಮೋಟಾರಿನ ಪೈಪೋಟಿ

—)o(—

ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣಿಕರನ್ನು ತಲುಪಿಸುವದರಲ್ಲಿ ತಾವೇ ಹಿರಿಯರೆಂದು ರೇಲ್ವೆಯವರು ತಿಳಿದು ಗರ್ವಪಟ್ಟಿದ್ದರು. ಈ ಗರ್ವ ಭಂಗವನ್ನು ಮೋಟಾರು ಮಾಡುವದೆಂದು ಅವರಿಗೆ ಸ್ವಪ್ನದಲ್ಲಿ ಸಹ ಅನಿಸಿದ್ದಿಲ್ಲ. ಮೋಟಾರ ಬಂದು, ಇವರ ಹೊಟ್ಟೆಯ ಮೇಲೆ ಕಾಲು ಕೊಟ್ಟಿರುತ್ತದೆ. ಮೋಟಾರಿನಿಂದ ರೇಲ್ವೆಯು ದಿವಾಳಿ ತೆಗೆಯಬಹುದು? ಆ ಧರ್ಮ ನಷ್ಟದಲ್ಲಿ ದುಡಿಯಲಾರದೆಂಬದು ನಿಜ. ಆದರೆ ಅದರ ದೊಡ್ಡಗಳಿಕೆಯು ಮಾತ್ರ ಹೋಯಿತು. ಧಾರವಾಡ ಹುಬ್ಬಳ್ಳಿ, ಹುಬ್ಬಳ್ಳಿ ಗದಗ, ಬಾಗಲಕೋಟೆ ವಿಜಾಪೂರ, ಧಾರವಾಡ ಬೆಳಗಾವಿ, ಇದೇ ಪ್ರಕಾರ ಹಿಂದುಸ್ಥಾನದ ತುಂಬ ರೇಲ್ವೆಗಿಂತ ಬೇಗನೆ ಮತ್ತು ಕಡಿಮೆ ದರದಲ್ಲಿ ಮೋಟಾರಗಳು ಪ್ರಯಾಣಿಕರನ್ನು ಪಾರ್ಸಲಗಳನ್ನೂ ಒಯ್ಯುತ್ತಿರುವದರಿಂದ ಕಂಪನಿಗಳಿಗೆ ಕಲ್ಪನಾತೀತವಾಗಿ ಹಾನಿಯಾಗುತ್ತಿರುವದು. ಧಾರವಾಡ ಹುಬ್ಬಳ್ಳಿಯ ನಡುವೆ ದಿನಾಲು ಐನೂರು ಜನರು ಮೋಟಾರಿನಿಂದ ಹೋಗುತ್ತಿದ್ದು, ಇದರಿಂದ ಕಂಪನಿಗೆ ದಿನಾಲು ೩೦೦ ರೂಪಾಯಿಗಳ ಹಾನಿಯಾಗುತ್ತಲಿದೆ. ಇದೇ ಬೇರೆ ಬೇರೆ ಸ್ಥಳಗಳಲ್ಲಿಯ ಹಾನಿಯ ಪ್ರಮಾಣವಾದರೆ- ರೇಲ್ವೆ ಕಂಪನಿಗಳಿಗೆ ಮೋಟಾರುಗಳ ದೆಸೆಯಿಂದ ಹೃದಯ ಭಂಗವೇ ಆಗುತ್ತಿದೆಂದು ಸಹಜವಾದ ಊಹೆಯಾಗುತ್ತದೆ. ಹೋದ

ವಾರದಲ್ಲಿ ಸಿವಲ್‌ರ್‍ಲ್ಲಿ ಹಿಂದ ಸ್ಥಾನದಲ್ಲಿರುವ ಎಲ್ಲ ರೇಲ್ವೆ ಕಂಪನಿಗಳ ಒಂದು ಕಮೀಟಿಕೂಡಿತ್ತು. ಅದರಲ್ಲಿ ರೇಲ್ವೆ ವಿರುದ್ಧ ಮೋಟಾರಿನ ಬಗ್ಗೆ ಅಧ್ಯಕ್ಷರು ದಕ್ಷೋದ್ಗಾರತೆಗೆದರೆಂದೂ ಹೇಳಬಹುದು ರೇಲ್ವೆ ಕಂಪನಿಯವರು ಇದಕ್ಕಾಗಿ ಒತ್ತರದಿಂದ ಪ್ರಯಾಣಿಕರನ್ನು ಪಾರ್ಸಲ ಮತ್ತು ಗುಡ್ಸನ್ನೂ ಮುಟ್ಟಿಸುವಂತೆ ಚರ್ಚಿಸಿದರು ಕಂಪನಿಗಳು ಈ ಪ್ರಕಾರ ಕಸ್ಟರಿಯ ವದಕ್ಕೆ ಮೋಟಾರಗಳ ಮುಹಿಮೆಯೇ ಕಾರಣವಾಯಿತು. ಬಸಿಗೂ ಡಾಗ್ಗೇ ಬೆಲ್ಲ ಕರಗುವದು.

ಬರಿಯಲ್ಲಿ ಬಚ್ಚಾಸಾಕು.

ಹೋಗಿಬರುವವರು ಉಗುಳಬೇಕು.

—(೦)—

ಕಾಬೂಲದಿಂದ ನಿಜ ಸುದ್ದಿಯು ಬರುವದು ತೀರ ಕಡಿಮೆಯಾಗಿದೆ. ಪೇಶಾವರದಲ್ಲಿ ಹುಟ್ಟುವ ಸುದ್ದಿಗಳು ಒಂದಕ್ಕಿಂತ ಒಂದು ಮಿಗಿಲಾದ ಆಶ್ಚರ್ಯವೆನಿಸುವಂಥವಾಗಿವೆ. ಅವುಗಳಲ್ಲೊಂದು ಬಚ್ಚಾಸಾಕುವಿನನ್ನು ಒಂದು ಪಂಜರದಲ್ಲಿ ಹಾಕಿ, ಸುತ್ತಲು ಸೈನಿಕರ ಕಾವಲಿಟ್ಟು, ಪೇಟೆಯ ಮಧ್ಯ ಕೂಟಿನಲ್ಲಿಟ್ಟಿರುವರು. ದಾರಿಗುಂಟ ಹೋಗಿ ಬರುವವರು ಆತನ ಮೇಲೆ ಉಗುಳಬೇಕೆಂದು ಕಟ್ಟಪ್ಪಣೆಯಾಗಿರುವದು. ಇದು ನಂಬುವಂಥ ಸುದ್ದಿಯೇ ಅಲ್ಲೆಂದು ತಾನಾಗಿ ಹೊಳೆಯುವದು.

ಪುರಾತನ ಕಾಲದಲ್ಲಿ ಜಯಶಾಲಿಗಳು ಕೈಸೆರೆ ಸಿಕ್ಕ ವೈರಿಯನ್ನು ಇದಕ್ಕೂ ಹೆಚ್ಚು ಕ್ರೂರತನದಿಂದ ನಡಿಸಿಕೊಂಡಂತೆ ಇತಿಹಾಸವು ಹೇಳುತ್ತದೆ. ಇಂಥ ಅಮಾನುಷ ಕೃತ್ಯವು ವರ್ತಮಾನ ಪರಿಸ್ಥಿತಿಯಲ್ಲಿ ನಡೆಯಲಾರದು ಕೊನೆಯ ಶಿಕ್ಷೆ ಎಂದರೆ ಗಲ್ಲಿಗೆ ಹಾಕುವದು. ಹಾಗೂ ಮಾಡಲಾರರು. ಇಂಗ್ಲಿಷರು ನೆಪೋಲಿಯನನ್ನು ಸೆಂಟ ಹೆಲಿನಾಕ್ಕೆ, ಸ್ಪೇನರು ಮೊರೋಕೋದ ಸುಲ್ತಾನನನ್ನು ಇದೇ ಪ್ರಕಾರ ಅಜ್ಞಾತ ಸ್ಥಳಕ್ಕೆ ಕಳಿಸಿದಂತೆ ಬ್ರಿಟಿಷರು ನಾದಿರಖಾನನು ಇವನನ್ನು ದೂರಗಡಿಪಾರುಮಾಡಬಹುದು. ಅಥವಾ ಮೊದಲಿನಂತೆ ಪೇಶಾವರ ಅಥವಾ ಹಿಂದುಸ್ಥಾನದ ಯಾವದೊಂದು ದೊಡ್ಡ ಪಟ್ಟಣದಲ್ಲಿ ಪಕಾಲಿ ಅಥವಾ ಚಹಾ ಮಾರಿ ಹೊಟ್ಟೆ ತುಂಬಿಕೊಳ್ಳಲೆಂದು ಕಳಿಸಿದರೆ ಯೋಗ್ಯ ಶಿಕ್ಷೆಯಾಗುವದು.

ಸಾಕುವಿಗೆ ಸಹಾಯ-

ಸಯ್ಯದ ಹುಶೇನನೆಂಬವನು ಬಚ್ಚಾಸಾಕುವಿಗೆ ಸಹಾಯವಾಗಿ ಮೂರು ಸಾವಿರ ಸೈನ್ಯದೊಂದಿಗೆ ಕೋಹಿಸ್ತಾನದಿಂದ ವಾಯುವೇಗದಿಂದ ಹೊರಟಿರುತ್ತಾನೆ. ಈತನ ವಿರುದ್ಧವಾಗಿ ನಾದಿರಖಾನನಿಗೆ ಅನುಕೂಲವಾಗಿ ಅಲ್ಲಿಯ ಜನರು ಬಂಡಾಯವೆಬ್ಬಿಸುವ ದುಶ್ಚಿನ್ಹವೂ ಉಂಟಾಗಿದೆ.

ಪುಣೆಯ ಸತ್ಯಾಗ್ರಹ-

ಪುಣೆಯಲ್ಲಿ ಅಂತ್ಯಜರು ಪರ್ವತಿಯ ದೇವಸ್ಥಾನದಲ್ಲಿ ನಡಿಸಿದ ಸತ್ಯಾಗ್ರಹವು ತಮ್ಮಣಿಯಾಗಿಲ್ಲ. ಅದನ್ನು ಮರುಕಳಿಸಬೇಕೆಂದು ವಿಚಾರ ನಡೆದಿದೆ. ಇವರ ಮುಖಂಡರಾದ ರಾಮಭೋಜರೆಂಬವರು ಚನ್ನಾಗಿ ಪೆಟ್ಟು ತಿಂದು ಆಸ್ಪತ್ರಿಯಲ್ಲಿ ನರಳುತ್ತಿದ್ದಾರೆ. ಸತ್ಯಾಗ್ರಹಿಗಳನ್ನು ಕೂಡಿದ ಜನರು ಹೊಡೆಯಬೇಕೇ? ಅವರ ಮೇಲೆ ಕಾಯದೇ ಪ್ರಕಾರ ಕೆಲಸ ನಡಿಸಲಿಕ್ಕೆ ಬರುವದೇ? ಎಂದು ವಕೀಲರ ಅಭಿಪ್ರಾಯವನ್ನೂ ಕೇಳುತ್ತಲಿದ್ದಾರೆ. ಹೊರತು [illegible] ಸಿಯಿಂದಲೇ ಕಾಯದೆಯ ಆಶ್ರಯ ಪಡೆಯಾಗ, ದೇವಸ್ಥಾನದಲ್ಲಿ ಪ್ರವೇಶ ದೊರೆಯಬೇಕೆಂದೂ ದಿವಾಣಿ ಕೋರ್ಟಿನ ಆಶ್ರಯವನ್ನೇಕೆ ಪಡೆಯಬಾರದು?

ಶಾಸ್ತ್ರ ಮತ್ತು ಕುಲ-

ಪರ್ವತಿಯಲ್ಲಿ ಉಚ್ಚವರ್ಣದವರಲ್ಲಿ ಕೆಲವರು ಅಂತ್ಯಜರನ್ನು ಹೊಡೆದದ್ದನ್ನು ನಿಷೇಧಿಸಲೋಸುಗ ಲಯೋ ಮಾರ್ಕೆಟಿನ ದೊಡ್ಡ ಪಟಾಂಗಣದಲ್ಲಿ ಒಂದು ಜಾಹೀರ ಸಭೆಯು ಕೂಡಿತ್ತು ಈ ಸಭೆಯಲ್ಲಿ ಸನಾತನ ಧರ್ಮಾಭಿಮಾನಿಯಾದ ಕಾಳವಣಕರ ಶಾಸ್ತ್ರಿಯವರು

"ಪರ್ವತಿಯ ಮೇಲೆ ಅಂತ್ಯಜರು ಹೊಡತ ತಿಂದದ್ದು ಮತ್ತು ಅವರನ್ನು ಹೊಡೆದದ್ದು ನ್ಯಾಯವಾಗಿಯೇ ಇರುತ್ತದೆ. ಬರೇ ಹೊಡೆಯುವದೇಕೆ? ದೇವಾಲಯದ ಪಾವಿತ್ರ್ಯವನ್ನು ಕಾಯುವದಕ್ಕಾಗಿ ಶಸ್ತ್ರ ಬರ್ಚಿಗಳನ್ನು ಉಪಯೋಗಿಸಿದ್ದರೂ, ನಾನು ಅವರ ಅಭಿನಂದನ ಮಾಡುತ್ತಿದ್ದೆನು."

ಎಂಬದಾಗಿ ಭಾಷಣಮಾಡಿ ಅಸ್ಪೃಶ್ಯರನ್ನು ಮತ್ತಿಷ್ಟು ಕೆಡಿಸಿದರು. ಆಗ ಹೊಲೆಯರ ಒಬ್ಬ ಪ್ರಮುಖನು

"ನಾವು ಹಿಂದೂ ಜನರೇ ಹಿಂದೂ ಜನಾಂಗದಲ್ಲಿಯೇ ಇರಲಪೇಕ್ಷಿಸುತ್ತೇವೆ ದೇವತಾರಾಧನೆಮಾಡುವ ಪ್ರಸಂಗದಲ್ಲಿ ನಾವು ಪ್ರಾಣತ್ಯಾಗ ಸಹ ಮಾಡಲಿಕ್ಕೆ ಸಿದ್ಧರಿದ್ದೇವೆ. ಆದರೆ ಪರಧರ್ಮದಲ್ಲಿ ಸೇರುವದಿಲ್ಲ"

ಎಂಬದಾಗಿ ಭಾಷಣಮಾಡಿದನು. ಈ ಪ್ರಕಾರ ಅಲ್ಲಿ ಎರಡೂ ಪಕ್ಷಗಳು ಹುರುಸಿಗೆ ಬಂದಿರುತ್ತವೆ.

ನೋಟೀಸು

ಗದಗ ತಾಲೂಕ ವ|| ಮಹಮ್ಮದಸಾಬ ನರಗುಂದ ಸಾ|| ನವಲಗುಂದ ತಾ|| ನವಲಗುಂದ ಈತನಿಗೆ ಕೆಳಗೆ ಸಹಿಮಾಡಿದವಳ ಕಡಿಂದಾ ಈ ನೋಟೀಸಿನ ದ್ವಾರಾ ತಿಳಿಸಿಡುವದೇನಂದರೆ ನೀನು ನನ್ನ ತಂದೆಯು ಅಪ್ರಾಪ್ತವಯದವರು ಇರುವ ಮೂಲಕ ನನ್ನ ತಂದೆಯು ನಿನ್ನ ಉದ್ಧಾರಗತಿಯಗೋಸರ ನನನ್ನು ನಿನಗೆ ಲಗ್ನಮಾಡಿ ಕೊಟ್ಟು ನಿನ್ನ ಕಡೆಯ ಖರ್ಚ ವ ದಾಗಿನೆಗಳ ಬಗ್ಗೆ ನಿನ್ನ ಹಕ್ಕರ ಯೇನೂ ಬೇಡದೆ ತನ್ನ ಕೈಖರ್ಚಿನಿಂದಾ ಲಗ್ನ ಮಾಡಿಕೊಟ್ಟು ನನ್ನನ್ನು ನಿನ್ನ ಮನೆಗೆ ಬಾಳ್ವೆಕ್ಕೆ ಕಳಿಸಿದರು ನೀನಾದರೂ ಅಪ್ರಕಾರಾ ೪-೫ ವರ್ಷಗಳವರೆಗೆ ನನ್ನ ಕೂಡ ಲೋಕಾಚಾರ ಬಾಳೆವಾ ಡಿದಿ ಅಷ್ಟರಲ್ಲಿ ನನ್ನ ತಂದೆಯು ಸರಕಾರಿ ನವಕರಿ ಬಗ್ಗೆ ಬೇರೆ ಕಡೆಗೆ ವರ್ಗಾಗಿಹೋಗಲು ನೀನು ಕೀಳ ಜನರ ಸಂಗತಿಯಿಂದ ಗಾಂಜೇ ಸೇದುವ ರಾಂಡಬಾಜಿ ಮಾಡುವ ಇಸ್ಪೇಟ ಆಡುವ ದುರಾಚಾರಕ್ಕೆ ಸಿಂತು ದಿನದಿವಸ ವಿನಹಾಕಾರಣಾ ನನ್ನ ಕೂಡ ತಂಟೇ ತಗಲಿ. ಹೊಡದು ಬಡದು ದುಖಾಪತ್ತ ಮಾಡುವದಲ್ಲ ಹೊಟ್ಟೆಗೆ ಅನ್ನಾ ನಹಾ ಕೊಡದೆ ನಿನ್ನ [illegible] ಇಲ್ಲದಿದ್ದರೆ ನಿನ್ನ ಜೀವಾ ತಗೊಂಡೇನ ಅಂತಾ ಮುದವಿ ಕಾಲಕ್ಕೆ ನನ್ನ ತಂದಿ ಕೊಟ್ಟ ದಾಗೀನೆ ಸಹಾ ಕಸಗೊಂಡು ನನ್ನ ಮೈ ಮೇಲಿನ್ನ ಹಳೇ [illegible] ಯಿಂದಲೇ ನನ್ನ ತವರ ಮನೆಗೆ ಕಳಿಸಿಕೊಟ್ಟದಕ್ಕೆ ೬|೭ ವರ್ಷಗಳಾಯಿತು ಈ ವರೆಗೆ ಕರಿಯಲಿಕ್ಕೆ ಬರಲಿಲ್ಲ ಈ ಸಂಧಿಯಲ್ಲಿ ನಾನು ಹಿತ ಅಪ್ತರಿಂದಾ ವ ಸಭ್ಯ ಗೃಹಸ್ಥರಿಂದಾ ಅನೇಕ ಸಾರೆ ನಿನಗೆ ಬುದ್ಧಿವಾದ ಹೇಳಿಸಿದರೂ ನೀನು ನನ್ನ ದುರ್ನಡತೆ ಬಿಟ್ಟು ನನ್ನನ್ನು ಬಾಳ್ವೆಕ್ಕೆ ಕರಕೊಂಡು ಹೋಗಲಿಲ್ಲ ಇನಿಕಡಿಗೆ ನನ್ನ ತಂದಿಯೂ ಸರಕಾರಿ ನವಕರಿಯಿಂದ ಪೇನಶನ್ನ ತಗೊಂಡ. ಅಲ್ಪ ಪಗಾರದಲ್ಲಿ ನನ್ನ ಸಂರಕ್ಷಣೆ ಮಾಡಲು ಕಠಿಣವಾದ್ದರಿಂದಾ ನಾನು ನನ್ನ ಕೈಯಿಂದ ಗುಪ ಕೂಲಿ ಮಾಡುತ್ತಾ ಮಂದಿ ಹತ್ತರ ದೇಣೆ ಮಾಡುತ್ತಾ ಉಪಜೀವಿಸುತ್ತಿರಲು ನನಗೆ ಎರಡನದಾಗಿ ರೂಪಾಯಿ ಸಾಲವಾಗಿದೆ ನೀನು ಒಬ್ಬ ಹೆಂಗಸಿಗೆ ತಂದು ಮನಿಯಲ್ಲಿ ಕೂತಿರುತ್ತಿ ಅಂತಾ ಕೇಳಿದೆ ಕಾರಣಾ ಈ ನೋಟೀಸು ಕೊಡವ ಭಾಗ ಬಿದ್ದು ಇದು ಮುಟ್ಟಿದ ೮ ದಿವಸದಲ್ಲಿ ನೀನು ನಾನು ವಾಸವಾಗಿರುವ ಹಾನಗಲ್ಲ ಗ್ರಾಮದಲ್ಲಿ ಸಭ್ಯ ಗೃಹಸ್ಥರ ಸಮಕ್ಷಮ ಬಂದು ನಿನ್ನ ದುರ್ಗುಣ ಬಿಟ್ಟು ನನ್ನ ಕೂಡ ಒಳ್ಳೇ ರೀತಿಯಿಂದ ಬಾಳ್ವೆ ಮಾಡಲಿಕ್ಕೆ ಒಪ್ಪಿ ನಾನು ಮಾಡಿದ ದೇಣೆ ಫೇಡ ಮಾಡಿ ನನ್ನನ್ನು ಕರಕೊಂಡು ಹೋಗಬೇಕು ಇದಕ್ಕೆ ತಪ್ಪಿದಲ್ಲಿ ಇದೇ ನೋಟೀಸು ಅಂತಾ ತಿಳಕೊಳ್ಳಬೇಕು [illegible] ನನ್ನ ಮುಚ್ಚಳ ಬಂದವರಿಗೆ [illegible] ಕೊಂಡೇನು ಆಗ ನಿನ್ನ ಯಾವ ಹಕ್ಕು ನನ್ನ ಮೇಲೆ ವ ನನ್ನ ಉತ್ಪನ್ನ ಗಂಟಿನ ಮೇಲೆ [illegible] ನಡಿಸಲಿಕ್ಕಿಲ್ಲಾ ಈ ಮಾಡಗಿನ [illegible] ಮತ್ತು ಈ ನೋಟೀಸಿನ ಖರ್ಚ ಸಹ ನಿನ್ನ ಮೇಲೆ ಅದೆ ತಿಳಿಯುವದು ತಾ|| ೧೩-೧೦-೧೯೩೭

ಈ ಎಡಗೈ ಹೆಬ್ಬೆಟ್ಟಿನ [illegible] ಕೋಂ ಗೌಸುಸಾಬ [illegible] ಸಹಿ ಮಾಡಿದ್ದು ಅದೆ

ಸಂಸ್ಕೃತಿ ವಾಚನಾಲಯ-

ಹುಬ್ಬಳ್ಳಿಯಲ್ಲಿಯ ಶ್ರೀ ಸರಸ್ವತಿ ವಿದ್ಯಾರಣ್ಯ ಧರ್ಮಾರ್ಥ ವಾಚನಾಲಯದ ಏಳನೆಯ ವರ್ಧಂತ್ಯುತ್ಸವವು ಶ್ರೀ ಬಾಲಗಂಧರ್ವರ ಅಧ್ಯಕ್ಷತೆಯಲ್ಲಿ ಬರುವ ಮಂಗಳವಾರ ಸಾಯಂಕಾಲದಲ್ಲಿ ಶ್ರೀ. ಮಲ್ಲಿಕಾರ್ಜುನ ನಾಟಕ ಶಾಲೆಯಲ್ಲಾಗುವದು. ಆಗ ಶ್ರೀ. ಭಾಟೆ, ಗುರುರಾವ ವಾಳವೇಕರ ಭಾಷಣಗಳಾಗುವವು.

ವಿವಿಧ ವರ್ತಮಾನಗಳು.

—(೦)—

ಲಾಹೋರಿನಲ್ಲಿ ರಾಜಪಾಲರನ್ನು ಕೊಂದ ಆರೋಪಿ ಇಲಾಮುದ್ದೀನನು ಪ್ರಿವ್ಹೀ ಕೌನ್ಸಿಲಕ್ಕೆ ಅಪೀಲು ಮಾಡಿದ್ದನಷ್ಟೇ; ಜಡ್ಜರು ಈ ಅಪೀಲನ್ನು ಕಿತ್ತಿ ಹಾಕಿದರು. ಇದರ ಕೂಡ ಇನ್ನು ನಾಲ್ಕು ಅಪೀಲುಗಳು ನಾಮಂಜೂರಾದವು.

ಸಿಂಧ ಪ್ರಾಂತದಲ್ಲಾದ ನೆರೆಹಾವಳಿಯಿಂದ ಮಿಡತೆಗಳ ಉಪದ್ರವ ಹೆಚ್ಚಾಗಿದೆ. ಇವುಗಳ ನಾಶ ಮಾಡಲು ಸರಕಾರದವರು ೨೪ ಸಾವಿರ ರೂಪಾಯಿ ಮಂಜೂರ ಮಾಡಿದ್ದಾರೆ.

ಶ್ರೀ ನರಸಿಂಹ ಚಿಂತಾಮಣ ಕೇಳಕರರ ಪುತ್ರಿಯು ಪಿ. ಎಚ. ಡಿ. ಎಂಬ ಪಾಂಡಿತ್ಯದ ಪದವಿಯ ಜ್ಞಾನಾರ್ಜನೆಗಾಗಿ ಪ್ಯಾರೀಸಕ್ಕೆ ಹೋಗಿದ್ದಾಳೆ. ಈ ಮೊದಲು ಪ್ರೊ. ಕರ್ವೆಯವರ ಕೂಡ ವಿಲಾಯತಿಯ ತುಂಬ ತಿರುಗಾಡಿ ಬಂದಳು.

ಹೈದರಾಬಾದಿನ ನಿಜಾಮ ಸಾಹೇಬರ ತಾಯಿಯವರು ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಸರಕಾರದವರು ಕಾಕೋರಿಯ ರಾಜಕೀಯ ಕೈದಿಗಳಿಗೆ ಕೊಟ್ಟಿರುವ ಸೋಯಿಗಳನ್ನು ರದ್ದು ಮಾಡಿದ್ದರಿಂದ, ವಿಂತದ ಆರೋಪಿಗಳು ಕೋಪಗೊಂಡು ಇವರ ಸೋಯಿಗಳನ್ನು ಪುನಃ ಒದಗಿಸಿ ಕೊಡಬೇಕು. ಇಲ್ಲವಾದರೆ- ಅನ್ನವರ್ಜ ಮಾಡುವೆವೆಂದು ಸರಕಾರಕ್ಕೆ ಕಡ್ಡಾಯವಾಗಿ ತಿಳಿಸಿದ್ದಾರೆ

ಮಹಾತ್ಮರು ಉತ್ತರ ಹಿಂದುಸ್ಥಾನದಲ್ಲಿ ಮುಖ್ಯವಾಗಿ ಅಲ್ಲಾಬಾದ ಇಲಾಖೆಯಲ್ಲಿ ಈ ತಿಂಗಳಲ್ಲಿ ಪ್ರವಾಸ ಮಾಡಿದರು. ಖಾದೀ ಫಂಡಿಗೆ ಒಂದು ಲಕ್ಷದ ಭಿಕ್ಷೆ ದೊರೆಯಿತು.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಸೌ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಸೂಚನೆ:— ಈ ಔಷಧ ಬೇಡುವಾಗ ಯಾವ ವರ್ತಮಾನಪತ್ರದ ಜಾಹೀರಾತಿನ ಮೇರೆಗೆ ಈ ಬೇಡಿಕೆಯನ್ನು ಮಾಡುತ್ತಿರುವಿರೆಂಬುದನ್ನು ಬರೆಯಬೇಕು.

ಬಾಗಲಕೋಟೆಯಲ್ಲಿ ಮ್ಯುನಿಸಿಪಾಲಿಟಿಯ ಆಡಳಿತಗಾರರ ಹೊಸ ಚುನಾವಣೆಯಾಗಿ, ಶ್ರೀ. ವೀರಶೆಟ್ಟಿಯವರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು

ಸೀರೆ!! ಪತ್ತಲ!! ಕಿರಗಿ!!

ಶ್ರೀದತ್ತ ವೀವ್ಹಿಂಗ್ ಮಿಲ್ಸ್ ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ ಸೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಸೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಚವಕಶಿ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣ ಹೋದರೆ- ಮಾಲು ತಿರುಗಿ ತಕ್ಕೊಳ್ಳುವೆವು.

ಮಾಲಕ:— ಡಿ. ಜಿ. ಕಾಳೆ ಬ್ರದರ್ಸ
ಕೊಪ್ಪಿಕರ ರೋಡ ಹುಬ್ಬಳ್ಳಿ

ಸುಸಮಯ-

ವಿ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ಪಂಕ್ತಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಕೋರ್ಟ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ- ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕಿದರೆ ಆರು ಆಣೆ ಡಬಲ್‌ಕಾಲಮಿನ ಒಳಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾ. ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು ರಂಗಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶನಿವಾರ ತಾರೀಖು ೧ ನೇ ಅಕ್ಟೋಬರ ೧೯೨೯ (ಸಂಚಿಕೆ ೨೩೦

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಮುಂಜಾನೆ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ.

ಚಾಲೂ ಖಾತೆಗಳು:— ಪುಕ್ಕಟೆಯಾಗಿ ತೆರೆಯಲ್ಪಡುವವು.

ಸೇವಿಂಗ್ಸ ಬ್ಯಾಂಕು:— ಬಡ್ಡೀ ದರದಿಂದ ತೆರೆಯಲ್ಪಡುವದು. ಬಡ್ಡೀ ದರ ೩ ರೂ.

ಮುದತಿ ಠೇವುಗಳು:— ಒಂದು ವರ್ಷದ ಮುದ್ದತಿಯಿಂದ ಠೇವು ತೆಗೆದುಕೊಳ್ಳಲಾಗುವದು. ಬಡ್ಡೀ ದರ ೩॥ ರೂ.

ಸಾಲ:— ಬಂಗಾರ ದಾಗೀನೆಗಳ ಮೇಲೆ ಸಾಲವನ್ನು ಕೊಡಲ್ಪಡುವದು ಇದ್ದಲ್ಲದೆ ಓ. ರೂ. ಪತ್ರ ವಸ್ತು ಧ ಸ್ತಗಳ ಆಧಾರದ ಮೇಲೂ ಸರಕಾರೀ ನೋಟುಗಳ ಮೇಲೂ ಸಾಲವನ್ನು ಕೊಡಲ್ಪಡುವದು. ಸರಕಾರೀ ಪ್ರಾಮಿಸರಿ ನೋಟುಗಳ ವ ನಿಯಮಿತ ಕಂಪನಿಯ ಶೇರುಗಳ ನಫೆ ವಸೂಲ ಮಾಡಿ ಅವರ ಖಾತೆಗೆ ಜಮೆ ಹಿಡಿಯುವದಕ್ಕೆಯೂ ಅಥವಾ ಕಳಿಸಿಕೊಡುವದಕ್ಕೆಯೂ ಮತ್ತು ಯೋಗ್ಯ ಕಮಿಶನ್ ತೆಗೆದುಕೊಂಡು ಗಿರಾಕಿಗಳಿಗೆ ಅವುಗಳ ಖರೀದಿ ವ ವಿಕ್ರಿ ಮಾಡುವದಕ್ಕೆಯೂ ಒಪ್ಪುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವದಕ್ಕೆಯೂ ಮತ್ತು ಚೆಕ್ಕು ಹುಂಡಿಗಳನ್ನು ವಸೂಲ ಮಾಡುವದಕ್ಕೆಯೂ ಒಪ್ಪುವದು.

ಬ್ಯಾಂಕಿಗೆ ಮೇಲ್ಪಡಿಸಿದ ನಿಯಮಗಳಲ್ಲಿ ಬದಲಾವಣೆ ಮಾಡಲಿಕ್ಕೆ ಎಲ್ಲ ತರದ ಅಧಿಕಾರವಿರುವದು.

ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ ಒಂದಲ್ಲಿ ತಿಳಿಸಲ್ಪಡುವದು.

ಆರ್. ಎಫ್. ರಿಕಾರ್ಡ.
ಏಜಂಟರು.

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ- ಮಂಗಳವಾರಪೇಟೆ, ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ಹಾಸು ಮತ್ತು ಏಳು ಮುದ್ದತಿಯ ಕನಿಷ್ಠ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸ್ಥಳದ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತೆಗೆದುಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಧುಂಡಿರಾಜ.
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಸ್ಥಾಪನೆ ೧೯೧೨ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಚಿಂದಿಗೆಯು ಏಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಠಾಕೀಸು ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಸೇಫ್ ಇಟ್ಟುಕೊಳ್ಳುವ ಪೆಟಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೨-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಬೇಕು.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೧೯-೧೦-೩೯ನೇ ಇಸ್ವಿ.

ಶ್ರೀ.

ಅ ವಿಜಯಾ ಶ್ರೀಕಬ್ರುಯ
ಶ್ರೀ ವಶ-ವಾಜ ನರಸಿಕಿ ಮುಕ್ತಕರಿಕೆಗೆಂ ।
ದ "ವಿಜಯಾ" ಶ್ರೀಕರಮಾ ।
ಸಾವಿಕರ್ಗಳ ವಿತಾಶವರಿತ್ರಕು ಸಾಜಾ ॥೧॥

ಮೈಸೂರಿನ ಕೂಗು !!!

ಮೈಸೂರಲ್ಲಿ ದಸರೆಯ ಹಬ್ಬವು ಹಳೇ ಪದ್ಧತಿಯಿಂದಾಗುತ್ತದೆ. ಆದರ ಮರುದಿವಸ ಕೂಡುವ ಪ್ರಜಾಪ್ರತಿನಿಧಿ ಸಭೆಯಿಂದ ಅದಕ್ಕೆ ರಾಷ್ಟ್ರೀಯತ್ವ ಬರದಿದ್ದರೂ, ಪ್ರಾಂತಿಕ ಸ್ವರೂಪ ಒದಗುತ್ತದೆ. ದಿವಾನರು ಆದಾಯವೆಚ್ಚದ ಪತ್ರಿಕೆ ಓದುವರು. ಪ್ರತಿನಿಧಿಗಳು ಅದರ ಮೇಲೆ ಟೀಕೆ ಮಾಡುವರು ಮತ್ತು ಇತರ ಪ್ರಚಲಿತ ವಿಷಯಗಳ ಮೇಲೆ ಪ್ರಶ್ನೋತ್ತರಗಳು ನಡೆಯುವವು. ಅದರ ಕೆಲವು ಕೂಗುಗಳನ್ನು ಇದರಡಿ ಕೊಡುತ್ತೇವೆ.

ದಿವಾನರ ಹೆಬ್ಬಳಿಕೆ-

ದಿವಾನರು ತಮ್ಮ ಭಾಷಣದಲ್ಲಿ "ಪ್ರತಿಯೊಂದು ಊರಲ್ಲಿ ಕುಡಿಯುವ ಒಳ್ಳೇ ನೀರಿನ ಸೌಕರ್ಯವಾಗಬೇಕು. ಮತ್ತು ಪ್ರತಿಯೊಬ್ಬ ಪ್ರಜನು ಸುಖವಾಗಿರಬೇಕು" ಎಂಬದೇ ರಾಜ್ಯಕಾರಭಾರದ ತತ್ವ ಮತ್ತು ಧ್ಯೇಯವಾಗಿರುತ್ತದೆಂದು ಉಸುರಿದ್ದಾರೆ ಇವೆಷ್ಟು ಆಶ್ಚರ್ಯದ ಮಾತಲ್ಲ. ಇದು ಕರ್ತವ್ಯವೇ ಹೊರ್ತು ಪರೋಪಕಾರವಲ್ಲ. ನವಾಜ ಮಾಡಿದರೆ ಪುಣ್ಯವಿಲ್ಲ. ಮಾಡದಿದ್ದರೆ- ಇಹದಲ್ಲಿ ಧರ್ಮಭ್ರಷ್ಟತೆಯೂ, ಪರದಲ್ಲಿ ಪಾಪವೂ ಘಟಿಸುತ್ತದೆಂಬವನ್ನು ದಿವಾನರಿಗೆ ಹೇಳಬೇಕೇ?

ಇಸ್ಮಾಯಿಲ ಮತ್ತು ಗ್ವ್ಯಾಡಸ್ಟನ್-

ತಾವು ಹೇಳಿದಂತೆ ಎಲ್ಲ ಸುಧಾರಣೆಗಳನ್ನು ಅಮಲಿನಲ್ಲಿ ತಂದರೆ- ಮೈಸೂರು ಸಂಸ್ಥಾನವು ಇಂಗ್ಲಂಡಕ್ಕಿಂತ ನೂರು ವರ್ಷ ಮತ್ತು ಜಪಾನಕ್ಕಿಂತ ಆರು ವರ್ಷ ಹಿಂದುಳಿಯುವದೆಂದು ಸರ ಮಿರ್ಜಾ ಇಸ್ಮಾಯಿಲರು ಹೇಳಿದ್ದು ಎಷ್ಟು ಸುಳ್ಳಲ್ಲ. ದಿವಾನಬಹಾದ್ದೂರರು ಹಳ್ಳಿಗಳಲ್ಲಿ ನೀರಿನ ಪೂರೈಕೆಯಾಗುವದು ಘನಕಾರ್ಯವೆನಿಸಿದ್ದಾರೆ. ಆದುದರಿಂದ ಪ್ರತಿಯೊಂದು ಊರು ಮನೆಯ ಪ್ರತಿಯೊಂದು ಮನೆಯಲ್ಲಿ ಒಂದು ಪಿಯಾನ ಪೆಟ್ಟಿಗೆ ಇದ್ದದ್ದಾದರೆ- ಆ ಜನರ ನಿಜವಾದ ಸುಖ ಸೋಯಿ ನೋಡಿದಂತಾಯಿತೆಂದು ಸ್ವರ್ಗವಾಸಿ ಗ್ಲ್ಯಾಡಸ್ಟನ್ನ ಸಾಹೇಬರು ೪೦ ವರ್ಷಗಳ ಹಿಂದೆ ಮುಖ್ಯ ಮಂತ್ರಿಯಾಗಿದ್ದಾಗ ಭಾಷಣ ಮಾಡಿದ್ದಾರೆ. ಗ್ಲ್ಯಾಡಸ್ಟನ್ನರಂಥ ಉದ್ಗಾರವು ದಿವಾನರ ಬಾಯಿಯಿಂದ ಹೊರಡಬೇಕಾದರೆ- ಅವರ ಮರಿಮಗ- ಮರಿಮಗನ ಕಾಲದಲ್ಲಾದರೂ ಆಗುವದೇ ಎಂಬ ಸಂಶಯವುಂಟು.

ಮದ್ಯಪಾನ-

ಕರೆ ತಿಂದಿಯ ಕುಡಿತವನ್ನು ನಿಲ್ಲಿಸಬೇಕೆಂದೂ, ಒಂದು ತಾಲೂಕಿನಲ್ಲಿ ಆದರ ಪ್ರಯೋಗ ಮಾಡಿ ನೋಡಬೇಕೆಂದೂ ಮೆಂಬರರು ಸೂಚಿಸಿದ್ದಕ್ಕೆ ದಿವಾನರು ಕೊಟ್ಟ ಉತ್ತರವು ಅತ್ಯಂತವಾಗಿ ನಿಷ್ಠುರದ್ದಾಗಿರುತ್ತದೆ. ಸರಕಾರವು ಈ ಬಗ್ಗೆ ಒಂದು ಕಿಂಚಿತ್ ರೂಪಾಯಿ ಸಹ ಕಳಕೊಳ್ಳುವದಕ್ಕೆ ಸಿದ್ಧವಿಲ್ಲ. ಆದರೆ ಈ ಕುಡಿತವನ್ನು ನಿಲ್ಲಿಸುವದಕ್ಕಾಗಲಾರದೆಂಬ ಆಡಿದ ನುಡಿಯು ಅವರಿಗೇ ಶೋಭಿಸುತ್ತದೆ. ಮೈಸೂರಂಥ ಸಣ್ಣ ದೇಶವಿರಲಿ; ಅಮೇರಿಕೆಯಂಥ ದೊಡ್ಡ ದೇಶವು ಮದ್ಯಪಾನವನ್ನು ನಿಲ್ಲಿಸಿದೆ. ದಿವಾನ ಭೋಪಾಳದ ಉದಾಹರಣೆಯನ್ನು ಕೊಡುವಾಗ- ಅಮೇರಿಕೆಯು ಇವರ ಕಣ್ಮುಂದೆ ಕಟ್ಟಬೇಕಾಗಿತ್ತು. ಹಾರಿಸಿಕೊಳ್ಳುವ ಉತ್ತರದಿಂದ ಯಾರದೂ ಸಮಾಧಾನವಾಗಲಾರದು.

ಅಳಿಯನಲ್ಲ, ಮಗಳ ಗಂಡ-

ದಾವಣಗೇರಿಯಲ್ಲಿ ಸರಕಾರದವರು ಕೂಡಿಸಿದ ಶಿಕ್ಷಾ ಪೋಲೀಸರ ಬಗ್ಗೆ ಕೊಟ್ಟ ಉತ್ತರವಂತೂ ತೀರ ಹಾಸ್ಯಾಸ್ಪದವಾಗಿದೆ. ಇದು ಶಿಕ್ಷಾ ಪೋಲೀಸವಲ್ಲ; ಹೆಚ್ಚಿಗೆ ಪೋಲೀಸ ಬಂದೋಬಸ್ತು ಇನ್ನೂ ಜನರ ತುಂಟತನ ಹೋಗಿಲ್ಲ. ನಾಲ್ಕು ಕಡೆಗೆ ಶಾಂತವಾದ ಕೂಡಲೆ- ಸಿಪಾಯಿರನ್ನು ಎಬ್ಬಿಸುವೆವೆಂದು ಉತ್ತರ ಕೊಟ್ಟಿದ್ದಾರೆ ಶಿಕ್ಷಾ ಪೋಲೀಸರ ಬದಲಾಗಿ ವಿಶೇಷ ಲವಾಜಮೆ ವಿಡಿಸುವದು ಅಳಿಯನಲ್ಲ; ಮಗಳ ಗಂಡನೆಂದ ಹೇಳುವಂತಾಗುವದಿಲ್ಲವೇ?

ರಾಜಧಾನಿಯ ಮ್ಯುನಿಸಿಪಾಲಿಟಿಗೆ ಸಸ್ಪೆಂಡು.

——)(೦)(——

ಬ್ರಹ್ಮ ದೇಶದ ರಾಜಧಾನಿಯಾದ ಮಂಡಾಲೆ ಮ್ಯುನಿಸಿಪಾಲಿಟಿಯ ಕಾರಭಾರವು ಸುರಳಿತವಾಗಿ ನಡೆದಿಲ್ಲ. ಲೆಖ್ಖಪತ್ರವಿಲ್ಲ. ಅಂದಾದುಂದಿ, ಬೇಬಂದಶಾಹಿ ನಡೆದಿದೆಂದು ಸರಕಾರಕ್ಕೆ ಕಂಡು ಬಂದದರಿಂದ, ಸರಕಾರದವರು ಮೂರು ವರ್ಷಗಳ ಪರ್ಯಂತರ ಇದನ್ನು ಸಸ್ಪೆಂಡ ಮಾಡಿದ್ದಾರೆ.

ಪುನಃ ಬ್ರಾಹ್ಮಣ ಬ್ರಾಹ್ಮಣೇತರ

ಮೈಸೂರಲ್ಲಿ ಕೂಡಿದ್ದ ಬ್ರಾಹ್ಮಣೇತರ ಪರಿಷತ್ತಿನ ಪ್ರಾರಂಭದ ದಿವಸ ಸರಕಾರೀ ಕಾಮದಾರ ಮತ್ತು ಪ್ರತಿಷ್ಠಿತರಾದಂಥ ಹಲವು ಬ್ರಾಹ್ಮಣರಿಗೆ ಆಮಂತ್ರಣವಿತ್ತು. ಉಚಿತವಾದ ಪ್ರಕಾರ ಅವರು ಸಭಾಗೃಹವನ್ನು ಅಲಂಕರಿಸಿದ್ದರು. ಆದರೆ ಕೊನೆಯ ದಿವಸ ಒಂದು ಮೋಜಾಯಿತು. ಆ ದಿನ ಸಭೆಗೆ ಬರಲು ಟಿಕೇಟಿರಲಿಲ್ಲ. ಸಭೆಗಾಗಿ ನೂರಾರು ಇಬ್ಬಣ ಅದರಲ್ಲಿ ಪಾಸಾಗುವ ಠರಾವುಗಳು ಸ್ವಾರಸ್ಯಹೀನವಾದಂಥವುಗಳು. ಸಭೆಯು ಹಾಳಾಯಿತು. ಹಾದೀ ಹೋಗುವಂಥವರನ್ನೂ ಒಳಗೆ ಬಿಟ್ಟರು. ಇವರಲ್ಲಿ ಕೆಲವರು ಬ್ರಾಹ್ಮಣರಿದ್ದರು. ಚಾಲಕರು ಇವರಿಂದ ಸಭೆಯಲ್ಲಿ ಭ್ರಷ್ಟಾಚಾರವಾಗುತ್ತದೆಂದು ಇವರನ್ನು ಹೊರಗೆ ಕಳಿಸಿದರು!!! ದಕ್ಷಿಣ ಬ್ರಾಹ್ಮಣರ ದ್ವೇಷದ ಪರಮಾವಧಿಯನ್ನು ಸವಕ್ಕಿಂತ ಸಭಿಕರ ಮೂರ್ಖತನದ ಅತಿರೇಕವೆಂದು ನಿಃಶಂಕೆಯಿಂದ ಹೇಳಬಹುದು. ನೆಲ್ಲೂರಿನ ಸಭೆಯಲ್ಲಿ ಬ್ರಾಹ್ಮಣರನ್ನು ಸೇರಿಸಿಕೊಳ್ಳಬಾರದೆಂದು ಒಂದೇ ಮತದಿಂದ ಠರಾವು ಮಾಡಿದರು. ಆದರೆ ಮಂತ್ರಿಗಳಿಗೆ ದಿಗಿಲು ಬಿದ್ದಿತು ತಮ್ಮ ಸಹಾಯಕನಾದ ಬ್ರಾಹ್ಮಣ ದಿವಾನನನ್ನು ಬಿಟ್ಟರೆ ತಮ್ಮ ಬಾಡಿಗೆ ಆದಲುವದೆಂದು ತಿಳಕೊಂಡು, ನೆಲ್ಲೂರಿನ ಠರಾವನ್ನು ಬದಿಗೊತ್ತಿ ಬ್ರಾಹ್ಮಣ ಮಂತ್ರಿಯ ಕೂಡ ಸಹಕಾರ ಮಾಡಿ, ತಮ್ಮ ಗದ್ದಿಗೆಯನ್ನು ಗಟ್ಟಿಮಾಡಿಕೊಂಡಿದ್ದಾರೆ. ಇದರ ಧ್ಯಾನ ಮತ್ತು ಜ್ಞಾನವು ಈ ಸಭಾ ಪ್ರವರ್ತಕರಿಗಿದ್ದರೆ ಇವರು ಯುವಕರ ಮುಂದೆ ಎಡವಿ ಬೀಳುವಂಥ ಅಪಹಾಸ್ಯದ ಕೃತ್ಯಮಾಡುತ್ತಿದ್ದಿಲ್ಲ.

ಮ್ಯಾಜಿಸ್ಟ್ರೇಟರಿಗೆ ಕಿವಿ ಹಿಂಡಿ ಹೇಳಿದ ಉಪದೇಶ.

—(೦)—

ಲಾಹೋರಿನ ಸ್ಯಾಂಡರ್ಸ ಸಾಹೇಬನ ಕೊಲೆಯ ಆರೋಪಿಗಳು ಈ ಸ ಮ್ಯಾಜಿಸ್ಟ್ರೇಟ ಕೋರ್ಟಿನಿಂದ ಬೇರೊಂದು ಕೋರ್ಟಿಗೆ ವಿಚಾರಣೆಯನ್ನು ವರ್ಗ ಮಾಡಬೇಕೆಂದು ಹಾಯಕೋರ್ಟಿಗೆ ಅರ್ಜಿಯು ಮಾಡಿದರು. ಮ್ಯಾಜಿಸ್ಟ್ರೇಟರು ಮಾತು ಮಾತಿಗೆ ಪೋಲೀಸರ ಕೂಡ ಮಸಲತ್ತು ಮಾಡುತ್ತಾರೆಂದು ಆರೋಪಿಗಳ ತಕ್ರಾರಿಯಿತ್ತು. ಈ ಬಗ್ಗೆ ನ್ಯಾಯಮೂರ್ತಿ ಫೋರ್ಡಸಾಹೇಬರು ಇದೇ ಮ್ಯಾಜಿಸ್ಟ್ರೇಟರಲ್ಲ, ಪ್ರತಿಯೊಬ್ಬ ಮ್ಯಾಜಿಸ್ಟ್ರೇಟರಿಗೆ ಬುದ್ಧಿ ಹೇಳಿದಂಥ ಉದ್ಗಾರ ತೆಗೆದಿದ್ದಾರೆ. "ಯಾವನೊಬ್ಬ ಮ್ಯಾಜಿಸ್ಟ್ರೇಟನು ಪೋಲೀಸರ ಕೂಡ ಮಸಲತ್ತು ಮಾಡುತ್ತಾನೆಂದು ಸಿದ್ಧವಾದರೆ- ಆತನು ಮ್ಯಾ

ದಸ್ತೈಂಟ ಕೆಲಸಕ್ಕೇ ಯೋಗ್ಯನಲ್ಲ" ಎಂಬದಾಗಿ ಇವರು ಅಡಿದ ನುಡಿಯನ್ನು ಪ್ರತಿಯೊಬ್ಬ ನ್ಯಾಜಿಸ್ಟ್ರೇಟನು ತನ್ನ ಎದೆಯಲ್ಲಿ ಬರೆದಿಟ್ಟುಕೊಳ್ಳುವಂತಿರುತ್ತದೆ.

ಬೇಕೆಂದು ಹುಟ್ಟಿಸಿದ ಸುದ್ದಿಯು

—(೦)—

ಅಮೀರ ಅಮಾನುಲ್ಲಾಖಾನರು ರೋಮದಲ್ಲಿದ್ದಾರೆ. ಇವರ ಪತ್ನಿ ಸೂರಯಾ ಮಹಾರಾಣಿಯವರು ಸೀರಿಯಾ ದೇಶದವರು. ಅಲ್ಲಿ ಕ್ರಿಶ್ಚನ್ನ ಧರ್ಮದ ವಿಶೇಷ ಪ್ರಸಾರವುಂಟು. ಕ್ರಿಶ್ಚನ್ನ ಶಾಲೆಗಳಲ್ಲಿಯೇ ಚಿಕ್ಕ ವಯಸ್ಸಿನಲ್ಲಿ ಶಿಕ್ಷಣ ಹೊಂದಿದ್ದಾರೆ ಈ ಪೂರ್ವವೃತ್ತಾಂತದ ಆಧಾರದ ಮೇಲೆ ಅಮೇರಿಕೆಯ ವರ್ತಮಾನ ಪತ್ರಗಳು ಶಾಗೀಗುಬ್ಬಿಯ ಕಥೆಮಾಡಿ, ಗಂಡ ಹೆಂಡತೀರ್ವರೂ ರೋಮನ್ನಕ್ಯಾಥಲಿಕ ಧರ್ಮ ಸ್ವೀಕರಿಸುವರೆಂದು ಪಸಿದ್ಧಮಾಡಿವೆ ಅಮೀರ ರುಸಾಮಾಜಿಕ ಸುಧಾರಣೆಯ ದೆಸೆಯಿಂದ ರಾಜ್ಯಕಳಕೊಂಡು ದೇಶಾಂತರವಾಸಿಯಾಗಿದ್ದಾರೆ. ನಾದಿರಖಾನನ ಜಯದಿಂದ ಇವರೇ ಅಮೀರರಾಗಬೇಕೆಂದು ಇವರ ಹೆಸರಿನ ಜಯಜಯಕಾರವೂ, ಧ್ವಜಾರೋಹಣವೂ ನಡೆದಿದೆ. ಇದಕ್ಕೆ ಅವಕಾಶವೆಂದರೂ ಧರ್ಮದ ದೆಸೆಯಿಂದ ಕಲೆತಿರಗಿದ್ದ ಅಫಗಾನರಲ್ಲಿ ಇವರ ವಿಷಯವಾಗಿ ಮತ್ತೆ ಮನಸ್ತಾಪವನ್ನುಂಟುಮಾಡಬೇಕೆಂದೂ ಅಮೇರಿಕೆಯ ಪತ್ರಗಳು ನಡೆಸಿದ ಕುಟಿಲ ಕಾರಸ್ಥಾನವು ನಿಂದ್ಯವೇ ಸರಿ ಈ ಪತ್ರಗಳು ಸಾರಿದ ಸುದ್ದಿಯು ತಿಳಿದಕೂಡಲೆ ಅಮಾನುಲ್ಲಾಖಾನರು ಇದು ತೀರ ಹುಟ್ಟಿಸಿದ ಸುದ್ದಿಯು. ಕಾರಣದಿಂದ ಧರ್ಮಾಂತರ ಮಾಡತಕ್ಕವರಲ್ಲ ಇಸ್ಲಾಮಧರ್ಮದಲ್ಲಿ ಪೂರ್ಣ ವಿಶ್ವಾಸವುಂಟೆಂದು ಜಾಹೀರ ಮಾಡಿದ್ದಾರೆ.

ನಿಜ ಸುದ್ದಿಯು—

ಕಾಬೂಲದ ವಿದ್ಯುತ್ಸಂದೇಶವು ನಿಂತು ಹೋಗಿತ್ತು. ಅದು ಈಗ ಪ್ರಾರಂಭವಾಯಿತು. ಬಚ್ಚಾಸಾಕನು ಇನ್ನೂ ಅರ್ಕ ಅರಮನೆಯಲ್ಲಿಯೇ ಇದ್ದಾನೆ ಈತನು ತನಗೆ ಸೋಲು ಬಂದದ್ದನ್ನು ಕಂಡ ಕೂಡಲೆ, ಅಲ್ಲಿದ್ದ ನಾದೀರಖಾನನ ಆಪ್ತಬಂಧುಗಳನ್ನು ತರಿಸಿ, ಒಳ್ಳೇ ಬಂದೋಬಸ್ತಿನಲ್ಲಿಟ್ಟಿದ್ದಾನೆ ನೀವು ನನ್ನ ಮೇಲೆ ತೋಫು ಹೊಡೆದರೆ ನಾದಿರಖಾನನ ಮನೆಯವರನ್ನೇ ಮೊದಲು ಗುಂಡಿನ ಬಾಯಿಗೆ ಈಡು ಮಾಡುವೆನೆಂದು ಭಯ ಹಾಕಿದ್ದಾನೆ. ಆದ್ದರಿಂದ ಈತನನ್ನು ಶಾಂತೋಪಾಯದಿಂದಲೇ ಹಿಡಿಯಬೇಕಾಗಿದೆ

ಅಮೀರ ಅಮಾನುಲ್ಲಾಖಾನರಿಗೆ ಪಟ್ಟಗಟ್ಟಲು ಜನರು ನಾದಿರಖಾನರು ರಾಷ್ಟ್ರೀಯ ಪರಿಷತ್ತು ಕೂಡಿಸುವರು. ಉಭಯತರ ನಡುವಿದ್ದ ಮತಭೇದವನ್ನೂ ಅಳಿಯುವರು

ನಿನ್ನೆ ಬಂದ ಸುದ್ದಿ—

ಬಚ್ಚಾಸಾಕನು ವಿಮಾನ ಮಾರ್ಗವಾಗಿ ಅರ್ಕ ಅರಮನೆಯಿಂದ ಪಲಾಯನ ಹೇಳಿಸಿದರು.

ಸ್ವರಾಜ್ಯದಿಂದಾಗುವ ಲಾಭ.

—(೦)—

"ದಿವಾನ ಬಹಾದ್ದೂರರಿಗೂ ನನಗೂ ಒಂದು ಮಾತಿನ ದೆಸೆಯಿಂದ ಮತಭೇದವುಂಟು. ಅದು ಸಂಬಳ. ನಮ್ಮ ಸ್ವರಾಜ್ಯದಲ್ಲಿ ದಿವಾನರಾಗುವಂಥವರಿಗೆ ಮೂರು ಸಾವಿರ ರೂಪಾಯಿ ಸಂಬಳ ದೊರೆಯಲಾರದು; ಒಂದೇ ಸಾವಿರ ಕೊಡುವೆವು" ಎಂಬದಾಗಿ ಸರದಾರ ಪಟೇಲರು ಎರಡು ತಿಂಗಳ ಹಿಂದೆ ಆಡಿತೋರಿಸಿದ್ದನ್ನು ವಿಜಯದಲ್ಲಿ ಬರೆದಿದ್ದೇವೆ ಅದರ ಪ್ರತ್ಯಕ್ಷ ಪ್ರಮಾಣವು ಇಂದು ಜಪಾನದಲ್ಲಿ ತೋರಬಂದಿದೆ ಆ ಸರಕಾರದವರು ನೆಟ್ಟ ಕಡಿಮೆ ಮಾಡಲೋಸುಗ ೧೫೦ ರೂಪಾಯಿಗಿಂತ ಹೆಚ್ಚಿಗೆ ಸಂಬಳವಿದ್ದವರ ಸಂಬಳದಲ್ಲಿ ಕೆಲವೊಂದು ಪ್ರಮಾಣದಿಂದ ಕಡಿಮೆ ಮಾಡಿದ್ದಾರೆ. ಭೂಜಲ ಸೇನೆಯಲ್ಲಿದ್ದಂಥ ೧೫೦ ಮತ್ತು ೧೪ ಸಾವಿರ ಕಾಮದಾರರ ಸಂಬಳವು ಕಡಿಮೆಯಾಗಿದೆ. ಇವರಿಂದ ಸರಕಾರಕ್ಕೆ ವರ್ಷಕ್ಕೆ ೧೫ಲಕ್ಷದ ಉಳಿತಾಯವಾಗುವದು. ಇವರಂತೆ ದಿವಾಣಿ, ಮುಲಕೀ ಪೋಲೀಸ ಮೊದಲಾದ ಖಾತೆಗಳಿಂದಾಗುವ ಉಳಿತಾಯವೂ ದೊಡ್ಡದಾಗುವದು. ಹೀಗೆ ಕಮೀಶನನಿಂದ ಸಿವ್ಹಿಲ ಸರ್ವಂಟರ ಕಿಸೆ ತುಂಬುವ ಹಿಂದುಸ್ಥಾನದ ಆಳರಸರು ಇದಕ್ಕೆ ಏನೆಂದು ಉತ್ತರಕೊಡುವರು?

ಮನೆಬಿದ್ದು ಐವರು ಸತ್ತರು.

—(೦)—

ಮುಂಬಯಿಯಲ್ಲಿ ಠಾಕೂರದ್ವಾರದಲ್ಲಿ ಫಾರ್ಸಿ ಜನರು ವಾಸವಾಗಿದ್ದಂಥ ಒಂದು ನಾಲ್ಕಂತಸ್ತಿನ ಮನೆಯು ಅಕಸ್ಮಾತ್ತಾಗಿ ಬಿತ್ತು. ಮನೆಯು ಇಸ್ಪೇಟುಗಳಂತೆ ಚೂರುಚೂರಾಯಿತು. ಅದರಲ್ಲಿ ಅನೇಕರು ಸಿಕ್ಕರು ಪೋಲೀಸ ಮತ್ತು ಫಾಯರ ಬ್ರಿಗೇಡಿನವರು ಮೇಲಿನ ಮಣ್ಣು ಕಲ್ಲು ತೆಗೆದು ನೋಡಲು— ಐವರು ಸತ್ತಿದ್ದರು. ಏಳು ಜನರು ಬಹುವಾಗಿ ಪೆಟ್ಟು ತಿಂದಿದ್ದು ಇವರನ್ನು ಆಸ್ಪತ್ರೆಗೆ ಕಳಿಸಿದ್ದಾರೆ. ಮನೆಯು ಹಳೆಯದು ಆರು ತಿಂಗಳ ಹಿಂದೆ ದುರಸ್ತಿ ಮಾಡಿದ್ದರು.

ಸಂತೆಯ ಸ್ಪೇಶಲ ಟ್ರೇನು.

—(೦)—

ಉತ್ತರ ಹಿಂದುಸ್ಥಾನದಲ್ಲಿಯ ರೇಲ್ವೆಗಳು ಸಂತೆಯ ಸ್ಪೇಶಲ ಟ್ರೇನುಗಳನ್ನು ಬಿಡುವಂತೆಯೇ; ಅದೇ ಪ್ರಕಾರ ಜಿ ಆಯ ಪಿ ರೇಲ್ವೆಯವರು ದೀವಳಿಗೆಯಲ್ಲಿ ಮುಂಬಯಿಯಿಂದ ನಾಗಪೂರದವರೆಗೆ ಒಂದು ಸ್ಪೇಶಲ ಬಿಡುವರು. ಇದರಲ್ಲಿ ದಿನದ ಪ್ರಪಂಚಕ್ಕೆ ಬೇಕಾಗುವ ಪದಾರ್ಥಗಳ ಹೊರತು, ಅರಿವೆ ಗ್ಲಾಸು ಮುಂತಾದ ಸುಖ ಹಾಗೂ ವಿಲಾಸದ ಪದಾರ್ಥಗಳನ್ನೂ ಇಡುವರು ಬಂಡಿಯು ಬರುವ ವೇಳೆಯನ್ನು ಪ್ರತಿಯೊಂದು ಸ್ಟೇಶನದಲ್ಲಿ ಮುಂಚಿತವಾಗಿ ಡಂಗುರ ಸಾರಿ, ಹಸ್ತಪತ್ರಿಕೆ ಹಂಚಿ, ತಿಳಿಸುವರು. ಜನರ ಮನರಂಜನೆಗಾಗಿ ಸಾಯಂಕಾಲದಲ್ಲಿ ಉಚಿತವಾಗಿ ಸಿನೇಮಾ ತೋರಿಸುವರು ಈ ಬಂಡಿಯಿಂದ ಲಾಭವಾಗುತ್ತದೆಂದು ಕಂಡುಬಂದರೆ— ಇದನ್ನು ಆಗಾಗ್ಗೆ ಬಿಡುವ ವಿಚಾರ ಮಾಡಿದ್ದಾರೆ.

ಗಂಡನು ಹೆಂಡತಿಯ ಮೂಗು ಕೊಯ್ದನು.

—(೦)—

ಮುಂಬಯಿಯಲ್ಲಿ ಭಿಕಾಜಿ ಜೋಬಾ ಗಾಯಕವಾಡನೆಂಬವನು ಸೂಳೆಯನ್ನಿಟ್ಟುಕೊಂಡು ಹೆಂಡತಿಯ ಕೂಡ ಜಗಳಾಡಿದನು. ಹೆಂಡತಿಯು ಗಂಡನ ಮನೆಬಿಟ್ಟು ಹೋದಳು. ಹೋದ ಬುಧವಾರ ದಿವಸ ಅಕಸ್ಮಾತ್ತಾಗಿ ಇಬ್ಬರೂ ಟ್ರಾಮ ಬಂಡಿಯಲ್ಲಿ ಕೂಡಿದರು. ಈ ಸಮಯ ಸಾಧಿಸಿ, ಗಾಯಕವಾಡನು ಕಿಸೆಯಲ್ಲಿಯ ಚಾಕೂ ತೆಗೆದವನೇ ಜನರು ನೋಡುನೋಡುತ್ತಿರುವಾಗ, ಹೆಂಡತಿಯ ಮೂಗು ಕೊಯ್ದನು !!!

ಪುಣೆಯಂತೆ ಮುನಸಿಗಂಜ

ಕಲಕತ್ತೆಯ ಹತ್ತಿರದ ಮುನಸಿಗಂಜದಲ್ಲಿ ಪ್ರೊಫೇಸರ ಬ್ಯಾನರ್ಜಿ, ಸುರೇಂದ್ರ [illegible] ದಾರ ಮೊದಲಾದವರ ನೇತೃತ್ವದಲ್ಲಿ ಅಂತ್ಯಜರು ಕಾಳಿಕಾದೇವಿಯ ಗುಡಿಯಲ್ಲಿ ಹೋಗಲೆತ್ನಿಸಿದರು. ಪೋಲೀಸರು ಅಲ್ಲೇ ಮಾನಲು ಉಭಯತರಿಗೂ ಹೊಡೆದಾಟ ಹತ್ತಿತು. ಪ್ರೊಫೇಸರರನ್ನೂ ಬೇರೆ ಸತ್ಯಾಗ್ರಹಿ ಸಾಮಾಜಿಕರನ್ನೂ ಹಿಡಿದರು [illegible] ಇವರು ಜಾಮೀನನ್ನೂ ಕೊಡಲಿಲ್ಲ. ತುರಂಗೆಗೆ ಹೋಗಲಿಲ್ಲ. ಅಲ್ಲೇ ನಿಂತು ಹಿತವನ್ನು ಕಾಯುತ್ತಿದ್ದಾರೆ. ಸತ್ಯಾಗ್ರಹ ಪ್ರಾರಂಭವಾಗಿ ೪೨ ದಿವಸಗಳಾಗುತ್ತವೆ.

ಪಂಜಾಬದಲ್ಲಿ ಕಲ್ಲಿದ್ದಲಿ ಶೋಧ.

—(೦)—

ಪಂಜಾಬ ಇಲಾಖೆಗೆ ಸೇರಿದ ಝೀಲಮ ಜಿಲ್ಹೆಯಲ್ಲಿ ಕಲ್ಲಿದ್ದಲಿಯ ಖನಿಗಳು ದೊರೆತವೆ. ಇವುಗಳ ಕಾರಖಾನೆಯನ್ನು ತೆಗೆಯಲಿಚ್ಛಿಸುವಂಥವರು ಲಾಯಸೆನ್ಸಿಗಾಗಿ ಅರ್ಜಿಯನ್ನು ಮಾಡಬೇಕೆಂದು, ಅಲ್ಲಿಯ ಕಲೆಕ್ಟರರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ನಾದೀರಖಾನನೇ ಅಮೀರನಾದನು.

—(೦)—

ಕಾಬೂಲ ರಾಜ್ಯದ ಬೇರೆ ಬೇರೆ ಪ್ರಾಂತಗಳ ಪ್ರತಿನಿಧಿಗಳ ಆಗ್ರಹದ ಮೂಲಕ ಜನರಲ ನಾದೀರಖಾನನು ಅಮೀರನಾದನು. ಮತ್ತು ಬಚ್ಚ ಸಾಕುವು ನಾದಿರಖಾನನಿಗೆ ತನ್ನ ಸರ್ವಸ್ವವನ್ನು ಅರ್ಪಿಸಿ, ಶರಣು ಹೋದನೆಂದು ನಿನ್ನೆ ಸಂಜೆ ಕಾಲದಲ್ಲಿ ಬಂದ ವರ್ತಮಾನವಾಗಿದೆ.

ಧಾರವಾಡ–

ಕರ್ಮವೀರದ ಸಂಪಾದಕರಾದ ಶ್ರೀ ದಿವಾಕರರು ಅಪೆಂಡಿಸೈಟಿಸದ ಮೇಲೆ ಮೊನ್ನಿನ ದಿವಸ ಹುಬ್ಬಳ್ಳಿಯ ಸರಕಾರ ಆಸ್ಪತ್ರೆಯಲ್ಲಿ ಅಪರೇಶನ್ ಮಾಡಿಸಿಕೊಂಡರು. ಸುಖವಾಗಿದ್ದಾರೆಂದು ಬರೆಯಲು ಸಂತೋಷ ಪಡುತ್ತೇವೆ.

ಜಾಹಿರಾತು.

ಧಾರವಾಡ ತಾಲೂಕ ಕಾಂಗ್ರೇಸಕಮೀಟಿಯ ಪುನರ್ಘಟನೆ.

ಕಳೆದ ವರ್ಷದಿಂದ ಧಾರವಾಡ ತಾಲೂಕ ಕಾಂಗ್ರೇಸ ಕಮೀಟಿಯನ್ನು ಜಿಲ್ಹಾ ಕಾಂಗ್ರೇಸ ಕಮೀಟಿಯಲ್ಲಿಯೇ ಸಮಾವಿಷ್ಟ ಮಾಡಲಾಗಿತ್ತು. ಆದರೆ ಹೊಸ ಕಾಂಗ್ರೇಸ ಘಟನೆಯಂತೆ ಈ ಕಮೀಟಿಯನ್ನು ಅಗಪೇರ್ಪಡಿಸಿ ಹೊಸದಾಗಿ ಸಂಘಟನೆ ಮಾಡಬೇಕಾಗಿದೆ. ಆದ್ದರಿಂದ ಧಾರವಾಡ ಪಟ್ಟಣ ಹಾಗೂ ತಾಲೂಕಿನಲ್ಲಿಯ ಎಲ್ಲ ಕಾಂಗ್ರೇಸ ಸಭಾಸದರು ತಾ|| ೨೬-೧೦-೨೯ನೇದಿನ ಮಧ್ಯಾಹ್ನ ೩ ಘಂಟೆಗೆ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಕಾರ್ಯಾಲಯದಲ್ಲಿ ತಪ್ಪದೇ ಸೇರಬೇಕಾಗಿ ಬಿನ್ನಹ. ಆಗ ತಾಲೂಕ ಕಾಂಗ್ರೇಸ ಕಮೀಟಿಯ ಅಧಿಕಾರಿಗಳ ಚುನಾವಣೆ ಮುಂತಾದ ಕಾರ್ಯವು ನಡೆಯುವವು. ಎಲ್ಲ ಸಭಾಸದರೂ ಅವಶ್ಯವಾಗಿ ಬರಬೇಕು,

ವೆಂ. ಶ್ರೀ. ಮಿರಜಿ.

ಮ. ಭೀ. ಕಟ್ಟೂರ.

ಧಾರವಾಡ ಕಾರ್ಯದರ್ಶಿಗಳು ಧಾರವಾಡ

೧೮-೧೦-೨೯ ಜಿಲ್ಹಾ ಕಾಂಗ್ರೇಸ ಕಮೀಟಿ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಸೆರಗಿನ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ರೋಗವು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ [illegible] ಬೆಲೆ ಎರಡೇ ರೂಪಾಯಿ, [illegible] ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. [illegible] ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

[illegible]

ನೋಟೀಸು

ಸತ್ತಿ ಕೊಂ ಶಿವಪ್ಪಾ ಹುಲ್ಲೂರ ಸಾ|| ಕೊತಬಾಳ ತಾಲೂಕ ರೋಣ ಇವರಿಗೆ–

ಕೆಳಗೆ ಸಹಿ ಮಾಡಿದವರಿಂದ ತಿಳಿಸುವದೇನಂದರೆ– ನೀನು ನನ್ನ ಲಗ್ನದ ಹೆಂಡತಿ ಇದ್ದು ನಮ್ಮ ನಿಮ್ಮಲ್ಲಿ ಬೇಬನಾವ ಆಗಿ ಕಡಿದು ನಡೆಯುದ್ದಕ್ಕೆ ನನ್ನ ಜೀವಕ್ಕೆ ಅಪಾಯ ಮಾಡುವ ಸಂಭವ ಕಂಡು ಕಲಾಪ ಬಂದು ನಮ್ಮ ಮನೆಯೊಳಗಿನ ದಾಗೀನೆ ಅಂದರೆ ಭಂಗಾರ ಬಳೆ ಎರಡು ತೊಲಿ (೨೪) ವ ಭಂಗಾರದ ಸರಿಗಿ ಒಂದು ತೊಲಿ (೧೮) ಭಂಗಾರದ ಗುಂಡಿನ ಟೀಕಿ ಒಂದು ತೊಲಿ (೬) ಭಂಗಾರದ ತಾಳಿ ಸರಾ ಒಂದು ತೊಲಿ (೧) ಬೆಳ್ಳಿ ತೋಳಬಂದಿ ಎರಡು ತೊಲಿ (೩೦) ಬೆಳ್ಳಿ ಗಟ್ಟ ಒಂದು ತೊಲಿ (೧೨) ವ ಕಿಮ್ಮತ್ತ ರೂಪಾಯಿ (೨೦೦) ರೂಪಾಯಿ ತೊಗೊಂಡು ಹೇಳದ ಕೇಳದೆ ಇದ್ದೂರಲ್ಲಿದ್ದ ತವರ ಮನಿಗೆ ಹೊರಟು ಹೋಗಿರುತ್ತೀದಿ ತಿರಾಯತರ ಮಾರಿಫತ ವಿಚಾರಿಸಿ ನೀನು ನಿನ್ನ ತಂದಿ ಕೂಡಿ ೧ ತಿಂಗಳಲ್ಲಿ ನಗರ ದಾಗೀನೆ ವ ರೂಪಾಯಿ ಕೊಟ್ಟು ಸೋಡಚೀಟಿ ಕೊಡತೇವೆ ಅಂತಾ ಹೇಳಿದಿರಿ ಆ ಪ್ರಕಾರ ಇವರಿಗೂ ಮಾಲು ವ ರೂಪಾಯಿ ಕೊಟ್ಟು ಸೋಡಚೀಟಿ ಕೊಡಲಿಲ್ಲ ಕಾರಣ ಈ ನೋಟೀಸು ಕೊಡುವ ಭಾಗಬಿತ್ತು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ರೂಪಾಯಿ ಕೊಟ್ಟು ಸೋಡಚೀಟಿ ಬರಕೊಡಬೇಕು ಇಲ್ಲದಿದ್ರೆ ಇದೇ ಸೋಡಚೀಟಿ ಅಂತಾ ತಿಳಿಯತಕ್ಕದ್ದು ನಮ್ಮ ನಿಮ್ಮ ಲಗ್ನದ ಸಂಬಂಧಿ ಹಕ್ಕು ಏನೂ ಉಳಿಯೋದಿಲ್ಲಾ ಮಾಲು ವ ರೂಪಾಯಿ ಬಗ್ಗೆ ಅಲಾಹಿದಾ ಇಲಾಜ ನಡಿಸಿ ಒಟ್ಟಿ ಸಹಾ ಹಣಾ ವಸೂಲ ಮಾಡಲಾಗುವದು ಈ ನೋಟೀಸು ವಗೈರೆ ಖರ್ಚ ನಿಮ್ಮ ಮೇಲೆ ತಿಳಿಯೋದು

ತಾ|| ೧೮-೧೦-೨೯

ಸಹಿ– ಶಿವಪ್ಪಾ ಬಿನ್ ಭೀಮಪ್ಪಾ ಹುಲ್ಲೂರ ಸಾ|| ಕೊತಬಾಳ ತಾಲ್ಲೂಕ ರೋಣ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ- ಇಂಗ್ಲಿಷನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾ. ವಿಜಯ ಧಾರವಾಡ.

ಈ ಪತ್ರವನ್ನು ಬಿಂದಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. B. 1443

ನಿತ್ಯ ಪತ್ರ — ವಿಜಯ — ಬೆಲೆ ಅರ್ಧ ಆಣೆ

ಸಂಪಾದಕರು:— [illegible]

ವರ್ಷ ೧೦) ಧಾರವಾಡ ರವಿವಾರ ತಾರೀಖು ೨೦ ನೇ ಅಕ್ಟೋಬರ ೧೯೨೯ (ಸಂಚಿಕೆ [illegible])

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖೆ ಹುಬ್ಬಳ್ಳಿ

ವ್ಯವಹಾರದ ವೇಳೆ:— ಸೋಮವಾರ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ

ಚಾಲೂ ಖಾತೆಗಳು:— ಪುಕ್ಕಟೆಯಾಗಿ ತೆರೆಯಲ್ಪಡುವವು

ಸೇವಿಂಗ್ಸ ಬ್ಯಾಂಕ:— ಬಡ್ಡಿ [illegible] ತೆಗೆಯಲ್ಪಡುವದು. ಬಡ್ಡಿ ದರ ೩ ರೂ.

ಮುದತಿ ಠೇವುಗಳು:— [illegible] ತೆಗೆದುಕೊಳ್ಳಲ್ಪಡುವವು. ಬಡ್ಡಿ ದರ ೩॥ ರೂ.

ಬೇರೆ:— [illegible] ರೂ. ಹತ್ತಿ ಮತ್ತು ಧಾನ್ಯಗಳ ಆಧಾರದ ಮೇಲೆ [illegible] ಸಾಲವನ್ನು ಕೊಡಲ್ಪಡುವದು. [illegible] ಗಳ ವಸೂಲಿಯ [illegible] ಹಿಡಿಯುವದರಲ್ಲಿಯೂ ಅಥವಾ ಕಳಿಸಿಕೊಡುವದರಲ್ಲಿಯೂ ಮತ್ತು ಯೋಗ್ಯ ಕಮಿಶನ್ ತೆಗೆದುಕೊಂಡು ಗಿರಾಕಿಗಳಿಗೆ ಅವರ [illegible] ಮಾಡುವದರಲ್ಲಿಯೂ ಒದಗುವದು. ವ್ಯಾಪಾರೀ ಹುಂಡಿಗಳನ್ನು ಕೊಂಡು ಕೊಳ್ಳುವದರಲ್ಲಿಯೂ ಮತ್ತು ಚೆಕ್ಕು ಹುಂಡಿಗಳನ್ನು ಮಾಡುವದರಲ್ಲಿಯೂ ಒದಗುವದು.

ಬ್ಯಾಂಕಿಗೆ ಸಂಬಂಧಿಸಿದ [illegible] ಎಲ್ಲ [illegible] ಅಧಿಕಾರವಿರುವದು.

ವಿಶೇಷ ಮಾಹಿತಿಯನ್ನು ಪತ್ರದ್ವಾರದಿಂದ ಅಥವಾ ಸಮಕ್ಷಮ [illegible] ತಿಳಿಸಲ್ಪಡುವದು.

ಆರ್. ಎಫ್. [illegible]
ಏಜಂಟರು.

ದಿ ಭಾಗ್ಯಲಕ್ಷ್ಮೀ ಬ್ಯಾಂಕ ಲಿಮಿಟೆಡ, ಧಾರವಾಡ.

[illegible] ಮಂಗಳವಾರಪೇಟೆ, [illegible] ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನಗಳ ಮೇಲೆ ಸಾಲ [illegible] ಕಡಿಮೆ ಬಡ್ಡಿಯ ದರದಿಂದ [illegible] ಸಾಲ ದೊರೆಯುವದು. ಬಡ್ಡಿಯ ದರ [illegible] ಸಮಕ್ಷಮ ತಿಳಕೊಳ್ಳಬೇಕು.

೨ [illegible] ಮಾರಾಟ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು [illegible] ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವು ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ವರೆಗೆ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಇತರ ವ್ಯವಹಾರ ಸಂಬಂಧವಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ [illegible]
ಮ್ಯಾನೇಜಿಂಗ ಏಜಂಟ.

ದಿ ಧಾರವಾಡ [illegible]
[illegible] ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

[illegible] ಕ್ರೆಡಿಟ ಸೊಸಾಯಿಟಿಯು [illegible] ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

[illegible] ಬ್ಯಾಂಕಿನ ವ್ಯವಹಾರದಲ್ಲಿ [illegible]

[illegible] ಬ್ಯಾಂಕಿನ ಎಲ್ಲ [illegible] ಮಾಡಲ್ಪಡುವದು. [illegible] ಜನರಿಗೆ [illegible] ದೊರೆಯುವದು.

ವಿಶೇಷ ಸಂಗತಿಗಳನ್ನು [illegible] ತಿಳಕೊಳ್ಳಬೇಕು.

[illegible]
ಮ್ಯಾನೇಜಿಂಗ ಡಾಯರೆಕ್ಟರ.

[illegible] ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ [illegible] ಇಟ್ಟುಕೊಳ್ಳಲಾಗುವದು. ದರವನ್ನು [illegible] ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು [illegible] ತಿಂಗಳಿಗೆ [illegible]

ಎ. [illegible]
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. [illegible]
೬ ,,	[illegible]
೪ ,,	[illegible]
ವಾರ ಪತ್ರಕ್ಕೆ ೧ ವರ್ಷಕ್ಕೆ	[illegible]

ವಿಶೇಷ ಮಾಹಿತಿ [illegible] ಬರೆದು ಕೇಳಿಕೊಳ್ಳಿರಿ.

ಮ್ಯಾನೇಜರ ವಿಜಯ, ಧಾರವಾಡ.

ವಿಜಯ.

ಧಾರವಾಡ ತಾ ೨೦-೧೦-೨೯ನೇ ಇಸ್ವಿ.

ಶ್ರೀ.

ಆ ವಿಜಯೋ ಶ್ರೀಕಪ್ರಿಯ
ಶ್ರೀ ನಮಾನಾಶಿಯ ನಿಖಿಲ ಸುಖಕ ಶುಭಕರಿಂ ||
ದಂ "ವಿಜಯಂ" ಶ್ರೀಕರಂ |
ನಾ ವಿಹಿತಾಗಳ ವಿನಾಶವಂತ್ರವು ಸಾಜು ||೧||

ಅಕ್ಷರದಂತೆ ಅಕ್ಷರ ಗುರ್ತಿಸುವ ಪಂಡಿತರು.

—)o(—

ಇದು ಇಂಥವನದೇ ಕೈಬರಹವಿರಬೇಕೆಂಬು ಗುರ್ತು ಹಿಡಿಯುವ ತಜ್ಞರು ಬ್ರಿಟಿಶರಾಜ್ಯದಲ್ಲಿರುತ್ತಾರೆ. ಇವರಿಗೆ ಭಾರೀ ಸಂಬಳ ದೊರೆಯುವದು. ಎಲ್ಲಾದರೂ ಸಾಕ್ಷಿಗೆ ಬರಬೇಕಾದರೆ ಇವರ ಪ್ರವಾಸದ ವೆಚ್ಚ, ಭತ್ತೆ ನಿತ್ಯದ ಫೀ ಮುಂತಾದವುಗಳು ಸಾಕ್ಷಿಗೆ ಕರಿಸಿದವನ ಕೊಡಬೇಕು ಮುರಿಯುತ್ತವೆ. ಇವರು ಅಕ್ಷರ ಗುರ್ತಿಸುವದರಿಂದ ದಾವೆಯು ಗೆದಿಯುತ್ತದೆಂಬ ನಿಯಮವೂ ಇಲ್ಲ. ಇವರ ಬಗ್ಗೆ ಒಬ್ಬ ಹೆಸರಾದ ಸಾಹೇಬರು, ಬ್ಯಾರಿಸ್ ಬ್ರ್ಯಾಂಪೆಲ್ಲರೆಂಬರು ಅನ್ನುವದೇನಂದರೆ-

ತಜ್ಞರೆಂಬವರ ಆತ್ಮವು ಶುದ್ಧವಾಗಿರುವದಿಲ್ಲ. ಏಕಂದರೆ ಇವರು ಮೊದಲು ತಮ್ಮೆಡೆಗೆ ಬಂದು, ಅಭಿಪ್ರಾಯ ಪಡಕೊಂಡವರಿಗೆ ಅನುಕೂಲವಾಗಿ ಏಕ ಪಕ್ಷೀಯವಾಗಿ ಜವಾಬು ಕೊಡುತ್ತಾರೆ. ತಮ್ಮನ್ನು ಸಾಕ್ಷಿಗೆ ಕರಿಸಿದವರಿಗೆ ಏನು ಹೇಳಬೇಕಾಗುತ್ತದೆಂಬದು ಅವರಿಗೆ ಮುಂದಾಗಿ ಗೊತ್ತಿರುತ್ತದೆ ಅಷ್ಟೇ ಜವಾಬು ಕೊಡುವರು. ಎಷ್ಟು ಕ್ರಾಸ ಮಾಡಿದರೂ ಅದಕ್ಕೇ ಅಂಟಿಕೊಳ್ಳುತ್ತಾರೆ.

ಹೋದ ವಾರದಲ್ಲಿ ಮುಂಬಯಿ ಹಾಯಕೋರ್ಟಿನ ಸೆಶನದಲ್ಲಿ ನಡೆದ ಒಂದು ವಿಷಪ್ರಯೋಗದ ಪ್ರಕರಣದಲ್ಲಿ ಬ್ಯಾರಿಸ್ಟರ ದಸ್ತೂರರು ಜೂರಿಗಳನ್ನುದ್ದೇಶಿಸಿ ಅಂದದ್ದೇನಂದರೆ-

"ಮತ್ತು ವರ್ಷಗಳ ಹಿಂದೆ ಹಾಯಕೋರ್ಟಿನ ಒಬ್ಬ ಜಡ್ಜರು ಇವರ ವಿಷಯಿಸಿ ಮೇಲಿನ ನಿರೀಕ್ಷಿಸಿದ್ದರಿಂದ ಇವರು ಈ ವರ್ಯಂತರ ಅಪ್ರಸ್ತುತರಾಗಿದ್ದರು. ಈ ತಜ್ಞರೆಂಬವರು ನವಾಬ ಘಂಟತರೂ, ಉಪದ್ರವಿಗಳೂ ಆಗಿದ್ದಾರೆಂದು ಜಡ್ಜರು ಸ್ಪಷ್ಟವಾದ ಅಭಿಪ್ರಾಯಪಟ್ಟಿದ್ದಾರೆ"

ತಜ್ಞರೆಂಬವರನ್ನು ಸಾಕ್ಷಿಗೆ ಕರಿಸುವಂಥವರಿಗೆ ಅವರ ನಿಜಸ್ಥಿತಿಯು ತಿಳಿಯಬೇಕೆಂದೂ, ನ್ಯಾಯಕೋರ್ಟುಗಳಲ್ಲಿ ಅವರಿಗೆಷ್ಟು ಮಾನವಿರುತ್ತದೆಂಬದನ್ನು ತೋರಿಸುವದಕ್ಕೂ ಮೇಲಿನ ಅವತರಣತಕ್ಕೊಂಡು ಈ ಲೇಖವನ್ನು ಬರೆದಿರುತ್ತೇವೆ.

ಮೈಸೂರಲ್ಲಿ ಪೆನಶನದ ಮೇಲೆ ದಿವಾಣಿ ವಾರಂಟು.

— (o) —

ಮೈಸೂರ ರಾಜ್ಯದಲ್ಲಿ ಪೆನಶನರರ ಪೆನಶನದ ಮೇಲೆ ದಿವಾಣಿ ಕೋರ್ಟಿನ ಹುಕುಮನಾಮೆಯು ನಡೆಯುವದಿಲ್ಲ. ಪೆನಶನರರು ಸಂಪಾದಿಸುವ ಸ್ಥಾವರಾಸ್ತಿಯನ್ನು ಕೆಲವರಾಕುತ್ತಿರುವಾಗ ಹೆಂಡರು ಮಕ್ಕಳು ಬಂಧು ಬಳಗದವರು ಇವರೇ ಮೊದಲಾದವರ ಹೆಸರಿನಿಂದ ಮಾಡುವರು. ಇವನ್ನು ಸಂಪಾದಿಸುವದಕ್ಕಾಗಿ ಸಾಲಮಾತ್ರ ಸ್ವಂತದ ಹೊಣೆಗಾರಿಕೆಯಿಂದ ಮಾಡುವರು. ಪೆನಶನ ತಕ್ಕೊಂಡರೆಂದರೆ- ಸಾಲಗಾರರ ಆಟವು ಪೆನಶನದ ಮೇಲೆ ನಡೆಯುವದಿಲ್ಲ. ಏಕೆಂದರೆ- ಇದು ಇವರ ಉಪಜೀವನಕ್ಕಾಗಿರುತ್ತದೆ. ಹೀಗಾಗಿ ಸಾಹುಕಾರರು ಗಂಟು ಕಳಕೊಳ್ಳುವರು. ಇಂಥ ಉದಾಹರಣೆಗಳು ಆಗಾಗ್ಗೆ ಸಂಭವಿಸುತ್ತಿರುವದರಿಂದ, ಪೆನಶನದ ಮೇಲೂ ದಿವಾಣಿ ಕೋರ್ಟಿನ ಹುಕುಮನಾಮೆಯು ನಡೆಯಬೇಕೆಂದು ಶ್ರೀ ನೀಲಗಿರಿ ಸಂಜೀವಯ್ಯನವರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಒಂದು ಬಿಲ್ಲು ತಂದರು. ನಾನ್ ಅಫಿಸಿಯಲ್ಲರು ಆ ರಾಜ್ಯದಲ್ಲಿ ಖಾಸಗಿಯಾಗಿ ಬಿಲ್ಲು ತಂದದ್ದು ಇದೇ ಮೊದಲು. ಸರಕಾರದವರು ಬಿಲ್ಲನ್ನು ವಿರೋಧಿಸಿದರೂ, ೧೧೦ ಅನುಕೂಲ, ೭೭ ಪ್ರತಿಕೂಲ ಮತಗಳಿಂದ ಬಿಲ್ಲು ಪಾಸಾಯಿತು.

ಕಾಯದೆಭಂಗದ ಪೂರ್ವ ಸಿದ್ಧತೆ.

—(o)—

ಜನವರಿ ತಿಂಗಳು ಸಮೀಪ ಹರಿಯುವದರೊಳಗಾಗಿ ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯ ಕೊಡದಿದ್ದರೆ- ದೇಶದ ತುಂಬ ಕಾಯದೆ ಭಂಗದ ಬೇಗೆಯನ್ನೆಬ್ಬಿಸುವೆವೆಂದು ಮಹಾತ್ಮರು ಡಂಗುರ ಸಾರಿಸಿದ ಪ್ರಕಾರ ಕಾಯದೆ ಭಂಗಕ್ಕೆ ಮುಂದಾಗಿ ಜನಸಹಾಯವನ್ನು ಸಿದ್ಧಪಡಿಸುವ ಕಾರ್ಯವನ್ನು ಶ್ರೀ. ಸುಭಾಷಚಂದ್ರ ಬೋಸರು ಈಗಿಂದಲೇ ಪ್ರಾರಂಭಮಾಡಿದ್ದಾರೆ. ಬ್ಯಾಂಕಿಸ-ಲದಲ್ಲಿ ಇವರ ಉಪನ್ಯಾಸವಾಯಿತು. ನಾಡಿನ ಕರೆಗೆ ಎಷ್ಟು ತರುಣರು ಮುಂಬರಿದು, ಆತ್ಮಾಹುತಿ ಕೊಡಲು ಸಿದ್ಧರಿರುವಿರೆಂದು ಇವರು ಹಾಕಿದ ಪ್ರಶ್ನೆಗೆ ಸಿದ್ಧರವೆಂದು ಏನೂರು ಜನರು ಸದ್ದು ಹೊಡೆದು ನಿಂತರು. ಪುರುಷರಂತೆ ಅನೇಕ ಸ್ತ್ರೀಯರೂ ಸೇವಾ ನಿಯಮ ಆಳಾಗಲು ಉತ್ಸುಕತೆ ತೋರಿಸಿದ್ದಾರೆ. ಕಾಂಗ್ರೆಸ ಸೇರುವ ಮುಂಚಿತವಾಗಿಯೇ ಬೋಸರು ಬಂಗಾಲದ ತುಂಬ ಸ್ತ್ರೀ ಪುರುಷ ಸ್ವಯಂಸೇವಕರ ದೊಡ್ಡ ಪಡೆಯನ್ನೇ ಕಟ್ಟಿ ಬೇರೆ ಇಲಾಖೆಗಳಿಗೆ ಮಾದರಿಯಾಗಿ ತೋರುವರು. ಭಾಪು! ಸುಭಾಷರೇ ಭಾಪು!!

ಕುಡಚಿಯಲ್ಲಿ ಮುಸಲಮಾನರ ಹಾವಳಿಯು.

ಜೈನರ ನಿಷೇಧವು.

—)o(—

ಕಳೆದ ಮೋಹರಮ ಹಬ್ಬದಲ್ಲಿ ಕುಡಚಿಯಲ್ಲಿ ಮುಸಲಮಾನರು ಜೈನರ ದೇವಾಲಯಗಳಲ್ಲಿ ಹೊಕ್ಕು ಮೂರ್ತಿಗಳನ್ನು ಭಂಗ ಪಡಿಸಿದರಷ್ಟೆ; ಈ ಕೃತ್ಯ ಮಾಡಿದವರನ್ನು ಹಿಡಿದು, ಸರಕಾರವು ಶಿಕ್ಷಿಸಲಿಲ್ಲ. ಸರಕಾರವು ಈ ವಿಷಯವಾಗಿ ತೀರ ದುರ್ಲಕ್ಷ್ಯ ಮಾಡಿರುತ್ತದೆಂದು ಮುಂಬಯಿಯ ಜೈನರ ತಿಳುವಳಿಕೆಯು ಆದ್ದರಿಂದ ಮುಸಲಮಾನರ ಕೃತ್ಯ ನಿಷೇಧಿಸಲಿಕ್ಕೂ, ಸರಕಾರವನ್ನು ಎಚ್ಚರಿಸಲಿಕ್ಕೂ ಶ್ರೀ. ಜಮನಾದಾಸ ಮೆಹ್ತಾ ಇವರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆ ಕೂಡಿಸಿದರು. ಮತ್ತು ಈ ಬಗ್ಗೆ ಅವಶ್ಯ ಉಪಾಯ ಕೈಕೊಂಡು ಯೋಗ್ಯ ಕರ್ತವ್ಯ ಮಾಡಲು- ಶ್ರೀ ಜಮನಾದಾಸ ಮುಕಾದಮ, ರತನಚಂದ ಚುನಿಲಾಲ, ದೀಪಚಂದ ಭಾಯಿಚಂದ ಮತ್ತು ಬಾಗುಲ ಈ ನಾಲ್ವರದೊಂದು ಕಮೀಟಿ ನೇಮಿಸಿದ್ದಾರೆ.

ಇಬ್ಬರು ಹೆಂಗಸರಿಗೆ ಗಲ್ಲಿನ ಶಿಕ್ಷೆ.

——(o) ——

ಸಾತಾರಾ ಜಿಲ್ಹೆಗೆ ಸೇರಿದ ಕೊಂಡಬಾ ಎಂಬ ಗ್ರಾಮದಲ್ಲಿದ್ದ ದಂಡಿನ ಖಾತೆಯ ಪೆನಶನದಾರನಾದ ತುಕಾರಾಮ ಗುಜ್ಜರನೆಂಬವನನ್ನು ಅವನ ಹೆಂಡತಿ ಜೀಜಾ ಮತ್ತು ಇನ್ನಿಬ್ಬರು ಹೆಂಗಸರು ಸೇರಿ ಕೊಂದರೆಂಬ ಆಪಾದನದ ವಿಚಾರಣೆಯು ಸಾತಾರಾ ಸೆಶನ ಕೋರ್ಟಿನಲ್ಲಾಗಿ, ಜೀಜಾ ಮತ್ತು ಇನ್ನೊಬ್ಬ ಹೆಂಗಸಿಗೆ ಗಲ್ಲು ಮತ್ತು ಮೂರನೆಯವಳಿಗೆ ಕರೇ ಪಾನಿನ ಶಿಕ್ಷೆಯಾಯಿತು. ಇದರ ಮೇಲೆ ಹಾಯಕೋರ್ಟಿಗೆ ಅಪೀಲು ಮಾಡಿದರು. ಅಪೀಲಿನಲ್ಲಿ ಶಿಕ್ಷೆಯು ಕಾಯಮವಾಯಿತು.

ರಾವಸಾಹೇಬ ಪಳಿಕಟ್ಟಿಯವರು ಬ್ರಾಹ್ಮಣೇತರರಿಗೆ ಕೊಟ್ಟ ಸರ್ಟಿಫಿಕೇಟು.

ಬ್ರಾಹ್ಮಣೇತರರೆಂದರೆ ಹಿಂದುಳಿದವರೆಂದು ಸರ್ವಸಾಧಾರಣವಾಗಿ ಹೇಳಬಹುದು. ಬ್ರಾಹ್ಮಣೇತರ ಪಕ್ಷವೆಂದರೆ ಹಿಂದುಳಿದವರ ಪಕ್ಷವನ್ನು ವಹಿಸಿ ಕೆಲಸ ಮಾಡತಕ್ಕ ಮಂಡಲವೆಂದು ಸಹಜವಾಗಿ ಸಿದ್ಧವಾಗುತ್ತದೆ. ಈ ಪಕ್ಷದ ಚಳವಳಿಯ ಮೂಲಕ ಕೆಲಕಾಲ ಬಹುಜನ ಸಮಾಜದಲ್ಲಿ ಜಾಗ್ರತೆಯುಂಟಾಗಲು ಕಾರಣವಾಯಿತು. ಆದರೆ ಇತ್ತಿತ್ತ ಈ ಪಕ್ಷದಿಂದ ಕಾರ್ಯವು ಎಷ್ಟು ಆಗಬೇಕೋ ಅಷ್ಟು ಆಗದೆ ಇರುವದು ದುರ್ದೈವದ ಸಂಗತಿಯಾಗಿದೆ. ಹಿಂದುಳಿದವರಲ್ಲಿ ಶಿಕ್ಷಣ ಪ್ರಸಾರಮಾಡುವದೂ, ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವದೂ, ರಾಜಕೀಯ ವಿಷಯದಲ್ಲಿ ಬಹುಜನ ಸಮಾಜದಲ್ಲಿ ತಿಳುವಳಿಕೆಯನ್ನು ಹುಟ್ಟಿಸುವದೂ ಅವರಿಗೆ ಸಿಗತಕ್ಕ ಹಕ್ಕುಗಳನ್ನು ದೊರಕಿಸಿಕೊಳ್ಳಲಿಕ್ಕೆ ಕಣ್ಣಾಗಿಡುವದೂ ಇವುಗಳೇ ಈ ಪಕ್ಷವು ಮಾಡತಕ್ಕ ಮುಖ್ಯವಾದ ಕೆಲಸಗಳಾಗಿವೆ. ಆದರೆ ಈ ಮೂಲೋದ್ದೇಶಗಳು ಒಂದೆಡೆಗುಳಿದು ನಮ್ಮವರೊಬ್ಬರು ಇಂಥ ಅಧಿಕಾರ ಸ್ಥಾನದಲ್ಲಿರಲಿ, ನಮ್ಮವರು ಸರಕಾರಿ ನೌಕರಿಯಲ್ಲಿ ಸೇರಲಿ ಇಷ್ಟೇ ಉದ್ದೇಶವನ್ನು ಹಿಡಿದುಕೊಂಡಿರುವದರಿಂದ ಸಮಾಜದ ಉದಾತ್ತ ಸುಧಾರಣೆಯ ಕ್ರಮದ ಕಡೆಗೆ ಅತ್ಯಂತ ದುರ್ಲಕ್ಷ್ಯವಾಗಹತ್ತಿರುತ್ತದೆ. ಇದರಿಂದ ವ್ಯಕ್ತಿಯ ಕಲಹಗಳೂ ಮಾತ್ಸರ್ಯಭಾವವೂ ಮಾತ್ರ ಸಮಾಜದಲ್ಲಿ ಹೆಚ್ಚೆಚ್ಚು ರೂಢವಾಗುತ್ತ ಹೋಗಿ ಈ ಪಕ್ಷವೇ ನಾಶವಾಗುವ ಸ್ಥಿತಿಯು ಬಂದೊದಗಿದೆ.

ಬ್ರಾಹ್ಮಣೇತರರು ಕೌನ್ಸಿಲಿನಲ್ಲಿ ಸೇರುವದಕ್ಕೂ ಸರಕಾರಿ ಉದ್ಯೋಗದಲ್ಲಿ ತೊಡಗುವದಕ್ಕೂ ನಮ್ಮದು ಯಾವ ತರಹದ ಅಡ್ಡಿಯು ಇರುವದಿಲ್ಲ. ಆದರೆ ಅವರು ಅಲ್ಲಿ ಹೋಗಿ ಒಂದು ಉಚ್ಚ ಕಾರ್ಯಕ್ರಮವನ್ನು ತಮ್ಮೆದುರಿಗೆ ಇಟ್ಟುಕೊಂಡು ನಡೆಸಲೆಂಬುದೇ ನಮ್ಮ ಉದ್ದೇಶವಾಗಿದೆ. ಯಾವದೊಂದು ಪದವಿಯನ್ನು ದೊರಕಿಸುವದು ಸುಲಭವಾಗಿದ್ದರೂ ಅದನ್ನು ತಗೆದುಕೊಂಡು, ಅದರ ಜವಾಬುದಾರಿಯನ್ನು ಅರಿತುಕೊಂಡು ಕೆಲಸ ಮಾಡುವದು ಬಹು ಜಾಣತನದ ಕೆಲಸವಿರುತ್ತದೆ. ಇದನ್ನು ನಮ್ಮ ಹಿಂದುಳಿದ ಬ್ರಾಹ್ಮಣೇತರ ಬಂಧುಗಳು ಮಾಡದಿರುವದಕ್ಕಾಗಿ ವಿಷಾದಿಸಬೇಕಾಗಿದೆ.

ಕೌನ್ಸಿಲುಗಳಲ್ಲಿ ಈ ಐದಾರು ವರುಷಗಳಲ್ಲಿ ಬ್ರಾಹ್ಮಣೇತರ ಪ್ರಮುಖರು ಮಾಡಿದ ಕೆಲಸಗಳನ್ನು ನೋಡಿದರೆ ಅವು ಸಮಾಧಾನಕರವಾಗಿಲ್ಲ. ಕರ್ನಾಟಕ ಏಕೀಕರಣದಿಂದ ತಮ್ಮ ನಾಡಿಗೆ ಲಾಭಕರವಾಗುವದೆಂಬುದು ತಿಳಿದಿದ್ದರೂ ಅದರ ಬಗ್ಗೆ ಅವರು ಎಷ್ಟು ಚಳವಳಿ ನಡಿಸಬೇಕೋ ಅಷ್ಟು ಚಳವಳಿಯನ್ನು ನಡೆಸಿರುವದಿಲ್ಲ. ವಿದ್ಯಾವಿಷಯಕ ವಿಷಯ. ಹೀಗಾಗಿ ಬ್ರಾಹ್ಮಣೇತರಗಳು ಕುಂಠಿತವಾಗಿವೆ. ಹಿಂದುಳಿದ ಸಮಾಜಗಳ ಪ್ರಮುಖರು ಮಂತ್ರಿಮಂಡಲವನ್ನು ಸೇರಿದ್ದರೂ ಅವರಿಂದ ಈ ವಿಷಯದಲ್ಲಿ ಯಾವ ಕಾರ್ಯಗಳಾಗಲಿಲ್ಲ. ಕೌನ್ಸಿಲಿನಲ್ಲಿಯ ಬ್ರಾಹ್ಮಣೇತರ ಸಭಾಸದರು ಒಕ್ಕಟ್ಟಿನಿಂದ ನಡೆದು ಅವರು ಸರಕಾರದ ಮೇಲೆ ಈ [illegible] ಯಾವ ಒತ್ತಾಯವನ್ನು ಮಾಡಬೇಕೋ [illegible] ಮಾಡಲು ಅವರು ಸಮರ್ಥರಾಗಲಿಲ್ಲ. [illegible] ಸರಕಾರೀ [illegible] ಮಿನೇಶನ್ನಗಳ [illegible] ಆಗಿ ಅಧಿಕಾರಗಳ ಕೋಪಕ್ಕೆ ಎಲ್ಲಿ ಒಳಗಾಗ [illegible] ಎಂಬ [illegible] ಯಿಂದ ಸರಕಾರವನ್ನು [illegible] ಅವರು [illegible] ದ್ವಾರೆ ಪ್ರತಿಜ್ಞೆಯು [illegible] ವಿಷಯು ಅಧಿಕಾರಸ್ಥಾನಗಳನ್ನು [illegible] ತದ ಬಲದಿಂದ ಸಂಪಾದಿಸಿಕೊ [illegible] ದ ತರಹ ಮತ್ತು ಅದರ ಯೋಗ್ಯತೆಯ [illegible] ಸಲಿಕ್ಕೆ ಇವರು ಯಾವ ಉಪಾಯಗಳನ್ನು ಯೋಜಿಸಿದ್ದು ಕಂಡುಬರಲಿಲ್ಲ. ಕೇವಲ ಅಷ್ಟ ಪ್ರತಿಷ್ಠೆಗಾಗಿ ಮಾಡುವ ಇವರ ಪ್ರ [illegible] ತ್ನಗಳಿಗೆ ಮಾತ್ರ ಯಾವ ಕೊರತೆ ಇಲ್ಲ. ಇದರಿಂದ ಹಿಂದುಳಿದ ಸಮಾಜಗಳು ಮುಂದಾಗುವದನ್ನು ಬಿಟ್ಟು ತಿರುಗಿ ರಸಾತಳವನ್ನೇ ಹೊಂದುವದರಲ್ಲಿ ಯಾವ ಸಂಶಯವಿಲ್ಲ.

ಬ್ರಾಹ್ಮಣೇತರರೆಂದರೆ ಯಾವಾಗಲೂ ಬ್ರಾಹ್ಮಣ ವಿರುದ್ಧ ಚಳವಳಿ ಮಾಡತಕ್ಕ ಒಂದು ಸಂಘವಲ್ಲ ಇದು ಅಶಕ್ಯವು. ಒಂದು ವೇಳೆ ಪ್ರಯತ್ನಿಸಿದರೆ ಇದು ದೇಶಕ್ಕೆ ಅಹಿತಕರವು. ನಾಡಿಗೆ ಹಿತಕರವಿದ್ದ ಪ್ರಸಂಗಗಳಲ್ಲಿ ಎಲ್ಲರೂ ಕೂಡಿ ಕೆಲಸಮಾಡಬೇಕಾಗಿರುತ್ತದೆ. ಅದ್ದರಿಂದ ಈಗಿನ ವಿಷಮ ವಾತಾವರಣದಲ್ಲಿ ಬಹು ಎಚ್ಚರಿಕೆಯಿಂದ ಬ್ರಾಹ್ಮಣೇತರ ಮುಖಂಡರು ಕೆಲಸಮಾಡಿದಾಗಲೇ ಹಿಂದುಳಿದ ಸಮಾಜಗಳ ಉನ್ನತಿಯಾಗಿ ಅದರಿಂದ ದೇಶಕ್ಕೆ ಹಿತವಾಗುವದು.

ಈ ಎಲ್ಲ ವಿಷಯಗಳನ್ನು ಲಕ್ಷ್ಯಕ್ಕೆ ತಂದು ನಮ್ಮ ಇಲಾಖೆಯ ಬ್ರಾಹ್ಮಣೇತರ ಮುಖಂಡರು ಪ್ರಯತ್ನಿಸಲೆಂಬುದು ನಮ್ಮ ಅಪೇಕ್ಷೆಯಿದ್ದು. ಕರ್ನಾಟಕದಲ್ಲಿಯಂತೂ ಅವರ ಸ್ಥಿತಿಯು ತಾಳಗೆಟ್ಟು ಹೋಗಿದೆ. ಹಿಂದುಳಿದ ಸಮಾಜಗಳು ಯೋಗ್ಯರನ್ನು ತಮ್ಮ ಮಹತ್ವದ ಸಂಸ್ಥೆಗಳಲ್ಲಿ ಸೇರಿಸಿಕೊಳ್ಳದ್ದೇ ಈ ಸ್ಥಿತಿಗೆ ಕಾರಣವು. ಸಮಾಜದಲ್ಲಿ ಮುಂದೆ ಮಾಡಿಟ್ಟವರು ಕೇವಲ ಸ್ವಾರ್ಥ, ದುರಭಿಮಾನ, ದುರಹಂಕಾರ, ಅಜಾಗ್ರತೆ ಈ ವರ್ತನೆಗೆ ಒಳಗಾಗಿ ಅತ್ಯಂತ ಹಿನ್ನದಿಸೆಗೆ ಇಳಿದಿದ್ದಾರೆ. ಆದರೆ ಹೆಚ್ಚಿನ ವಿಚಾರದ ಹೊಸ ಜನರು ಮುಂದೆ ಬಂದ ಹೊರತು ಈ ಸ್ಥಿತಿಯು ದೂರಾಗುವದು ಅಸಂಭವವು.

ನವ ಕರ್ನಾಟಕ

ವಿದ್ಯಾರ್ಥಿಗಳಿಗೆ ಭಯಂಕರ ಶಿಕ್ಷೆ.

ಗಲ್ಲು ಮತ್ತು ಕರೇ ನೀರು.

—(೦)—

ಇಟಲಿ ದೇಶದಲ್ಲಿ ಚುನಾವಣೆ ನಡೆದಿತ್ತು. ಸರ್ವಿಯೊದ ಓರ್ವ ವಿದ್ಯಾರ್ಥಿಯು ಹೋಟೆಲದ ಮೇಲೆ ಗುಂಡು ಹಾರಿಸಿದನು. ಈ ಅಪರಾಧಕ್ಕಾಗಿ ಇಟಲಿಯ ಜಡ್ಜರು ಈತನಿಗೆ ಗಲ್ಲಿನ ಶಿಕ್ಷೆಯನ್ನೂ ೧೭ ವರ್ಷದ ನಾಲ್ವರಿಗೆ ೩೦ ವರ್ಷಗಳ ಪರ್ಯಂತರ ಕರೇ ನೀರಿನ ಶಿಕ್ಷೆಯನ್ನೂ ವಿಧಿಸಿದ್ದಾರೆ. ಈ ಅಮಾನುಷ ಶಿಕ್ಷೆಯ ದೆಸೆಯಿಂದ ಸರ್ವಿಯಾ ದೇಶವು ಕಂಪಿಸಿದೆ. ಶಿಕ್ಷೆಯನ್ನು ರದ್ದು ಪಡಿಸಬೇಕೆಂದು ಜಗತ್ತಿನ ತುಂಬ ಪ್ರಚಂಡ ಚಳವಳಿಯು ಪ್ರಾರಂಭವಾಗಬೇಕೆಂದಿದೆ. ಶಿಕ್ಷೆಯು ರಾಕ್ಷಸೀ ತನದ್ದಾಗಿರುತ್ತದೆಂದು ಯಾರಾದರೂ ಹೇಳಬಹುದು.

ಭಗತಸಿಂಗನಿಗೂ ಮ್ಯಾಜಿಸ್ಟ್ರೇಟನಿಗೂ ವಾಗ್ವಾದ.

—೦—

ಭಗತಸಿಂಗ ಮೊದಲಾದವರ ವಿಚಾರಣೆ ನಡೆದಾಗ ಮಧ್ಯಾಹ್ನದಲ್ಲಿ ಇವರಿಗೆ ಇವರ ಮಿತ್ರರಿಂದಲೂ ಮನೆಯವರಿಂದಲೂ ಉಪಹಾರ ಬರುತ್ತಿತ್ತು. ಮ್ಯಾಜಿಸ್ಟ್ರೇಟನಿಗೆ ಯಾವ ಕಲ್ಪನೆ ಹುಟ್ಟಿತೋ? ಅವರು ಆ ಉಪಹಾರವನ್ನು ನಿಲ್ಲಿಸಿದರು. ಅನ್ನದಲ್ಲಿ ವಿಷಬೆರಸಿ, ಇವರನ್ನು ಕೊಲ್ಲಬಹುದೆಂಬ ಸಂಶಯ ಬಂದು, ಮ್ಯಾಜಿಸ್ಟ್ರೇಟರು ಇವರನ್ನು ಉಪವಾಸ ಕೆಡವಬೇಕೆಂದರು. ನಿಮಗೆ ಹಾಗೆ ಸಂಶಯ ಬಂದರೆ ಮೊದಲು ಅನ್ನ ತಂದವನು ಉಣ್ಣುವನು. ಆನಂತರ ನೀವು ಸಿಂತು ನಮಗೆ ನೀಡುವವನ್ನು ನೋಡಿರೆಂದು ಭಗತಸಿಂಗನು ಆಗ್ರಹ ಪಡಿಸಲು ಡಾಕ್ಟರರು ಪರೀಕ್ಷಿಸಿದನಂತರ ಉಪಹಾರ ಕೊಡಬೇಕೆಂದು ಮ್ಯಾಜಿಸ್ಟ್ರೇಟರು ಅಭಿಪ್ರಾಯ ಪಟ್ಟರು. ತಾವು ದುರಾಗ್ರಹಿಯಾದರೆ ಪ್ರ [illegible] ಇವರು ಸತ್ಯಾಗ್ರಹದಿಂದ ಅನ್ನತ್ಯಾಗ ಮಾಡಬಹುದೆಂಬ ಹೆದರಿಕೆಯಿಂದ ಮ್ಯಾಜಿಸ್ಟ್ರೇಟರು ಸೋತು ನಡೆದಿರಬಹುದು.

ಇಂಗ್ಲೆಂಡಿನ ಹೊಳ್ಕರ ಮಹಾರಾಜರು ವಿಲಾಯತಿಯ ಶಿಕ್ಷಣ ಮುಗಿಸಿದನಂತರ ಈ ದೇಶಕ್ಕೆ ಮರಳುತ್ತಾರೆ. ಆರು ತಿಂಗಳತನಕ [illegible] ದೇಶದಲ್ಲಿ ರಾಜ್ಯಕಾರಭಾರದ ಶಿಕ್ಷಣ ಪಡೆಯಲಿಕ್ಕೆ, ರಾಜ್ಯಾಧಿಕಾರವನ್ನು ವಹಿಸುವರು.

(೮) ಕುಲಕರ್ಣಿಯವರು ತಮ್ಮ ಕೆಲಸವನ್ನು ಎಷ್ಟೇ ಸ್ವಚ್ಛತೆಯಿಂದಲೂ, ಪರಿಶ್ರಮದಿಂದಲೂ, ಹುಷಾರಿಯಿಂದಲೂ, ಮಾಡಿದರೂ ಕೂಡ, ಅವರಿಗೆ ಬಡತಿ ಸಿಕ್ಕು ಸರಕಾರದ ಹೆಚ್ಚಿನ ಜಾಗೆಗಳಿಗೆ ಸಿ ಘಾರನಾಗಿ ಹೋಗುವದಿಲ್ಲ. ಆದ್ದರಿಂದ ಹುಷಾರ ಕುಲಕರ್ಣಿಯವರಿಗೆ ಹೆಚ್ಚಿನ ಅಧಿಕಾರ ಸ್ಥಳಗಳು ಸಿಗುವಂತೆ ಸರಕಾರದವರಿಂದ ಕಾಯಿದೆ ಮಾಡಿಸಬೇಕು.

(೯) ಸರಕಾರದ ಎಲ್ಲ ಖಾತೆ ವರೂ ಅವರವರ ವ್ಯವಸಾಯಗಳು ಸುಸೂತ್ರವಾಗಿ ಸಾಗುವದಕ್ಕಾಗಿ ಸ್ವತಂತ್ರ ಕಟ್ಟಡಗಳು (ಕಚೇರಿಗಳು) ಮೇಜು, ಖುರ್ಚಿ, ಕಪಾಟುಗಳು ಇರುವಂತೆ ಕುಲಕರ್ಣಿಯವರಿಗೂ ಸಹ ಅವು ದೊರೆಯುವಂತೆ ಪ್ರಯತ್ನ ಮಾಡಬೇಕು.

(೧೦) ಕುಲಕರ್ಣಿಯವರು ಅಂದರೆ "ಹಳ್ಳಿ ನೌಕರರು" ಎಂದು ಸರಕಾರಿ ಅಧಿಕಾರಿಗಳ ಮತ್ತು ಜನರಲ್ಲಿರುವ ತಪ್ಪು ತಿಳವಳಿಕೆಯನ್ನು ದೂರ ಮಾಡಿಸಿ, ಅವರು "ಗ್ರಾಮಾಧಿಕಾರಿಗಳು" ಇರುವರೆಂಬದನ್ನು ಸಿದ್ಧಮಾಡಬೇಕಾಗಿದೆ.

ಈ ಎಲ್ಲ ಕಾರಣಗಳ ಮೂಲಕ ಒಂದು ಕುಲಕರ್ಣಿಯವರ ಸಂಘದ ಆವಶ್ಯಕತೆಯು ಅತ್ಯಂತ ಜರೂರ ಇರುತ್ತದೆ. ಇದನ್ನು ಸ್ಥಾಪಿಸಲು ಎಲ್ಲರೂ ಪ್ರಯತ್ನಿಸಬೇಕಾಗಿ ಬೇಡುವ,

ತಮ್ಮ

ತವನಪ್ಪಾಜಿ ಲಿಂಗೋ ಕುಲಕರ್ಣಿ

ಕಾಲವಾಡ.

ಕಂಪೋಜಿಟರರು ಬೇಕು.

ಇಂಗ್ಲಿಷ, ಕನ್ನಡ ಮತ್ತು ಮರಾಠಿ ಬಲ್ಲ ಸುಸ್ವಭಾವವುಳ್ಳ, ಅನುಭವಿಕ ಮತ್ತು ಪ್ರಾಮಾಣಿಕ ಕಂಪೋಜಿಟರನು ಬೇಕು ಕೆಲಸದ ಯೋಗ್ಯತೆಯ ಪ್ರಕಾರ ಸಂಬಳ ದೊರೆಯುವದು.

ಬಳವಂತರಾವ ಮಹಿಂದ್ರಕರ,

ಫೋಟೋಗ್ರಾಫರ ಮತ್ತು

ರಬರ ಸ್ಟ್ಯಾಂಪಮೇಕರ

ಕನ್ನಡ ೩ನೇ ನಂ ಶಾಲೆಯ ಹತ್ತಿರ, ಹುಬ್ಬಳ್ಳಿ.

ಸೂಚನೆ

ವಿ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅ[illegible] ವರ್ಷಗಳ ಅನುಭವ!! ಬೆಲೆ ಎರಡೇ [illegible] ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, [illegible] ಮುಂಗಡ ಕಳಿಸತಕ್ಕದ್ದು.

[illegible] — ಡಾ. [illegible] ದೀಕ್ಷಿತ

C/o [illegible] ಧಾರವಾಡ

[illegible] ಜಾಹೀರಾತಿನ [illegible] ಬರೆಯಬೇಕು.

ಜಾಹಿರಾತು

ಧಾರವಾಡ ತಾಲೂಕ ಕಾಂಗ್ರೇಸಕಮೀಟಿಯ ಪುನರ್ಘಟನೆ.

ಕಳೆದ ವರ್ಷದಿಂದ ಧಾರವಾಡ ತಾಲೂಕ ಕಾಂಗ್ರೇಸ ಕಮೀಟಿಯನ್ನು ಜಿಲ್ಲಾ ಕಾಂಗ್ರೇಸ ಕಮೀಟಿಯಲ್ಲಿಯೇ ಸಮಾವಿಷ್ಟ ಮಾಡಲಾಗಿತ್ತು. ಆದರೆ ಹೊಸ ಕಾಂಗ್ರೇಸ ಘಟನೆಯಂತೆ ಈ ಕಮೀಟಿಯನ್ನು ಈಗಬೇರ್ಪಡಿಸಿ ಹೊಸದಾಗಿ ಸಂಘಟನೆ ಮಾಡಬೇಕಾಗಿದೆ. ಆದ್ದರಿಂದ ಧಾರವಾಡ ಪಟ್ಟಣ ಹಾಗೂ ತಾಲೂಕಿನಲ್ಲಿಯ ಎಲ್ಲ ಕಾಂಗ್ರೇಸ ಸಭಾಸದರು ತಾ|| ೨೭-೧೦-೨೫ನೇದಿನ ಮಧ್ಯಾಹ್ನ ೩ಘಂಟೆಗೆ ಪ್ರಾಂತಿಕ ಕಾಂಗ್ರೇಸ ಕಮೀಟಿಯ ಕಾರ್ಯಾಲಯದಲ್ಲಿ ತಪ್ಪದೇ ಸೇರಬೇಕಾಗಿ ಬಿನ್ನಹ ಆಗ ತಾಲೂಕ ಕಾಂಗ್ರೇಸ ಕಮೀಟಿಯ ಅಧಿಕಾರಿಗಳ ಚುನಾವಣೆ ಮುಂತಾದ ಕಾರ್ಯವು ನಡೆಯುವವು. ಎಲ್ಲ ಸಭಾಸದರೂ ಅವಶ್ಯವಾಗಿ ಬರಬೇಕು,

ವೆಂ. ಶ್ರೀ. ಮಿರಜಿ.

ಮ. ಭೀ. ಕಬ್ಬೂರ.

ಧಾರವಾಡ ಕಾರ್ಯದರ್ಶಿಗಳು ಧಾರವಾಡ

೧-೧೦-೨೫ ಜಿಲ್ಲಾ ಕಾಂಗ್ರೇಸ ಕಮೀಟಿ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ. ಇಂಗ್ಲಿಷಸಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾ. ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

—(೦)—

ಅಕ್ಟೋಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಿಪಡಿಸಿದರು.

R. N. B. 14

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:— ಅನಂತಾಚಾರ್ಯ ಬಾಳಾಚಾರ್ಯ ಸಕ್ಕರಿ.

ವರ್ಷ ೧೦) ಧಾರವಾಡ ಸೋಮವಾರ ತಾರೀಖು ೨೧ನೇ ಅಕ್ಟೋಬರ ೧೯೩೯ (ಸಂಚಿಕೆ [illegible]

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ:— ಮುಂಜಾನೆ ೧೦ ರಿಂದ ಮಧ್ಯಾಹ್ನ ೩-೩೦ ರ ವರೆಗೆ ಶನಿವಾರ ಮುಂಜಾನೆ ೧೦ ರಿಂದ ೧ ರ ವರೆಗೆ

ಚಾಲೂ ಖಾತೆಗಳು:— ಪತ ಶಿಲಕಿಗೆ [illegible]

ಸೇವಿಂಗ್ಸ ಬ್ಯಾಂಕು:— [illegible]

ಮುದತಿ ಠೇವುಗಳು:— ಒಂದು ವರ್ಷದ ಮುದ್ದತಿಯಿಂದ ಠೇವು ತೆಗೆದುಕೊಳ್ಳಲ್ಪಡುವದು. [illegible]

೮-೧೧-೨೯ ನೇ ದಿವಸ ರಾತ್ರಿ ನನ್ನನ್ನು ನೀವು ಇಬ್ಬರೂ, ಹಾಗೂ ಬೇರೆ ಗುರುತಿಲ್ಲದ ನಾಲ್ಕಾರು ಜನರೂ ಕೂಡಿ, ನಿಮ್ಮ ಮನೆಗೆ ಕರೆದುಕೊಂಡು ಹೋದಿರಿ. ಮೊದಲಿನ ಗುರುತು ಇರದ ಕಾರಣ ಭಯದ ಪ್ರಯುಕ್ತ ನಾನು ಬಂದೆನು. ಅಲ್ಲಿ ನನ್ನನ್ನು ಹೆದರಿಸಿ, ಬೆದರಿಸಿ, ಹೊಡೆದು ಬಡೆದು ಮಾಡಿ ನನ್ನ ಕಡೆಯಿಂದ ಹಿಂದಿನ ಮಿತಿಯ ತಾರೀಖು ಹಾಕಿ ಎರಡು (ಒಂದು ೮ ನೇ ತಾರೀಖಿನದು ಇರುತ್ತದೆ.) ಕಾಗದಗಳನ್ನು ನಿಮ್ಮ ಮತಲಬು ಸಾಧಿಸುವದಕ್ಕಾಗಿ ಬೇರೆ ಬೇರೆ ಜನರಿಂದ ಬರಿಸಿದ್ದೀರಿ. ಪ್ರಾಮಿಸರಿ ನೋಟುಗಳನ್ನು ಬರೆಯಿಸಿಕೊಂಡಿರುವಿರಿ. ಶಿರದಿಗೆ ಸಹಿ ಮಾಡಿಸಿಕೊಂಡಿರುವಿರಿ. ಯಾವದಕ್ಕೆ ಸಹಿ ಮಾಡಿಸಿರುವಿರಿ. ಒಂದು ಕಾರ್ಡನ್ನು ಸಹ ಬರೆಯಿಸಿಕೊಂಡಿರುವಿರಿ. ನಿರ್ವಾಹವಿಲ್ಲದೆ ಒಬ್ಬಂಟಿಗನಾಗಿ ನಿಮ್ಮ ಬಲಿಯಲ್ಲಿ ಬಿದ್ದುದರಿಂದ ಅಂಥ ನಾನು ಬರಕೊಟ್ಟಿದ್ದೇನೆ. ನಮ್ಮ ನಿಮ್ಮ ಯಾವ ತರದ ವ್ಯವಹಾರವೂ ಆಗಿಲ್ಲ. ಹಿಂದಿನ ಗುರ್ತನ್ನು ಉಪಯೋಗಿಸಿ ನೀವು ನನ್ನನ್ನು ಘಸಾಯಿಸಿರುತ್ತೀರಿ. ಈ ನೋಟೀಸು ಮುಟ್ಟಿದ ೮ ದಿವಸದೊಳಗೆ ನನ್ನಿಂದ ಬರೆಯಿಸಿಕೊಂಡ ಮೇಲ್ಕಂಡ ಕಾಗದಪತ್ರಗಳನ್ನೆಲ್ಲ ನನಗೆ ತಂದುಕೊಡಿರಿ. ತಂದುಕೊಡದಿದ್ದರೆ ಅವು ಪೋಕಳವಿರುವವೆಂದು ತಿಳಿಯಲು ಅಡ್ಡಿ ಇಲ್ಲ. ಹಾಗೂ ೮ ಅವಧಿಯ ವರೆಗೆ ನಿಮ್ಮ ದಾರಿ ನೋಡಿ ನಾನು ೮ ಬಳಿಕ ವಿಶ್ವಾಸಘಾತ ಫಿರ್ಯಾದಿ ಮಾಡುವೆನು. ಅಂದೇ ನಾನು ಫಿರ್ಯಾದಿ ಮಾಡತಕ್ಕವನು. ಕೇವಲ ಸಂಭಾವಿತರ ಮಾತು ಕೇಳಿ ಈ ನೋಟೀಸು ಕೊಟ್ಟಿದ್ದೇನೆ. ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲೆಯೇ ಅದೆ. ಅಂತಾ ಬರಕೊಟ್ಟ ನೋಟೀಸು ತಾ| ೧೪-೧೧-೨೯

ಸಹಿ- ಯಲ್ಲಪ್ಪಾ ಬಿನ್ನ ಯಲ್ಲಪ್ಪಾ ವಡವಿ

ಸುಸಮಯ

—(o)—

ವಿ. ಶ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಿಕೊಳ್ಳಿರಿ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಸ್ವತಃ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ನೀವು ಔಷಧ ಬೇಡುವಾಗ್ಗೆ ಯಾವ ವರ್ತಮಾನಪತ್ರದ ಜಾಹೀರಾತಿನ ಮೇಲಿಂದ ಈ ಬೇಡಿಕೆಯನ್ನು ಮಾಡುವಿರೆಂಬುದನ್ನು ಬರೆಯಬೇಕು.

ನೋಟೀಸಿನ ಉತ್ತರಾ

—(o)—

ಈರಪ್ಪಾ ಮಡಿವಾಳಪ್ಪಾ ಕಂಬಾರ ಸಾ|| ನರೇಂದ್ರ ಇವರಿಗೆ-

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡುವ ಬಸವಣ್ಣೆವ್ವಾ ಕೋಂ ಈರಪ್ಪಾ ಕಂಬಾರ ಈಕೆಯು ನಿನಗೆ ಈ ನೋಟಿಸಿನಿಂದ ಉತ್ತರ ಕೊಡುವದೇನಂದರೆ-

ನೀನು ಧಾರವಾಡ ವಿಜಯ ಪತ್ರದಲ್ಲಿ ತಾ| ೧೧ ನೇ ನವ್ಹಂಬರದ ದಿವಸ ಕೊಟ್ಟ ನೋಟೀಸಿನಲ್ಲಿ ಬರೆದ ಮಜಕೂರ ಸುಳ್ಳು ಅದೆ. ನನ್ನ ಮದ್ವಿಯಾಗಿ ಹದಿನಾರು ವರ್ಷದ ಮೇಲಾಯಿತು ನೆರತು ೧೨ ವರ್ಷವಾಯಿತು. ಅದಿನಿಂದ ನನ್ನ ಗಂಡನು ನನ್ನನ್ನು ಸುರಳೀತವಾಗಿ ಬಾಳವೆ ಮಾಡಗೊಡಲಿಲ್ಲ. ನೀವು ಹಿರಿಯರೆಂಬುವರು ಅವನಿಗೆ ಬುದ್ಧೀ ಹೇಳಲಿಲ್ಲ. ನಡುವೆ ದೈವದವರು ಬಾಳವೆಕ್ಕೆ ಹಚ್ಚುತ್ತಿದ್ದರು. ಆದರೆ ಗಂಡನು ಹೊಡದು ಬಡದು ಮಾಡಿ, ಮನೀ ಬಿಟ್ಟು ಹೊರಗೆ ಹಾಕುವನು. ಇದೇ ಪ್ರಕಾರ ನಡೆಯಿತು. ಈ ಸಾರೆ ನನ್ನನ್ನು ಹೊರಗೆ ಹಾಕುವಾಗ ಬಹಳ ಕೆಟ್ಟರೀತಿಯಿಂದ ಹೊಡೆದಿರಿ. ನಾನು ಹೆಬ್ಬಳ್ಳಿಗೆ ಬಂದೆ, ಯಾದವಾಡಕ್ಕೆ ಹೋಗಿ, ಅಲ್ಲಿಂದ ಹೆಬ್ಬಳ್ಳಿಗೆ ಬಂದೆನು. ಇದು ಎಲ್ಲಾ ದೈವದವರಿಗೆ ಗೊತ್ತುಂಟು. ನಿಮ್ಮ ದಾಗೀನೆಗಳ ಮಜಕೂರ ಅದೇ ಸುಳ್ಳು. ಅವನ್ನು ತಕ್ಕೊಂಡು ಹತ್ತು ವರ್ಷವಾಯಿತು. ನೀವು ಸನಹಕ್ಕಾಗಿ ಥಟಮಕೀ ನೋಟೀಸು ಕೊಟ್ಟಿರುತ್ತೀರಿ. ನೀವು ನನ್ನ ಕೂಡ ಯಾವಾಗಲೂ ಜಲೂ ರೀತಿಯಿಂದ ನಡೆಯುದ್ದರಿಂದ, ಇನ್ನು ಮೇಲೆ ನಿಮ್ಮ ಕೂಡ ಪ್ರಪಂಚ ಮಾಡುವದು ಶಕ್ಯವಿಲ್ಲ. ಕಾರಣ ಈ ನೋಟೀಸು ಕೊಟ್ಟಿರುತ್ತೇನೆ. ನಾನು ಈ ನಂತರ ನಿಮ್ಮ ಉಜುರಿಡದೆ, ಬೇರೆಯವರನ್ನು ಉಡಿಕೆ ಮಾಡಿಕೊಳ್ಳುವೆನು. ಮತ್ತು ಸುರಕ್ಷಿತವಾಗಿ ಬಾಳುವೆವಂತೆಯಾಗಿರುವೆನು. ನನ್ನ ಉಡಿಕೆಯಾದ ನಂತರ ನನ್ನ ಈಗಿನ ಗಂಡನ ಹಾಗು ಆತನ ವ್ಯನೆಹನದ ಹಕ್ಕು ಸಂಬಂಧವು ನನ್ನ ಮೇಲೆ ನಡ್ಡ ಉಳಿಯಲಾರದು. ತಿಳಿಯುವದು. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲದೆ. ಅಂತಾ ಕೊಟ್ಟ ನೋಟಪತ್ರದ ನೋಟೀಸು. ತಾ| ೧೪ ನವ್ಹಂಬರ ೧೯೨೯ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಬಸವಣ್ಣೆವ್ವಾ ಕೋಂ ಈರಪ್ಪಾ ಕಂಬಾರ ಈಕೆಯದು ಇರುತ್ತದೆ.

ಚಂದಾದಾರರಿಗೆ ಸೂಚನೆ

ನವೆಂಬರ ೩೦ರಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಪತ್ರದ ಚಂದಾದಾರರ ಹೆಸರಿಂದ ರು. ೩. ರನ್ನು ಕಳಿಸುವವು. ಚಂದಾದಾರರು ರು. ೩. ಸ್ವೀಕರಿಸಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು ಅಂಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

R. N. B. 1930

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶನಿವಾರ ತಾರೀಖು ೧೬ ನೇ ನವ್ಹೆಂಬರ ೧೯೩೫ (ಸಂಚಿಕೆ ೩೪೯

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ-

ಮಂಗಳವಾರ ಪೇಠ ಜೋಗ ವಕೀಲರ ಮನೆಯಲ್ಲಿ.

ದಾಗೀನೆಗಳ ಪತ್ತೀ ಮೇಲೆ ಸೋಯಿ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು.

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನೀಗಳ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಲಿರುವದು. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ಮತ್ತು ಬೆಳ್ಳೀ ದಾಗೀನೆಗಳ ಮೇಲೆ ಸೋಯಿ ಬಡ್ಡೀ ದರದಿಂದ ಸಾಲ ಕೊಡುವ ವ್ಯವಸ್ಥೆಯುಂಟು. ದಾಗೀನೆ ಪತ್ತೀ ಇಟ್ಟವರು ಮೊದಲನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ ೧೫ ದಿವಸಕೊಮ್ಮೆ ಅಷ್ಟಷ್ಟೇ ರಕಮು ತಂದು ಕೊಟ್ಟರೂ, ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಅಷ್ಟಷ್ಟೇ ರಕಮು ಕೊಡುವದರಿಂದ, ಸಾಲದ ಭಾರ ಕಡಿಮೆಯಾಗಿ, ಬಡ್ಡಿಯು ಕಡಿಮೆಯಾಗುತ್ತಾ ಬರುವದು. ಧಾರವಾಡ ಮುಂತಾದ ಪಟ್ಟಣವಾಸಿಗಳು ಈ ಸೋಯಿಯ ಫಾಯದೆ ತಕ್ಕೊಳ್ಳುತ್ತಿದ್ದಾರೆ. ಆದರೆ ಇದರ ಮಹತ್ವವು ಮತ್ತು ಉಪಯೋಗವು ಹಳ್ಳಿಯ ಜನರಿಗೂ ತಿಳಿಯಲೆಂದು ಈ ಜಾಹೀರಾತನು ಪ್ರಸಿದ್ಧ ಮಾಡಿ, ಮುದ್ದಾಂ ಹಳ್ಳಿಗಳಿಗೆ ಕಳಿಸಿದ್ದೇವೆ. ಹಳ್ಳಿಯಲ್ಲಿ ಬಡ್ಡಿಯ ದರವು ರೂಪಾಯಿಕ್ಕೆ ಮೂರು ಪೈ ಇಂದ ಆರು ಪೈ ವರೆಗೆ ಇರುತ್ತದೆ. ಅದೂ ಒಮ್ಮೆಯಲೆ ಕೊಡಬೇಕಾಗುತ್ತದೆ. ಹೀಗಾಗಿ ಎಷ್ಟೋ ಜನ ಬಡವರಂತೂ ತಮ್ಮ ತೀರುವಂತಹ ದಾಗೀನೆಗಳು ಸಹ ಸಾವಕಾರರ ಅಸಲು ಮತ್ತು ಬಡ್ಡಿಯಲ್ಲಿ ಮುರುಗಡೆಯಾಗಿ ಹೋಗುತ್ತವೆ. ಆ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ದಾಗೀನೆ ಪತ್ತೀ ಇಟ್ಟರೆ ಆಗುವದಿಲ್ಲ. ಏಕಂದರೆ ಸ್ವಲ್ಪ ರಕಮು ಕೊಟ್ಟರೂ ಅದನ್ನು ತಕ್ಕೊಂಡು, ಸಾಲದ ಭಾರವನ್ನು ಕಡಿಮೆಮಾಡುತ್ತಾ ಬರುತ್ತೇವೆ. ಇಂಥ ಸೋಯಿಗಳು ಹಳ್ಳಿಗಳಲ್ಲಿ ದೊರೆಯಲಾರವು. ಆದ್ದರಿಂದ ಹಳ್ಳಿಯಲ್ಲಿ ಸಾಲ ಬೇಕಾದವರು ನಮ್ಮ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ, ಅನುಭವ ಮತ್ತು ಲಾಭ ಪಡೆಯಬೇಕು. ನಮ್ಮ ಬಡ್ಡೀ ದರವು ನೂರು ರೂಪಾಯಿಯ ವರೆಗೆ ಒಂದು ತಿಂಗಳಿಗೆ ಒಂದು ರೂಪಾಯಿಗೆ ಎರಡು ಪೈ ಇರುತ್ತದೆ. ನೂರರ ಮೇಲಿನ ರಕಮಿಗೆ ಬಡ್ಡೀ ದರ ಸಮಕ್ಷಮ ಅಥವಾ ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಗಳ ಜನರು ಶಹರದ ಊರಿಗೆ ಬಂದು ಸಾವಕಾರ ಮೊದಲಾದವರಲ್ಲಿ ಅವರು ಕೇಳಿದಷ್ಟು ಬಡ್ಡೀ ಕರಾರ ಮಾಡಿ ಸಾಲ ತೆಗೆದುಕೊಳ್ಳುವರು. ಮತ್ತು ಮುಂದೆ ಲೆಕ್ಕ ತಿಳಿಯದೆ ಲುಕ್ಸಾನ ಮಾಡಿಕೊಳ್ಳುವರು. ಹೀಗೆ ಬ್ಯಾಂಕಿನಲ್ಲಿ ಮಾತ್ರ ಆಗುವದಿಲ್ಲ. ಹಳ್ಳಿಗಳ ಜನರು ನಮ್ಮಲ್ಲಿ ಒಂದಾವರ್ತಿ ವ್ಯವಹಾರ ಮಾಡಿ ಖಾತ್ರೀ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಪೆಟ್ಟಿಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ ಎಲ್ಲರಕ್ಕಿಂತಲೂ ಸೋಯಿಯಿಂದ ಸಿಗುವವು.

ಕೃಷ್ಣರಾವ ವೆಂಕಟರಾವ ಧಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಠ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಂಸ್ಥೆ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಹಗೀರದಾರ,

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟುಕೊಳುವ ಬಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎಂ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೦-೦
೬ ,,	೬-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ವಿಜಯ ಮ್ಯಾನೇಜರ [illegible] [illegible]ವಾಡ.

ವಿಜಯ.

ಧಾರವಾಡ ತಾ. ೬-೧೧-೨೫ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಪ್ರಿಯು
ಶ್ರೀ ವಸುಮತಿಯು ನರಸಿ ಸುಕೃತಶರತೆಗಳಿಂ ಶ
ದೀ "ವಿಜಯಂ" ಶ್ರೀಕರಪ್ರಿಯ।
ನಾ ವಿಹಿತಂಗಳ ವಿವಾಹವೆನಿಪ್ಪನು ಸ್ವಾಜ್ಞ ||೧||

ಕಾಬೂಲದ ಹೊಸ ರಾಜ್ಯಕಾರಭಾರ.

——(೦)——

, ಜನರಲ ನಾದಿರಖಾನನು ಅಮೀರನಾದಂದಿನಿಂದ ದಿನವೊಂದಕ್ಕೂ ಆ ದೇಶದಲ್ಲಿ ಶಾಂತತೆಯು ನೆಲೆಗೊಳ್ಳಲಾರಂಭಿಸಿದೆ. ದೂರ ದೂರಿನ ಕುಲಗಳ ಜನರು ಬಂದು, ಅಮೀರರ ಹಸ್ತಚುಂಬನಮಾಡಿ ರಾಜನಿಷ್ಠೆಯನ್ನು ಜಾಹೀರ ಮಾಡುತ್ತಿದ್ದಾರೆ. ಅಮಾನುಲ್ಲಾಖಾನರೇ ಅಮೀರರಾಗಬೇಕೆಂದು ಹಿಂದಿನ ಸೈನ್ಯದಲ್ಲಿ ಒಂದು ಪ್ರಕಾರದ ಮನೋಭಾವನೆ ಇತ್ತು. ಅವರು ಸಹ ನಾದಿರಖಾನರ ದಂಡಿನಲ್ಲಿ ಸೇರಿ, ದೇಶದ ಸಂರಕ್ಷತೆಯ ಪಾಲುಗಾರರಾಗುತ್ತಿದ್ದಾರೆ.

ಅಮೀರ ನಾದಿರಖಾನರು ರಾಜ್ಯದಾಢಳಿತೆಯಲ್ಲಿ ಹೊಸ ಸುಧಾರಣೆ ಮಾಡಿ, ಒಂದು ದೊಡ್ಡ ಮಂತ್ರಿಮಂಡಲವನ್ನು ನಿರ್ಮಿಸಿದ್ದಾರೆ. ತಾವು ಕಾಬೂಲದಲ್ಲಿಲ್ಲದಾಗ ಸಹ ದೊರೆತನ ಸಾಗುವಂತೆ ಕೌನ್ಸಿಲದ ಅಧ್ಯಕ್ಷರನ್ನೂ ಗೊತ್ತು ಮಾಡಿದ್ದಾರೆ. ಇವರೆಲ್ಲರೂ ಮುಸಲಮಾನರೇ.

ಕಾಬೂಲ ರಾಜ್ಯದಲ್ಲಿ ಹಿಂದೂ ಜನರ ದೊಡ್ಡ ವಸತಿಯುಂಟು. ಕಾಬೂಲ ಕಂದಹಾರ, ಹಿರಾತ, ಜಲಾಲಾಬಾದಗಳಲ್ಲಿ ಇವರು ದೊಡ್ಡ ವರ್ತಕರೂ, ಉದ್ಯಮಿದಾರರೂ ಆಗಿದ್ದಾರೆ. ಇವರು ಎಲ್ಲಿಯೂ ಬಹುಸಂಖ್ಯವನ್ನು ಅಮೀರನಾಗಿ ಭಾವಿಸಿಲ್ಲ. ಕಂದಹಾರದಲ್ಲಂತೂ, ಅಮಾನುಲ್ಲಾಖಾನನು ಬಚ್ಚಾಸಾಕಾವಿನ ಮೇಲೆ ದಂಡೆತ್ತಿ ಹೋಗುವಾಗ, ಆತನ ಜಯಜಯಕಾರ ಮಾಡಿದರು. ಅಲ್ಲಿಯ ಹಿಂದೂ ಜನರು ಮುಂದಿನಗಾರನಿಗೆ ಸಂದಾಗಿ, ಸ್ಥಿರವಾಂತಾಗುವಂಥ ರಾಜ್ಯವ್ಯವಸ್ಥೆಗೇ ಅನುಕೂಲರಾದರು. ಅದರೇನು! ಇವರಲ್ಲಿ ಒಬ್ಬನನ್ನಾದರೂ ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಲಿಲ್ಲ? ಕಾಬೂಲ ರಾಜ್ಯದಲ್ಲಿ ಜಾತಿಭೇದವಿಲ್ಲೆಂದು ಹೇಳುವ ಜನರು ನಾದಿರಖಾನರಿಗೆ ಯಾರಾದರೂ ಮಂತ್ರಿಪದದ ಬಗ್ಗೆ ಪ್ರಶ್ನೆ ಮಾ

ಕಾಬೂಲ ರಾಜ್ಯದೊಳಗಿನ ಹೊಸ ಸುಧಾರಣೆಗಳು.

——(೦)——

೧ ಪಾರ್ಲಮೆಂಟ ಪದ್ಧತಿಯಿಂದ ದೇಶದ ಕುಂಬ ಚುನಾವಣೆಯಾಗುವದು. ಧರ್ಮಭೇದ-ಮತಭೇದ ಮಾಡದೆ, ಎಲ್ಲರಿಗೂ, ಚುನಾವಣೆಯು ಹಕ್ಕು ದೊರೆಯುವದು.

೨ ಚುನಾಯಿಸಲ್ಪಟ್ಟ ಕೆಂಬರರು ಮಂತ್ರಿಮಂಡಲವನ್ನು ಸ್ಥಾಪಿಸತಕ್ಕದ್ದು. ಮಂತ್ರಿಗಳು ರಾಜ್ಯಕಾರಭಾರದ ವಿಷಯವಾಗಿ ಅಮೀರರಿಗೆ ಜವಾಬದಾರರಾಗತಕ್ಕದ್ದು.

೩ ಪ್ರಾಮಾಣಿಕತನದಿಂದ ಕಾರಭಾರ ಮಾಡುವೆವು. ಲಂಚ ರುಷವತ್ತು ತಕ್ಕೊಳ್ಳುವದಿಲ್ಲೆಂದು ಚಿಕ್ಕ ದೊಡ್ಡ ಕಾಮದಾರರು ಕುರಾಣ ಹಿಡಿದು ಸುನ್ನಿಸಾಂಪ್ರದಾಯ ಪ್ರಕಾರ ಪ್ರತಿಜ್ಞೆ ಮಾಡತಕ್ಕದ್ದು.

೪ ಯಾರೂ ಸರೆ ಕುಡಿಯಬಾರದು; ಮಾರಬಾರದು. ಕುಡಿದವರಿಗೆ ಶರಾಯತ ಶಾಸ್ತ್ರಪ್ರಕಾರ ಶಿಕ್ಷೆ ವಿಧಿಸಲ್ಪಡುವದು. ಸರೆ ಮಾರುವಂಥವರಿಗೆ ಕಠಿಣ ಶಿಕ್ಷೆ ಮಾಡಿ, ಅಂಗಡಿಗಳನ್ನು ಜಪ್ತ ಮಾಡಲಾಗುವದು.

೫ ಯಾವನಾದರು ಕಾಮದಾರನು ಕುಡಿಯುವನೆಂದು ಕಂಡು ಬಂದರೆ, ಆಗಿಂದಾಗ ಅವನಿಸಿ ನೋಡದೆ ಬರತರ್ಫ ಮಾಡಲ್ಪಡುವನು.

೬ ವರ್ತಮಾನ ಕಾಲದ ಸುಧಾರಿಸಿದ ಪದ್ಧತಿ ಪ್ರಕಾರ ದಂಡು ಇಡಲ್ಪಡುವದು. ಮತ್ತು ಅದಕ್ಕೆ ಆ ತರದ ಶಿಕ್ಷಣ ಕೊಡಲ್ಪಡುವದು. ಕಾಮದಾರರ ದೆಸೆಯಿಂದ ಕಾಬೂಲದಲ್ಲಿ ಒಂದು ಲಷ್ಕರೀ ಕಾಲೇಜ ಸ್ಥಾಪಿಸಲ್ಪಡುವದು.

೭ ದೇಶದಲ್ಲಿ ರೇಲ್ವೆ ಮಾಡಲ್ಪಡುವದು. ನದಿಗಳಿಗೆ ಕಾಲಿವೆ ತೋಡಲ್ಪಡುವದು. ವ್ಯಾಪಾರ ಉನ್ನತಿಗೆ ಅನುಕೂಲವಾಗುವಂತೆ ರಾಜಮಾರ್ಗಗಳ ವ್ಯವಸ್ಥೆ ಮಾಡಲ್ಪಡುವದು.

೮ ಪರರಾಷ್ಟ್ರಗಳ ಸಂಬಂಧವು ಅಮಾನುಲ್ಲಾಖಾನರ ಕಾಲದಲ್ಲಿರುವಂತೆಯೇ ಇರುವದು. ಈಗ ಸಂಬಂಧವಿಲ್ಲದ ಯಾವದೊಂದು ದೇಶವು ಅಫಗಾಣಿಸ್ಥಾನದ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ನಡೆಯುವದಾದರೆ, ಅದರ ಕೂಡ ಹೊಸದಾಗಿ ಸಂಬಂಧ ಮಾಡಲ್ಪಡುವದು.

೯ ಅಫಗಾಣಿಸ್ಥಾನವು ಅಭಿವೃದ್ಧಿ ಹೊಂದಿ, ಸ್ವಾವಲಂಬಿಯಾಗುವಂಥ ಎಲ್ಲ ಉಪಾಯುಗಳೂ ಮಾಡಲ್ಪಡುವವು.

——

ವಸಾಹಾತಿನ ಸ್ವರಾಜ್ಯದ ವಿರುದ್ಧ ಸೇನಗುಪ್ತರ ಸಂದೇಶವು.

ದೇಶಬಂಧು ದಾಸರ ತರುವಾಯ ಬಂಗಾಲದ ರಾಜಕೀಯ ಮುಂದಾಳುವಾದ ಶ್ರೀ. ಸೆನಗುಪ್ತರಿಗೆ ವಸಾಹಾತಿನ ಸ್ವರಾಜ್ಯದಲ್ಲಿ ನಂಬಿಯಾಗಿಲ್ಲ. ಶ್ರೀ. ಶ್ರೀನಿವಾಸ ಅಯ್ಯಂಗಾರರಂತೆ, ಇದು ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುವಂತಾಗಿದೆ. ಆದ್ದರಿಂದ ಭಾರತೀಯರ ಕಣ್ಣಿನ ಮೇಲೆ ಬಂದ ಪೊರೆಯನ್ನು ದೂರಮಾಡಲು ಒಂದು ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ-

೧ ಸ್ವರಾಜ್ಯವಾದಿಗಳು ಸಹ ಕೌನ್ಸಿಲಕ್ಕೆ ಬಹಿಷ್ಕಾರ ಹಾಕಬೇಕು. ದೇಶಬಂಧು ದಾಸರು ಕೌನ್ಸಿಲ ಪ್ರವೇಶಕ್ಕಾಗಿ ಸ್ವರಾಜ್ಯ ಪಕ್ಷ ನಿರ್ಮಾಣ ಮಾಡಿದ್ದು ನಿಜ. ಕಾಲಸ್ಥಿತಿಯಲ್ಲಿ ಬದಲಾದ್ದರಿಂದ ಕೌನ್ಸಿಲಗಳಿಗೆ ಪುನಃ ಬಹಿಷ್ಕಾರ ಹಾಕುವದು ಅಗತ್ಯವಾಗಿದೆ.

೨ ಕೌನ್ಸಿಲ ಬಹಿಷ್ಕಾರ ಮಾತ್ರವಲ್ಲ; ಬ್ರಿಟಿಶ ಸರಕಾರದ ಕೂಡ ಅಸಹಕಾರ ಮಾಡಬೇಕೆಂದು ಎಲ್ಲರೂ ಅವಶ್ಯಕತೋರುವದು; ಅವೆಲ್ಲ ಮಾರ್ಗಗಳನ್ನೂ ಅದಕ್ಕೆ ತಕ್ಕ ಉಪಾಯಗಳನ್ನೂ ಕೈಕೊಳ್ಳತಕ್ಕದ್ದು.

೩ ಭಾರತೀಯರ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಅಡ್ಡಗಾಲ ಹೊಡೆಯುವಂತೆ ಮಾಡಿದ ಎಲ್ಲ ಕಾಯದೆ ಕಾನೂನುಗಳನ್ನು ಮುರಿದು, ಕಾಯದೆ ಭಂಗ ಮಾಡುವಂತೆ ಕಾಂಗ್ರೇಸ ಸಭೆಯು ಜಾಹೀರನಾಮೆಯನ್ನು ಹಚ್ಚತಕ್ಕದ್ದು.

೪ ಲಾಹೋರಿನ ಕಾಂಗ್ರೇಸ ಸಭೆಯಲ್ಲಿ ನಿಜವಾದ ಸ್ವಾತಂತ್ರ್ಯದ ಠರಾವು ಕೂಡುವಂಥ ಠರಾವೇ ಪಾಸಾಗುವದೆಂದು ನಾನು ನಿರೀಕ್ಷಿಸುತ್ತೇನೆ.

೫ ಈ ಸ್ವಾತಂತ್ರ್ಯ ದೊರಕಿಸುವ ಕಾರ್ಯವು ತರುಣರನ್ನು ಅವಲಂಬಿಸಿರುತ್ತದೆ. ಅದಕಾರಣ ತರುಣರು ಕರ್ತವ್ಯ ಜಾಗೃತರಾಗುವರೆಂದು ಭಾವಿಸುತ್ತೇನೆ.

——

ಹಿಂದುಸ್ಥಾನದಲ್ಲಿ ಗುಪ್ತ ಪೋಲಿಸರು—

ಗುಪ್ತ ಪೋಲಿಸರು ದೊಡ್ಡದೊಡ್ಡ ಜನರ ಹಿಂದೆ ಬೆನ್ನು ರಾಕ್ಷಸನಂತೆ ಬೆನ್ನು ಹತ್ತುವದು ವಾಡಿಕೆಯಾಗಿದೆ. ಆದರೆ ಇದು ಇಂಗ್ಲಿಷ ಜನರಿಗೆ ಹೊಸದಾಗಿ, ವಿಚಿತ್ರವೆನಿಸಿದೆ. ಈ ವಿಷಯವಾಗಿ ಪಾರ್ಲಮೆಂಟ ಸಭೆಯಲ್ಲಿ ಪ್ರಶ್ನೆ ಮಾಡಲು- ಸ್ಟೇಟ ಸೇಕ್ರೇಟರಿಯವರು ವಿಚಾರ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ.

——

ಕ್ರಿಶ್ಚನ್ನರೊಳಗಿನ ಮದುವೆಯು ಒಂದು ಮೋಜು

—(೦)—

ಜಿ. ಐ. ಪಿ. ರೇಲ್ವೆಯಲ್ಲಿ ಕೆಲಸಮಾಡುತ್ತಿದ್ದ ಒಬ್ಬ ಆಂಗ್ಲೋ ಇಂಡಿಯನ್ನನು ಒಬ್ಬಳನ್ನು ಮದುವೆಯಾದನು. ಕಾಯದೆ ಪ್ರಕಾರ ಆಕೆಗೆ ತಿಳಿಸದೆ, ಇನ್ನೊಬ್ಬಳನ್ನು ಮದುವೆಯಾದನು. ಇದು ಏಕಪತ್ನಿ ವ್ರತಕ್ಕೆ ಭಂಗ ತಂದಂತಾಯಿತೆಂದೂ ವ್ಯಭಿಚಾರ ಎಂದೂ ಮೊದಲನೆಯ ಹೆಂಡತಿಯು ಗಂಡನ ಮೇಲೆ ಫೌಜದಾರಿಯಲ್ಲಿ ಫಿರ್ಯಾದಿ ಮಾಡಿದಳು. ಗಂಡನಿಗೆ ಶಿಕ್ಷೆಯಾಯಿತು. ಸೆಶನಕೋರ್ಟಿಗೆ ಗಂಡನು ಅಪೀಲು ಮಾಡಿದನು. ಅಲ್ಲಿ ಏನೋ ಒಂದು ಕಾರಣದಿಂದ ನಿರ್ದೋಷಿಯಾದನು. ಹೆಂಡತಿಯು ಹಾಯಕೋರ್ಟಿಗೆ ಅಪೀಲು ಮಾಡಿದಳು. ಅಲ್ಲಿ ಪುನಃ ಶಿಕ್ಷೆ ಕಾಯಮವಾಯಿತು. ಶಿಕ್ಷೆಯ ವರ್ತಮಾನ ಕೇಳಿದ ಕೂಡಲೆ ಇವನು ಗೋವೆಕ್ಕೆ ಗಚ್ಚ ಹೇಳಿಸಿದನು. ಇಂಥ ಅಪರಾಧಗಳ ಶಿಕ್ಷೆಯಾದವರನ್ನು ಅಲ್ಲಿಂದ ಹಿಡತರಲಿಕ್ಕೆ ಬರುವದಿಲ್ಲ. ಗಂಡನು ಗೋವೆಕ್ಕೆ ಹೋದ್ದನ್ನು ಕೇಳಿ, ಎರಡನೆಯ ಹೆಂಡತಿಯು ಅಲ್ಲಿಗೆ ಹೋದಳು. ಮೊದಲನೆಯವಳು ಗಂಡ ಮತ್ತು ಸವತಿಗೆ ತ್ರಾಸ ಮಾಡಿಸಬೇಕೆಂದು ಮಾಡಿದ ಪ್ರಯತ್ನವೆಲ್ಲ ನಿಷ್ಫಲವಾಯಿತೆಂದು ಉಸುರು ಹಾಕುತ್ತಿರುವಳು. ಹಾಯಕೋರ್ಟಿನ ಶಿಕ್ಷೆಯು ಕಾಗದದಲ್ಲಿಯೇ ಉಳಿಯಿತು.

ಮೀರತದ ಖಟ್ಲೆಯು ಕಮೀಟಾಯಿತು.

—(೦)—

ಮೀರತದ ಬೊಲ್ಸೆವಿಕ ಆರೋಪಿಗಳ ವಿಚಾರಣೆಯು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಮುಗಿಯಿತು. ಇದು ಹಿಂದುಸ್ಥಾನದಲ್ಲಿ ನಡೆದ ದೊಡ್ಡ ದೊಡ್ಡ ಖಟ್ಲೆಗಳನ್ನೆಲ್ಲ ಹಿಂದೆ ಹಾಕಿತು. ಈ ಪ್ರಕರಣದಲ್ಲಿ ಸಾಕ್ಷಿಗಳನ್ನು ತಕ್ಕೊಳ್ಳುವ ಕೆಲಸ ಮುಗಿಯಿತು. ೨೧-೨೨ ತಾರೀಖುಗಳಲ್ಲಿ ಆರೋಪಿಗಳ ಜವಾಬು ತಕ್ಕೊಳ್ಳುವರು. ಮತ್ತು ಇವರ ವತಿಯ ವಕೀಲರ ಡಿಫೆನ್ಸಿಗೆ ನಾಲ್ಕೈದು ದಿವಸಗಳು ಹತ್ತುವವು. ಈ ಪ್ರಕರಣದಲ್ಲಿ ೩೨೦ ಸಾಕ್ಷಿಗಳಾದವು. ಮುಖ್ಯ ಕಾಗದಗಳು ೨೫೦೦ ಇವಕ್ಕೆ ಉಪಾಂಗವಾಗಿ ಹತ್ತಿದ ೫೦೦ ಅಂತೂ ೩೦೦೦ ಕಾಗದಗಳಿಗೆ ನಿಶಾನೆ ಹತ್ತಿದೆ. ವಿಚಾರಣೆಯು ತಕತಕಿ ದಿವಸ ಹಿಡಿದು ಐದು ತಿಂಗಳು ತಕ್ಕೊಂಡಿತು. ಸಾಕ್ಷಿಪುರಾವೆ ತಕ್ಕೊಳ್ಳುವ ಕೆಲಸಕ್ಕೆ ೧೬೮ ದಿವಸಗಳು ಹತ್ತಿದವು.

ಕಲಕತ್ತೆಯಲ್ಲಿ ಪ್ರೊಫೇಸರ ಚಕ್ರನಂದ ಎಂಬವರಿಗೆ ರಾಜದ್ರೋಹದ ಆರೋಪದ ದೆಸೆಯಿಂದ ಒಂದು ವರ್ಷದ ಸಕ್ರಮ ಶಿಕ್ಷೆಯಾಯಿತು.

ಇಂಗ್ಲಂಡದಲ್ಲಿ ಬಿರುಗಾಳಿ ಮತ್ತು ಬಿರುಮಳೆಯು.

—(೦)—

ಇಂಗ್ಲಂಡ ದೇಶದ ತುಂಬ ಒಮ್ಮಿಂದೊಮ್ಮೆ ಪ್ರಚಂಡ ವೇಗದಿಂದ ಗಾಳಿ ಬೀಸಲಾರಂಭಿಸಿ, ಧೂಳವನ್ನು ಆಕಾಶಕ್ಕೆಬ್ಬಿಸಿತು. ಬಳಿಕ ಆಕಾಶದಲ್ಲಿ ಭಯಂಕರವಾದ ಮೋಡ ಕವಿದು, ಜಲ ಪ್ರಳಯವಾಗುವಂಥ ಭಯತೋರಿತು. ಕೂಡಲೆ ಅದ್ಭುತವಾಗಿ ವೃಷ್ಟಿಸುರಿಯಲಾರಂಭಿಸಿತು. ಗಾಳಿ ಮಳೆಯಿಂದ ತಾರು-ಟೆಲಿಫೋನಿನ ಕಂಬಗಳು ಅಂತರಾಳದಲ್ಲಿ ತೂಗಾಡಿದವು. ರೇಲ್ವೆಯ ದಾರಿಯು ಹರಿಯಿತು. ನದಿಗಳು ಹೊರಸೂಸಿ ಹರಿದವು, ಸರೋವರಗಳಿದ್ದ ಪರಗಣೆಗಳಂತೂ ಜಲಮಯವಾದವು. ಸಮುದ್ರ ದಂಡೆಯಲ್ಲಿ ಚಿಕ್ಕ ದೊಡ್ಡ ಡೋಣಿಗಳು ಬೋರ್ಲ್ಯಾ ಬಿದ್ದವು. ಜೀವ ಉಳಿಸುವ ಡೋಣಿ ಹಡಗೋಲುಗಳು ಜನರ ರಕ್ಷಣೆಯ ಕೆಲಸದಲ್ಲಿ ತೊಡಗಿವೆ.

ತುಂಬಿದ ಕಚೇರಿಯಲ್ಲಿ ಪಾದರಕ್ಷೆಯ ಪ್ರಯೋಗ

—(೦)—

ಮುಂಬಯಿಯಲ್ಲಿ ಪೈರಾಜಸಾಹೇಬರ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಪೋಲೀಸರ ದಸ್ತಗಿರಿ ಮತ್ತು ಕವಲಿನಲ್ಲಿದ್ದ ಯಾರ ಮಹಮ್ಮದ ಜಹಾಂಗೀರಖಾನನೆಂಬ ಹೆಸರಿನ ಆರೋಪಿಯು ಹೇಗೋ ಬೂಟದಲ್ಲಿ ಪಾದರಕ್ಷೆಯನ್ನು ಬಚ್ಚಿಟ್ಟುಕೊಂಡಿದ್ದನು. ಈತನು ವಿಚಾರಣೆ ನಡೆದಾಗ ಜೋಡು ತೆಗೆದವನೇ ಅದರಿಂದ ಸಬ್ ಇನ್ಸಪೆಕ್ಟರನ್ನು ಧಪ ಧಪ ಒಡೆದನು. ಇನ್ಸಪೆಕ್ಟರನ್ನು ಬಿಡಿಸಿಕೊಳ್ಳಲಿಕ್ಕೆ ಹೋದ ಸಿಪಾಯರನ್ನೂ ಕೈಕಾಲು ಕಡಿದು ಗಾಯ ಪಡಿಸಿದನು. ಬಹು ಶ್ರಮದಿಂದ ಈತನ ಮುಸಕೀ ಬಿಗಿದರು.

ಕೋಟಿ ಸಂಪತ್ತಿಯಿಂದ ಧರ್ಮ ಮಾಡಿದವನ ಮೃತ್ಯು.

—೦—

ಕಲಕತ್ತೆಯಲ್ಲಿ ಕಾಶಿಮ ಬಝಾರದ ಮಹಾರಾಜರಾದ ಮಣೀಂದ್ರಚಂದ್ರ ಬಹಾದ್ದೂರರವರು ಪರಲೋಕವಾಸಿಯಾದರೆಂದು ಬರೆಯುವದಕ್ಕೆ ಅತ್ಯಂತವಾಗಿ ವಿಷಾದಿಸುತ್ತೇವೆ. ಮಹಾರಾಜರು ವಿದ್ಯಾಪ್ರಿಯರೂ, ವಿದ್ಯಾಪಕ್ಷಪಾತಿಗಳೂ ಆಗಿದ್ದು, ವಿದ್ಯಾ ದಾನಕ್ಕಾಗಿ ಒಂದು ಕೋಟಿಯ ಕನಕ ಧನ ಸಹಾಯ ಮಾಡಿದ್ದಾರೆ. ಇವರ ಸ್ಮಶಾನ ಯಾತ್ರೆಗೆ ಪಟ್ಟಣದ ಅನೇಕ ಪ್ರಮುಖ ಗೃಹಸ್ಥರು ಹೋಗಿದ್ದರು.

ಆಕಳಿನಿಂದ ಬಾಂಬು ಹಾರಿತು.

—(೦)—

ಸಿಂಧ ಹೈದರಾಬಾದಿನಲ್ಲಿ ಒಬ್ಬ ಮುಸಲ್ಮಾನನು ಬಗಲಲ್ಲಿ ಬಾಂಬು ಇಟ್ಟುಕೊಂಡು ದಾರಿ ಹಿಡಿದು ಹೋಗುತ್ತಿದ್ದನು. ಅರ್ಧ ದಾರಿಯಿಂದ ಬಂದು ಆಕಳವು ಹೇಗೋ ಬೆದರಿ, ಓಡುತ್ತಾ ಬಂದ ಈತನಿಗೆ ಹಾಯಿತು ಕೂಡಲೆ,ಬಾಂಬು ಹಾರಿ ಈ ಕೈಬೆರಳುಗಳು ಕತ್ತರಿಸಿದವು. ಮಾಂಸವು ಛಿನ್ನ ವಿಚ್ಛಿನ್ನವಾಯಿತು. ಸಾಯುವ ಸ್ಥಿತಿಯಲ್ಲಿದ್ದಾನೆ.

ಬಾಲವಿವಾಹ ಕಾಯದೆ–

ಭಾವನಗರ ಸಂಸ್ಥಾನದವರು ಶಾರದಾ ಬಿಲ್ಲಿನ ಅನುಕರಣ ಮಾಡಿ, ಸಂಸ್ಥಾನದಲ್ಲಿ ೧೪ ಮತ್ತು ೧೮ ವರ್ಷದೊಳಗಿನ ಹುಡಿಗೆ ಹುಡುಗರ ಮದುವೆ ಮಾಡಬಾರದೆಂದು ಮಾತ್ರವಲ್ಲ; ೪೫ ವರ್ಷ ಮೀರಿದವನು ತನಗಿಂತ ಅರ್ಧ ವಯಸ್ಸು, ಅಂದರೆ ೨೨ ವರ್ಷ ಮೀರಿದವಳನ್ನೇ ಮದುವೆಯಾಗಬೇಕೆಂದು ಕಟ್ಟಪ್ಪಣೆ ವಿಧಿಸಿದ್ದಾರೆ. ೪೫ ವರ್ಷವಾದ ಬ್ರಾಹ್ಮಣನು ಮದುವೆಯಾಗಬೇಕಾದರೆ ಆತನು ಪುನರ್ವಿವಾಹವನ್ನೇ ಮಾಡಿಕೊಳ್ಳಬೇಕೆಂದು ಪರ್ಯಾಯದಿಂದ ಹೇಳಿದಂತಾಯಿತು.

ಮಳೆ–

ನಿನ್ನೆ ಮಧ್ಯಾಹ್ನದಲ್ಲಿ ಮೃಗ ಜಡಿಯ ಆಕಾಶದಲ್ಲಿ ಮೋಡ ಹಾಕಿ; ಸರಿಮಳೆ ಮೇಲೆ ಸುರಿಯಿತು.

ವಿವಿಧ ವರ್ತಮಾನಗಳು

ಮದ್ರಾಸದ ಹೊಸ ಗವ್ಹರ್ನರರಾದ ಸರ ಸ್ಟ್ಯಾನಲೀ ಸಾಹೇಬರು ಚಾರ್ಜ ತಕ್ಕೊಳ್ಳುವಾಗ ಜಾಹೀರ ದಕ್ಷನಾಗುವೆನೆಂದು ಭಾಷಣ ಮಾಡಿದರು. ಯಾವ ಗವ್ಹರ್ನರರು ಹೀಗೆ ಮಾತಾಡಿ ಮುಂದೆ ಮಾತಾಡುವದಿಲ್ಲ?

ಹನ್ನೊಂದನೆಯ ತಾರೀಖಿನ ದಿವಸ ಎರಡು ಮಿನಿಟು ಸ್ತಬ್ಧರಿರುವಾಗ ಮೀರತದ ಆರೋಪಿ ರಾಜ್ಯಕ್ರಾಂತಿಯು ಜಯಜಯಕಾರವಾಗಲೆಂದು ಗರ್ಜನೆ ಮಾಡಿದರು.

ವಸಾಹತಿನ ಸ್ವರಾಜ್ಯದ ನಿಯಮನಗಳ ರಾಜಕೀಯ ಸ್ಥಾನಗಳನ್ನು ಬಂಧಮುಕ್ತ ಮಾಡಬೇಕೆಂಬದಾಗಿ ಪಾರ್ಲಮೆಂಟ ಸಭೆಯಲ್ಲಿ ದ ಪ್ರಶ್ನಕ್ಕೆ ಮಿ. ವೆಜ್ವುಡ್ ಸಾಹೇಬರು ಕರದ ಉತ್ತರ ಕೊಟ್ಟರು.

ನೋಟೀಸು

—೦—

ಸಂಗವ್ವಾ ಬಸವ್ವಾ ಕಸಬಣ್ಣವರ ಸಾ॥ ಕೀನ ಅಸೂಟಿ ಸವಸ್ಥಾನ ರಾಮದುರ್ಗ ಈಕೆನಿಗೆ-

ಬಸವ್ವಾ ಕೋಮ ಸಂಗವ್ವಾ ಕಸಬಣ್ಣವರ ಅಸೂಟಿ ಸವಸ್ಥಾನ ರಾಮದುರ್ಗ ನಾನು ನಿನಗೆ ನೋಟೀಸು ಕೊಡಲಿಕ್ಕೆ ಕಾರಣವೇನಂದರೆ- ನೀನು ನನ್ನ ಮದವಿ ಗಂಡವಿದ್ದು ನಿನ್ನ ಸಂಗಡಾ ಬಾಳ್ವೆ ಮಾಡಿಕೊಂಡು ಇದ್ದ ನಾನು ಬಸರು ಆದ ಕೂಡಲೇ ತವರಮನಿಗೆ ಕಳಿಸಿಕೊಟ್ಟು ಹೋಗುವ ಕಾಲಕ್ಕೆ ನನ್ನ ಮೈಮೇಲೆ ಇರುವ ಬೆಳ್ಳಿ ಚೌಕಾ ಅಜಮಾಸು ಕಿಮ್ಮತ್ತು ಹತ್ತು ರೂಪಾಯಿ (೧೦) ಹಾಗು ಬೆಳ್ಳಿ ತೋಳಬಂದಿ ಅಜಮಾಸು ಕಿಮ್ಮತ್ತು ಹದನಾರು ರೂಪಾಯಿ ಈ ಪ್ರಕಾರ ಡಾಗೀನೆ ಬಿಚ್ಚಿಕೊಂಡು ನನ್ನನ್ನು ತವರಮನಿಗೆ ಕಳಿಸಿಕೊಟ್ಟಿ ನಾನು ತವರಮನಿಯಲ್ಲಿ ಹಡದೆ ಹೊಟ್ಟಿ ಖರ್ಚಿಗೆ ಬಾಣಂತೀತನದ ಖರ್ಚಿನ ದಕಿಯಿಂದ ... ಕೊಡಲಿಕ್ಕೆ ಜನರ ಕಡಿಂದಾ ನಿನಗೆ ಹೇಳಿ ಕಳಸಿದೆ ನೀನು ಕೊಡಲಿಲ್ಲಾ ನಾನು ನನ್ನ ತಂಗಿ ಗಂಡನ ಕಯಿಯಿಂದಾ ಸಾಲಾ ಮಾಡಿ ಹೊಟ್ಟಿ ವ ಬಾಣಂತನದ ಖರ್ಚು ಸಾಗಿಸಿದೆ ನೀನು ರಂಡಿ ಇಟಗೊಂಡು ಇರತೀದಿ ನನ್ನನ್ನು ಕರಕೊಂಡು ಹೋಗುವದಿಲ್ಲಾ ಅಂತಾ ಈಗ ತಿಳಿತದೆ ನಾನು ಪುಷ್ಕಳ ಜನರ ಕಡಿಯಿಂದ ಹೇಳಿಸಿ ನೋಡಿದೆ ಇವತ್ತಿನವರಿಗು ದಿನಮೋಕ ಮಾಡಿಕೋತಾ ಬಂದಿ ಆ ಮಾತಿಗೆ ೪-೫ ವರ್ಷವಾಯಿತು ನಾನು ತವರಮನಿಯಲ್ಲಿ ಕಾಲ ಮಾಡಿಕೋತಾ ಎಷ್ಟು ದಿವಸ ಕೂಡಬೇಕು ಇವತ್ತಿನವರಿಗು ನನ್ನ ವ ಕೂಸಿನ ಹೊಟ್ಟಿ ಅರವಿ ಅಂಚಡಿ ಬಾಣಂತನದ ಖರ್ಚು ಐದುನೂರು (೫೦೦) ರೂಪಾಯಿ ಆಗಿರುತ್ತದೆ ಇನ್ನು ಮೇಲೆ ನಾನು ತವರಮನಿಯಲ್ಲಿ ಇರಲಿಕ್ಕೆ ಖುಷಿ ಇಲ್ಲಾ ಮುಂದೆ ನನಗೆ ಸಾಲ ಸಹಾ ಹುಟ್ಟುವಂತೆ ಇಲ್ಲಾ ಕಾರಣಾ ಈ ನೋಟೀಸು ಮುಟ್ಟಿದ ಹದನೈದು ದಿವಸದಲ್ಲಿ ಬಂದು ನನ್ನ ಯಾವತ್ತು ಸಾಲಾ ತೀರಿಸಿ ಕರಕೊಂಡು ಹೋಗಬೇಕು ಹದನೈದು ದಿವಸದಲ್ಲಿ ನನ್ನನ್ನು ಕರಕೊಂಡು ಹೋಗದಿದ್ದರೆ ಮುಂದೆ ನನ್ನ ಮೇಲೆ ಯಾವ ಪ್ರಕಾರ ಅಧಿಕಾರ ಇಲ್ಲಾ ನಾನು ನನ್ನ ಮರ್ಜಿ ಪ್ರಕಾರ ಎರಡನೇ ದವನನ್ನು ಫುಡಕಿ ಮಾಡಿಕೋತೇನಿ ನನ್ನ ಮೇಲೆ ನನ್ನ ಫುಡಕಿ ಗಂಡನ ಮೇಲೆ ನಿನ್ನದು ಯಾವ ಪ್ರಕಾರ ಹಕ್ಕು ಇಲ್ಲಾ ಇದೇ ನೋಟೀಸು ಅಂತಾ ತಿಳಿಯಬೇಕು ತಾರೀಖು ೧೫-೧೧-೧೯೩೯

ಈ ಎಡಕ್ಕೆ ಹೆಬ್ಬೆಟ್ಟಿನ ಗುರ್ತು ಬಸವ್ವಾ ಕೋಮ ಸಂಗವ್ವಾ ಕಸಬಣ್ಣವರ ಈಕಿ ಕೈದು ಅದೆ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಸೆರಗಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರಭಾವ! ... ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚ ಪ್ರತ್ಯೇಕ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ — ಶ್ರೀ. ಸೌ. ... ಬಾಯಿ ದೀಕ್ಷಿತ

C/o ... ಬ್ಯಾಂಕ ಧಾರವಾಡ

ಮುಕ್ತಾಂಬರ ... ಔಷಧ ... ಯಾವ ವರ್ತಮಾನಪತ್ರದ ... ನೋಡಿದ ಈ ಜಾಹಿರಾತಿಯನ್ನು ... ಬರೆಯಬೇಕು.

ಜಾಹೀರ ನೋಟೀಸು

ಇರಬಸಿ ಉರ್ಫ ನೀಲಿ ಕೋಮ ಈರಪ್ಪ ಕುಂಬಾರ ಸಾ॥ ಹಿರೇನಂದೀಹಳ್ಳಿ ತಾ॥ ಬ್ಯಾಡಗಿ ಇಂಗಲ ಈಗ ಉಪ್ಪೋಡ ಮುರಗೋಡ ಈಕಗೆ-

ಕೆಳಗೆ ಸಹಿ ಮಾಡುವವನು ಇದರ ಮೂಲಕ ತಿಳಿಸುವದೇನಂದರೆ- ನೀನು ನನ್ನ ಮದುವೇ ಹೆಂಡತಿ ಇರುತ್ತೀ ಮದುವೆ ಆಗಿ ಅಜಮಾಸು ೮-೯ ವರ್ಷಗಳಾದವು ನೀನು ಪ್ರಬುದ್ಧಳಾಗಿ ನಮ್ಮ ಮನೆಗೆ ಬಂದು ಬಾಳ್ವೆ ಮಾಡಹತ್ತಿ ೩-೪ ವರ್ಷಗಳಾದವು ಕಳೆದ ನಾಗರಪಂಚಮಿ ಹಬ್ಬಕ್ಕೆಂದು ನಿಮ್ಮ ತಂದೆ ಬಸಪ್ಪನ ಕೂಡ ತವರಮನೆಗೆ ಹೋದಿ ಅಂದಿನಿಂದ ಈವರೆಗೆ ೩-೪ ಸಾರೆ ಮುದ್ದಾಂ ಸ್ವತಃ ನಾನೇ ನಿನ್ನನ್ನು ಕರೆಯಲಿಕ್ಕೆ ಬಂದರೆ ಏನಾದರೊಂದು ನೆವಾ ಹೇಳುವದಾಯಿತು ಇಷ್ಟೇ ಅಲ್ಲ ದಾರೀ ನೋಡಿದರೂ ನೀನೇನು ಬರಲಿಲ್ಲ. ನೀನು ಇಲ್ಲಿಂದಾ ಹೋಗುವಾಗ್ಗೆ ೬ ತೊಲಿಯ ಬಂಗಾರ ಬಳಿ ಜೋಡು ೧, ಮೂರು ತೊಲಿಯ ಪುತಳೀ ಸರಾ ೧, ಬೆಳ್ಳೀ ಪಟ್ಟಿ ೧, ಬೆಳ್ಳೀ ಚೌಕ ೧, ಕಿವಿಯೊಳಗಿನ ಬಂಗಾರ ಹೂವು ೨, ಬೆಳ್ಳಿ ತೋಳಬಂದಿ ಜೋಡು ೧, ಧಾರೆಯ ಸೀರಿ ಇಪ್ಪತ್ತೈದು ರೂಪಾಯಿದ್ದು ೧ ಮತ್ತು ಬಂಗಾರದ ಗುಂಡಿನ ಟೀಕಿ ಒಂದು ಈ ಪ್ರಕಾರ ಜೀನಸುಗಳನ್ನು ಸಂಗಡ ಒಯಿದಿರುತ್ತೀ ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ಮೇಲೆ ಬರೆದ ನಾನು ಹಾಕಿದ ದಾಗೀನೆ ಸೀರೆಗಳನ್ನು ತಗೊಂಡು ಬಂದು ಖುಷೀಯಿಂದ ಬಾಳ್ವೆ ಮಾಡಬೇಕು ಇದಕ್ಕೆ ತಪ್ಪಿದರೆ ಕಾಯಿದೇಪ್ರಕಾರ ನಿನ್ನ ಮೇಲೆ ಯೋಗ್ಯ ಇಲಾಜ ನಡಿಸಿ ಖರ್ಚು ಸಹಿತ ವಸೂಲ ಮಾಡಲಾದೀತು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ ತಿಳಿಯುವದು

ತಾರೀಖು ೧೪-೧೧-೩೯

ಸಹಿ- ಈರಪ್ಪಾ ಬಸಪ್ಪಾ ಕುಂಬಾರ ಸಾ॥ ಹಿರೇನಂದೀಹಳ್ಳಿ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ- ಇಂಗ್ಲಿಷನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ... ಹೊಸಮನಿ ಇವರು ಧಾರವಾಡ ... ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಪಡಿಸಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

[illegible]

ವರ್ಷ ೧೦) ಧಾರವಾಡ ರವಿವಾರ ತಾರೀಖು ೧೭ ನೇ ಸಪ್ಟೆಂಬರ ೧೯೩೯ (ಸಂಚಿಕೆ ೨೫೦

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ.

[illegible]

ಮಾಲಕರು: [illegible]

[illegible]

ದಾಗೀನೆಗಳ [illegible]

ಈ ಬ್ಯಾಂಕು [illegible] ವ್ಯವಹಾರ [illegible] ಈ ಬ್ಯಾಂಕಿನ [illegible] ದಾಗೀನೆ [illegible] ಬಡ್ಡಿ [illegible] ಕಂಡು [illegible] ವದರಿಂ, ಸಾಲದ [illegible] ಪಟ್ಟಣ [illegible] ಹೋಗದ [illegible] ಸಿದ್ದೇವೆ. ಹಳ್ಳಿ [illegible] ಒಸ್ಸಿರ [illegible] ಸಾಲದ ಧಾರ [illegible] ಆದ್ದರಿಂದ ಹಳ್ಳಿಯಲ್ಲಿ ಸಾಲ ಬೇಕಾದವರ [illegible] ಬ್ಯಾಂಕಿನಲ್ಲಿ [illegible] ಪಡೆಯಬೇಕು. ನಮ್ಮ ಬಡ್ಡೀ ದರವು [illegible] ತಿಂಗಳಿಗೆ [illegible] ಎರಡು [illegible] ಇರುತ್ತದೆ. ಸೂಚನ [illegible] ಪತ್ರದ್ವಾರಾ ತಿಳಿ[illegible]ಕೊಳ್ಳಬೇಕು.

ಹಳ್ಳಿಗಳ ಜನರು ಶಹರದ ಊರಿಗೆ [illegible] ಹೋದಾಗ ಬಡ್ಡೀ [illegible] ಸಾಲ ತೆಗೆದುಕೊಳ್ಳುವರು. [illegible] ಹೀಗೆ ಬ್ಯಾಂಕಿನಲ್ಲಿ ಮಾತ್ರ ಆಗುವದಿಲ್ಲ. [illegible] ವ್ಯವಹಾರ ಮಾಡಿ [illegible] ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ [illegible] ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ [illegible] ಸೋಯಿಯಿಂದ ಸಿಗುವವು.

ಕೃಷ್ಣರಾವ [illegible] ಧಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

[illegible] ಅರ್ಬನ [illegible]

[illegible] ಬ್ಯಾಂಕ ಲಿಮಿಟೆಡ

[illegible]

[illegible] ಸೊಸಾಯಟಿಯ ಆಕ್ಟ [illegible] ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹುಂಡಿಗಳು ಎಂಟು ಲಕ್ಷದ ಮೇಲಿಂದು. [illegible] ಹುಂಡಿ ನೋಡಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible] ಮಾಡಲ್ಪಡುವವು. ಕಾಯಮ ಮತ್ತು ಚಾಲು ಠೇವು [illegible] ಗಳಿಗೆ [illegible] ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಈಗ ಬಂದು ಮಾಡಿದರಿಂದ ತಿಳಿಕೊಳ್ಳಬಹುದು.

ಪದ್ಮರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ.

[illegible]

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ [illegible] ಹಣವನ್ನು [illegible] ದರವನ್ನು, ಸಮಕ್ಷ ಮ ತಿಳಿಕೊಳ್ಳಬಹುದು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟು [illegible] ದರವು ನೂರಕ್ಕೆ [illegible] ಹನ್ನೆರಡು ಆಗುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರು. ೧೨-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ [illegible] ಕಾರ್ಯಾಲಯಕ್ಕೆ ಬರೆದು ತಿಳಿಕೊಳ್ಳಿರಿ.

ವಿಜಯದ ವ್ಯಾನೇಜರ ಧಾರವಾಡ.

ವಿಜಯ.

ಧಾರವಾಡ ತಾ- ೧೬-೧೧-೨೯ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕರಬ್ರಿಯು
ಶ್ರೀ ವಸುಮತಿಯು ನಲಿಸಿರೆ ಸುಹಿತಕರಿತೆಗಳಿಂ ಬ
ದ "ವಿಜಯಂ" ಶ್ರೀಕರರುಣ ।
ನಾ ವಿಹಿತಾಗಳ ವಿ[illegible]ನಲಿಪು[illegible] ॥೧॥

ವಸಾಹತಿನ ಸ್ವರಾಜ್ಯವು ನಡುಬಿಟ್ಟದಲ್ಲಿ ನಿಂತಿತು!!

—(೦)—

ವಸಾಹತಿನ ಸ್ವರಾಜ್ಯ ವಿಷಯವಾಗಿ ಪಾರ್ಲಮೆಂಟದ ಎರಡೂ ಸಭೆಗಳಲ್ಲಾದ ಭಾಷಣಗಳು [illegible]ದ ಭಾರತೀಯರ ಕಣ್ಣು ನಿಚ್ಚಳಾದವು. ಮ[illegible]ಗಳಲ್ಲಿ ಸಹ ದ್ವಿಮತವಾಗಹತ್ತಿದೆ. ಏಕೆಂದರೆ- ಸ್ವರಾಜ್ಯವು ಇಂದೇ ದೊರೆಯಲಾರದು. ನಾವು ಈ ಮೊದಲು ಬರೆದಂತೆ ಎರಡು ಮೂರು ಶತಗಳಾದರೂ ಬೇಕೆಂದು ಸಹಜವಾಗುತ್ತದೆ. ಮ್ಯಾಂಚೆಸ್ಟರ ಗಾರ್ಡಿಯನ್ನವೆಂಬ ಪ್ರಸಿದ್ಧ ವರ್ತಮಾನಪತ್ರವಂತೂ ಈ ೨೦ನೇ ಶತಮಾನ ಮುಗಿಯುವದರೊಳಗಾಗಿ- ಸ್ವರಾಜ್ಯ ಸಿಗಲಾರದೆಂದು ಟೀಕೆ ಮಾಡುತ್ತದೆ. ಈ ಟೀಕೆಯಾದಾಗ ಹಳೇ ಮುಖ್ಯ ಮಂತ್ರಿಯಾದ ಮಿ. ಬಾಲ್ಡ್ವಿನ್ನ ಸಾಹೇಬರು- "ನಿಮ್ಮ ವಸಾಹತಿನ ರಾಜ್ಯದಾನದಿಂದ ರಾಜ್ಯ ಕಾರಭಾರದಲ್ಲಿ ಬದಲಾಗುವದೇ!" ಎಂಬ ಪ್ರಶ್ನದ ಪತ್ರವನ್ನು ಮಿ. ಮ್ಯಾಕಡೋನಾಲ್ಡ ಸಾಹೇಬರಿಗೆ ಬರೆಯಲು- ಇವರು "ಏನೇನೂ, ಎಳ್ಳಷ್ಟೂ" ಬದಲಾಗಲಾರದೆಂದು ಉತ್ತರ ಕೊಟ್ಟಿದ್ದಾರೆ. ಇವೆರಡೂ ಸಂಗತಿಗಳು ಭಾವೀ ಸ್ವರಾಜ್ಯಕ್ಕೆ ನಿರಾಶಾಜನಕವಾಗಿವೆ, ಇವುಗಳ ಛಾಯದ ಮೇಲೆ ಉಪ್ಪು ಸವರಿದಂತೆ, ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡುವ ವಿಚಾರವಿಲ್ಲೆಂದು ಮಿ. ಬೆನ್ನ ವೆಜ್ವುಡ್ಡ ಸಾಹೇಬರು ಪಾರ್ಲಮೆಂಟ ಸಭೆಯಲ್ಲಿ ಉತ್ತರ ಕೊಟ್ಟದ್ದಾಗಿರುತ್ತದೆ. ರಾಜಕೀಯ ಕೈದಿಗಳನ್ನು ಬಂಧ ಮುಕ್ತಮಾಡಿದರೆ- ನಿಮ್ಮ ಹೃದಯದಲ್ಲಿ ನಿಜವಾಗಿ ಸ್ವರಾಜ್ಯ ಕೊಡುವದರುತ್ತದೆಂದು ಸ್ವರಾಜ್ಯದ ಸರ್ವ ಪಕ್ಷೀಯ ಸಭೆಯವರು ಶರ್ತು ಹಾಕಿದ್ದಾರೆ. ಈ ಶರ್ತನ್ನು ಪೂರ್ಣಮಾಡಲಿಕ್ಕೆ ಆಳರಸು ಎಷ್ಟು ಸಿದ್ಧರಿಲ್ಲ. ಆಗೇನೂ ಕರಾರ ಹೇಳುವ ಕಾರಣವಿಲ್ಲ. ರಾವುಂಡ ಟೇಬಲ ಕಾನಫರನ್ಸಿನಲ್ಲಿ ಈ ಉದ್ದೇಶವನ್ನು ಸಾಧಿಸಿಕೊಳ್ಳುವಾ- ಸದ್ಯ ಹಿಂದುಸ್ಥಾನದಲ್ಲಿ ಒಂದೇ ಮತವುಂಟೆಂಬದನ್ನು ತೋರಿಸುವಾ- ಎಂಬದಾಗಿ ಮವಾಳಾಗ್ರಣಿಗಳು ಹೇಳುತ್ತಾರೆ. ತುರಂಗದಲ್ಲಿ ಜನರು ಭೋಗಿಸುತ್ತಿರುವ ಹಿಂಸೆಗಳನ್ನು ಒಂದು ದಿವಸವಾದರೂ ಮವಾಳರು ಭೋಗಿಸಿ ನೋಡಿದರೆ- ಆರು ತಿಂಗಳ ತನಕ ರಾಜಕೀಯ ಕೈದಿಗಳು ತುರಂಗದಲ್ಲಿ ಕೊಳೆಯಬೇಕೆಂದು ಎಂದಿಗೂ ಹೇಳಲಾರರು. ಇದು ಅವರಿಗೆ ಪರದುಃಖ ಸೀತಲವಾಗಿರುತ್ತದೆ. ಮಂತ್ರಿಗಳು ರಾಜಕೀಯ ಕೈದಿಗಳನ್ನು ಬಿಡುವದಿಲ್ಲೆಂಬದು ಪೊಂಡತನವಾಗುತ್ತದೆ. ಏಕೆಂದರೆ- ಇವರ ವಿರುದ್ಧವಾಗಿ ಇತಿಹಾಸವು ಸಾಕ್ಷೀ ನುಡಿಯುತ್ತಿರುವದು. ಆಯರ್ಲಂಡದಲ್ಲಿ ಸ್ವರಾಜ್ಯದ ಉರಿ ಎದ್ದಾಗ ಕೂಡ ಆಗಿನ ಮಂತ್ರಿಗಳು ಒಬ್ಬರಲ್ಲ; ಇಬ್ಬರಲ್ಲ; ಆರು ನೂರು ಜನರನ್ನು ತುರುಂಗದಿಂದ ಮುಕ್ತ ಮಾಡಿದರು. ಆದರೂ ಪ್ರಜಾ ಕ್ಷೋಭೆ ಶಾಂತವಾಗದೆ, ಬಂಡಾಯ ಬೆಳೆಯಿತು. ಕೊನೆಯ ಸಾರೆ ಸ್ವರಾಜ್ಯ ಶಾಸನದ ಜಾಹೀರನಾಮೆ ಹಚ್ಚುವಾಗ ಕೂಡ, ಡಿವ್ಹೆಲೆರಾ ಮೊದಲಾದವರನ್ನು ಮೊದಲು ಬಿಟ್ಟು, ಆ ನಂತರ ರಾಜಿಯ ವಿಚಾರಕ್ಕೆ ಕೂತರು. ಡಿವ್ಹೆಲೆರಾನು ಹಿಂದುಸ್ಥಾನದ ಕೈದಿಗಳಂತೆ ಬರೇ ಭಾಷಣದಿಂದ ಅಥವಾ ಮತದಿಂದ ಬ್ರಿಟಿಶ ಸರಕಾರದ ದ್ರೋಹಮಾಡಿದವನಲ್ಲ; ತೋಫು-ಬಂದೂಕಿಯಿಂದ ಯುದ್ಧ ಮಾಡಿದವನು. ಬ್ರಿಟಿಶ ಸರಕಾರದ ದೃಷ್ಟಿಯಿಂದ ಆದಂದ ಅಕ್ಷಮ್ಯ ಅಪರಾಧಗಳನ್ನೇ ಹೊಟ್ಟೆಯಲ್ಲಿ ಹಾಕಿಕೊಂಡದ್ದು ಪ್ರತ್ಯಕ್ಷ ಕಣ್ಣಿಗೆ ಕಾಣುತ್ತಿರುವಾಗ- ಹಿಂದುಸ್ಥಾನದಲ್ಲಿ ಅತ್ಯಲ್ಪ ಅಪರಾಧವೆನಿಸುವಂಥವರನ್ನು ಬಿಡುವದಿಲ್ಲೆಂದು ಹೇಳುವದು ಕುನುಸೇ ಸರಿ. ಬ್ರಿಟಿಶ ಮಂತ್ರಿಗಳ ವರ್ತನೆ ವಿಚಾರವನ್ನು ಒಟ್ಟಿನಿಂದ ನೋಡಲಾಗಿ, ಸ್ವರಾಜ್ಯವನ್ನು ಕಂತಿನ ಸಾಲದಂತೆ ಕೊಡುತ್ತಾ ಹೋಗುವದಿದ್ದು, ಅದು ಯಾವ ಫಲಾಂಶವನ್ನು ಕೊಡಲಾರದೆಂದು ಹೇಳುವಂತಾಗುತ್ತದೆ. ಆದ್ದರಿಂದ ಹಿಂದುಸ್ಥಾನದ ಧ್ಯೇಯವು ಸಂಪೂರ್ಣ ಸ್ವಾತಂತ್ರ್ಯವೇ ಇರಬೇಕೆಂದೂ, ಲಾಹೋರಿನ ಕಾಂಗ್ರೆಸವು ಯಾವ ಕಾರಣ ಅಥವಾ ಬಾಟರಾಯಣ ಸಂಬಂಧದಿಂದಾದರೂ ಲಾಹೋರಿನ ಕಾಂಗ್ರೆಸದಲ್ಲಿ ಈ ಠರಾವನ್ನು ಹಿಂದಕ್ಕೆ ಒತ್ತಬಾರದೆಂದೂ ಲೋಕಮತವು ಬೆಳೆಯುತ್ತಾ ನಡೆದಿದೆ. ಕಾಂಗ್ರೇಸ ಮತ್ತು ಸರ್ವ ಪಕ್ಷೀಯರ ಧ್ಯೇಯಗಳು ಬೇರೆ. ಸರ್ವ ಪಕ್ಷೀಯರ ಧ್ಯೇಯವು ವಸಾಹತಿನ ಸ್ವರಾಜ್ಯವೇ ಆಗಿರುತ್ತದೆ. ಈ ಧ್ಯೇಯಕ್ಕೂ ಪಕ್ಷ ಬಂದದ್ದರಿಂದ, ಈ ಬಗ್ಗೆ ವಿಚಾರ ಮಾಡಲು ಪಂಡಿತ ಮೋತಿಲಾಲರು ಸ್ಪೇಶಲ ಸಭೆಯನ್ನು ಕರೆದಿದ್ದಾರೆ. ಮೆಂಬರರಿಗೆ ತಾರಿನಿಂದ ಆಮಂತ್ರಣ ಕಳಿಸಿದ್ದಲ್ಲದೆ, ಯಾರಿಗಾದರೂ ತಪರು ಮುಟ್ಟಲಿಕ್ಕೆ ಅವಕಾಶವಾದರೆ- ಸಭೆಗೆ ಅಗತ್ಯವಾಗಿ ಬರಬೇಕೆಂದು ವರ್ತಮಾನಪತ್ರಗಳ ದ್ವಾರದಿಂದಲೂ ತಿಳಿಸಿದ್ದಾರೆ.

ಅಸ್ಪೃಶ್ಯರ ಹೊಲಿಜಟ್ಟು ಬಿಡಿಸುವ ಗೊಂದಲ.

—(೦)—

ದಕ್ಷಿಣ ಹಿಂದುಸ್ಥಾನದ ದೇವಾಲಯಗಳಲ್ಲಿ ಅಸ್ಪೃಶ್ಯತಾ ನಿವಾರಣೆಯ ಗೊಂದಲವೆದ್ದು, ಅಡಗಿತು. ಅದು ಮಹಾರಾಷ್ಟ್ರ ಪ್ರಾಂತದಲ್ಲಿ ಪುನರ್ಜನ್ಮ ಹೊಂದಿ, ದೊಡ್ಡ ಗೊಂದಲವೆಬ್ಬಿಸಿದೆ. ದಕ್ಷಿಣ ದೇಶ- ವಿಶೇಷವಾಗಿ ಕೋಚೀನ ಮಲಬಾರದಲ್ಲಿ ಸನಾತನ ಧರ್ಮಾಭಿಮಾನವು ಒಳೇ ಜಾಗ್ರತಾವಸ್ಥೆಯಲ್ಲಿದೆ. ಅಷ್ಟು ಜಾಗ್ರತೆ ಮತ್ತು ಮಡಿಹುಡಿಯು ಮಹಾರಾಷ್ಟ್ರದಲ್ಲಿಲ್ಲ. ಸುಧಾರಕರ ಸಂಖ್ಯೆಯಿಂದ ಸನಾತನ ಧರ್ಮಾಭಿಮಾನಿಗಳ ಆಚಾರವಿಚಾರಕ್ಕೆ ದೊಡ್ಡ ಆತಂಕ ಹುಟ್ಟಿದೆ. ಸುಧಾರಕರು ಅಸ್ಪೃಶ್ಯರ ಮೈಲಿಗೆ ಕಳೆಯುವದಕ್ಕೆ ದೇವಾಲಯದಲ್ಲಿ ಗರ್ಭಗುಡಿಯೊಳಗೆ ಹೋಗುವದು ಎಲ್ಲ ಉಪಾಯಗಳಲ್ಲಿ ಮೇಲಾದದ್ದೆಂದು ತಿಳಿದು, ಆ ಉಪಾಯ ಕೈಕೊಂಡಿದ್ದಾರೆ. ಶೇಟ ಜಮುನಾದಾಲರಂಥ ಗರ್ಭಶ್ರೀಮಂತರ ಪ್ರೇರಣೆಯಿಂದ ಅನೇಕ ದೇವಸ್ಥಾನಗಳಲ್ಲಿ ಇವರಿಗೆ ಪ್ರವೇಶ ದೊರೆತಿದೆ. ಅದನ್ನೇ ಬಲಪಡಿಸಬೇಕೆಂದು ಪುಣೆಯಲ್ಲಿ ಪರ್ವತಿ ಮತ್ತು ಮುಂಬಯಿಯಲ್ಲಿ ವಾಳಕೇಶ್ವರ, ಭೂಲೇಶ್ವರ ದೇವಸ್ಥಾನಗಳಲ್ಲಿ ಸಾಧಿಸಿಕೊಳ್ಳಬೇಕೆಂದು ದೀರ್ಘ ಸಹಾಸ ನಡೆಸಿದ್ದಾರೆ. ಮುಂಬಯಿಯಲ್ಲಿ ಇವರು ಹಾಕಿದ ಭಯವಂತೂ ಭಯಂಕರವಾಗಿದೆ. ಅಲ್ಲಿ ಕಸಗೂಡಿಸುವವರೂ, ಭಂಗಿಗಳೂ ಸೇರಿ ೫೦ ಸಾವಿರ ಜನರಿದ್ದಾರೆ. ಊರೊಳಗಿನ ಕಸ ತೆಗೆಯಬಾರದು; ಭಂಗೀ ಕೆಲಸ ಮಾಡಬಾರದು; ಅಂದರೆ ಮೂರು ನಾಲ್ಕು ದಿವಸಗಳಲ್ಲಿ ಊರತುಂಬ ಹೊಲಸೆದ್ದು, ಸನಾತನರೂ, ತೂಷ್ಣೀ ಭಾವದಲ್ಲಿರುವ ಸರಕಾರವೂ ದೇವಾಲಯಗಳಲ್ಲಿ ಹೋಗಗೊಡಿಸುವರೆಂದು ಹಂಚಿಗೆ ಹಮ್ಮಿದ್ದಾರೆ. ಹೋದ ಏಕಾದಶಿಯ ದಿವಸ ಶ್ರೀ. ಪಾಂಡುರಂಗನ ಧರಣೆ ಎದ್ದು, ದ್ವಾದಶಿಯ ದಿವಸ ಸತ್ಯಾಗ್ರಹದ ಸಂಪು ಪ್ರಾರಂಭಿಸಬೇಕೆಂದಿದ್ದರು. ಯಾವ ಕಾರಣದಿಂದಲೋ ಈ ವಿಚಾರವನ್ನು ಸದ್ಯ ಮುಂದೆ ಹಾಕಿದ್ದಾರೆ."

[illegible]ನಲ್ಲಿ ಒಬ್ಬ ಪೋಲೀಸನು ಕಾರಣವಿಲ್ಲದೆ ಒಬ್ಬ [illegible]ಯಾರ ಹುಡುಗನಿಗೆ ಗುಂಡು ಹಾಕಿ[illegible]ನು. ಪೋಲೀಸನನ್ನು ಹಿಡಿದಿದ್ದಾರೆ.

ರಾವುಂಡ ಟೇಬಲಿಗೇ ಬಹಿಷ್ಕಾರ.

—(೦)—

ಮುಸಲ್ಮಾನರೂ, ಕಾಂಗ್ರೆಸದವರೂ ಸೇರಿ, ಸಾಯಮನ್ನ ಕಮೀಶನಕ್ಕೆ ಬಹಿಷ್ಕಾರ ಹಾಕಿದರು. ರಾವುಂಡ ಟೇಬಲ ಕಾನ್ಫರನ್ಸಿನಿಂದ ಸಾಯಮನ್ನ ಕಮೀಶನಕ್ಕೆ ವಿನಹಕಾರಣ ಮಹತ್ವ ಬಂದು, ಅದರ ಹಿಂದಿನ ಕೊಂಕು ಮುಚ್ಚಿಹೋಗುವದು. ಆದ್ದರಿಂದ ರಾವುಂಡ ಟೇಬಲಕ್ಕೂ ಬಹಿಷ್ಕಾರಹಾಕಿ, ಲಾಹೋರಿನ ಕಾಂಗ್ರೆಸದಲ್ಲಿ ಸಂಪೂರ್ಣ ಸ್ವಾತಂತ್ರ್ಯದ್ದೇ ಠರಾವು ಪಾಸಮಾಡಬೇಕೆಂದು ಶ್ರೀ. ಶ್ರೀನಿವಾಸ ಅಯ್ಯಂಗಾರರು ಸಾರಿ ಹೇಳಿದ್ದಾರೆ.

ಶ್ರೀ. ರಮಾನಂದ ಚಟರ್ಜಿ-

ಜಗತ್ಪ್ರಸಿದ್ಧ ವಾಙ್ಮಯ ವಿಶಾರದರಾದ ಶ್ರೀ ರಮಾನಂದ ಚಟರ್ಜಿಯವರು ಅನ್ನುವದೇನಂದರೆ-

ವಸಾಹತಿಕ ಸ್ವರಾಜ್ಯವನ್ನು ಎಂದು ಕೊಡುವರೆಂಬದನ್ನು ಸ್ಪಷ್ಟವಾಗಿ ಹೇಳಿಲ್ಲವಾದ್ದರಿಂದ, ಈ ವರದಿಸಿಂದ ನನ್ನ ಮೊಮ್ಮಕ್ಕಳು ಮರಿಮಕ್ಕಳು ಸಮಾಧಾನಪಡಬಹುದು. ಆದರೆ ನನ್ನ ಜೀವಮಾನದಲ್ಲಿಯೇ ಹಿಂದುಸ್ಥಾನವು ಸ್ವತಂತ್ರವಾಗುವದನ್ನು ನೋಡಬೇಕೆಂದು ನನ್ನ ಅಪೇಕ್ಷೆಯಾಗಿರುವದರಿಂದ, ಈ ವರದಿನಿಂದ ನನ್ನ ಸಮಾಧಾನವಾಗಲಾರದು ಮತ್ತು ವಸಾಹತಿನ ಸ್ವರಾಜ್ಯಕ್ಕಿಂತ ಹೆಚ್ಚಿಗೆ ಲಭಿಸಬೇಕೆಂಬ ಅಪೇಕ್ಷೆಯುಳ್ಳ ತರುಣರ ಸಮಾಧಾನವೂ ಆಗಲಾರದು. ನನಗೆ ಸ್ವಾತಂತ್ರ್ಯವೇ ಬೇಕಾಗಿದೆ. ಮತ್ತು ಸದ್ಯ ಸ್ವಾತಂತ್ರ್ಯದ ದಾರಿ ಎಂದು ವಸಾಹತಿನ ಸ್ವರಾಜ್ಯ ಕೊಡುತ್ತಿದ್ದರೆ- ಅದೂ ಬೇಕು.

ಮಿ. ಚುಡುಗರ-

ಕಾರೇವಾಡದ ಸುಪ್ರಸಿದ್ಧ ಗೃಹಸ್ಥರಾದ ಮಿ. ಚುಡಗರರು ಈಗ ಹಾನೆ ಇಂಗ್ಲಂಡದಿಂದ ತಿರುಗಿ ಬಂದಿದ್ದಾರೆ. ಇವರು ಅನ್ನುವದೇನಂದರೆ-

ಇಂಗ್ಲಂಡದ ಪ್ರವಾಸದಿಂದ ನಾನೊಂದು ಮಾತು ಕಲಿತೆನು. ಅದು ಹಿಂದುಸ್ಥಾನದ ಮಿತ್ರರಿಂದ ಅಥವಾ ಕೂಲಿಕಾರ ಅಥವಾ ಬೇರೆ ಸರಕಾರದಿಂದ ದೊರೆಯಲಾರದು. ನಿಮಗೆ ಸ್ವರಾಜ್ಯ ಬೇಕಾಗಿದ್ದರೆ ಸ್ವಂತ ಶ್ರಮ ಮತ್ತು ಪ್ರಯತ್ನದಿಂದಲೇ ಸಂಪಾದಿಸತಕ್ಕದ್ದು. ಸ್ವಂತ ಸಹಾಸವಿಲ್ಲದೆ, ಅನ್ಯರ ದೊಗಲೆಯಿಂದ ಸ್ವರಾಜ್ಯ ಬರುತ್ತದೆಂದು ತಿಳಿಯುವಂಥ ಅಸದ್ಧ ವಿಚಾರವನ್ನು ಬಿಡಬೇಕೆಂದು ಹೇಳುತ್ತೇನೆ.

ಶ್ರೀ. ಕೌಜಲಗಿ ಹನಮಂತರಾಯರ ವಿಚಾರ.

ಸತ್ತ ಬಳಿಕ ಬ್ರಹ್ಮರಾಕ್ಷಸರಾಗುವರು.

—೦—

ಮುನವಳ್ಳಿಯಲ್ಲಿ ಶ್ರೀ ಜೋಶಿ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸಭೆಯಾಗಿ, ದೇಶಭಕ್ತ ಗಂಗಾಧರರಾಯರಿಗೆ ಮಾನಪತ್ರ ಕೊಡಲ್ಪಟ್ಟಿತು. ಮಾನಪತ್ರ ತಕ್ಕೊಳ್ಳುವ ಹುಚ್ಚು ಈ ದೇಶಭಕ್ತರಿಗೇಕೆ ಹುಟ್ಟಿತೆಂಬದನ್ನು ದೇವರೇ ಬಲ್ಲ. ಈ ಸಮಾರಂಭದಲ್ಲಿ ಖಾದೀ ಪ್ರಸಾರಕ ಮತ್ತು ಪ್ರಚಾರಕರಾದ ಶ್ರೀ. ಕೌಜಲಗಿ ಹನಮಂತರಾಯರ ಭಾಷಣವಾಯಿತು ರಾಯರು ಸ್ವಲ್ಪ ದಿವಸಗಳ ಹಿಂದೆ ಸಂಧಿವಾತದಿಂದ ಕ್ಷೀಣರಾಗಿದ್ದರು. ಆ ಬೇನೆಯಿಂದ ಸತ್ತಿದ್ದರೆ- ಬ್ರಹ್ಮರಾಕ್ಷಸನಾಗಿ ವಿಲಾಯತಿಯ ಬಟ್ಟೆಗೆ ಬಹಿಷ್ಕಾರ ಹಾಕಿಸಲು- ಅದರ ಬೆನ್ನು ಹತ್ತುತ್ತಿದ್ದೆನೆಂದು ಭಾಷಣ ಮಾಡಿದ್ದಾರೆ. ಸತ್ತ ಬಳಿಕ ಬ್ರಹ್ಮರಾಕ್ಷಸರಾಗುವದಕ್ಕಿಂತಲೂ ಜೀವಂತವಿರುವಾಗಲೇ ಬ್ರಹ್ಮರಾಕ್ಷಸನಾಗಿ ಪರದೇಶಿ ಬಟ್ಟೆಯ ಎದೆಯ ಮೇಲೆ ಕೂತು ಅದಕ್ಕೆ ಹೃದ್ರೋಗ ಹಚ್ಚಲು ಏನು ಕಡಿಮೆ ಮಾಡಿದ್ದಾರೆ.

ಅರವಟ್ಟಿಗೆಗೆ ಭೂದಾನ-

ವಿಜಾಪೂರ ಜಿಲ್ಲೆಗೆ ಸೇರಿದ ಇಟಗಿ ಗ್ರಾಮದ ಶ್ರೀ. ಹೊನ್ನಟಗಿ ಅಡಿವೆಪ್ಪನವರು ಅರವಟಿಗೆ ಇಡುವದಕ್ಕಾಗಿ ನಾಲ್ಕು ಎಕರೆ ಭೂಮಿಯನ್ನು ದಾನವಾಗಿ ಕೊಟ್ಟಿರುತ್ತಾರೆ. ಈ ಕಾಲದಲ್ಲಿ ಇಂಥ ಮಹಾತ್ಮರು ಕ್ವಚಿತವೇ ಸರಿ.

ಇಂಗ್ಲೀಷರಿಗೆ ಬುದ್ಧಿಗಲಿಸುವಿಕೆ-

ಡಚ್ಚ ಸರಕಾರದ ವಿಮಾನಗಳು ಈಸ್ಟ ಇಂಡಿಯಾ ನಡುಗಡ್ಡೆಗಳಿಗೆ ಹೋಗಬೇಕಾದರೆ- ಬ್ರಿಟಿಶ ರಾಜ್ಯದೊಳಗಿನಿಂದ ಹಾಯಬೇಕಾಗುತ್ತದೆ. ಬ್ರಿಟಿಶ ಸರಕಾರದವರು ಅವಕ್ಕೆ ದಾರೀ ಕೊಡಲು ಅಡ್ಡತಿಡ್ಡ ಅಡ್ಡೀ ಮಾಡುತ್ತಾರೆ. ಇವರಿಗೆ ಬುದ್ಧಿಗಲಿಸಲು- ತಮ್ಮ ದೇಶದ ಮಾರ್ಗವಾಗಿ ಹಿಂದುಸ್ಥಾನಕ್ಕೆ ಬರುವ ವಿಮಾನಗಳಿಗೆ ದಾರಿ ಕೊಡಬಾರದೆಂದು ಡಚ್ಚ ದೇಶದಲ್ಲಿ ವಿಚಾರ ನಡೆದಿದೆ.

ನಿಪ್ಪಾಣಿಯಲ್ಲಿ ಮುಸಲಮಾನರು ಉರುಸು ಮಾಡಬೇಕೆಂದಿದ್ದರು. ಪ್ಲೇಗ ಇದೆ, ಉರುಸು ಮಾಡಬೇಡಿರೆಂದು ಹಿಂದೂ ಜನರು ಹೇಳಲು- ಮುಸಲಮಾನರು ಸಿಟ್ಟಾಗಿ, ಹಿಂದೂ ಜನರಿಗೆ ಶಿಕ್ಷೆ ಎಂದು ವಿಠ್ಠಲದೇವರ ಮೂರ್ತಿಯನ್ನೇ ಭಿನ್ನ ಮಾಡಿದರು.

ಲಾಹೋರಿನಲ್ಲಿ ನಡೆದ ಕೊಲೆಯ ವಿಚಾರಣೆಯ ಕಾಲದಲ್ಲಿ ಪೋಲೀಸ ಬಹಾದ್ದೂರರು ಪ್ರೇಕ್ಷಕರ ಅಪಮಾನಗೊಳಿಸಲು ಎಲ್ಲ ಪ್ರೇಕ್ಷಕರು ಹೊರಬಿದ್ದು ಬಂದರು. ಸರಕಾರೀ ವಕೀಲರ ಹೇಳಿಕೆಯಿಂದ ಮ್ಯಾಜಿಸ್ಟ್ರೇಟರು ಇವರನ್ನು ಕರಿಸಿ, ಸಮಾಧಾನಮಾಡಿದರು. ಪೋಲೀಸರಿಗೇ, ಶಿಕ್ಷೆ ಅಥವಾ ತಾಕೀದಿಮಾಡಿದಂತೆ ತೋರುವದಿಲ್ಲ.

ಧಾರವಾಡ—

ಹುಕ್ಕೇರಿಯ ಮುನಸಫರಾದ ಮಿ. ಸೂರ್ಯವಂಶಿಯವರಿಗೆ ಹುಬ್ಬಳ್ಳಿಗೆ ವರ್ಗವಾಗಿರುತ್ತದೆ.

ಜಾಹೀರ ನೋಟೀಸು

—(೦)—

ಈ ಜಾಹೀರ ನೋಟೀಸಿನಿಂದ ಕೆಳಗೆ ಹೆಬ್ಬೆಟ್ಟಿನ ಗುರ್ತು ಮಾಡಿದ ಯಲ್ಲಪ್ಪಾ ತಂದೆ ಧೂಳಪ್ಪಾ ತಾಸಿಲದಾರ ಸಾ|| ಕುಂದಗೋಳ ಈತನು ಜಾಹೀರ ರೀತಿಯಿಂದ ತಿಳಿಸುವದೇನಂದರೆ- ನಾನು ಧಾರವಾಡ ವಿಜಯ ಪತ್ರದಲ್ಲಿ ನನ್ನ ಹೆಂಡತಿಯಾಗಿದ್ದ ಫಕೀರಿ ಜಾಲಿಹಳ್ಳಿ ಹಿರೇಗುಂಜಾಳ ಈಕೆಯ ಮೇಲೆ ಬಾಳಿವೆ ಮಾಡಿಕೊಂಡಿರುವ ಬಾಬತು ತಾ|| ೨ ಅಕ್ಟೋಬರ ೧೯೨೯ನೇ ದಿವಸ ಒಂದು ನೋಟೀಸು ಕೊಟ್ಟಿದ್ದೇನು ಆದರೆ ಸದರ ಫಕೀರಿಯು ಈ ನೋಟೀಸನ್ನು ಇನಕಾರ ಮಾಡಿದ್ದಾಳೆ ಆದರೆ ನನಗೆ ಬೇರೆ ಹೆಣ್ಣು ಕೊಡತಕ್ಕವರು ಜಾಹೀರ ನೋಟೀಸು ಕೊಡಲಿಕ್ಕೆ ಹೇಳಿದ್ದರಿಂದ, ಈ ನೋಟೀಸು ಪ್ರಸಿದ್ಧ ಮಾಡಿದ್ದೇನೆ ಸದರ ಮೊದಲನೇ ನೋಟೀಸು ಪ್ರಸಿದ್ಧವಾದಂದಿನಿಂದ ಫಕೀರಿಯ ಹಕ್ಕು ಸಂಬಂಧ ನನ್ನ ಮೇಲ್ಲೇನು ಉಳಿದಿರುವದಿಲ್ಲ ಮುಂದೆಯೂ ಉಳಿಯಲಾರದು ಈಕೆಯ ವಾರಸಾ ಅಥವಾ ಬೇರೆ ಪ್ರಕಾರದ ಹಕ್ಕು ನನ್ನ ಮೇಲೆ ಮತ್ತು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ನಡೆಯಲಾರದು. ಈನಂತರದ ಯಾವತ್ತು ಮಾಲಕಿಯು ನಾನು ಮಾಡಿಕೊಳ್ಳುವ ಎರಡನೆಯ ಹೆಂಡತಿ ಮತ್ತು ಆಕೆಯ ವಾರಸದಾರರಿಗೆ ಉಳಿಯುವದು ಮತ್ತು ಫಕೀರಿಯ ಮೈಮೇಲಿದ್ದ ದಾಗೀನೆಗಳ ಬಾ|| ಆಕೆ ಮತ್ತು ಆಕೆಯ ತಂದೆಯ ಮೇಲೆ ಮೊದಲಿನ ನೋಟೀಸಿನಲ್ಲಿ ಬರೆದ ಪ್ರಕಾರ ಕಾಯದೇಶೀರ ಇಲಾಜ ಮಾಡಿ ತಕ್ಕೊಳ್ಳುವೆನು ಅಂತಾ ಜಾಹೀರ ಮಾಡಿದ ನೋಟಪತ್ರದ ನೋಟೀಸು

ತಾ|| ೧೫ ನವ್ಹಂಬರ ೧೯೨೯ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಯಲ್ಲಪ್ಪಾ ತಂದಿ ಧೂಳಪ್ಪಾ ತಾಸಿಲದಾರ ಈತನು ಆದೆ

ಪಾರ್ಲಮೆಂಟ ಸಭೆಯಲ್ಲಾದ ವಸಾಹಾತಿನ ಸ್ವರಾಜ್ಯದ ವಾದವಿವಾದದಿಂದ ಹೊರಟುದ ಅರ್ಥದ ವಿಚಾರ ಮಾಡಲು ಪಂಡಿತ ಮೋತಿಲಾಲರು ನಾಳಿನ ದಿವಸ ಅಲ್ಲಾಬಾದದಲ್ಲಿ ಸರ್ವ ಪಕ್ಷೀಯರ ಸಭೆಯನ್ನು ಕೂಡಿಸುವರು.

ಡಾಕ್ಟರ ಸತ್ಯಪಾಲರು ದಿಲ್ಲಿಯ ತುರಂಗದಿಂದ ಬಂಧಮುಕ್ತರಾದರು. "ಜತೀಂದ್ರನಾಥನ ಆತ್ಮವು ಪರಲೋಕವಾಸಿಯಾದರೂ, ಅವನು ಹಚ್ಚಿದ ಆತ್ಮತ್ಯಾಗದ ದೀಪವು. ಒಂದು ವೇಳೆ ಸೂರ್ಯ ಚಂದ್ರರು ನಾಶವಾದರೂ ಆರಲಾರದೆಂದು ಉದ್ಗಾರ ತೆಗೆದಿದ್ದಾರೆ.

ಹೈದರಾಬಾದಿನಲ್ಲಿ ಪ್ರೇನೇಜ ಪದ್ಧತಿಯನ್ನು ಪ್ರಾರಂಭಿಸುವ ಆಲೋಚನೆ ಹೇಳಲು ನಿಜಾಮಸಾಹೇಬರು ಸರ ವಿಶ್ವೇಶ್ವರಯ್ಯನವರನ್ನು ಕರಿಸಿಕೊಂಡಿದ್ದಾರೆ.

ಹಿಂದೀ ಸಾಯಮನ್ನ ಕಮೀಟಿಯವರ ಪುನರಾಗಮನ.

—(೦)—

ಇಂಗ್ಲಂಡಕ್ಕೆ ಹೋಗಿದ್ದ ಹಿಂದೀ ಸಾಯಮನ್ನ ಕಮಿಟಿಯ ಮೆಂಬರರು ಮರಳಿ ಹಿಂದುಸ್ಥಾನಕ್ಕೆ ಬಂದರು. ನಾವು ಬರೆದ ರಿಪೋರ್ಟು ನಮ್ಮ ದೇಶಿಯರ ರಾಜಕೀಯ ಮಹತ್ವಾಕಾಂಕ್ಷೆಯನ್ನು ಪೂರ್ಣ ಮಾಡುವಂತಿದೆ. ಹಾಯಿಸರಾಯರು ಅದನ್ನು ಪ್ರಸಿದ್ಧ ಮಾಡುವ ತನಕ ನಮಗೆ ಬಿಚ್ಚಿ ಹೇಳಲಿಕ್ಕೆ ಬರುವದಿಲ್ಲ. ಕೂಲಿಕಾರ ಮಂತ್ರಿಗಳಿಗೆ ಸಹಾಯಕರಾಗಿರೆಂದು ಇವರು ಹೇಳುತ್ತಾರೆ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ- ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರುವಾಣೆ ಹಲವು ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜು ಬಹುಕಾಲ ನೋಟೀಸುಗಳನ್ನು ಕೊಡುವವರು ಕೇಳಿಗಿನ ಪತ್ತೆಗೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳಿಯ ಮುಟ್ಟಿನ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ಪ್ರತ್ಯಕ್ಷ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆ ಖರ್ಚು ಬೇರೆ. ಆ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ—ಶ್ರೀ. ಜಾನಕಿಬಾಯಿ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ಜ್ಞಾಪಕ:- ಈ ಔಷಧ ಬೇಕಾದಾಗ ನಮ್ಮ ವರ್ತಮಾನಪತ್ರದ ಜಾಹೀರಾತಿನಿಂದ ಈ ಬೇಡಿಕೆಯನ್ನು ಮಾಡುತ್ತಿರುವೆವೆಂಬದನ್ನು ಬರೆಯಬೇಕು.

ಮೈಸೂರು ಊದುಬತ್ತಿ

ಪದ್ಮ ಅಂಬರಬತ್ತಿ ಇದು ಬಹಳ ಸುವಾಸನೆಯುಳ್ಳದ್ದು. ಎಷ್ಟು ದಿವಸವಿಟ್ಟರೂ ವಾಸನೆ ಕಡಿಮೆಯಾಗುವದಿಲ್ಲ. ಲಗ್ನ ಮುಹೂರ್ತಗಳಲ್ಲಿಯೂ ಮತ್ತು ಪ್ರತಿ ದಿವಸ ಮನೆಯಲ್ಲಿ ಉಪಯೋಗಿಸಲು ಅನುಕೂಲವಾಗಿದೆ.

ಬೆಲೆ ೩೪ ತೊಲೆಯ ಸೇರು ೧ ಕ್ಕೆ ೨-೦-೦

ಕೃಷ್ಣಪಾರಿಜಾತ ಅತ್ತರು ತೊಲೆ ೧ ಕ್ಕೆ ೪-೦-೦

೧೯-೧೧-೨೫ ಮೈಸೂರ ಸ್ಟೋರ್ಸ,
ಬೆಳಗಾವಿ ಮುಖರಗಲ್ಲಿ,
ಹುಬ್ಬಳ್ಳಿ.

ಶ್ರೀ!! ಪತ್ತಿ!! ಶ್ರೀ!

ಶ್ರೀದತ್ತ ವೀವ್ಹಿಂಗ್ ಮಿಲ್
ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ ಶೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ ಚಪಕಶಿ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣ ಹೋದರೆ ಮಾಲು ತಿರಿಗಿ ತಕ್ಕೊಳ್ಳುವೆವು.

ಮಾಲಕ — ಡಿ. ಜಿ. ಕಾಳೆ ಬ್ರದರ್ಸ್
ಕೊಪ್ಪೀಕರ ರೋಡ ಹುಬ್ಬಳ್ಳಿ

INSURE YOUR LIFE WITH
THE ZENITH

The **PEERLESS POLICY,** *in addition to ordinary life insurance provides against accident and sickness. In the event of Permanent Disability due to any cause, payment of futre premiums ceases at once, and one-tenth of the sum assured becomes payable annually for ten years.*

For further particulars and attractive policies, apply to—

K. B. Ankaligi,
Local Director, Karnatak Branch,
Zenith Life Assurance Co. Ltd.
DHARWAR.

Head office. Bombay.

ಸೂಚನೆ

—(೦)—

ವಿ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ

ಈ ಪತ್ರವನ್ನು ಅಂದಾನಪ್ಪ ಶಿವಯೋಗಿ ಹುಬ್ಬಳ್ಳಿ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಪಡಿಸಿದರು.

R. N. B. 1443

ನಿತ್ಯ ಪತ್ರ — ವಿಜಯ — [illegible]

ಸಂಪಾದಕರು:- [illegible]

ವರ್ಷ ೧೦) ಧಾರವಾಡ ಸೋಮವಾರ ತಾರೀಖು ೧೪ನೇ ಸಪ್ಟೆಂಬರ ೧೯೩೬ (ಸಂಚಿಕೆ [illegible]

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ.

ಮಂಗಳವಾರ ಪೇಠ ಜೋಗ ವಕೀಲರ ಮನೆಯಲ್ಲಿ.

ದಾಗೀನೆಗಳ ಒತ್ತೀ ಮೇಲೆ ಸೋವು ಬಡ್ಡೀಯಿಂದ ಸಾಲ ದೊರೆಯುವ [illegible].

ಈ ಬ್ಯಾಂಕು [illegible] ಬ್ಯಾಂಕಿನ ವ್ಯವಹಾರವು [illegible] ಈ ಬ್ಯಾಂಕಿನಲ್ಲಿ [illegible] ಬಂಗಾರ [illegible] ದಾಗೀನೆ [illegible] ಸಾಲ ಕೊಡುವ [illegible]

ಹಳ್ಳಿಗಳ ಜನರು ಶಹರದ ಊರಿಗೆ ಬಂದು [illegible] ಹಳ್ಳಿಗಳ ಜನರು [illegible] ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ [illegible] ಬೆಳ್ಳಿ [illegible]

ಕೃಷ್ಣರಾವ ವೆಂಕಟರಾವ [illegible],

ಮ್ಯಾನೇಜಿಂಗ ಏಜಂಟ, ಧಾರವಾಡ.

[illegible] ಅರ್ಬನ [illegible] ಬ್ಯಾಂಕ ಲಿಮಿಟೆಡ

[illegible] ಧಾರವಾಡ

[illegible] ಕ್ರೆಡಿಟ [illegible] ಪ್ರಕಾರ [illegible] ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ

ಶ್ರೇಷ್ಠವಾದ ಸ್ಥಾನ.

[illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. [illegible]

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

[illegible] ಬಿ. [illegible]

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತಿ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ [illegible] ವರೆಗೆ [illegible].

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	[illegible]
೪ ,,	[illegible]
ವಾರ ಪತ್ರಕ್ಕೆ ೧ ವರ್ಷಕ್ಕೆ	[illegible]

ವಿಶೇಷ ಮಾಹಿತಿ ಕೆಳಗಿನ [illegible] ಬರೆದು [illegible]

ವಿಜಯ [illegible] ಧಾರವಾಡ.

ಬಗದಾದದ ಪ್ರಧಾನಿಯ ಆತ್ಮಹತ್ಯ.

ಪ್ರಧಾನಿಯು ಮಗನಿಗೆ ಬರೆದ ಪತ್ರ.

ಬಗದಾದದ ರಾಜಕೀಯ ಪರಿಸ್ಥಿತಿಯು.

ಮೆಸಾಪೊಟೆಮಿಯಾದ ಮುಖ್ಯ ಪ್ರಧಾನರಾದ ಸರ ಅಬ್ದುಲ ಮುಹಸಿನಬೇಗ ಸಾದುನ ಎಂಬವರು ...ನೇ ತಾರೀಖಿನ ದಿವಸ ಸ್ವತಃ ಗುಂಡು ಹಾಕಿಕೊಂಡು ರಾಜಕಾರಣದ ದೆಸೆಯಿಂದ ಆತ್ಮಹತಿ ಕೊಟ್ಟರು. ಇವರು ಪ್ರಾಗತಿಕ ಪಕ್ಷದವರಿದ್ದು, ಅಮೀರ ಫೈಸುಲರ ಅಪ್ಪಣೆಯ ಪ್ರಕಾರ ಇವರು ಎರಡು ತಿಂಗಳ ಹಿಂದೆ ಹೊಸ ಪ್ರಧಾನಮಂಡಲವನ್ನು ಸ್ಥಾಪಿಸಿದ್ದರು. ಇವರು ಅಂದು ಸಾಯಂಕಾಲದ ತನಕ ಕಚೇರಿಯಲ್ಲಿ ಕೆಲಸ ಮಾಡಿ, ವಿಶ್ರಾಂತಿಗಾಗಿ ಕ್ಲಬ್ಬಿಗೆ ಹೋಗಿ, ಮನೆಗೆ ಬಂದವರೇ ಮಗನ ಹೆಸರಿನಿಂದ ಪತ್ರ ಬರೆದು ಆತ್ಮಹತ್ಯ ಮಾಡುವ ಮನಸ್ಸು ಮಾಡಿದ್ದೇನೆಂದು ಮನೆಯವರಿಗೆ ಹೇಳಿ, ರಿವಾಲ್ವರ ತಕೊಂಡವರೇ ಅಟ್ಟದ ಜಿನ್ನೆ ಹತ್ತಿದರು. ಗಾಬರಿಯಾಗಿ ಮನೆಯವರು ಇವರ ಬೆನ್ನು ಹತ್ತಿದರು. ಹಿಂಬಾಲಿಸುವರು ಬರುವದರೊಳಗಾಗಿ ಇವರು ಗುಂಡು ಹಾಕಿಕೊಂಡು, ಅಕ್ಷಣವೇ ಮೃತ್ಯುಮುಖದಲ್ಲಿ ಬಿದ್ದರು. ಇವರ ಆತ್ಮಹತ್ಯವು ಆ ರಾಜ್ಯದ ತುಂಬ ಚಳವಳಿಯನ್ನೂ ಕ್ಷೋಭೆಯನ್ನೂ ಉಂಟು ಮಾಡಿದೆ.

ಮಗನಿಗೆ ಬರೆದ ಪತ್ರ-

ಪ್ರೀತಿಯ ಮಗನಾದ ಅಲ್ಲಿಯೇ-

ಮೊದಲು ನನಗೆ ಕ್ಷಮೆ ಮಾಡು. ಈ ನನ್ನ ದೇಶದಲ್ಲಿ ಸುಖಸಮಾಧಾನಗೊಂಡಿರುವದು ಅಶಕ್ಯವಾಗಿರುತ್ತದೆ. ನನ್ನ ಪ್ರಜರು ಅನೇಕ ಹಕ್ಕು ಬಾಧ್ಯತೆಗಳನ್ನು ಕೊಡಿರೆಂದು ನನ್ನನ್ನು ಒತ್ತಾಯ ಪಡಿಸುತ್ತಾರೆ. ಆದರೆ ಇಂಗ್ಲಿಷ ಸರಕಾರವು ಕೊಡಗೊಡುವದಿಲ್ಲ. ಈ ಪ್ರಕಾರ ನನಗೆ ಇಮ್ಮಡಿ ಸಂಕಟ ಒದಗಿದೆ. ಯಾವ ದೇಶದಲ್ಲಿ ನನ್ನ ಹಿರಿಯರು ಮಾನಮರ್ಯಾದೆಯಿಂದ ವಾಸಿಸಿದರೋ, ಅದೇ ದೇಶದಲ್ಲಿ ಅಪಮಾನ ಮತ್ತು ದುಃಖವನ್ನು ಸಹಿಸಿಕೊಂಡು ವಾಸಿಸುವ ಹೊತ್ತು ಬಂದಿದೆ. ನಾನು ಜನ್ಮಭೂಮಿಯ ಹಿತಕ್ಕಾಗಿ ಅವಿಶ್ರಾಂತ ಮತ್ತು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದೆನು. ಪ್ರಜರು ನನಗೆ ದೇಶದ್ರೋಹಿ ಮತ್ತು ಇಂಗ್ಲಿಷರ ಪಕ್ಷದವನೆಂಬ ದೂಷಣ ಕೊಡುತ್ತಾರೆ. ಆದ್ದರಿಂದಲೇ ಆತ್ಮಹತ್ಯೆಯ ಮಾರ್ಗ ಕೈಕೊಳ್ಳಬೇಕಾಯಿತು. ಈ ಬಗ್ಗೆ ನೀನು ನನ್ನನ್ನು ಕ್ಷಮಿಸು. ನಿನ್ನ ಚಿಕ್ಕ ತಮ್ಮ ಮತ್ತು ತಾಯಿಯ ಸಂರಕ್ಷಣೆ ಮಾಡು. ಅಮೀರ ಫೈಸುಲರಲ್ಲಿ ರಾಜನಿಷ್ಠೆಯುಳ್ಳವನಾಗು. ಮತ್ತು ದೇಶಭಕ್ತಿಯುಳ್ಳವನಾಗು.

ಇರಾಕದ ಇಂದಿನ ಪರಿಸ್ಥಿತಿಯು-

ಪ್ರಧಾನ ಮಂಡಲದಲ್ಲಿ ಅದಲುಬದಲಾಯಿತು. ಹಾಶಿಮ ಪಾಷಾನಲ್ಲಿ ಜನತೆಯ ವಿಶ್ವಾಸವಿತ್ತು. ಆತನೂ ಮಂತ್ರಿ ಮಂಡಲದಲ್ಲಿ ಸೇರಿದನು. ಈ ಮಂಡಲವು ರಾಜಕೀಯ ಸ್ವಾತಂತ್ರ್ಯದ ಬಗ್ಗೆ ಮುಗ್ಧವಾಗಿರುವದನ್ನು ಕಂಡು ಪ್ರಜರು ಏನು ಬೇಕಾದ್ದು ಆಗಲಿ, ಸ್ವಾತಂತ್ರ್ಯ ಸಂಪಾದಿಸಲಿಕ್ಕೆ ಬೇಕೆಂದು ಶಪಥ ಮಾಡಿದ್ದಾರೆ. ಏಕೆಂದರೆ ಈ ನಂತರ ಬಹಳ ದಿವಸ ಇಂಗ್ಲೀಷರ ದಾಸ್ಯ ಪಂಕದಲ್ಲಿ ಬೀಳಬೇಕೆಂಬ ಅಪೇಕ್ಷೆ ಇರುವದಿಲ್ಲ. ತಿಂಗಳೊಪ್ಪತ್ತಿನಲ್ಲಿ ಬೊಗ್ದಾದಿಯಿಂದ ತುರುಕರ ರಾಜಕೀಯ ಪರಿಸ್ಥಿತಿಯಲ್ಲಿ ಬದಲಾಗುವ ಚಿನ್ಹ ತೋರುತ್ತಿರುವದು. ಈ ಬದಲಾವಣೆಯಾಗದಿದ್ದರೆ ಈಗಿನ ಪ್ರಧಾನರೂ ರಾಜೀನಾಮೆ ಕೊಡುವರು. ರಾಜೀನಾಮೆಯ ನಂತರ ಬಗದಾದ ಮತ್ತು ಬ್ರಿಟಿಶ ಸರಕಾರಗಳ ಸಹಕಾರವೆಂಬದು ನಷ್ಟವಾಗುವದು.

ಇಂಗ್ಲಿಷರ ಅಸೂಯೆ-

ಅನೇಕ ಜನ ಇಂಗ್ಲಿಷರಿಗೆ ಇರಾಕದ ಮಹತ್ವಾಕಾಂಕ್ಷೆಯು ಸಸೇರವಾಗಿಲ್ಲ. ಇವರ ಸ್ವಾತಂತ್ರ್ಯ ಪ್ರಾಪ್ತಿಯ ಚಳವಳಿಯನ್ನು ಬಡಿದು ಹಾಕಬೇಕೆಂದಿದ್ದಾರೆ. ಖುರ್ದ ಜನರನ್ನು ಎಬ್ಬಿಸಿ ಹುರಿದುಂಬಿಸಿ, ಅವರಿಂದ ಬಗದಾದದ ವಿರುದ್ಧ ಬಂಡಾಯವನ್ನೆಬ್ಬಿಸಬೇಕೆಂಬ ಹಂಚಿಕೆ ಹಾಕಿದ್ದಾರೆ.

ಮೂಗಿಗಿಂತ ಮೂಗುತಿ ಭಾರ-

ಇರಾಕ ಮತ್ತು ಇಂಗ್ಲಿಷರ ಒಪ್ಪಂದದ ಮೇರೆಗೆ ಆ ದೇಶದಲ್ಲಿ ಬ್ರಿಟಿಶರ [illegible] ಜನ ಅಧಿಕಾರಿಗಳಿದ್ದರು. ಆದರೆ ಮುನ್ನೂರು ಜನರಿದ್ದಾರೆ. ಇದರಲ್ಲಿ ಇನ್ನೊಂದು ವಿಶೇಷವಾದ ಮಹತ್ವದ್ದೆಂದರೆ- ಅಲ್ಲಿಯ ಪ್ರಧಾನನಿಗಿಂತ ಈ ಇಂಗ್ರೇಜಿ ಕಾಮದಾರರ ಸಂಬಳವು ದೊಡ್ಡದಾಗಿರುತ್ತದೆ. ಇವರಲ್ಲಿ ೫೦ ಜನರ ಮುದ್ದತು ಮುಗಿಯುತ್ತಾ ಬಂದಿದ್ದು, ಇವರ ಸ್ಥಳಗಳನ್ನು ಪುನಃ ಇಂಗ್ರೇಜ ಜನರಿಂದಲೇ ತುಂಬಬೇಕೆಂದು ವರ್ತಮಾನಪತ್ರಗಳು ಬೊಬ್ಬೆಗುಟ್ಟುತ್ತವೆ.

ಅರಬರೆಲ್ಲ ಒಂದು-

ಪ್ರಕೃತ ಅರಬರೆಲ್ಲ ಒಂದೆಂಬ ಚಳವಳಿಯು ಎದ್ದಿದೆ. ಮಹಾಯುದ್ಧದ ನಂತರ ಅರಬರಲ್ಲಿ ಮಾಡಿದ ದೇಶ ವಿಭಾಗವು ಕಸಿಬಿಸಿಯಾದಂಥದಾಗಿರುತ್ತದೆ. ಇದು ಅಸ್ವಾಭಾವಿಕವಾಗಿದ್ದು, ಇದನ್ನು ಬದಲು ಬೇಗನೆ ರದ್ದು ಪಡಿಸಿ, ಎಲ್ಲ ಅರಬ ಭಾಗಗಳನ್ನು ಒಂದುಗೂಡಿಸಿ, ಇವುಗಳನ್ನು ಒಂದು ಧ್ವಜದ ಕೆಳಗೆ ಇಡಬೇಕೆಂದು ಇವರ ಅಪೇಕ್ಷೆಯಾಗಿದೆ. ಇಂದು ಈ ಕಲ್ಪನೆಯು ಹೊಸದು ಇದ್ದರೂ, ಅದು ಕೆಲಕಾಲದಲ್ಲಿ ಪ್ರತ್ಯಕ್ಷವಾಗಿ ಕಣ್ಣಿಗೆ ಕಂಡು ಬರುವದು.

ಫೈಸುಲರ ಪ್ರವಾಸ-

ಇಂಥ ದೇಶದ ವರ್ತಮಾನ ಪರಿಸ್ಥಿತಿಯನ್ನು ಕುರಿತು ಇಂಗ್ಲಿಷ ಮಂತ್ರಿಗಳ ಕೂಡ ಸಂಭಾಷಣೆ ಮಾಡಲು- ಸ್ವತಃ ಅಮೀರ ಫೈಸುಲ ರಾಜರು ಇಂಗ್ಲಂಡಕ್ಕೆ ಹೋಗುವ ಪ್ರವಾಸದ ತಯಾರಿ ನಡೆಸಿದ್ದಾರೆ. ಇದು ಅವರ ಎರಡನೆಯ ಯಾತ್ರೆಯು. ಸಂಗಡ ರಾಷ್ಟ್ರೀಯ ಪಕ್ಷದ ಪ್ರತಿನಿಧಿಗಳು ಹೋಗುವರು. ಇದೆಂಥ ಸಂಗತಿಯಿಂದ ಆ ದೇಶದಲ್ಲಿ ಬ್ರಿಟಿಶರ ಹೋಲ್ಪಿಗಾರರಿಗೆ ಎಂಥ ಪ್ರಸಂಗದ ಬಗ್ಗೆ ಅನಂತರೇನು ಮಾಡಬೇಕೆಂಬ ಪ್ರಶ್ನೆ ಹುಟ್ಟುತ್ತದೆ.

ಸತ್ತವರಿಗೆ ಸ್ವರ್ಗದಾಯಕವೆಂದು ಮಾಡುವ ಛಿಸರಿ ಭೋಜನದ ವಿರುದ್ಧ ಸತ್ಯಾಗ್ರಹ

— (೦) —

ಕಠೇವಾಡ ಮತ್ತು ಗುಜರಾಥ ಪ್ರಾಂತದ ಬ್ರಾಹ್ಮಣ- ಭಾಟಿಯಾ ಜನರಲ್ಲಿ ಸತ್ತವರ ಆತ್ಮಕ್ಕೆ ಶಾಂತಿ ಸಿಗಲೆಂದು, ಅವರಿಗೆ ಸ್ವರ್ಗಸುಖದೊರೆಯಲೆಂದು ಜ್ಞಾತಿ ಭೋಜನ ಮಾಡುವರು. ಅಷ್ಟು ಹಕ್ಕತ್ತು ಸಾಲದಿಂದ ತನಕ ಹೋಗುವದು. ಇದು ವ್ಯರ್ಥ ದ್ರವ್ಯವ್ಯಯವೆಂದು ತರುಣ ಸಂಘದವರು ಪಿಕೆಟಿಂಗ ಮಾಡಿ, ಇವನ್ನು ನಿಲ್ಲಿಸುತ್ತ ಬಂದಿದ್ದಾರೆ. ಈ ಸಂಘವು ಬೈಪಡಿಗಳಿಗೂ ಸೇರಿತು. ರಾಜಕೋಟದಲ್ಲಿ ೫೦ ಜನ ತರುಣರು ಒಂದು ದೊಡ್ಡ ಊಟವನ್ನು ನಿಲ್ಲಿಸಿದರು. ಪುರಾಣ ಮತವಾದಿಗಳು ಪೋಲೀಸರ ನೆರವು ಕೋರಿದರು. ಪೋಲೀಸರು ಬಂದು ನೋಡುವಾಗ ತರುಣರ ಶಾಂತ ವೃತ್ತಿಯಲ್ಲಿ ಏನೂ ದೋಷ ಕಾಣಲಿಲ್ಲ. ಆದ್ದರಿಂದ ಅವರು ಹೊರಟು ಹೋದರು. ತರುಣರು ಗೆದ್ದರು. ಈ ಗಾಳಿಯು ಕರ್ನಾಟಕದಲ್ಲಿ ಮುಂದೆ ಎಲ್ಲಿ ಬೀಸುವದೇನ?

ಲಾಹೋರಿನಲ್ಲಿ
ಇಲಾಮುದ್ದೀನನ ಪುನಃ ದಫನ
—(೦)—
ಎರಡು ಲಕ್ಷ ಮುಸಲಮಾನರ ಮೆರವಣಿಗೆ.

ರಾಜಪಾಲನ ಕೊಲೆಮಾಡಿದ ಇಲಾ-ಮುದ್ದೀನನಿಗೆ ಮಿಯಾನವಾಲಿದ ಎರಂಗವಲ್ಲಿ ಗಲ್ಲಿಗೆ ಹಾಕಿದಬಳಿಕ, ಆತನ ಪ್ರೇತವನ್ನು ಅಲ್ಲಿಯೇ ಹೂಗಿದರು. ಈ ಪ್ರೇತವನ್ನು ತಮಗೆ ಕೊಡಬೇಕೆಂದು ಸತ್ಯಾಗ್ರಹಮಾಡಿ, ಹಣ ಹೊರಗೆ ತೆಗೆದು, ಲಾಹೋರಿಗೆ ತಂದು, ಅಲ್ಲಿ ಅದರ ಮೆರವಣಿಗೆ ಮಾಡಬೇಕೆಂದು ಮುಸಲಮಾನರು ಆಲೋಚಿಸಿದರು. ಮುಸಲಮಾನ ಮುಖಂಡರುಗಳು ಈ ವಿಷಯವಾಗಿ ಗವರ್ನರಸಾಹೇಬರನ್ನು ಕಂಡು ಹೆಣದ ಮೆರವಣಿಗೆಯಲ್ಲಿ ದಂಗೆಯಾಗದಂತೆ ಜಾಮೀನರಾಗಲು ಸಿದ್ಧರಾದರು. ಇಂಥ ಮಾರ್ಗದಿಂದಲೇ ಹೆಣವನ್ನು ಕಬರಸ್ತಾನಕ್ಕೆ ಒಯ್ಯಬೇಕೆಂದು ಗವರ್ನರಸಾಹೇಬರೂ ಶರ್ತುಹಾಕಿದರು. ಮುಖಂಡರು ಈ ಶರತ್ತಿಗೆ ಒಪ್ಪಿದಬಳಿಕ ಸರಕಾರದವರು ಸ್ಪೇಶಲ ಟ್ರೇನಿನಿಂದ ಹೆಣವನ್ನು ಲಾಹೋರಿನ ಸ್ಟೇಶನಿಗೆ ತಂದು, ಅಲ್ಲಿ ಇದನ್ನು ಮುಸಲಮಾನರ ವಶಮಾಡಿದರು. ೧೪ ನೇ ತಾರೀಖಿನ ದಿವಸ ದಫನ ವಿಧಿಯಾಗುವದೆಂದು ಮುಂದಾಗಿ ಗೊತ್ತಾದ್ದರಿಂದ ಕೋಹಟ, ಪೇಶಾವರ ಮುಂತಾದ ದೂರಿನ ಪಟ್ಟಣ ಹಳ್ಳಿಗಳಿಂದ ಜನರು ಬಂದರು. ಪ್ರೇತಯಾತ್ರೆಯಲ್ಲಿ ಎರಡು ಲಕ್ಷ ಜನ ಕೂಡಿತ್ತು. ಮೊಗಲರು ಬುರಕಿಹಾಕಿಕೊಂಡೇ ಹೊರಬೀಳುವದಿಲ್ಲ; ಅಂದು ಇವರು ಬುರಕಿಯ ಅನಾನುಕೂಲತೆಯನ್ನು ಲಕ್ಷ್ಯಕ್ಕೆ ತರದೆ, ಮೆರವಣಿಗೆಯಲ್ಲಿ ಸೇರಿದರು. ಇವರ ಸಂಖ್ಯೆಯು ಹಲವು ಸಾವಿರವಾಗಿತ್ತು. ಯಾವ ಗೊಂದಲವಿಲ್ಲದೆ ಇಲಾಮುದ್ದೀನನಿಗೆ ಮಣ್ಣು ಕೊಡುವ ಕೆಲಸ ಸಾಗಿತು. ದಂಗೆಯಾದೀತೆಂಬ ಮುಂಜಾಗ್ರತೆಯ ಉಪಾಯವೆಂದು ಪೋಲೀಸರು ಶಿಕ್ಷಿತ ಸೈನ್ಯದ ಸಹಿತವಾಗಿ ಪಟ್ಟಣದಲ್ಲಿ ತಿರುಗಾಡುತ್ತಿದ್ದರು. ಎಂಥ ಇಲಾಮುದ್ದೀನನ ದೈವ. ಕೊಲೆಯಂಥ ಪಾಪಮಾಡಿದರೂ, ಸ್ವಜಾತಿಯವರ ಧರ್ಮಾಭಿಮಾನದ ದೆಸೆಯಿಂದ ಅಸಾಮಾನ್ಯವಾದ ಮೆರವಣಿಗೆಯಿಂದ ಮೆರೆದನು. ಸಾವಿರಾರು ಸ್ತ್ರೀಯರೂ ಇಷ್ಟು ಜನರು ಮೆರವಣಿಗೆಯಲ್ಲಿ ಕೂಡಿದರು.

ಪಾಲೆಸ್ತಾಯಿನದಲ್ಲಿ ಯಹೂದಿಗಳ ಕೂಡ ದಂಗೆ ಮಾಡಿ, ಯಹೂದಿಗಳ ಕೊಲೆ ಮಾಡಿದರೆಂಬ ಆರೋಪದ್ದಾಗಿ ಅನೇಕ ಅರಬರಿಗೆ ಗಲ್ಲಿನ ಶಿಕ್ಷೆಯಾಗಿದೆ.

ಶಿರಸಿಯ ತಾಲೂಕ ಬೋರ್ಡ.
ಎಲ್ಲ ಮೆಂಬರರ ರಾಜೀನಾಮೆ.
—(೦)—

ಕಾರವಾರದ ಡಿಸ್ಟ್ರಿಕ್ಟ ಲೋಕಲಬೋರ್ಡ ಮತ್ತು ಶಿರಸಿಯ ತಾಲೂಕ ಬೋರ್ಡಿನ ನಡುವೆ ಒಬ್ಬ ಕಾರಕೂನನ ಬದಲಿಯ ವಿಷಯವಾಗಿ ಜಗಳ ಬಂತು. ಸಪ್ಟಂಬರ ತಿಂಗಳಲ್ಲಿ ಆತನ ಬದಲೀ ಮಾಡಬೇಕೆಂದು ಜಿಲ್ಲಾ ಬೋರ್ಡಿನವರು ತಿಳಿಸಿದರು. ಸಪ್ಟಂಬರ ಆಗುವ ತನಕ ಬದಲಿಸಬರಲಾರದೆಂದು ತಾಲೂಕಿನವರು ಉತ್ತರ ಕೊಟ್ಟರು. ಜಿಲ್ಲಾ ಬೋರ್ಡಿನವರು ತಮ್ಮ ಹುಕುಮು ನಡೆಯಬೇಕೆಂದು ತಾಲೂಕಿನವರಿಗೆ ಪತ್ರದ ಮೇಲೆ ಪತ್ರ, ತಾರಿನ ಮೇಲೆ ತಾರು ಕಳಿಸಿದರು. ಇದರಿಂದ ಜಿಲ್ಲಾ ಬೋರ್ಡಿಗೆ ತಾಲೂಕಾ ಲೋಕಲಬೋರ್ಡು ಅಧೀನವಾಗಿರಬೇಕೇನೆಂಬ ಪ್ರಶ್ನ ಹೊರಟು, ಕೊನೆಯಲ್ಲಿ ಎಲೆಕ್ಟೆಡ ಮತ್ತು ನಾಮಿನೇಟೆಡ ಸೇರಿ ೧೫ ಜನ ಮೆಂಬರರು ರಾಜೀನಾಮೆ ಕೊಟ್ಟಿದ್ದಾರೆ. ಉಳಿದ [illegible]ಯವರು ಮಾಡಲೇ ಇಲ್ಲ. ಸರಕಾರೀ ಅಧಿಕಾರಿಯೊಬ್ಬ ಸಂಬಂಧದ ದೆಸೆಯಿಂದ ರಾಜೀನಾಮೆ ಕೊಟ್ಟಿಲ್ಲ. ಆದರೂ ಇವರ ಮತವು ೧೫ ಜನ ಮೆಂಬರರಂತೆಯೇ ಉಂಟು.

ಮರಾಠೀ ಶಾಲೆಯಲ್ಲಿ ಕನ್ನಡ ಶಿಕ್ಷಣ.
—(೦)—

ವಿಜಾಪೂರ ಪಟ್ಟಣದ ಸ್ಕೂಲ ಬೋರ್ಡಿನವರು ಅಲ್ಲಿಯ ಮರಾಠಿ ಶಾಲೆಯಲ್ಲಿ ಕನ್ನಡ ಕಲಿಸಬೇಕೆಂದು ವಿಚಾರ ಮಾಡಿ, ಮರಾಠಿಗರ ಮತ ಕೇಳಿದರು. ಮರಾಠಿಗರು ಒಂದು ಸಭೆ ಮಾಡಿ, "ಸ್ಕೂಲ ಬೋರ್ಡಿನವರು ಮರಾಠಿ ಶಾಲೆಗಳಲ್ಲಿ ಕನ್ನಡ ಕಲಿಸಬೇಕೆಂದು ಮಾಡಿದ ಯೋಜನೆಯು ಈ ಸಭೆಗೆ ಸಮ್ಮತವಿದೆ. ಆದರೆ ಈ ಠರಾವಿನ ಬಲದಿಂದ ಮರಾಠಿ ಅಥವಾ ಮರಾಠಿ ಶಾಲೆಗಳ ಪೂರ್ಣ ಉಚ್ಚಾಟನೆಯಾಗದಂತೆ ಅಥವಾ ಮರಾಠಿ ಶಿಕ್ಷಣ ಕುಂದದಂತೆ ವ್ಯವಸ್ಥೆಯಾಗಬೇಕು" ಎಂಬ ಠರಾವು ಮಾಡಿ, ಅದನ್ನು ಬೋರ್ಡಿಗೆ ಕಳಿಸಿದ್ದಾರೆ. ಸ್ವರ್ಗವಾಸಿ ಸಹಸ್ರಬುದ್ಧೆಯವರು ವಿದ್ಯಾಖಾತೆಯ ಇನ್ಸಪೆಕ್ಟರರಿದ್ದಾಗ- ಕನ್ನಡ ಶಾಲೆಗಳಲ್ಲಿ ಮರಾಠಿಗಲಿಸಬೇಕೆಂದಿದ್ದರು. ಆ ಮನ್ವಂತರ ಹೋಗಿ, ಮರಾಠಿಗರೇ ಕನ್ನಡ ಕಲಿಯುವ ಒತ್ತಾಯದ ಹೊತ್ತು ಬಂತು.

[illegible] ಅಸ್ಪೃಶ್ಯರು ಕ್ರಿಶ್ಚನ್ನರಾಗುವರು.
—(೦)—

ಕೊಲ್ಹಾಪೂರದಲ್ಲಿ ಶಿರ್ಕೆ ಎಂಬ ಅಸ್ಪೃಶ್ಯರಿದ್ದಾರೆ. ಇವರಿಗೆ ದಾದಾಸಾಹೇಬ ಎಂಬ ಬಹುಮಾನದ ಹೆಸರುಂಟು. ಈ ದಾದಾಸಾಹೇಬ ಶಿರ್ಕೆಯವರು ಪುಣೆಯ ಮಿಶನರಿಗಳ ಕೂಡ ಸಂಗನಮತ ಮಾಡಿ, ತಾವೊಬ್ಬರೇ ಅಲ್ಲ; ೫೦೦ ಅಸ್ಪೃಶ್ಯರೊಂದಿಗೆ ಕ್ರಿಶ್ಚನ್ನ ಧರ್ಮ ಸ್ವೀಕರಿಸಬೇಕೆಂದಿದ್ದಾರೆ. ಹಿಂದೂ ಮುಂದಾಳುಗಳು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮನಃಪೂರ್ವಕ ಪ್ರಯತ್ನಿಸುತ್ತಲಿದ್ದಾರೆ, ಕ್ರಿಶ್ಚನ್ನರಾಗಬೇಡಿರೆಂದು ಎಷ್ಟು ಉಪದೇಶ ಮಾಡಿದರೂ, ಇವರ ತಲೆಯಲ್ಲಿ ಧುಮಿಸುತ್ತಿರುವ ಧರ್ಮಾಂತರದ ವಿಚಾರವು ಹೋಗಲೊಲ್ಲದು.

ಸಾಂಗಲಿಯಲ್ಲಿ ಕೃಷ್ಣಾನದಿಗೆ ಸೇತುವೆ.
—(೦)—

ಸಾಂಗಲಿಯ ಶ್ರೀಮಂತರು ಆರುವರೇ ಲಕ್ಷ ರೂಪಾಯಿ ವೆಚ್ಚ ಮಾಡಿ, ಕೃಷ್ಣಾನದಿಗೆ ಕಟ್ಟಿಸಿದ ಪೂಲನ್ನು ವೈದಿಕ ವಿಚಾರದಿಂದ ತೆರೆಯುವ ಸಮಾರಂಭವು ಕಳೆದ ಗುರುವಾರ ದಿವಸವಾಯಿತು. ವೈದಿಕರು ಹೋಮಹವನಗಳಿಂದ ಕೃಷ್ಣಾನದಿಯ ಪೂಜೆ ಮಾಡಿ, ಸೇತುವೆಯನ್ನು ತೆರೆಯುವ ಕಾರ್ಯ ಮಾಡಿದರು. ಇದನ್ನು ವ್ಯಾವಹಾರಿಕ ದೃಷ್ಟಿಯಿಂದ ನಾಳಿನ ದಿವಸ ಲಾರ್ಡ ಅರ್ವಿನಸಾಹೇಬರು ತೆರೆಯುವರು. ಚೀಫರು ಇದಕ್ಕೆ ಲಾರ್ಡ ಸಾಹೇಬರ ಹೆಸರಿಡುವರು.

ವಿವಿಧ ವರ್ತಮಾನಗಳು
—(೦)—

ಪದಭ್ರಷ್ಟ ಜರ್ಮನಿಯ ಕೈಸರರ ಭಾಗಿನೆಯು ತಿರುಕಳಂತೆ. ಇವಳನ್ನು ನೋಡಬೇಕೆಂದು ಕೈಸರರು ಬಹಳ ಹಾತೊರೆದರು. ರಾಜಕಾರಣವು ನಡುವೆ ಬಂದು, ಅತ್ಯಲ್ಪಕಾಲದಲ್ಲಿ ಕೂಡ ಭೆಟ್ಟಿ ಮಾಡಗೊಡಲಿಲ್ಲ. ಇವಳ ಗಂಡನು ಸ್ವರೂಪ ಬದಲುಮಾಡಿಕೊಂಡು, ಒಂದು ಭೋಜನಾಲಯದಲ್ಲಿ ನೀಡುವ ಹೋರೆಮಾಡುತ್ತಾನೆಂದು ಹೇಳುವರು.

ಮಹಾಜಾತಿಯ ಸ್ವರಾಜ್ಯವು ನಿಮ್ಮ ದೃಷ್ಟಿಪಥದಲ್ಲಿರುವದು. ಅದು ಬೇಗನೆ ಸಿಗುವಂತೆ ಹಿಂದೂ ಜನರಿಗೆ ಹೇಳುವದು [illegible] ತಕರಾರು ಆಗುತ್ತದೆಂದು ಮುಂಬಯಿಯ ಗವರ್ನರರಾಗಿದ್ದ ಲಾರ್ಡ ಸಿಡೆನಹ್ಯಾಮಸಾಹೇಬರು ಹೇಳುತ್ತಾರೆ.

ಸಾಹೇಬರು ಕೆಲವು ಕಲಮುಗಳನ್ನು ಸೇರಿಸಿದ್ದಾರೆಂಬು ಹೇಳುವರು.

ಕಾನು ಅಧೀನನಾದ ಮಾಲಿಕ ಜನರಲ ನಾದಿರ್‌ಖಾನನು ತನಗೆ ನಾದಿರಶಹಾ ಎಂಬ ಹೆಸರಿಟ್ಟು ಕೊಂಡನು.

ಪೂನಾದಲ್ಲಿ ಒಕ್ಕಲತನದ ಖಾತೆಗಳ ಮಂತ್ರಿಗಳ ಪರಿಷತ್ತು ಕೂಡುವದು. ಆಗ ಮುಂಬಯಿ ಇಲಾಖೆಯ ಮಂತ್ರಿಯಾದ ಮಿ. ಜಾಧವರಾಯರು ಮೀರತೆಗಳ ನಿರ್ಬಂಧ ಹಾಗು ಪರದೇಶದ ಸಕ್ಕರೆಯ ಮೇಲೆ ಹೆಚ್ಚಿಗೆ ಜಕಾತಿ ಕೂಡ್ರಿಸುವ ವಿಷಯಗಳ ಪ್ರಸ್ತಾಪ ಮಾಡುವರು.

ಒಂದು ಕಾಲದಲ್ಲಿ ಲಾಲ, ಬಾಲ, ಪಾಲರೆಂಬ ತ್ರಿಮೂರ್ತಿಗಳಲ್ಲಿದ್ದ ಶ್ರೀ. ಪಾಲರು ಪುಣೆಗೆ ಬಂದಿದ್ದಾರೆ. ಇವರಿಗೆ ಮಾನಪತ್ರ ಕೊಡಬೇಕೆಂದು ಮ್ಯುನಿಸಿಪಾಲಿಟಿಯಲ್ಲಿ ಸೂಚನೆ ಬಂತು. ಪಾಲರಲ್ಲಿ ಮೊದಲಿನ ಪೌರುಷ ಪುರುಷಾರ್ಥ ಉಳಿಯಲಿಲ್ಲೆಂಬ ಕಾರಣದಿಂದ, ಅವರಿಗೆ ಮಾನಪತ್ರ ಕೊಡಬಾರದೆಂಬ ಠರಾವು ಪಾಸಾಯಿತು.

ನೋಟೀಸು

ಚ|| ರಾ|| ರಾ|| ನಿಲಕಂಠಪ್ಪಾ ಬಿನ್ನ ರತ್ನಪ್ಪಾ ಪಟ್ಟಿತ್ರೆ ಸಾ| ರೋಣ ತಾ| ರೋಣ ಇವರಿಗೆ-

ಕೆಳಗೆ ಸಹಿ ಮಾಡಿದ ಬಸವ್ವಾ ದತ್ತಕ್ಷೇತ್ರಿ ಗಂಗಪ್ಪಾ ಪಟ್ಟಿತ್ರೆ ಸಾ|| ರೋಣ ತಾ|| ರೋಣ ಇವರಿಂದ ತಿಳಿಸುವದೇನಂದರೆ- ನೀನು ನನ್ನ ಜನಕ ತಮ್ಮನಿದ್ದು ನನಗೆ ಅಜಾರಿ ಇರುವದರಿಂದ ನನ್ನನ್ನೂ ನನ್ನ ಹೆಂಡತಿಯನ್ನು ರಕ್ಷಣೆ ವಗೈರೆ ಮಾಡತೇನೆಂತಾ ಬಹಳ ಪ್ರಕಾರ ಭುಲತಾಪ ತುಂಬಿಸಿ, ನನ್ನ ಅಜಾರಿ ವೇಳೆಯಲ್ಲಿ ನನ್ನ ಕಡಿಂದ ನನ್ನ ಮನಿ ಹಾಂಗೂ ನಮ್ಮ ವಾಸಪ್ಪನ ಮನಿ ಸಹಿತಾ ಖಾತೆ ಈ ಹಕೀಕತು ನಮಗೆ ತಿಳಿಯಗೊಡದಲೇ ಖರೀದಿ ಬರಿಸಿಕೊಂಡು ಸಪ್ಟಂಬರ ೧೯೨೮ ರಲ್ಲಿ ನೋಂದಾಯಿಸಿಕೊಟ್ಟಿರುತ್ತದಷ್ಟೇ ಆದರೆ ಇದು ಪೋಕಳ ಖರೀದಿ ಇದ್ದು ಆಸ್ತಿ ಸಹಾ ನಿಮ್ಮ ತಾಬಾಕ್ಕ ಕೊಟ್ಟಿರುವದಿಲ್ಲಾ ನನ್ನನ್ನು ಹಾಗೂ ನನ್ನ ಹೆಂಡತಿಯನ್ನು ಸಹಾ ರಕ್ಷಣೆಮಾಡದೇ ನಮಗೆ ಭಲತೆ ಘಾತ ಮಾತ್ರೋಡದಲ್ಲದೆ, ಬಹು ರೀತಿ ಕಷ್ಟಪಡಿಸಲಿಕ್ಕೆ ಹತ್ತಿಂತೀದಿ ಅದ್ದರಿಂದ ಈ ಲೇಖದ ಮೋಲಿದ ಸದ್ರಿ ಖರೀದಿ ಪತ್ರವನ್ನು ರದ್ದುಪಡಿಸಿರುತ್ತೇನೆ. ತಿಳಿಯೆ ರದು ತಾ| ೧೬-೧೧-೨೮ ಇಸ್ವಿ

ಸಹಿ- ಬಸವ್ವಾ ಗಂಗಪ್ಪಾ ಪಟ್ಟಿತ್ರೆ

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೇ, ಅಥವಾ ಯಾವುದೇ ಬಣ್ಣದ ಹೊಯ್ ಕುಸುಮು ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ರೋಗಿಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ಔಷಧ ಬೇಡುವಾಗ ಯಾವ ವರ್ತಮಾನಪತ್ರದ ಜಾಹೀರಾತ ನೋಡಿ ಈ ಬೇಡಿಕೆಯನ್ನು ಮಾಡುವಿರೆಂಬುದನ್ನು ಬರೆಯಬೇಕು.

ನೋಟೀಸು

ಮ| ರಾ| ರಾ| ಗುರುನಾಥ ವೆಂಕಾಜಿ ನಾಡಕರ್ಣಿ ಸಾ| ಸೊಲಾರಕೊಪ್ಪ ತಾಲೂಕ ಕಲಘಟಗಿ ಇವರಿಗೆ-

ಕೆಳಗೆ ಸಹಿ ಮಾಡುವವನ ಕಡಿಂದಾ ಇದರ ಮೂಲಕ ನೋಟೀಸು ಕೊಡುವದರಲ್ಲಿ ಬರುತ್ತದಲ್ಲಾ ಕಲಘಟಗಿ ತಾಲೂಕ ಬುಳ್ಳನಾಯ್ಕನಹೂಲಿಕಟ್ಟಿ ಗ್ರಾಮದ ರಿ| ಸ| ೭೨ನೇ ಜಮೀನು ನಿಮ್ಮ ವ ದತ್ತಾತ್ರಯ ಹಣಮಂತರಾವ ನಾಡಕರ್ಣಿ ಈ ಉಭಯತರ ಸಮೂಹಿಕ ಮಾಲ್ಕಿ ವಹಿವಾಟೀದು ಇದ್ದು ಇಬ್ಬರ ಕಡಿಂದಾ ನಾನು ಸದರ ಜಮೀನು ಲಾವಣೀ ಮಾಡಿರುತ್ತೇನೆ ವ ಅದರಂತೆ ಲಾವಣೀ ಪತ್ರವನ್ನಾದರೂ ಬರೆಕೊಟ್ಟಿರುತ್ತೇನೆ ಹೀಗೆ ಇದ್ದು ನೀವು ಎಲಿ ಕಡಿಗೆ ಏನೋ ಒಂದು ಕಾಗದ ಬರಿಸಿಕೊಂಡು ಬಂದು ಅದರ ಮೇಲೆ ನನ್ನ ಸಹಿ ತೆಗೆದುಕೊಂಡು ಹೋದಿರಿ ಈಗ ವಿಚಾರ ಮಾಡುವಲ್ಲಿ ಮೇಲೆ ಕಾಣಿಸಿದ ಜಮೀನನ್ನು ನಿಮ್ಮೊಬ್ಬರ ಕಡಿಂದಲೇ ಲಾವಣೀ ಮಾಡಿದಂತೆ ಅಂದರೆ ಸದರ ಜಮೀನಿಗೆ ನೀವೊಬ್ಬರೇ ಮಾಲಕರೆಂದು ನಾನು ಕಬೂಲ ಮಾಡಿದಂತೆ ನನ್ನ ಕಬೂಲಿ ಲೇಖ ಅಗರ ಲಾವಣೀಪತ್ರ ಇರುತ್ತದೆಂದು ಕಂಡು ಬರುತ್ತದೆ ನಿಮಗೆ ಈ ಪ್ರಕಾರದ ಲೇಖ ನಾನು ಎಂದೂ ಬರೆಕೊಟ್ಟಿಲ್ಲಾ ಅಂಥ ಲೇಖ ನಿಮ್ಮಲ್ಲಿ ಹೊರಟರೆ ಅದರ ಮಜಕೂರು ನನಗೆ ತಿಳಿಸದೆ ಬರಿಸಿಕೊಂಡ ಲೇಖ ಇರುತ್ತದೆ ಹೊರ್ತು ನಾನು ಕಬೂಲಿಯಿಂದ ಬರೆಕೊಟ್ಟದ್ದು ಇರುವದಿಲ್ಲ ಅದಕ್ಕೆ ನನ್ನ ಒಪ್ಪಿಗೆ ಇದ್ದಿಲ್ಲಾ ವ ಇಲ್ಲಾ ಅಂತಾ ತಿಳಿಯತಕ್ಕದ್ದು ತಾರೀಖು ೧೩-೧೧-೨೮

ಈ ಎಡಗೈ ಹೆಬ್ಬಟ್ಟಿನ ಗುರ್ತು ಗದಿಗೆಪ್ಪ ಬಿನ್ನ ದ್ಯಾವಪ್ಪಾ ಮೀನಪ್ಪನವರ ಸಾ| ಬುಳ್ಳನಾಯ್ಕನಹೂಲಿಕಟ್ಟಿ ಈತ ಮಾಡಿದ್ದು ಅದೆ

ನೋಟೀಸಿನ ದರಗಳು.

——)(o)(——

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ, ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ- ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಂಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ **ವಿಜಯ** ಕಿಂ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಬುಧವಾರ ತಾರೀಖು ೨೦ನೇ ಸಪ್ಟೆಂಬರ ೧೯೩೯ (ಸಂಚಿಕೆ ೨೫೨

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ-

ಮಂಗಳವಾರ ಪೇಠ ಜೋಗಿ ವಕೀಲರ ಮನೆಯಲ್ಲಿ.

ದಾಗೀನೆಗಳ ಪತ್ತೀ ಮೇಲೆ ಸೋವು ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು.

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಲಿರುವದು. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ನಾಣ್ಯ, ಬೆಳ್ಳೀ ದಾಗೀನೆಗಳ ಮೇಲೆ ಸೋಯಿ ಬಡ್ಡೀ ದರದಿಂದ ಸಾಲ ಕೊಡುವ ವ್ಯವಸ್ಥೆಯುಂಟು. ದಾಗೀನೆ ಪತ್ತೀ ಇಟ್ಟವರು ಮೊದಲನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ ೧೫ ದಿವಸಕ್ಕೊಮ್ಮೆ ಎಷ್ಟೇ ರಕಮು ತಂದು ಕೊಟ್ಟರೂ, ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಎಷ್ಟೆಷ್ಟೇ ರಕಮು ಕೊಡುವದರಿಂದ, ಸಾಲದ ಭಾರ ಕಡಿಮೆಯಾಗಿ, ಬಡ್ಡಿಯು ಕಡಿಮೆಯಾಗುತ್ತಾ ಬರುವದು. ಧಾರವಾಡ ಮುಂತಾದ ಪಟ್ಟಣವಾಸಿಗಳು ಈ ಸೋಯಿಯ ಫಾಯದೆ ತಕೊಳ್ಳುತ್ತಿದ್ದಾರೆ. ಆದರೆ ಇದರ ಮಹತ್ವವು ಮತ್ತು ಉಪಯೋಗವು ಹಳ್ಳಿಯ ಜನರಿಗೂ ಆಗಲೆಂದು ಈ ಜಾಹೀರಾತನ್ನು ಪ್ರಸಿದ್ಧ ಮಾಡಿ, ಮುಖ್ಯವಾಗಿ ಹಳ್ಳಿಗಳಿಗೆ ಕಳಿಸಿದ್ದೇವೆ. ಹಳ್ಳಿಯಲ್ಲಿ ಬಡ್ಡಿಯ ದರವು ರೂಪಾಯಕ್ಕೆ ಮೂರು ಪೈ ಇಂದ ಆರು ಪೈ ವರೆಗೆ ಇರುತ್ತದೆ. ಅದೂ ಒಮ್ಮೆಯಲೆ ಕೊಡಬೇಕಾಗುತ್ತದೆ. ಹೀಗಾಗಿ ಎಷ್ಟೋ ಜನ ಬಡವರಂತೂ ಇರಲಿ; ಶ್ರೀಮಂತರ ದಾಗೀನೆಗಳು ಸಹ ಸಾವಕಾರರ ಅಸಲು ಮತ್ತು ಬಡ್ಡಿಯಲ್ಲಿ ಮುದುಗಡೆಯಾಗಿ ಹೋಗುತ್ತವೆ. ಆ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ದಾಗೀನೆ ಪತ್ತೀ ಇಟ್ಟರೆ ಆಗುವದಿಲ್ಲ. ಏಕಂದರೆ ಸ್ವಲ್ಪ ರಕಮು ಕೊಟ್ಟರೂ ಅದನ್ನು ತಕ್ಕೊಂಡು, ಸಾಲದ ಭಾರವನ್ನು ಕಡಿಮೆಮಾಡುತ್ತಾ ಬರುತ್ತೇವೆ. ಇಂಥ ಸೋಯಿಯು ಹಳ್ಳಿಗಳಲ್ಲಿ ದೊರೆಯಲಾರದು. ಆದ್ದರಿಂದ ಹಳ್ಳಿಯಲ್ಲಿ ಸಾಲ ಬೇಕಾದವರು ನಮ್ಮ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ, ಅನುಭವ ಮತ್ತು ಲಾಭ ಪಡೆಯಬೇಕು. ನಮ್ಮ ಬಡ್ಡೀ ದರವು ನೂರು ರೂಪಾಯಿಯ ವರೆಗೆ ಒಂದು ತಿಂಗಳಿಗೆ ಒಂದು ರೂಪಾಯಿಗೆ ಎರಡು ಪೈ ಇರುತ್ತದೆ. ನೂರರ ಮೇಲಿನ ರಕಮಿಗೆ ಬಡ್ಡೀ ದರ ಪ್ರತ್ಯಕ್ಷವಾಗಿ ಅಥವಾ ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಗಳ ಜನರು ಶಹರದ ಊರಿಗೆ ಬಂದು ಸಾವಕಾರರ ಮೊದಲಾದವರಲ್ಲಿ ಅವರು ಹೇಳಿದಷ್ಟು ಬಡ್ಡೀ ಕರಾರ ಮಾಡಿ ಸಾಲ ತೆಗೆದುಕೊಳ್ಳುವರು. ಮತ್ತು ಮುಂದೆ ಬಹಳ ಕೆಟ್ಟು ನುಕ್ಸಾನ ಮಾಡಿಕೊಳ್ಳುವರು. ಹೀಗೆ ಬ್ಯಾಂಕಿನಲ್ಲಿ ಮಾತ್ರ ಆಗುವದಿಲ್ಲ. ಹಳ್ಳಿಗಳ ಜನರು ನಮ್ಮಲ್ಲಿ ಒಂದಾವರ್ತಿ ವ್ಯವಹಾರ ಮಾಡಿ ಖಾತ್ರೀ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ವಸ್ತು, ಬೆಳ್ಳಿ ಭಿಲ್ಲೆಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ ಎಲ್ಲರಕ್ಕಿಂತಲೂ ಸೋಯಿಯಿಂದ ಸಿಗುವವು.

ಕೃಷ್ಣರಾವ ವೆಂಕಟರಾವ ಭಂಡಿವಾಡ್ಯ

ಮ್ಯಾನೇಜಿಂಗ ಏಜಂಟ, ಧಾರವಾಡ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಸುಭಾಷ ರೋಡ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಖೇಳಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವವು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೪-೦
೪ ,,	೪-೦-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ.

ವಿಜಯ ಮ್ಯಾನೇಜರ, ಧಾರವಾಡ.

ವಿಜಯ.

ಧಾರವಾಡ ತಾ- ೨೦-೧೧-೨೫ನೇ ಇಸ್ವಿ.

ಆ ವಿಜಯಂ ಶ್ರೀಶಪ್ರಿಯ
ಶೀ ವಸುಮತಿಯು ವಹಿಸಿ ಸುಕೃತಶರತೆಗಳಿಂ ಪ
ದೀ "ವಿಜಯಂ" ಶ್ರೀಶಕಟಸ್ಥಿಣ ।
ಸಾ ವಿಹಿತಂಗಳ ವಿವರಿಸುತಲಿಪ್ಪುದು ಸಾಜಂ ॥೧॥

ಅಖಿಲ ಕರ್ನಾಟಕ ವಾಚನಾಲಯಗಳ ಪರಿಷತ್ತು.

ಬರುವ ದಿಸೆಂಬರ ೨೮-೨೯ ತಾರೀಖುಗಳಲ್ಲಿ ಧಾರವಾಡ ಜಿಲ್ಲೆಯ ವತಿಯಿಂದ ಇಲ್ಲಿ ವಾಚನಾಲಯಗಳ ಪರಿಷತ್ತನ್ನು ಕೂಡಿಸಬೇಕೆಂದು ಗೊತ್ತಾಗಿದ್ದು, ಅದರ ವೃತ್ತಾಂತವನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಕೊಡಲಾಗಿದೆ. ಈಗೆರಡು ವರ್ಷಗಳಿಂದ ಮಹಾನವಮಿಯ ನಾಡಹಬ್ಬವನ್ನು ಒಳ್ಳೇ ಯಶಸ್ವಿಯಾಗಿ ನೆರವೇರಿಸಿದ ಶಾಂತೇಶ ವಾಚನಾಲಯದವರೇ ಮೇಲಿನ ಪರಿಷತ್ತಿನ ವ್ಯವಸ್ಥಾಪಕರೆಂದ ಮೇಲೆ ಈ ಪರಿಷತ್ತು ಯಶಸ್ವಿಯಾಗುವದೆಂಬದರಲ್ಲಿ ಸಂದೇಹವಿಲ್ಲ.

ಕರ್ನಾಟಕವು ಸ್ವತಂತ್ರವಾಗಲು ಹಂಬಲಿಸುತ್ತಿರುವಾಗ, ಅದರ ಸರ್ವ ವಿಧ ಉನ್ನತಿಯಾಗ ವದು ಅತ್ಯವಶ್ಯ. ವಾಚನಾಲಯಗಳಾದರೋ ಜನತೆಯಲ್ಲಿ ಜ್ಞಾನ ಪ್ರಸಾರಮಾಡುವ ಮುಖ್ಯ ಸಾಧನವು. ಹಳ್ಳಿಗಾಡರಿಗೂ ಕೂಡ ವಾಚನಾಲಯಗಳಿಂದ ಒಳ್ಳೇ ಉಪಯೋಗವಾಗುವದೆಂಬದರಲ್ಲಿ ಸಂಶಯವಿಲ್ಲ. ನಿರಕ್ಷರಿಗಳಾದರೂ, ಇಂಥ ವಾಚನಾಲಯಗಳಲ್ಲಿ ಹೋಗಿ ಕುಳಿತು, ವೃತ್ತಪತ್ರಗಳನ್ನೋದುವದನ್ನು ಕೇಳಿದರೆ ಅವರಿಗೆ ಜಗತ್ತಿನಲ್ಲಿಯ ಸಂಗತಿಗಳು ಗೊತ್ತಾಗುವದಲ್ಲದೆ, ತನ್ನ ನಾಡಿನ ಧ್ಯೇಯಸಾಧನೆಗಾಗಿ ತಾನು ಮಾಡಬೇಕಾದ ಕಾರ್ಯಭಾಗದ ಅರಿವಾದರೂ ಅವರಿಗೆ ಚನ್ನಾಗಿ ಉಂಟಾಗುವದು. ಆದ್ದರಿಂದಲೇ ವಾಚನಾಲಯಗಳು ಜ್ಞಾನಸಾಧನೆಯ ಮುಖ್ಯ ಸಾಧನವೆಂದು ಎಲ್ಲರೂ ಒಪ್ಪಿದ ವಿಷಯವಾಗಿದೆ.

ಇಂಥ ಸರ್ವತೋಪರಿಯ ಉಪಯುಕ್ತವಾದ ವಾಚನಾಲಯಗಳನ್ನು ಸುಸಂಘಟಿತವಾಗಿ ಮಾಡಿ, ಅವು ಒಳ್ಳೇ ಸ್ಥಿತಿಯಲ್ಲಿರುವಂತೆ ಪ್ರಯತ್ನಿಸುವದು ಕನ್ನಡಿಗರೆಲ್ಲರ ಮುಖ್ಯ ಕೆಲಸವಾಗಿದೆ. ಪರಿಷತ್ತುಗಳನ್ನು ಕೂಡಿಸುವದರಿಂದ ಈ ವಿಷಯದ ಚರ್ಚೆಯೂ ಸಾಕಷ್ಟು ಆಗಿ ಕೈಕೊಳ್ಳತಕ್ಕ ಕಾರ್ಯದ ನಿರ್ಣಯವನ್ನಾದರೂ ಮಾಡಲಿಕ್ಕೆ ಅನ್ಕೂಲವುಂಟಾಗುತ್ತಿದೆ. ಮತ್ತು ಇದರಿಂದ ಒಂದು ಮಧ್ಯವರ್ತಿ ಸಂಸ್ಥೆಯನ್ನು ಸ್ಥಾಪಿಸಿ, ಅದರ ಶಾಖೋಪಶಾಖೆಗಳನ್ನು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಸ್ಥಾಪಿಸುವದು ಅತ್ಯವಶ್ಯ. ನಿದಾನ ೨೦೦೦ ಜನವಸತಿಯುಳ್ಳ ಪ್ರತಿಯೊಂದು ಗ್ರಾಮದಲ್ಲಿ ಒಂದೊಂದು ವಾಚನಾಲಯವು ಸ್ಥಾಪನೆಯಾಗುವಂತೆ ಪ್ರಯತ್ನಿಸುವದಾದರೂ ಈ ಸಂಸ್ಥೆಯ ಮುಖ್ಯ ಕಾರ್ಯವು. ಆದ್ದರಿಂದ ಕನ್ನಡಿಗರೆಲ್ಲರೂ ಈ ಪರಿಷತ್ತು ಸಂಪೂರ್ಣ ಯಶಸ್ವಿಯಾಗುವಂತೆ ಸರ್ವ ವಿಧವಾಗಿ ಪ್ರಯತ್ನಿಸಬೇಕಾಗಿ ನಮ್ಮ ಆಗ್ರಹದ ವಿನಂತಿಯು

ಪ್ರಥಮ ಕರ್ನಾಟಕ ವಾಚನಾಲಯ ಪರಿಷತ್ತು. ಧಾರವಾಡ.

[ಪ್ರಕ-ನೆ.೧]

ಈ ಹಿಂದಲೇ ತಿಳಿಸಿದಂತೆ ತಾ|೧೭-೧೧-೨೫ನೇ ದಿನ ಮಧ್ಯಾಹ್ನ ೩|| ಗಂಟೆಗೆ ಧಾರವಾಡ ಶ್ರೀ ಶಾಂತೇಶ ವಾಚನಾಲಯದಲ್ಲಿ ಇಡೀ ಧಾರವಾಡ ಜಿಲ್ಲೆಯ ಎಲ್ಲ ವಾಚನಾಲಯಗಳ ಪ್ರತಿನಿಧಿ ಹಾಗೂ ಅಭಿಮಾನಿಗಳ ಸಭೆಯು ಶ್ರೀ. ಗುಂಜೀ ಕೃಷ್ಣರಾಯರ ನೇತೃತ್ವದಲ್ಲಿ ನಡೆದು ಕೆಳಗಿನ ಗೊತ್ತುಗಳು ಒಮ್ಮತದಿಂದ ಅಂಗೀಕರಿಸಲ್ಪಟ್ಟವು.

೧ ನಾಳೆ ಬರುವ ದಿಸೆಂಬರ ತಿಂಗಳ ೨೮-೨೯ನೇ ತಾರೀಖುಗಳಲ್ಲಿ ಇಲ್ಲಿಯ "ಅಖಿಲಕರ್ನಾಟಕ ವಾಚನಾಲಯ ಪ್ರಥಮ ಪರಿಷತ್ತ"ನ್ನು ನೆರೆಯಿಸಬೇಕು.

(೨) ಕೆಳಗಿನ ಜನರನ್ನೊಳಗೊಂಡ ಒಂದು ತಾತ್ಪೂರ್ತಿಕ ಕಾರ್ಯಕಾರೀ ಮಂಡಲವಿರಬೇಕು.

೧ ಶ್ರೀ| ಕುಲಕರ್ಣಿ ಕರವೀರಪ್ಪನವರು, ವಕೀಲರು (ಅಧ್ಯಕ್ಷರು) ೨ ಶ್ರೀ| ಜೋಗ ವಿಶ್ವನಾಥರಾಯರು, ಎಂ ಎಲ್ ಸಿ ೩ ಶ್ರೀ| ಗುಂಜೀ ಕೃಷ್ಣರಾಯರು ಬಿ ಎ ಬಿ ಡಿ ಡಿ ಸಿ ೪ ಶ್ರೀ| ನರಗುಂದ ರಾಮರಾಯರು, ಎಲ್ ಎಲ್ ಬಿ ೫ ಶ್ರೀ ಆಲೂರ ವೆಂಕಟರಾಯರು, ಎಲ್ ಎಲ್ ಬಿ ೬ ಶ್ರೀ ದೀಕ್ಷಿತ ನರಸಿಂಗರಾಯರು, ಎಲ್ ಎಲ್ ಬಿ ೭ ಶ್ರೀ ಎಚ್ ಎಸ್ ಶಿವಲಿಂಗ ಶಾಸ್ತ್ರಿ ಅವರು ಸಂಪಾದಕರು, ೮ ಶ್ರೀ ಪಾಟೀಲ ದೇವನಗವಡರು, ಎಲ್ ಎಲ್ ಬಿ ೯ ಶ್ರೀ ಹುಕ್ಕೇರಿ ರಾಮರಾಯರು, ಎಂ ಎ ೧೦ ಶ್ರೀ ಬೇಂದ್ರೆ ದತ್ತರಾಯರು, ಬಿ ಎ ೧೧ ಶ್ರೀ ಕುಲಕರ್ಣಿ ಗುರುರಾಯರು, ಎಲ್ ಎಲ್ ಬಿ (ಕೋಶಾಧ್ಯಕ್ಷರು) ೧೨ ಶ್ರೀ ಕಾಲವಾಡ ಹನುಮಪ್ಪನವರು, ಬಿ ಎ ೧೩ ಶ್ರೀ ಕರಮರಕರ ದತ್ತರಾಯರು, ೧೪ ಶ್ರೀ ಕಮಲಾಪೂರ ಕಾಂತರಾಯರು, ಎಂ ಬಿ ಬಿ ಬಿ ಎಸ್ (ಕಾರ್ಯದರ್ಶಿಗಳು) ೧೫ ಶ್ರೀ ಪುರೋಹಿತ, ಹ ರಾ ಬಿ ಎ ೧೬ ಶ್ರೀ ಹೊಸೂರ, ಹ ಥೀ (ಪ್ರಚಾರಕರು) ೧೭ ಶ್ರೀ ಮಿರ್ಜಿ ವೆಂಕಣ್ಣನವರು, ವಾಙ್ಮಯ ವಿಶಾರದರು, (ಕಾರ್ಯದರ್ಶಿಗಳು) ೧೮ ಶ್ರೀ ಜಾಧವ, ೧೯ ಶ್ರೀ ಕುಲಕರ್ಣಿ ದತ್ತರಾಯರು, ವಕೀಲರು ೨೦ ಶ್ರೀ ಗೋಳಿಕೇರಿ ರಮಾಕಾಂತರು, (ಹುಬ್ಬಳ್ಳಿ) ೨೧ ಶ್ರೀ ಸರಾಫ ಬಳವಂತರಾಯರು, (ಹುಬ್ಬಳ್ಳಿ) ೨೨ ಶ್ರೀ ಬಸ್ರುಂಡಿ, ಕೆ ಎಂ (ಗದಗ) ೨೩ ಪಟ್ಟಣಶೆಟ್ಟಿ ವಿರ. ಬಾಳಪ್ಪನವರು. (ಗದಗ) ೨೪ ಶ್ರೀ ದೇಶಪಾಂಡೆ ಲಕ್ಷ್ಮಣರಾಯರು, (ನವಲಗುಂದ) ೨೫ ಶ್ರೀ ಕುಲಕರ್ಣಿ ತಿ ಲ (ಕಾಲವಾಡ) ೨೬ ಶ್ರೀ ಕುಲಕರ್ಣಿ ವಿರೂಪಾಕ್ಷರಾಯರು, (ರೋಣ) ೨೭ ಶ್ರೀ ಬೆಲ್ಲದ, ಎಂ ಬಿ (ಆಲೂರ) [ರೋಣ] ೨೮ ಶ್ರೀ ಹಳ್ಳೆಪ್ಪನವರ ಗೋವಿಂದರಾಯರು, (ಕಲಘಟಗಿ) ೨೯ ಶ್ರೀ ಕಮ್ಮಾರ ಶಂಕರದೀಕ್ಷಿತರು, (ಬಂಕಾಪೂರ) ೩೦ ಶ್ರೀ ದೇಶಪಾಂಡೆ ಮ ತ್ರೀ (ಬೊಮ್ಮನಹಳ್ಳಿ) ೩೧ ಶ್ರೀ ಕುಲಕರ್ಣಿ ಹನಮಂತರಾಯರು, (ಹಾನಗಲ್ಲ) ೩೨ ಶ್ರೀ ಮಾವಲಿ ಚನ್ನಪ್ಪನವರು, (ತಿಲೂರ-ಹಾನಗಲ್ಲ) ೩೩ ಶ್ರೀ ನಾಡಿಗೇರ ರಂಗರಾಯರು, (ಕುಪ್ಪೇಲೂರ) ೩೪ ಶ್ರೀ ಶಿವಪೂಜೆ. ಮು ರಾ (ದೇವಗಿರಿ) ೩೫ ಶ್ರೀ ನಾಡಿಗೇರ ದತ್ತರಾಯರು, (ಗುತ್ತಲ) ೩೬ ಶ್ರೀ ಲಂಬಿ, ಚ ಲ (ಶಿವಳ್ಳಿ) ೩೭ ಶ್ರೀ ಕೋರಿ, ಎಂ ಎಲ್ (ಹಿರೇಕೇರೂರ) ೩೮ ಶ್ರೀ ಕುಲಕರ್ಣಿ ರಂಗರಾಯರು, (ಮುಂಟೂರ) ೩೯ ಶ್ರೀ ಮಹಿಷಿ ಅಶ್ವತ್ಥರಾಯರು, ವಕೀಲರು (ಶಿಗ್ಗಾವಿ) ೪೦ ಶ್ರೀ ಸಂಕಣ್ಣವರ ರುದ್ರಪ್ಪನವರು, (ಬ್ಯಾಡಗಿ ಕಾರ್ಯದರ್ಶಿಗಳು)

೩ ಪರಿಷತ್ತಿನ ಕಾರ್ಯವು ಸುಲಭವಾಗುವದಕ್ಕಾಗಿ ಈ ಕೆಳಗಿನ ಉಪಮಂಡಲಗಳು ಬೇಕು

೧ ಹಣ ಕೂಡಿಸುವ ಮಂಡಲ:-

೧ ಶ್ರೀ| ಕುಲಕರ್ಣಿ ಕರವೀರಪ್ಪನವರು, ವಕೀಲರು

೨ ಶ್ರೀ| ಎಚ್ ಎಸ್ ಶಿವಲಿಂಗಶಾಸ್ತ್ರಿಗಳು, ಸಂಪಾದಕರು

೩ ಶ್ರೀ| ದೀಕ್ಷಿತ ನರಸಿಂಗರಾಯರು, ಎಲ್ ಎಲ್ ಬಿ

೪ ಶ್ರೀ| ಕುಲಕರ್ಣಿ ಗುರುರಾಯರು, ಎಲ್ ಎಲ್ ಬಿ

೫ ಶ್ರೀ| ಕರಮರಕರ ದತ್ತರಾಯರು, ಎಂ ಎ ಎಲ್ ಬಿ

೬ ಶ್ರೀ| ಹೊಸೂರ ಹ ಥೀ ಪ್ರಚಾರಕರು

೨ ಭೋಜನ ಶಾಖೆ:-

೧ ಶ್ರೀ| ಹುಕ್ಕೇರಿ ರಾಮರಾಯರು, ಎಂ ಎ

೨ ಶ್ರೀ| ಹಳ್ಳಿಕೇರಿ ಗುದ್ಲೆಪ್ಪನವರು
೩ ಶ್ರೀ| ದೇ ಆನಂದರಾಯರು
೪ ಶ್ರೀ| ಕುಲಕರ್ಣಿ ರಾಮರಾಯರು

೩ ಮಂಟಪ, ಅಲಂಕಾರ ವಿಭಾಗ:-
೧ ಶ್ರೀ| ಕುಲಕರ್ಣಿ ದತ್ತುರಾಯರು, ವಕೀಲರು
೨ ಶ್ರೀ| ಪೋತದಾರ ಶ್ರೀನಿವಾಸರಾಯರು

೪ ಸ್ವಯಂ ಸೇವಕದಳ:-
೧ ಶ್ರೀ| ಮುದವೀಡು ವೆಂಕಟರಾಯರು, ವಕೀಲರು
೨ ಶ್ರೀ| ಕಬ್ಬೂರ ನಾರಾಯಣರಾಯರು, ಎಂ ಬಿ ಬಿ ಎಸ್
೩ ಶ್ರೀ| ಬುರ್ಲಿ ಶೇಷಣ್ಣಾ

೫ ಪ್ರಕಟನಾ ಶಾಖೆ:-
೧ ಶ್ರೀ| ಎಚ್ ಎಸ್ ಶಿವಲಿಂಗಶಾಸ್ತ್ರಿಗಳು, ಸಂಪಾದಕರು
೨ ಶ್ರೀ| ಜೋಶಿ ಶಂಕರರಾಯರು,
೩ ಶ್ರೀ| ಪುರೋಹಿತ, ಹ ರಾ ಬಿ ಎ
೪ ಶ್ರೀ| ಕುಲಕರ್ಣಿ ವೆಂಕಣ್ಣನವರು

೬ ಪತ್ರಿಕಾ ಪ್ರದರ್ಶನ:-
೧ ಶ್ರೀ| ಮು ದೇ ರಂಗಣ್ಣನವರು, "ಕನ್ನಡಿಗರ ಕೂಟ"

೭ ಸ್ವಾಗತ ಶಾಖೆ:-
೧ ಶ್ರೀ| ಕೇ ಎಸ್ ಜೋಶಿ ಬಿ ಎ
೨ ಶ್ರೀ| ಎಚ್ ಎಫ್ ಕಟ್ಟೀಮನಿ ಬಿ ಎ
೩ ಶ್ರೀ| ವ್ಹಿ ಆರ್ ಮುಧೋಳಕರ, ಬಿ ಎ ಬಿ ಟಿ
೪ ಶ್ರೀ| ರಾ ಸು ಸಾಲಿ, ಬಿ ಎ

೮ ಪ್ರಚಾರಕರು:-
ಶ್ರೀ| ಹ ಭೀ ಬೆಟಸೂರ

೯ ಕೆಳಗೆ ಬರೆದಂತೆ ಪರಿಷತ್ತಿನ "ಫೀ" ಯನ್ನು ಗೊತ್ತು ಪಡಿಸಿದೆ
೧ ಸ್ವಾಗತ ಮಂಡಲ ಸದಸ್ಯರ ಫೀ
ವಾಚನಾಲಯಗಳಿಗೆ ರೂ. ೩
ಸದಸ್ಯರಿಗೆ ರೂ. ೨
ಪ್ರತಿನಿಧಿಗಳಿಗೆ ರೂ. ೧

೧೦ ಕಾರ್ಯಾಲಯವು:-

ಪರಿಷತ್ತಿನ ಕಾರ್ಯಾಲಯು ಶ್ರೀ ಶಾಂತೇಶ ವಾಚನಾಲಯ ತೆರೆದಿರುವ ವೇಳೆ ಮುಂಜಾನೆ ೮| ರಿಂದ ೧೧ ಸಾಯಂಕಾಲ ೪|| ರಿಂದ ೭ ವರೆಗೆ

ಕಾರ್ಯವು ಮಹತ್ವದ್ದಿದ್ದು ಅವಧಿಯು ಅಲ್ಪವಿರುವದರಿಂದ ಎಲ್ಲರೂ ಎಲ್ಲ ಬಗೆಯಿಂದಲೂ ನೆರವಾಗಿ ಪರಿಷತ್ತನ್ನು ಸರ್ವತೋಮುಖ ಯಶಸ್ವಿಯಾಗಿ ಮಾಡಬೇಕಾಗಿ ಬಿನ್ನಹ.

"ವಾಚನಾಲಯ ವಿಷಯ"ವಾಗಿ ನಿಬಂಧವನ್ನು ಕಳಿಸತಕ್ಕವರು ದಿಸಂಬರ ೧೨ ತಾರೀಖಿನೊಳಗಾಗಿ ಕಳಿಸಿಕೊಡಬೇಕು. ಯಾರ ಬಳಿಯಲ್ಲಿಯಾದರೂ ಹಳೆಯ ವೃತ್ತಪತ್ರ ಮಾಸಪತ್ರಿಕೆಗಳೇನೂ ಇದ್ದರೆ ದಯವಿಟ್ಟು ಪ್ರದರ್ಶನಕ್ಕೆ ಕಳಿಸಿಕೊಡುವ ಕೃಪೆಮಾಡಬೇಕು. ಅವನ್ನು ತಿರುಗಿ ಮುಟ್ಟಿಸುವ ಏರ್ಪಾಡು ಮಾಡಲಾಗುವದು.

ತಮ್ಮ ವಿಧೇಯರಾದ,
೨೦-೧೧-೨೯ ಶಾಂತೇಶ ಕಮಲಾಪೂರ
ಶಾಂ. ವಾಚನಾಲಯ ರುದ್ರಪ್ಪ ಸಂಕಣ್ಣನವರ
ಧಾರವಾಡ ವೆ ಶ್ರೀ ವಿ. ಜೆ.
ಗೌ|| ಕಾರ್ಯದರ್ಶಿಗಳು.

ಪತ್ರಿಕಾಪ್ರದರ್ಶನ.

—(೦)—

ಕನ್ನಡಿಗರಲ್ಲಿ ಅಗತ್ಯದ ಬಿನ್ನಹ.

—)೦(೦)(—

ನಾಳೆ ಬರುವ ದಿಸಂಬರ ತಿಂಗಳ ೨೫-೨೬ ತಾರೀಖುಗಳಲ್ಲಿ ಜರುಗಲಿಕ್ಕಿರುವ ಪ್ರಥಮ ಕರ್ನಾಟಕ ವಾಚನಾಲಯ ಪರಿಷತ್ತಿನ ಸಮಯದಲ್ಲಿ ಕರ್ನಾಟಕ ಪತ್ರಿಕಾಪ್ರದರ್ಶನವನ್ನು ಏರ್ಪಡಿಸುವದು ಗೊತ್ತಾಗಿದೆ. ಅದು ಕಾರಣ ಯಾರ ಬಳಿಯಲ್ಲಿಯಾದರೂ ತೀರ ಹಳೇ ವೃತ್ತ, ಮಾಸಪತ್ರಿಕೆಗಳೇನಾದರೂ ಇದ್ದರೆ ಅವರು ದಯವಿಟ್ಟು ಕೊಟ್ಟು ಕಳಿಸಬೇಕು. ಪ್ರದರ್ಶನವು ಮುಗಿದ ಬಳಿಕ ಅವನ್ನು ತಿರುಗಿ ಅವರಿಗೆ ಮುಟ್ಟಿಸಲಾಗುವದು. ಈಗ ನಮ್ಮ ಬಳಿಯಲ್ಲಿ ಸುಮಾರು ಇನ್ನೂರು ಪತ್ರಿಕೆಗಳ ಸಂಗ್ರಹವಿದೆ. ಪತ್ರಿಕಾ ಸಂಪಾದಕರು ತಮ್ಮ ದಿಸಂಬರ ತಿಂಗಳ ಹೊಸ ಸಂಚಿಕೆಯನ್ನು ಕಳಿಸಿಕೊಡುವ ಕೃಪೆ ಮಾಡಬೇಕು.

ಕನ್ನಡಿಗರ ಕೂಟ ತಮ್ಮ ವಿಧೇಯ
ಧಾರವಾಡ ಮು. ದೇ. ರಂಗಣ್ಣ
೧೮-೧೧-೨೯ ಕಾರ್ಯದರ್ಶಿ.

ವಕೀಲರ ಆತ್ಮಹತ್ಯೆ-

ಹುಬ್ಬಳ್ಳಿಯ ವಕೀಲರಾದ ಶ್ರೀ. ಶೀಲವಂತ ಇವರ ಮೇಲೆ ಇಲ್ಲಿಯ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಅವರ ನಡತೆಯ ಬಗ್ಗೆ ಮೊನ್ನಿನ ದಿವಸ ವಿಚಾರಣೆ ಸಾಗತಕ್ಕದ್ದಿತ್ತು. ಆದರೆ ವಕೀಲರು ಮುನ್ನಾದಿವಸವೇ ವಿಷಪ್ರಾಶನ ಮಾಡಿ, ಆತ್ಮಹತ್ಯ ಮಾಡಿಕೊಂಡರೆಂದು ಬರೆಯುವದಕ್ಕೆ ವಿಷಾದಪಡುತ್ತೇವೆ.

ಅಲಹಾಬಾದ ಮತ್ತು ಅಯೋಧ್ಯಾ ಪ್ರಾಂತದಲ್ಲಿ ಮಹಾತ್ಮರ ಖಾದಿಯ ಭಿಕ್ಷೆಯ ಜೋಳಿಗೆಯಲ್ಲಿ ಎರಡೂವರೀ ಲಕ್ಷ ರೂಪಾಯಿಗಳು ಬಿದ್ದವು. ಅಲಹಾಬಾದಿನಲ್ಲಿ ೩೧೦೦೦ ರೂಪಾಯಿ ಕೂಡಿದವು

ಮಹತ್ವದ ಸುದ್ದಿಗಳು.

—(೦)—

ಪಾರ್ಲಮೆಂಟಿನ ಎರಡೂ ಸಭೆಗಳಲ್ಲಿಯ ಭಾಷಣಗಳಿಂದ ವಸಾಹತಿನ ಸ್ವರಾಜ್ಯವು ಬೇಗನೆ ದೊರೆಯುವ ಲಕ್ಷಣ ಕಾಣಿದ್ದರಿಂದ, ಕಾಂಗ್ರೆಸ ವರ್ಕಿಂಗ ಕಮೀಟಿಯವರು ರಾವುಂಡ ಟೇಬಲದ ಆಮಂತ್ರಣವನ್ನು ಸ್ವೀಕಾರ ಮಾಡತಕ್ಕದ್ದಲ್ಲೆಂದು ಠರಾವು ಮಾಡಿದ್ದಾರೆ.

ರಾವುಂಡ ಟೇಬಲ ಪರಿಷತ್ತು ನೇರಲಿಕ್ಕೆ ಒಂದು ವರ್ಷವಾದರೂ ಬೇಕು. ಸಪ್ಟಂಬರ ಅಥವಾ ಆಕ್ಟೋಬರ ತಿಂಗಳಲ್ಲಿ ನೇರಬಹುದೆಂದೂ, ಕೌನ್ಸಿಲ ಚುನಾವಣೆಯು ಜೂನ-ಜುಲೈದಲ್ಲಾಗಬಹುದೆಂದೂ ಒಂದು ವರ್ತಮಾನ ಪ್ರಸಿದ್ಧವಾಗಿದೆ.

ರಡ್ಡೀ ಜನಾಂಗದ ಕನೆಯ ಪರಿಷತ್ತು ದಿಸಂಬರ ತಿಂಗಳ ನಾತಾಳಿ ರಜೆಯಲ್ಲಿ ಕಡಪೆಯಲ್ಲಿ ನೇರುವದು. ಹೈದರಾಬಾದಿನ ಶ್ರೀ. ವೆಂಕಟರಡ್ಡಿಯವರು ಸಭಾಧ್ಯಕ್ಷರೂ, ಶ್ರೀ ಕೋಟಿರೆಡ್ಡಿಯವರು ಸ್ವಾಗತ ಕಮೀಟಿಯ ಚೇರಮನ್ನರೂ ಆಗುವರು.

ಬಳ್ಳಾರಿ ತಾಲೂಕ ಲೋಕಲಬೋರ್ಡಿನ ಅಧ್ಯಕ್ಷ ಮಿ. ರಾಮಯ್ಯ ಮತ್ತು ಉಪಾಧ್ಯಕ್ಷ ಮಿ. ಬಂಡೇಗೌಡಾ ಇವರಲ್ಲಿ ವಿಶ್ವಾಸವಿಲ್ಲೆಂಬ ಠರಾವು ಬಹುಮತದಿಂದ ಪಾಸಾಗಿರುತ್ತದೆ.

ಕಾಂಗ್ರೇಸದ ವೇಳೆಯಲ್ಲಿ ಮುಸಲಮಾನರ ಲೀಗ ಸಭೆಯು ಎಲ್ಲಾದರೂ ಕೂಡತಕ್ಕ ಸಾಂಪ್ರದಾಯವಿತ್ತು. ಆದರೆ ಈ ಸಭೆಯು ಈ ಸಾರೆ ಕೂಡಲಾರದು.

ಮಿ. ನಟೇಶ ಮೊದಲಿಯಾರರು ಜಸ್ಟೀಸ ಪಕ್ಷದವರೇ ಆಗಿ, ಅದೇ ಪಕ್ಷದವರಾದ ಮಿ. ರಾಮಸ್ವಾಮಿಯವರ ವಿರುದ್ಧ ಮದ್ರಾಸ ಮ್ಯುನಿಸಿಪಾಲಿಟಿಯ ಅಧ್ಯಕ್ಷಪದದ ಬಗ್ಗೆ ಉಮೇದವಾರರಾಗಿ ನಿಂತದ್ದಕ್ಕೆ ಅವರಿಗೆ ತಕ್ಕ ಪ್ರಾಯಶ್ಚಿತ್ತವಾಗಬೇಕೆಂದು ಆ ಪಕ್ಷದಲ್ಲಿ ವಿಚಾರ ನಡೆದಿದೆ.

ಮುಂಬಯಿ ಇಲಾಖೆಯ ಕೌನ್ಸಿಲದಲ್ಲಿ ಹಳೇ ಲ್ಯಾಂಡ ರೆವ್ಹಿನ್ಯೂ ಬಿಲ್ಲನ್ನು ಸರಕಾರದವರು ರದ್ದು ಮಾಡಿ ಹೊಸದೊಂದು ಬಿಲ್ಲನ್ನು ಬರೆದಿದ್ದಾರೆ. ಬಾರಡೋಲಿಯ ಪುನರಾಗಮನವಾಗಬಾರದೆಂದು ಸರಕಾರದ ಉದ್ದೇಶವಿರುತ್ತದೆ. ಸ್ವತಃ ಗವ್ಹರ್ನ

ಅಖಿಲ ಕರ್ನಾಟಕ ಧರ್ಮ ಪರಿಷತ್ ಪ್ರಕಟನೆ.

ಮೈಸೂರು

— (೦) —

ಅಖಿಲ ಕರ್ನಾಟಕ ಸನಾತನ ಧರ್ಮ ಪ್ರಮುಖರ ಮಹಾ ಸಭೆಯು ಮೈಸೂರು ರಾಜಧಾನಿಯಲ್ಲಿ ತಾ|| ೨೪-೧೧-೩೯ ಭಾನುವಾರ ಸಾಯಂಕಾಲ ೬-೩೦ ಗಂಟೆಗೆ ಗಾನವಿಶಾರದ ವಾ|| ರಾ|| ಬಿ. ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ನಡೆಯಲು ಶ್ರೀ ಸನಾತನ ಧರ್ಮ ಸಂಜೀವಿನೀ ಸಭೆಯವರು ಎಲ್ಲ ಏರ್ಪಾಟುಗಳನ್ನು ಮಾಡಿರುತ್ತಾರೆ. ಶ್ರೀಮನ್ಮಹಾರಾಜರವರ ಆಸ್ಥಾನದ ಧರ್ಮಾಧಿಕಾರಿಗಳಾದ ಮಹಾಮಹೋಪಾಧ್ಯಾಯ, ವಿದ್ಯಾನಿಧಿ, ಶ್ರೀಮಾನ್ ವೇ|| ಬ್ರ|| ಶ್ರೀ ವಿರೂಪಾಕ್ಷಶಾಸ್ತ್ರಿಗಳವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ. ಕರ್ನಾಟಕ ದೇಶದ ಎಲ್ಲ ಭಾಗಗಳಿಂದಲೂ ಧರ್ಮಾಭಿಮಾನಿಗಳಾದ ಚಾತುರ್ವರ್ಣ್ಯದ ಪ್ರಮುಖರು ಪ್ರತಿನಿಧಿಗಳಾಗಿ ಬರಲು ಆಹ್ವಾನಿಸಲ್ಪಟ್ಟಿರುತ್ತಾರೆ. ಮಿ|| ಶಾರದರ ವಿವಾಹಶಾಸನದ ನಿಮಿತ್ತದಲ್ಲಿ ಸನಾತನ ಧರ್ಮಬದ್ಧರಾದ ಮಹಾಜನರಿಗೆ ಆಗುವ ಬಾಧಕಗಳು ಚರ್ಚಿಸಲ್ಪಡುತ್ತವೆ. ಈ ಮಾಹೆ ೩೦ ನೇ ತಾರೀಖಿನ ದಿನ ಮದ್ರಾಸಿನಲ್ಲಿ ನಡೆಯುವ ಅಖಿಲ ಭಾರತ ಸನಾತನ ಧರ್ಮ ಮಹಾಸಭೆಗೆ ಪ್ರತಿನಿಧಿಗಳನ್ನು ಚುನಾಯಿಸಬೇಕಾಗಿ ಗೊತ್ತಾಗಿದೆ. ಕರ್ನಾಟಕ ದೇಶದ ಎಲ್ಲ ಭಾಗಗಳಿಂದಲೂ ಚಾತುರ್ವರ್ಣ್ಯ ಪ್ರಮುಖರು ಪ್ರತಿನಿಧಿಗಳಾಗಿ ಬಂದು ಸಭೆಯನ್ನು ಜಯಪ್ರದವನ್ನಾಗಿ ಮಾಡಬೇಕೆಂದು ಕೋರಲಾಗಿದೆ.

ಪೌರಾಣಿಕ ಶ್ರೀಕಂಠಶಾಸ್ತ್ರಿ, ಸಾಲಿಗ್ರಾಮ,
ಕಾರ್ಯದರ್ಶಿ.

ಶ್ರೀ|| ಸನಾತನ ಧರ್ಮ ಸಂಜೀವಿನೀ ಸಭಾ
ಮೈಸೂರು.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ, ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ, ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಧಿನ ಪ್ರೂಫ ... ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದಲ್ಲಿ ಅದು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ತಗಲುವದು. ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳಿ, ಅಥವಾ ಯಾವುದೇ ಬಣ್ಣದ ಬಿಳಿಯ ಮುಟ್ಟಿನ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರಭಾವ! ನ್ಯಕ್ಕರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯ ಬ್ಯಾಂಕ ಧಾರವಾಡ

ಸೂಚನೆ— ಔಷಧ ಬೇಡುವಾಗ ಯಾವ ವರ್ತಮಾನಪತ್ರದ ಜಾಹೀರಾತ ನೋಡಿದ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು. ೬

ನೋಟೀಸಿನ ಉತ್ತರ

———)(೧)(———

ಬಾಳಾ ತಂದಿ ಭೀಮಪ್ಪಾ ಧಾರವಾಡದವರ ತಾ|| ಮಲ್ಲೂರ ತಾಲೂಕ ಧಾರವಾಡ ಇವರಿಗೆ—

ಕೆಳಗೆ ಸಹಿ ಮಾಡಿದ ಗುತ್ತಾರ ಮಾಡುವ ಬಸವ್ವಾ ಕೋಂ ಬಾಳಪ್ಪಾ ಧಾರವಾಡದವರ ಈ ಕೆಯು ನಿನಗೆ ಈ ನೋಟೀಸಿನಿಂದ ಉತ್ತರ ಕೊಡುವದೇನಂದರೆ—

ನೀನು ವಿಜಯ ಪತ್ರದಲ್ಲಿ ೯ ನವ್ಹೆಂಬರ ೧೯೩೯ನೇ ಸಂಚಿಕೆಯಲ್ಲಿ ಕೊಟ್ಟ ನೋಟೀಸು ಮುಟ್ಟಿತು. ಅದರಲ್ಲಿ ಬರೆದ ಯಾವತ್ತು ಮಜಕೂರು ಸುಳ್ಳಿದೆ. ನಿನಗೆ ಮೊದಲನೇ ಹೆಂಡತಿ ಇದ್ದು ಅದರ ಮೇಲೆ ನನ್ನನ್ನು ಲಗ್ನಮಾಡಿಕೊಂಡಿ. ಆ ಮಾತಿಗೆ ಎರಡು ತಿಂಗಳಾಯಿತು. ಇಷ್ಟರಲ್ಲಿ ನೀನು ನಿನ್ನ ತಾಯಿ ಮತ್ತು ಹಿರೇ ಹೆಂಡತಿಯ ಮಾತು ಕೇಳಿ ನನ್ನನ್ನು ಮನೆಬಿಟ್ಟು ಹೊರಗೆ ಹಾಕಿದವನೇ ನನ್ನ ಮೇಲೆ ಸುಳ್ಳು ಆರೋಪ ಹೊರಿಸಿದ ನೋಟೀಸು ಕೊಟ್ಟಿರುತ್ತೀದಿ. ನಾವಿಬ್ಬರೂ ಒಂದೇ ಊರವರಿದ್ದು ನೀನು ಹಂಚರ ವಿದ್ಯಮಾನ ಯಾವ ವ್ಯವಸ್ಥೆ ಮಾಡಿಕೊಳ್ಳದೆ ಒಂದು ನೋಟೀಸು ಕೊಟ್ಟಿರುತ್ತೀದಿ. ನನ್ನ ಮೈಮೇಲೆ ಎರಡು ತೊಲೆ ಬಂದಿಯ ಹೊರತು ಯಾವ ದಾಗೀನ ಇಲ್ಲ. ರೋಖು ರೂಪಾಯಿ ಒಯ್ದಿರುತ್ತೇನೆಂದು ಸುಳ್ಳೇ ತಹೋಹಮತ್ತು ಹೊರಿಸುತ್ತೀದಿ. ಈಗ ನಾನು ನಿನ್ನ ಮನೆಯಿಂದ ಹೊರಗೆ ಬಿದ್ದು ಬೇರೆ ಕಡೆಗಾಗಿಲ್ಲ. ಆದರೂ ತಿಂಗಳ ಗರ್ಭಿಣಿ ಇದ್ದೇನೆ. ಮುಂದೆ ನನಗೆ ಆಗುವ ಸಂತತಿಯು ಪೋಷಣೆಗಾಗಿ ನಿನ್ನ ಮೇಲೆ ಮತ್ತು ನಿನ್ನ ಸ್ಥಾವರ ಜಂಗಮ ಆಸ್ತಿಯ ಮೇಲಿರುವದು. ಅದನ್ನು ವಿಲೇವಾಟ ಮಾಡಿದರೆ ನನ್ನ ಹಕ್ಕು ಹೋಗಲಾರದು. ಮತ್ತು ನಿನ್ನ ಮೇಲೆ ನನ್ನ ಪೋಷಣದ ಪೋಟಿಗೆ ಹಕ್ಕು ಸಹ ಇರುತ್ತದೆ. ಆದಕಾರಣ ನೀನು ನಿನ್ನ ಸ್ಥಾವರ ಜಂಗಮ ಆಸ್ತಿಯನ್ನು ಯಾವ ರೀತಿಯಿಂದಲೂ ಸ್ವಾಧೀನ ಮಾಡಬಾರದು. ನಾನು ನಿನ್ನ ಮೇಲೆ ಪೋಟಿಗೆಯ ಫಿರ್ಯಾದು ಮಾಡತಕ್ಕವಳಿದ್ದೇನೆ. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಇದೆ ತಿಳಿಯುವದು.

೨೦ ನವ್ಹೆಂಬರ ೧೯೩೯ನೇ ಇಸವಿ.

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಬಸವ್ವಾ ಕೋಂ ಬಾಳಪ್ಪಾ ಧಾರವಾಡದವರ. ಮ... ಅದೆ.

ಸ್ವೀಕಾರ

ಮಿ. ಕೆ. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಕೊಳ್ಳಿರಿ.

ಈ ಪತ್ರವನ್ನು ಜಂಬಣ್ಣ ರಾಯರ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R. N. B. 1...

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಕೃಷ್ಣಾಚಾರ್ಯ ಬಾಳಾಚಾರ್ಯ ಜೋಶಿ

ವರ್ಷ ೧೦) ಧಾರವಾಡ ಗುರುವಾರ ತಾರೀಖು ೨೧ನೇ ನವ್ಹೆಂಬರ ೧೯೨೯ (ಸಂಚಿಕೆ ...

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ.

ಮಂಗಳವಾರ ಪೇಟೆ ಜೋಗ ವಕೀಲರ ಮನೆಯಲ್ಲಿ.

ದಾಗೀನೆಗಳ ಪತ್ತೀ ಮೇಲೆ ಸೋವಿ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು.

ಈ ಬ್ಯಾಂಕು ಕಂಪನೀಜ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಲಿರುವದು. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ಮತ್ತು ಬೆಳ್ಳಿ ದಾಗೀನೆಗಳ ಮೇಲೆ ಸೋವಿ ಬಡ್ಡೀ ದರದಿಂದ ಸಾಲ ಕೊಡುವ ವ್ಯವಸ್ಥೆಯುಂಟು. ದಾಗೀನೆ ಪತ್ತೀ ಇಟ್ಟವರು ಮೊದಲನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ ೧೫ ದಿವಸಕ್ಕೊಮ್ಮೆ ಅಷ್ಟಷ್ಟೇ ರಕಮು ತಂದು ಕೊಟ್ಟರೂ, ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಅಷ್ಟಷ್ಟೇ ರಕಮು ಕೊಡುವದರಿಂದ, ಸಾಲದ ಭಾರ ಕಡಿಮೆಯಾಗಿ, ಬಡ್ಡಿಯು ಕಡಿಮೆಯಾಗುತ್ತಾ ಬರುವದು. ಧಾರವಾಡ ಮುಂತಾದ ಪಟ್ಟಣವಾಸಿಗಳು ಈ ಸೋಯಿಯ ಫಾಯದೆ ತಕೊಳ್ಳುತ್ತಿದ್ದಾರೆ. ಇದರ ಮಹತ್ವವು ಮುಖ್ಯ ಉಪಯೋಗವು ಹಳ್ಳಿಯ ಜನರಿಗೂ ಆಗಲೆಂದು ಈ ಜಾಹೀರಾತು ಪ್ರಸಿದ್ಧ ಮಾಡಿ, ಮುದ್ದಾಮ ಹಳ್ಳಿಗಳಿಗೆ ಕಳಿಸಿದ್ದೇವೆ. ಹಳ್ಳಿಯಲ್ಲಿ ಬಡ್ಡಿಯ ದರವು ರೂಪಾಯಿಗೆ ಎರಡು ಪೈ ಇಂದ ಆರು ಪೈ ವರೆಗೆ ಇರುತ್ತದೆ. ಅದೂ ಒಮ್ಮೆಯೇ ಕೊಡಬೇಕಾಗುತ್ತದೆ. ಹೀಗಾಗಿ ಎಷ್ಟೋ ಜನ ಬಡವರಿಂದೂ ಇಲ; ಶ್ರೀಮಂತರ ದಾಗೀನೆಗಳು ಸಹ ಸಾವಕಾರರ ಅಸಲು ಮತ್ತು ಬಡ್ಡಿಯಲ್ಲಿ ಮುಳುಗಡೆಯಾಗಿ ಹೋಗುತ್ತವೆ. ಈ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ದಾಗೀನೆ ಪತ್ತೀ ಇಟ್ಟರೆ ಆಗುವದಿಲ್ಲ. ಏಕೆಂದರೆ ಸ್ವಲ್ಪ ರಕಮು ಕೊಟ್ಟರೂ ಅದನ್ನು ತಕೊಂಡು, ಸಾಲದ ಭಾರವನ್ನು ಕಡಿಮೆಮಾಡುತ್ತಾ ಬರುತ್ತೇವೆ. ಇಂಥ ಸೋಯಿಯು ಹಳ್ಳಿಗಳಲ್ಲಿ ದೊರೆಯಲಾರದು. ಆದ್ದರಿಂದ ಹಳ್ಳಿಯಲ್ಲಿ ಸಾಲ ಬೇಕಾದವರು ನಮ್ಮ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ, ಅನುಭವ ಪಡೆಯಬೇಕು. ನಮ್ಮ ಬಡ್ಡೀ ದರವು ನೂರು ರೂಪಾಯಿಯ ವರೆಗೆ ಒಂದು ತಿಂಗಳಿಗೆ ಒಂದು ರೂಪಾಯಿಗೆ ಎರಡು ಪೈ ಇರುತ್ತದೆ. ನೂರರ ಮೇಲಿನ ರಕಮಿಗೆ ಬಡ್ಡೀ ದರ ಸಮಕ್ಷಮ ಅಥವಾ ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಗಳ ಜನರು ಸಣ್ಣ ಊರಿಗೆ ಬಂದಾಗ ಸಾವಕಾರ ಮೊದಲಾದವರಲ್ಲಿ ಅವರು ಹೇಳಿದಷ್ಟು ಬಡ್ಡೀ ಕೊಟ್ಟು ಸಾಲ ತೆಗೆದುಕೊಳ್ಳುವರು. ಮತ್ತು ... ತಿಳಿಯದೆ ನುಕ್ಸಾನ ಮಾಡಿಕೊಳ್ಳುವರು. ಹೀಗೆ ಬ್ಯಾಂಕಿನಲ್ಲಿ ... ಆಗುವದಿಲ್ಲ. ಹಳ್ಳಿಗಳ ಜನರು ನಮ್ಮಲ್ಲಿ ... ವ್ಯವಹಾರ ಮಾಡಿ ಖಾತ್ರಿ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಫೋಟೋಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ ಎಲ್ಲರಿಕ್ಕಿಂತಲೂ ಸೋವಿಯಿಂದ ಸಿಗುವದು.

ಕೃಷ್ಣರಾವ ವೆಂಕಟರಾವ ಭಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು, ಚಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಇನಾಮತಿ.

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟ್ಟುಕೊಳ್ಳುವ ರೀತಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೦-೦
ವಾರದ ಪತ್ರಿಕ್ಕೆ ೧ ವರ್ಷಕ್ಕೆ	೩-೧೨-೦

ಪೋಸ್ಟ ಖರ್ಚು ... ಒಳಗೊಂಡು ...

ವಿಜಯ ಮ್ಯಾನೇಜರ ಧಾರವಾಡ.

ವಿಜಯ.

ಧಾರವಾಡ ತಾ- ೨೧-೧೧-೧೯೨೧ನೇ ಇಸ್ವಿ

ಶ್ರೀ.

ವಿಜಯಂ ಶ್ರೀಕೃಷ್ಣಸ್ಯ
[illegible]
ದ "ವಿಜಯಂ" ಶ್ರೀಕರಣಂ ।
[illegible] ॥೧॥

ಕಾಡು ಕುಲ್ಲದವರಿಗೂ ಕಾಯದೆಭಂಗದ ಕಲಿತನ ಬಂತು.

ಯಾವಾಗ ಯಾವ ಜನರಿಗೆ ಎಂಥ ಮಹತ್ವ ಬರುವದೆಂದು ಹೇಳಲಿಕ್ಕಾಗುವದಿಲ್ಲ. ಅದು "ನರ ಕರೇಕೋ ನಾರಾಯಣ ಹೋ ಜಾಯ" ವೆಂಬಂತಾಗುತ್ತದೆ. ಸಹ್ಯಾದ್ರಿಯ ಗುಡ್ಡದಲ್ಲಿ ತೋಪ್ಪಲ ಗಿಡ ಗಳನ್ನು ಕಿತ್ತುತ್ತಿದ್ದ ಮಾವಳೇ ಮರಾಟರು ಔರಂಗಜೇಬನಂಥ ಸಮ್ರಾಟನನ್ನು ದಣಿಸಿದರು. ರಕ್ತಿಯಾದ ಕೂಲಿಕಾರರು ಧುರಂಧರರಾಗಿರುವದನ್ನು ನೋಡಿದರು. ಇಂಥ ನಿರುಪದ್ರವಿ ಮತ್ತು ಪಾಪಭೀರು ಜನರು ಕೆರಳಿದರೆ, ಅವರು ತಲೆಯೆತ್ತಿದರೆಂದರೆ ಎಂಥ ಬಲಾಢ್ಯರಿಗಾದರೂ ಅಸಗೊಳ್ಳುವದಿಲ್ಲೆಂಬುದು ಸ್ಪಷ್ಟವಾಗುತ್ತದೆ.

ದಕ್ಷಿಣ ಆಫ್ರಿಕೆಯಲ್ಲಿರುವ ಕಾಡು ಜನರು ಇಂಗ್ಲಿಷರ ಮೂಲ ಪುರುಷರಷ್ಟೇ ಕಾಡು ಸ್ಥಿತಿಯಲ್ಲಿದ್ದಾಗ ಡಚ್ಚರು ಅಲ್ಲಿ ವಸಾಹತು ಮಾಡಿಕೊಂಡರು. ಅನಂತರ ಬ್ರಿಟಿಶರ ಕೈಗೆ ಆ ರಾಜ್ಯವಾಯಿತು. ಇವರ ಸಹವಾಸದಿಂದ ಅವರಲ್ಲಿ ತಿಳುವಳಿಕೆ ಬಂದಿತು. ಅದು ಇಂದು ಕಾಯದೆಭಂಗ ಮಾಡಿ, ತುರಂಗವಾಸ ಕಳೆಯಬೇಕೆಂಬ ಮಟ್ಟಿಗೆ ಬಂದಿದೆ.

ಈ ಜನರಲ್ಲಿ ಪ್ರೊಫೆಟ್ ಎಂಬ ಪಂಥ ಸ್ಥಾಪನೆ ನಡೆಸಿದೆ. ಹಲವು ನೂರು ಜನರು ಸರಕಾರದ ಕರ ಕೊಡಲಿಲ್ಲ. ಅಜ್ಞೆಯನ್ನು ಕಡಿಮೆ ಮಾಡಿದ್ದನ್ನೂ, ಅವರೊಳಗಿನ ಕ್ಷೋಭೆಯನ್ನೂ ಕಂಡು, ಸರಕಾರದವರು ಸೇನಾ ಸಾಮರ್ಥ್ಯದಿಂದ ಅವರನ್ನು ಬೊಗ್ಗಿಸಲಿಕ್ಕೆ ಸಿದ್ಧರಾದರು. ಕೋಪ್ಪ ಹುಬಕಿ ಮುಂತಾದ್ದು. ಮದ್ದು ತುಂಬಿದ ಕೊಡಲಿ ಉಳ್ಳ ೮೦೦ ಪೋಲೀಸರು ಅವರ ಮೇಲೆ ಬಿದ್ದರು. ಹೋಗಿ, ಇವರ ವಸತಿಸ್ಥಾನದಲ್ಲಿ ಬಾಳಿ ನಡೆಸಿದರು. ಕರ ಕೊಡದವರನ್ನು ಹಿಡಿದು [illegible]

[illegible] ಅವರ ಹೆಂಡರು ಮಕ್ಕಳು [illegible] ಅವರನ್ನು [illegible] ಹೊರಡಿಸಿ, ತುರಂಗಕ್ಕೆ ಹಾಕಿದರೆ, ಅವರು ಹೊರಗೆ ಹೋಗದೆ ದಕ್ಷ ಹುರುಪಿನಿಂದಿದ್ದಾರೆ. ಅವರ ಪ್ರದೇಶದಲ್ಲಿ ಎತ್ತ ನೋಡಿದರೂ ಅಸಹಕಾರ ಮತ್ತು ಕಾಯದೆಭಂಗದ ಕೂಗೇ ಕೇಳಿಸುತ್ತಲಿದೆ.

ರಾ. ಬ. ಕಂಬಳಿಯವರಿಗೆ ಕಾಯದೆಭಂಗದ ಸವಾಲು.

ಬಾಗಲಕೋಟೆಯ ಗೃಹಸ್ಥರು ರಾ. ಬ. ಕಂಬಳಿಯವರಿಗೆ ಈ ಕೆಳಗಿನ ಅನಾವೃತ್ತ ಪತ್ರ ಬರೆದಿದ್ದಾರೆ.

ರಾವಬಹದ್ದೂರ ಸಿದ್ದಪ್ಪ ತೋಟಪ್ಪಾ ಕಂಬಳಿ ಮುಂಬಯಿ ಕಾಯದೇ ಕೌನ್ಸಿಲರ ಸಾ॥ ಹುಬ್ಬಳ್ಳಿ ಇವರಿಗೆ—

ಮಹಾಶಯರೇ,

ತಾವು ಕರ್ನಾಟಕದ ಏಕೀಕರಣದ ಒಗ್ಗಿ ಕಳವಳದಿಂದ ಮುಂಬಯಿ ಕಾಯದೆ ಮಂಡಲದಲ್ಲಿ ತಮ್ಮ ಬೆಂಬಲವನ್ನು ಕೊಟ್ಟದ್ದನ್ನು ಕಂಡು ಕರುಣಾರ್ದ್ರ ನಮಗೆಲ್ಲಾ ಸಂತೋಷವಾಗಿದೆ. ಸರಕಾರದವರು ಕನ್ನಡಿಗರ ಮಾತನ್ನು ಮನ್ನಿಸದಿದ್ದ ಪಕ್ಷದಲ್ಲಿ ತಾವು ಸವಿನಯ ಕಾಯದೆಭಂಗವನ್ನು ಸಹ ಕರ್ನಾಟಕದಲ್ಲಿ ಕೇವಲ ಏಕೀಕರಣಕ್ಕಾಗಿ ಪ್ರಾರಂಭಿಸುವೆವೆಂದು ಸರಕಾರದವರಿಗೆ ಹೇಳಿದ್ದನ್ನು ಓದಿ ಮೇಲಂತೂ, ನಮಗೆ ಒಳ್ಳೇ ಅಭಿಮಾನವು ಉತ್ಪನ್ನವಾಗಿದೆ. ತಾವು ಹೇಳಿದ ಈ ಮಾತು ಹುಸಿ ಹೋಗಬಾರದೆಂದು ತರುಣ ಕರ್ನಾಟಕವು ಅಪೇಕ್ಷಿಸುತ್ತದೆ. ಸರಕಾರದವರಾದರೋ ಬಿಸಿಹತ್ತಿದ ಹೊರತು, ಪ್ರಜೆಗಳ ಬೇಡಿಕೆಗಳನ್ನು ಧ್ವನಿ ಸದೆಂಬದು ನಮ್ಮ ಅನುಭವದಿಂದ ಗೊತ್ತಾದ ಮಾತಾಗಿರುತ್ತದೆ. ಆದ್ದರಿಂದ ಅಭಿಮಾನದಿಂದಲೂ, ಕಳವಳದಿಂದಲೂ, ಧೈರ್ಯದಿಂದಲೂ ತಾವು ಮುಂಬಯಿ ಕಾಯದೆಮಂಡಲದಲ್ಲಿ ಹೇಳಿದಂತೆ ಸತ್ಯಾಗ್ರಹವನ್ನು ಬೇಗನೇ ಪ್ರಾರಂಭಿಸಿ ನಮಗೆ ಮಾರ್ಗದರ್ಶಿಗಳಾಗಬೇಕೆಂದು ಬೇಡಿಕೊಳ್ಳುತ್ತೇವೆ. ಕೆಳಗೆ ಸಹಿ ಮಾಡಿದ್ದವರಾದ ನಾವು ಕೇವಲ ಏಕೀಕರಣಕ್ಕಾಗಿ ಸತ್ಯಾಗ್ರಹವನ್ನು ಪ್ರಾರಂಭಿಸಲು ಸಿದ್ಧರಿದ್ದೇವೆ. ತಾವು ನಮಗೆ ಮುಂದಾಳುಗಳಾಗಿ ಬಂದು ನಿಂತಲ್ಲಿ ಕರ್ನಾಟಕದ ಇತರ ತರುಣರಾದರೂ ತಮ್ಮ ಅನುಯಾಯಿಗಳಾಗಿ ಸರಕಾರದವರ ವಿರುದ್ಧ ಯುದ್ಧವನ್ನು ಹೂಡಲು ಸಿದ್ಧರಾಗಿ ಬರುವರೆಂಬ ವಿಶ್ವಾಸವು ನಮಗಿದೆ. ತಾ॥ ೧೨-೧೧-೨೯ ಬಾಗಲಕೋಟೆ

೧. ಲಿಂಗಯ್ಯಾ ಗುರುಶಿಗೆಯ್ಯಾ ಜಂಗಿನ. ೨ ಸಿದ್ದಪ್ಪಾ ಹೊಸಡೇಕಾರ. ೩ ಶಿವರುದ್ರಪ್ಪಾ ಅಷ್ಟಕ್ಕಿ. ೪ ವೆಂಕಟೇಶ ಗೋಪಾಲರಾವ ರಾಮದುರ್ಗಕರ, ೫ ರುದ್ರಪ್ಪ [illegible]. ೬ ಕೆ. ಪಿ. [illegible]. ೭ ಧಿ. ಹ. [illegible]. ೮ ಡಿ. ಎಚ್. ನಾರಾಯಣರಾವ. ೯ ಬಿ. ಎಸ್. ನರಸಿಂಹಾಚಾರ್ಯ. ೧೦ ನಾಯ್ಡು. ವ್ಹಿ. ಶರ್ವತ. ೧೧ ಎಸ್. ಬಿ. [illegible]. ೧೨ ಚನಬಸಪ್ಪ ಮುರಿಗೆಪ್ಪ ಹಾಲಪ್ಪನವರ [illegible] ೧೩ ಗುರುರಾಜ ಜೋರಾಪೂರ ೧೪ ಶ್ರೀನಿವಾಸ ರಾಜೇಂದ್ರರಾವ ಮಂಗಳವೇಢೆ

ವಿಲಾಯತಿಯಲ್ಲಿ ಹಿಂದುಸ್ಥಾನದ ಹಕ್ಕಿಗಳ ವ್ಯಾಪಾರ

—(೧)—

ಹಿಂದುಸ್ಥಾನದಲ್ಲಿ ಹುಟ್ಟಿ ಬೆಳೆಯುವ ಪ್ರತಿಯೊಂದು ಪದಾರ್ಥ, ಭೂಮಿಯಲ್ಲಿರುವ ಖನಿಜ ದ್ರವ್ಯವು ವಿಲಾಯತಿಗೆ ಹೋಗಿ, ಮಾರಾಟವಾಗುವದು. ಆದರೆ ಕೋಳಿಯ ಹಕ್ಕಿಯು ಹೋಗುತ್ತಿರಲಿಲ್ಲ. ಆದರ ವ್ಯಾಪಾರವನ್ನು ಮಾಡುವದಕ್ಕೆ ಆಸ್ಟ್ರೇಲಿಯಾದ ಇಟಾಲಿಯಲ್ಲಿ ಒಂದು ಕಂಪನಿಯು ಸಿದ್ಧವಾಗಿದೆ. ಇದು ವಾರವಾರಕ್ಕೆ ೭೫೦೦೦ ಹಕ್ಕಿಗಳನ್ನು ಕಳಿಸುವ ವಿಚಾರದು ಮಾಡಿದೆ. ಇದಕ್ಕೆ ಆ ಸರಕಾರದ ಅನುಮೋದನವೂ ಉಂಟು. ಹಕ್ಕಿಗಳು ಒಡೆದು ಹರಿಯಾಗದಂತೆ, ಇವನ್ನು ತಣ್ಣಗಿನ ಸ್ಥಳದಲ್ಲಿಡುವರು. ಅಲ್ಲಿಯ ಹವೆಯು ಕಡಿಮೆ ಡಿಗ್ರಿಯುಳ್ಳದ್ದಾಗುವದು. ಬ್ರಾಯರ ಲಾರಿ ಎಂಬ ಕಂಪನಿಯವರು ಇವನ್ನು ವಿಲಾಯತಿಗೆ ಮುಟ್ಟಿಸುವ ವ್ಯವಸ್ಥೆ ಮಾಡಿದ್ದಾರೆ.

ಕೌನ್ಸಿಲ ಮೆಂಬರನ ಮೇಲೆ ರಾಜ್ಯದ್ರೋಹದ ಆರೋಪ.

—(೧)—

ಬಂಗಾಲದಲ್ಲಿ ರಾಜ್ಯದ್ರೋಹದ ಆರೋಪವೆಂಬದು ಹುಡುಗರ ಆಟದಂತಾಗಿರುತ್ತದೆ. ದಿನಾಲು ಈ ಆರೋಪದಿಂದ ಯಾರಾದರೊಬ್ಬರ ಹಿಡಿದ ಸುದ್ದಿಯು ಬರದೇ ಬರುತ್ತದೆ. ಹೋದ ವಾರದಲ್ಲಿ ಪ್ರೊಫೆಸರ [illegible] ಬ್ಬ ನಾಸ್ತಿಕರು ಆದ [illegible] ಗುರಿಯಾದರು. ಈ ವಾರದಲ್ಲಿ ಕೌನ್ಸಿಲ [illegible] ರನು, ಪ್ರೊಫೆಸರರೂ ಆದಂಥ [illegible] ನಾಯಕ ಮತ್ತು ನಡೆಯುವದನ್ನು ಹಿಡಿದು, [illegible] ಮೇಲೆ ಬಿಟ್ಟಂತೆ [illegible] ಪ್ರಸಿದ್ಧವಾಗಿದೆ.

ಕೈದಿಗಳನ್ನು ಕರೆದೊಯ್ಯುವದರ ಕುರಿತು ಸೂಚನೆಗಳು.

—(೦)—

ಮುಂಬಯಿ ಪ್ರಾಂತದ ಜೇಲ ಕಮೀಟಿಯ ಸಭಾ-ಸದಸ್ಯರು ಕೈದಿಗಳನ್ನು ನಡಿಸಿಕೊಳ್ಳುವ ವಿಷಯವಾಗಿ ಮುಂದೆ ಕೊಟ್ಟಂತೆ ಸೂಚನೆ ಮಾಡಿದ್ದಾರೆ.

ಕೈದಿಗಳನ್ನು ಭೂತದಯೆಯಿಂದ ನಡಿಸಿಕೊಳ್ಳಬೇಕು. ಅವರಿಗೆ ಜಡ್ಜ ಮ್ಯಾಜಿಸ್ಟ್ರೇಟರು ಶಿಕ್ಷೆ ಮಾಡಿರುತ್ತಾರೆ. ಆದ್ದರಿಂದ ಅವರ ಅಪರಾಧದ ಶಿಕ್ಷೆ ಎಂದು ಕಾರಾಗೃಹದಲ್ಲಿ ಪುನಃ ಅವರನ್ನು ಕೆಟ್ಟ ರೀತಿಯಿಂದ ನಡಿಸಿಕೊಳ್ಳಬಾರದು. ಅವರು ಸುಧಾರಿಸುವಂಥ ಮಾರ್ಗ ಹಿಡಿಯಬೇಕು. ಜೇಲಖಾನೆಯಲ್ಲಿ ಕೆಲಸ ಮಾಡತಕ್ಕವರ ದೆಸೆಯಿಂದ ಒಂದು [illegible]. ಕಾರಾಗೃಹಕ್ಕೆ ಬರುವ ಎಷ್ಟೋ ಜನರು ಜೇಲಿನ ಅಧಿಕಾರಿಗಳಿಗಿಂತ ಹೆಚ್ಚು ಯೋಗ್ಯತೆಯುಳ್ಳವರಿದ್ದಾರೆ. ಇದನ್ನು ಯಾವಾಗಲೂ ಲಕ್ಷ್ಯದಲ್ಲಿಟ್ಟು ಅವರ ಕೂಡ ಸೌಜನ್ಯದಿಂದ ನಡೆಯಬೇಕು. ರಾಜಕೀಯ ಕೈದಿಗಳಿಗೆ ಬೇಡೀ ಹಾಕಬಾರದು. ಒಂದು ಜೇಲಿನಿಂದ ಮತ್ತೊಂದು ಜೇಲಿಗೆ ಕರಕೊಂಡು ಹೋಗುವಾಗ ನಡಿಸಬಾರದು. ವಾಹನದ ವ್ಯವಸ್ಥೆ ಮಾಡಬೇಕು. ದಾರಿಯಲ್ಲಿ ಅವರ ಊಟದ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡಬೇಕು. ಹಿಂದೂ ಯುರೋಪಿಯನ್ನರೆಂಬ ಭೇದ ಮಾಡಬಾರದು. ಕೈದಿಗಳಿಗೆ ೧೫ ದಿವಸಕ್ಕೊಮ್ಮೆ ಪತ್ರ ಬರೆಯುವ ಅಥವಾ ಆಪ್ತೇಷ್ಟರನ್ನು ಕಾಣುವ ಸವಲತ್ತು ಇರಬೇಕು.

ಮ್ಯುನಿಸಿಪಾಲಿಟಿಗಳ ಚುನಾವಣೆಯಲ್ಲಿ ಮಹತ್ವದ ಯೋಜನೆ.

—(೦)—

ಮದ್ರಾಸ ಸರಕಾರದ ಕೌನ್ಸಿಲದಲ್ಲಿ ಮ್ಯುನಿಸಿಪಾಲಿಟಿಗಳ ಚುನಾವಣೆಯ ಮಹತ್ವದ ವಿಚಾರ ನಡೆದಿದ್ದು, ಆ ವಿಷಯ ಚಿಕಿತ್ಸಕ ಕಮೀಟಿಯ ಮುಂದೆ ಹೋಗಿ, ಅಲ್ಲಿ ಮಹತ್ವದ ಸೂಚನೆಗಳು ಮಾಡಲ್ಪಟ್ಟಿವೆ. ಯಾವನೊಬ್ಬನು ಪ್ರಾಯಸ್ಥನಾಗಿ ೨೧ ವರ್ಷದವನಾದರಾಯಿತು. ಆತನು ಮನೆಪಟ್ಟಿ ಅಥವಾ ಬೇರೆ ಪಟ್ಟಿ ಕೊಡದಿದ್ದರೂ ಆ[illegible]. ಆತನಿಗೆ ಮತಕೊಡುವ ಅಧಿಕಾರವಿದೆ ಎಂಬದೇ ಒಂದು ಸೂಚನೆಯು; ಚುನಾವಣೆಯಲ್ಲಿ ಗೌರವ ಅಧಿಕಾರಿಗಳು, ಇನಾಮದಾರ ಮ್ಯಾಜಿಸ್ಟ್ರೇಟರು, ಸರಕಾರೀ ವಕೀಲರು, ಕೋರ್ಟುಗಳ ವತಿಯಿಂದ ನಿಂತವರು ಉಮೇದವಾರರಾಗಬಾರದೆಂದು ಎರಡನೆಯ ಸೂಚನೆ ಇರುತ್ತದೆ.

ಹಿಂದುಸ್ಥಾನೀ ಸೇವಾದಲದ ೧೧ನೇ ರಾಷ್ಟ್ರೀಯ ಧ್ವಜಾರೋಹಣ ಸಮಾರಂಭವು.

—(೦)—

೧೯೩೭ನೆಯ ಇಸ್ವಿ ನವಂಬರ ೨೧ನೆಯ ತಾರೀಖು ರವಿವಾರ ಮುಂಜಾನೆ ೮ ಗಂಟೆಗೆ ನಡೆಯಬೇಕಾದುದು.

ಹಿಂದುಸ್ಥಾನೀ ಸೇವಾದಲದ ಪ್ರಧಾನ ಕಾರ್ಯದರ್ಶಿಯವರು ಈ ತಿಂಗಳ ರಾಷ್ಟ್ರೀಯ ಧ್ವಜಾರೋಹಣ ಸಮಾರಂಭದ ಸಂಬಂಧವಾಗಿ ಈ ಕೆಳಗೆ ಕಂಡಂತೆ ಪ್ರಸಿದ್ಧಪಡಿಸಿದ್ದಾರೆ.

ಹಿಂದೂ ದೇಶಕ್ಕೆ ಕೊಡಬೇಕಾದ ರಾಜಕೀಯ ಸುಧಾರಣೆಗಳ ವಿಚಾರದಲ್ಲಿ ಪ್ರಸಿದ್ಧಪಡಿಸಿದ ಪತ್ರಿಕೆಯ ಬಗ್ಗೆ ಇಂಗ್ಲಂಡ್ ಪಾರ್ಲಿಮೆಂಟಿನ "ಹಾಸ್ ಆಫ್ ಕಾಮನ್ಸ" ದಲ್ಲಿ ಚರ್ಚೆ ನಡೆವಾಗ ಸೆಕ್ರೇಟರಿ ಆಫ್ ಸ್ಟೇಟರವರು ಕೊಟ್ಟ ಉತ್ತರಗಳನ್ನು ನೋಡಲಾಗಿ ಹಿಂದೂ ದೇಶಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಡುವ ಪ್ರಶ್ನೆಯನ್ನು ಬಿಡಿಸಲಿಕ್ಕೆ ವೈಸರಾಯರ ಸೂಚನೆಯ ಪ್ರಕಾರ "ರೌಂಡ್ ಟೇಬಲ್ ಕಾನ್ಫರನ್ಸ" ದ ದ್ವಾರ ಅಥವಾ ಮತ್ತೆ ಇತರ ಯಾವ ರೀತಿಯಿಂದಾಗಲೀ, ಹಗಲಿರುಳು ಪ್ರಯತ್ನ ಮಾಡುತ್ತಿರುವ ಮುಖಂಡರುಗಳಿಗೆ ಜನತೆಯ ಸಂಪೂರ್ಣ ಬೆಂಬಲವಿರುವದು ಅತ್ಯವಶ್ಯವಿರುತ್ತದೆ.

ಒಕ್ಕಟ್ಟಿನಲ್ಲಿ ಬಲವಿದೆ. ಎಂದು ಸರ್ವಸಾಮಾನ್ಯವಾಗಿ ತಿಳಿದಿರುವ ವಚನವನ್ನು ಕೃತಿಯಲ್ಲಿ ತರುವದಕ್ಕೆ ಸದ್ಯದ ಪ್ರಸಂಗಕ್ಕಿಂತಲೂ ಉತ್ತಮವಾದ ಸಮಯವಾವುದು? ಮತ್ತು ಹಿಂದುಸ್ಥಾನದ ಪ್ರತಿಯೊಂದು ಊರಿನಲ್ಲಿ ಮೂರು ಬಣ್ಣಗಳಿಂದಲೂ, ರಾಟಿಯಿಂದಲೂ ಕೂಡಿ ಮೆರೆಯುವ ನಮ್ಮ ರಾಷ್ಟ್ರಧ್ವಜದ ಕೆಳಗೆ ನಾವೆಲ್ಲರೂ ಪ್ರಚಂಡ ಜನಸಮೂಹದೊಂದಿಗೆ ಕೂಡಿ ಅದಕ್ಕೆ ಅತಿಶಯ ಭಕ್ತಿಯೊಡನೆ ಸನ್ಮಾನವನ್ನು ಕೊಡುವದರ ಹೊರ್ತು ನಮ್ಮಲ್ಲಿಯ ಬಲವಾದ ಐಕ್ಯತೆಯನ್ನು ತೋರ್ಪಡಿಸಲು ಬೇರೆ ಮಾರ್ಗವುಂಟೆ?

ಆದ್ದರಿಂದ ಎಲ್ಲರೂ ೧೯೩೭ನೆಯ ಇಸ್ವಿ ನವಂಬರ ೨೧ನೆಯ ತಾರೀಖು ಬೆಳಿಗ್ಗೆ ೮ ಗಂಟೆಗೆ ಸಾರ್ವಜನಿಕವಾಗಿ ರಾಷ್ಟ್ರೀಯ ಧ್ವಜಾರೋಹಣ ಸಮಾರಂಭವನ್ನು ಅತ್ಯಂತ ಉತ್ಸಾಹದಿಂದ ನೆರವೇರಿಸಿ ಆ ಧ್ವಜಕ್ಕೆ ತಮ್ಮ ವಂದನೆಗಳನ್ನು ಸಲ್ಲಿಸಿಕೊಳ್ಳುವಿರೆಂದು ನಂಬುತ್ತೇವೆ.

ಹಿಂದುಸ್ಥಾನೀ ಸೇವಾದಲ ಡಾ. ನ. ಸು. ಹರ್ಡೀಕರ.
ಹುಬ್ಬಳ್ಳಿ (ಕರ್ನಾಟಕ) ದಳದ ಪ್ರಧಾನ ಕಾರ್ಯ
ತಾ|| ೧೭-೧೧-೧೯೩೭ ದರ್ಶಿ

ಚುನಾವಣೆಯಲ್ಲಿ ಕೊಲೆಗಳು.

೧೯ ಜನರು ಸತ್ತರು; ೫೦ ಜನರು ಘಾಯವಾದರು.

—(೦)—

ಅಮೇರಿಕೆಯ ಮೆಕ್ಸಿಕೋ ದೇಶದಲ್ಲಿ ಅಧ್ಯಕ್ಷರ ಪ್ರತಿಪಕ್ಷೀಯನ್ನು ತುಂಬಿದ ಸಭೆಯಲ್ಲಿಯೇ ಗುಂಡು ಹಾಕಿ ಕೊಂದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಆ ಕೊಲೆಯನಂತರ ಅಲ್ಲಿ ಚುನಾವಣೆಯಾಯಿತು. ಆಗ ರಕ್ತದ ಕಾಲುವೆಯೇ ಹರಿಯಿತೆಂದರೂ ಸಲ್ಲುವದು. ೧೯ ಜನರು ಯಮಸದನ ಕಂಡರು. ಇವರಲ್ಲಿ ಐವರು ಪೋಲೀಸರಿದ್ದಾರೆ, ಪಕ್ಷ ಪರಪಕ್ಷದವರು ನಿರ್ಭಯದಿಂದ ಗನ್ನುಗಳು ಮತ್ತು ಬಾಂಬು ಹಾರಿಸಿದರು. ಅಧ್ಯಕ್ಷರ ಅರಮನೆಯ ಮುಂದೆ ಅಂತಹ ದೂಕರು ಕೇಳುತ್ತ ದಯಮಾಡಲಿಲ್ಲ. ಜನಲಯವಾದಂತೆ ದೊಡ್ಡ ದೊಡ್ಡ ಕಟ್ಟಡಗಳ ನಾಶವಾಯಿತು. ಬೀದಿಗಳಲ್ಲಿ ಬಾಂಬಿನಿಂದ ದೊಡ್ಡ ದೊಡ್ಡ ಹೊಂಡಗಳು ಬಿದ್ದವು. ಇಷ್ಟು ಅನರ್ಥವಾದರೂ ಚುನಾವಣೆಯು ಬಹು ಶಾಂತ ರೀತಿಯಿಂದ ನಡೆಯಿತೆಂದು ಆ ಸರಕಾರದವರು ಪ್ರಸಿದ್ಧ ಮಾಡಿದ್ದಾರೆ.

ಚೀನರಿಗೂ ರಶಿಯರಿಗೂ ಯುದ್ಧ

—(೦)—

ಮಂಗೋಲಿಯಾದ ಸರಹದ್ದಿನಲ್ಲಿ ರಶಿಯರು ಚೀನರ ಮೇಲೆ ದಂಡಯಾತ್ರೆ ಹೊರಡಿಸಿದ್ದಾರೆ. ರಶಿಯಾದ ವೈಮಾನಿಕರು ಚೀನರ ವಿಮಾನಗಳ ಪಾಳೆಯದ ಮೇಲೆ ಬಾಂಬು ಚಲ್ಲುತ್ತಿದ್ದಾರೆ. ನಿಃಶಸ್ತ್ರರಾದ ಚೀನರು ಗುಳೇ ಹೋಗುತ್ತಿದ್ದಾರೆ. ರಶಿಯರು ಬಾಂಬು ಹಚ್ಚಿ ಚೀನರ ಒಂದು ಹೊಗೆಬಂಡಿಯನ್ನು ನಾಶಮಾಡಿದರು.

ಶ್ರೀ

ಶ್ರೀಮನ್ಮಧ್ವ ಸಿದ್ಧಾಂತೋತ್ತೇಜಕ ಸಭಾ ಧಾರವಾಡ.

ಈ ವರ್ಷ ಸಭೆಯಿಂದ ನಡೆಯತಕ್ಕ ವಾರ್ಷಿಕ ಪರೀಕ್ಷೆಯ ಸಮಾರಂಭವು, ಶುಕ್ಲ ಸಂವತ್ಸರದ ಮಾರ್ಗಶೀರ್ಷ ಶು. ೭, ೮, ೯ ಅಂದರೆ ೧೯೩೭ನೆಯ ದಿಸಂಬರ ತಿಂಗಳದ ತಾರೀಖು ೨೦, ೨೧, ೨೨ ಆದಿತ್ಯವಾರ, ಸೋಮವಾರ, ಮಂಗಳವಾರ ಈ ಮೂರು ದಿನ ನಡೆದು, ಮಂಗಳವಾರ ಸಾಯಂಕಾಲಕ್ಕೆ ದಕ್ಷಿಣಾ ಸಮಾರಂಭವಾಗುವದು. ಉಮೇದವಾರರು ತೀವ್ರ ಅರ್ಜಿಗಳನ್ನು ಕಳಿಸಿಕೊಡಬೇಕು.

ಧಾರವಾಡ ೧೫-೧೧-೧೯೩೭ } ಹನಮಂತರಾವ ಅಕ್ಕಿ[illegible]ಸ್ವರ, ಕಾರ್ಯದರ್ಶಿ.

ನೋಟೀಸು

ಬಸ್ಸಿ ಕೋಂ ಯಲ್ಲಪ್ಪಾ ಮೇಟಿಯವರ ಸಾ|| ಶೀನ ಬಾಯನಾಳ ಹಾಲಿವಸ್ತಿ ದಾಸ್ತಿಕೊಪ್ಪ ಇವಳಿಗೆ-

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡುವ ಯಲ್ಲಪ್ಪಾ ತಂದಿ ಬಸಪ್ಪಾ ಮೇಟಿ ಸಾ|| ಶೀನ ಬಾಯನಾಳ ತಾಲೂಕ ಹುಬ್ಬಳ್ಳಿ ಈತನು ನಿನಗೆ ಈ ನೋಟೀಸಿನಿಂದಾ ತಿಳಿಸುವದೇನಂದರೆ-

ನೀನು ನನ್ನ ಮದಿವೆಯ ಹೆಂಡತಿಯಾಗಬೇಕು ನನ್ನ ಕೂಡ ಪ್ರಬುದ್ಧಳಾದ ಬಳಿಕ ಎರಡು ಮೂರು ವರ್ಷ ಸುರಳಿತವಾಗಿ ಬಾಳಿವೆ ಮಾಡಿದಿ ಆದರೆ ನಿನ್ನ ತವರಮನೆಯವರ ದುರ್ಬೋಧನೆಯಿಂದ ಮನೆಯಲ್ಲಿ ದುಸುಮುಸಿ ಮಾಡಲಿಕ್ಕೆ ಹತ್ತಿ, ಆಜ ಮಾಸು ನಾಲ್ಕು ತಿಂಗಳ ಹಿಂದೆ ನಾನು ಮನೆಯಲ್ಲಿಲ್ಲದ ವೇಳೆಯಲ್ಲಿ ನನ್ನ ಮಾಲಕಿಯ ದಾಗೀನೆಗಳು

೧ ಬಂಗಾರದ ಸರಿಗಿ ತೊಲಿ ೪

೨ ಬಂಗಾರದ ಬಳೀ ಜೋಡು ತೊಲಿ ೭

೩ ಬಂಗಾರದ ಮುಳಕಂಕಣ ತೊಲಿ ೩

೪ ಕರ್ಣಪೂಲು

೫ ಬೆಳ್ಳಿ ಚವಳಾ

೬ ಮದಿವೆಯ ಶೀರಿ

ಇಷ್ಟು ಸಾಮಾನ ತಕ್ಕೊಂಡು ತವರ ಮನಿಗೆ ಹೋದಿ ನಾನು ಮತ್ತು ದೈವದವರು ನಿನ್ನನ್ನು ಕರಿಯಲಿಕ್ಕೆ ಬಂದರೆ- ನೀನು ಬರುವದಿಲ್ಲೆಂದು ನಿನ್ನ ತಂದೆ ತಾಯಿ ಕಳಿಸುವದಿಲ್ಲೆಂದರು ಅದ್ದರಿಂದ ಕಾಯದೆಶೀರ ಈ ನೋಟೀಸು ಕೊಡಬೇಕಾಯಿತು ನೀನು ಈ ನೋಟೀಸು ಮುಟ್ಟಿದ ಮೂರು ದಿವಸಗಳಲ್ಲಿ ಮೇಲೆ ಬರದ ಯಾವತ್ತು ಸಾಮಾನು ತಕ್ಕೊಂಡು ಒಂದು ನನ್ನ ಕೂಡ ಸುರಳಿತವಾಗಿ ಪ್ರಪಂಚ ಮಾಡಿ ಬಾಳವೆ ಮಾಡಿಕೊಳ್ಳಬೇಕು ಇದಕ್ಕೆ ತಪ್ಪಿದರೆ- ನನ್ನ ದಾಗೀನೆ ಶೀರಿ ಮತ್ತು ನಿನ್ನ ಕೂಡಿಂದ ಬಗ್ಗೆ ಕಾಯದೆಶೀರ ಇಲಾಜ ಮಾಡುವನು ನೀನು ಈ ನೋಟೀಸಿನ ವಿರುದ್ಧ ಯಾರನ್ನಾದರೂ ಉಡಿಕೆ ಮಾಡಿಕೊಂಡರೆ- ನಿನ್ನ ಮೇಲೆ, ನಿನ್ನನ್ನು ಉಡಿಕೆಯಾಗುವವನ ಮೇಲೆ ಮತ್ತು ಇದಕ್ಕೆ ಸಹಾಯ ಮಾಡುವ ನಿನ್ನ ತಾಯಿ ತಂದೆಯ ಮೇಲೆ ಫೌಜದಾರಿ ಮಾಡುವನು ನಾನು ಸೋಡಪತ್ರ ಕೊಟ್ಟಹೊರ್ತು ನನ್ನ ನಿನ್ನ ಸಂಬಂಧ ತಪ್ಪುವದಿಲ್ಲ ನಾನು ಬಾಳಿವೆ ಮಾಡಲಿಕ್ಕೆ ಇಚ್ಛಿಸುತ್ತೇನೆ ಕಾರಣ ನೀನು ಮೇಲೆ ಹೇಳಿದಂತೆ ಯಾವತ್ತು ಸಾಮಾನ ತಕ್ಕೊಂಡು ಹೊಂಟು ಬರಬೇಕು. ಈ ನೋಟೀಸಿನ ಖರ್ಚು ನಿನಗೆ ಫುಸಲಕ್ಕೆ ಕೊಟ್ಟ ನಿನ್ನ ತಂದೆ ತಾಯಿ ಮತ್ತು ನಿನ್ನ ಮೇಲಿಂದ ತಕ್ಕೊಳ್ಳುವದು ತಾ||೨೧-೧೧-೧೯೨೫

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಯಲ್ಲಪ್ಪಾ ತಂದಿ ಬಸಪ್ಪಾ ಮೇಟಿ ಈತನ ಕೈದು ಇರುತ್ತದೆ

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿ ಲಿಮಿಟೆಡ್.

(ಇಂಗ್ಲಂಡದಲ್ಲಿ ಇನ್ ಕಾರ್ಪೋರೆಟೆಡ್ ಮಾಡಿದ್ದು.)

ನೋಟೀಸು.

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿ ಲಿಮಿಟೆಡ್ ಇದರ ಏಜಂಟರು ಮದ್ರಾಸ ಪಾರ್ಕ ಟೌನಿನ ತಮ್ಮ ಕಚೇರಿಯಲ್ಲಿ ತಾರೀಖು ೧೭ ದಿಸೆಂಬರ ೧೯೨೫ನೇ ಮಂಗಳವಾರ ದಿವಸ ಮಧ್ಯಾಹ್ನದ ಮೂರು ಘಂಟೆಗೆ, ತನಕ ನೇಕಂಡ ಹ್ಯಾಂಡ ಮತ್ತು ಕೆಲಸಕ್ಕೆ ಬಾರದ ಸಾಮಾನುಗಳು ಅಂದರೆ- ಉಕ್ಕು, ಬೀಡು, ಯಂತ್ರಸಾಮಗ್ರಿ, ಗರ್ಡರ, ಟ್ರಫ ಪ್ಲೇಟು, ಉಕ್ಕಿನ ಟ್ರಫ ಪ್ಲೇಟುಗಳು, ಹಳೇ ರೇಲುಗಳು, ಸಾಗವಾನಿಯ ತುಂಡುಗಳು, ವಿದ್ಯುತ್ತಿನ ತೀಲಿಂಗು ಮತ್ತು ವಿದ್ಯುತ್ತಿನ ದಿಸಣಿಕೆ, ತೆಗವಾದ ಕಟ್ಟಿಗೆಯ ಮತ್ತು ಉಕ್ಕಿನ ಪೀಪುಗಳು ಇವೇ ಮುಂತಾದವುಗಳ ಬಗ್ಗೆ ಮೋಹರಬಂದ ಟೆಂಡರಗಳನ್ನು ಸ್ವೀಕರಿಸುವರು.

ಟೆಂಡರ ಫಾರ್ಮು ಮತ್ತು ಮಾರಿಗೆಯ ಸಾಮಾನುಗಳ ಯಾದಿಯನ್ನು ಐದು ರೂಪಾಯಿ ಫೀ ಕೊಟ್ಟು, ಪೆರಂಬೂರದಲ್ಲಿರುವ ಎಮ್. ಎಸ್. ಎಮ್. ರೇಲ್ವೆಯ ಕಂಟ್ರೋಲರ ಆಫ್ ಸ್ಟೋರ್ಸ ಇವರಿಂದ ಪಡೆಯಬೇಕು. ಈ ರಕಮು ತಿರಿಗಿ ದೊರೆಯಲಾರದು.

ಟೆಂಡರ ಫಾರ್ಮನ್ನು ಹ್ಯಾಲುಪೇಯಬಲದಿಂದ ಕಳಿಸಲಿಕ್ಕಾಗುವದಿಲ್ಲ.

"ಸ್ಕ್ರ್ಯಾಪ ಮೆಟಲಗಳ ದೆಸೆಯಿಂದ" ಎಂದು ಟೆಂಡರ ಫಾರ್ಮಿನ ಮೇಲೆ ಬರೆದು, ಲಕೋಟೆಯನ್ನು ಮೋಹರ ಬಂದ ಮಾಡಿ ಕಳಿಸಬೇಕು. ಈ ಕರಾರು ಟೆಂಡರ ಫಾರ್ಮಿನ ಕೂಡ ಪೂರೈಸಲ್ಪಡುವದು.

A· C· TURNER,
Controller of Stores.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ವೃದ್ಧರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:—ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಶೀಘ್ರ ಔಷಧ ಬೇಕಾದಾಗ್ಗೆ ಧಾರವಾಡ ವರ್ತಮಾನಪತ್ರದ ಕಾರ್ಯಾಲಯದಿಂದ ಈ ಔಷಧಿಯನ್ನು ತರಿಸಿಕೊಳ್ಳಬೇಕು.

ಈ ಪತ್ರವನ್ನು ಲಿಂಗಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R N. B. 1448

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೧೦) ಧಾರವಾಡ ಶುಕ್ರವಾರ ತಾರೀಖು ೨೨ನೇ ನವ್ಹೆಂಬರ ೧೯೩೫ (ಸಂಚಿಕೆ ೨೫೪

ದಿ. ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ್, ಧಾರವಾಡ.

ಮಂಗಳವಾರ ಪೇಠ ಜೋಗ ವಕೀಲರ ಮನೆಯಲ್ಲಿ.

ದಾಗೀನೆಗಳ ವಸ್ತ್ರೀ ಮೇಲೆ ಸೋಯಿ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು.

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನಿಗಳ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಲಿರುವದು. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ಬೆಳ್ಳಿ ದಾಗೀನೆಗಳ ಮೇಲೆ ಸೋಯಿ ಬಡ್ಡಿ ದರದಿಂದ ಸಾಲ ಕೊಡುವ ವ್ಯವಸ್ಥೆಯುಂಟು. ದಾಗೀನೆ ವಸ್ತ್ರೀ ಇಟ್ಟವರು ಮೊದಲನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ ೧೫ ದಿವಸಕ್ಕೊಮ್ಮೆ ಅಷ್ಟಿಷ್ಟೇ ರಕಮು ತಂದು ಕೊಟ್ಟರೂ, ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಅಷ್ಟಿಷ್ಟೇ ರಕಮು ಕೊಡುವದರಿಂದ, ಸಾಲದ ಭಾರ ಕಡಿಮೆಯಾಗಿ, ಬಡ್ಡಿಯು ಕಡಿಮೆಯಾಗುತ್ತಾ ಬರುವದು. ಧಾರವಾಡ ಮುಂತಾದ ಪಟ್ಟಣವಾಸಿಗಳು ಈ ಸೋಯಿಯ ಫಾಯದೆ ತಕೊಳ್ಳುತ್ತಿದ್ದಾರೆ. ಆದರೆ ಇದರ ಮಹತ್ವವು ಮತ್ತು ಉಪಯೋಗವು ಹಳ್ಳಿಯ ಜನರಿಗೂ ಆಗಲೆಂದು ಈ ಜಾಹೀರಾತು ಪ್ರಸಿದ್ಧ ಮಾಡಿ, ಮುದ್ದಾಂ ಹಳ್ಳಿಗಳಿಗೆ ಕಳಿಸಿದ್ದೇವೆ. ಹಳ್ಳಿಯಲ್ಲಿ ಬಡ್ಡಿಯ ದರವು ರೂಪಾಯಿಕ್ಕೆ ಮೂರು ಪೈ ಇಂದ ಆರು ಪೈವರೆಗೆ ಇರುತ್ತದೆ ಅದೂ ಒಮ್ಮೆಯಲೆ ಕೊಡಬೇಕಾಗುತ್ತದೆ. ಹೀಗಾಗಿ ಎಷ್ಟೋ ಜನ ಒಡವೆಗಳು ... ದಾಗೀನೆಗಳು ಸಹ ಸಾವಕಾರರ ಅಸಲು ಮತ್ತು ಬಡ್ಡಿಯಲ್ಲಿ ಮಾರಾಟವಾಗಿ ಹೋಗುತ್ತವೆ. ಆ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ದಾಗೀನೆ ವಸ್ತ್ರೀ ಇಟ್ಟರೆ ಆಗುವದಿಲ್ಲ. ಏಕೆಂದರೆ ಸ್ವಲ್ಪ ರಕಮು ಕೊಟ್ಟರೂ ಅದನ್ನು ತಕ್ಕೊಂಡು, ಸಾಲದ ಭಾರವನ್ನು ಕಡಿಮೆಮಾಡುತ್ತಾ ಬರುತ್ತೇವೆ. ಇಂಥ ಸೋಯಿಗಳು ಹಳ್ಳಿಗಳಲ್ಲಿ ದೊರೆಯಲಾರವು. ಆದ್ದರಿಂದ ಹಳ್ಳಿಯಲ್ಲಿ ಸಾಲ ಬೇಕಾದವರು ನಮ್ಮ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ, ಅನುಭವ ಮತ್ತು ಲಾಭ ಪಡೆಯಬೇಕು. ನಮ್ಮ ಬಡ್ಡಿಯ ದರವು ನೂರು ರೂಪಾಯಿಯ ವರೆಗೆ ಒಂದು ತಿಂಗಳಿಗೆ ಒಂದು ರೂಪಾಯಿಗೆ ಎರಡು ಪೈ ಇರುತ್ತದೆ. ನೂರರ ಮೇಲಿನ ರಕಮಿನ ಬಡ್ಡಿಯ ದರ ಪ್ರತ್ಯಕ್ಷವಾಗಿ ಅಥವಾ ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಗಳ ಜನರು ಶಹರದ ಊರಿಗೆ ಬಂದು ಸಾವಕಾರರ ಮೊದಲಾದವರಲ್ಲಿ ಅವರು ಹೇಳಿದಷ್ಟು ಬಡ್ಡಿ ಕರಾರ ಮಾಡಿ ಸಾಲ ತೆಗೆದುಕೊಳ್ಳುವರು. ಮತ್ತು ಮುಂದೆ ಬಹಳ ತೊಂದರೆ ನುಕ್ಸಾನ ಮಾಡಿಕೊಳ್ಳುವರು. ಹೀಗೆ ಬ್ಯಾಂಕಿನಲ್ಲಿ ಮಾತ್ರ ಆಗುವದಿಲ್ಲ. ಹಳ್ಳಿಗಳ ಜನರು ಸದ್ಯಕ್ಕೆ ಒಂದಾವರ್ತಿ ವ್ಯವಹಾರ ಮಾಡಿ ಖಾತ್ರಿ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಘಟ್ಟಿಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ ಎಲ್ಲಕ್ಕಿಂತಲೂ ಸೋವಿಯಿಂದ ಸಿಗುವದು.

ಕೃಷ್ಣರಾವ ವೆಂಕಟರಾವ ಧಂಡಿಪಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬೆಂದಿಗೆಯು ಎಂಟು ಲಕ್ಷದ ಮೇಲುಂಟು. ಚಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಐದು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವಸ್ತ್ರೀ ಇಟುಕೊಳುವ ಬಡ್ಡಿಯ ದರವು ನೂರಕ್ಕೆ ವರ್ಷಕ್ಕೆ ಹನ್ನೆರಡು ಆಗಿಯುಂಟಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕಳಗಿನ ವಿಳಾಸಕ್ಕೆ ಬರೆದು ಕೇಳಬೇಕು.

ವಿಜಯ ಮ್ಯಾನೇಜರ ಧಾರವಾಡ.

ವಿಜಯ.

ಧಾರವಾಡ ತಾ. ೨೨-೧೧-೨೯ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಪ್ರಿಯ
[illegible]
ದ " ವಿಜಯಂ " ಶ್ರೀಶಕರುಣಾ ।
ನಾ ವಿಹಿತಂಗಳ ವಿಜಯವಿಲ್ಲ ॥೧॥

ಸ್ವರಾಜ್ಯವೂ, ಸಂಸ್ಥಾನಿಕರೂ.

ಹಿಂದುಸ್ಥಾನದ ಭಾವೀ ಸ್ವರಾಜ್ಯ ಸಂಪಾದನೆಯಲ್ಲಿ ದೇಶೀ ಸಂಸ್ಥಾನಿಕರು- ಹಿಂದೂ ಮುಸಲಮಾನರು- ಜೆಬ್ಬಾವಿನಂತೆ ಅಡ್ಡ ಬರುತ್ತಾ ಹೋದರು. ತಮ್ಮ ಸ್ವಂತ ಪ್ರಾಂತದಲ್ಲಿ ಮೊಗಲಾಯಿಯಂತೆಯೇ ರಾಜ್ಯಕಾರಭಾರ ಮಾಡುತ್ತಾ ಬಂದರು. ಇಂಗ್ಲಿಷ ಸರಕಾರದವರು ಮಾಂಟೆಗು ಚೆಮ್ಸ್‌ಫೋರ್ಡ ಸುಧಾರಣೆ ಕೊಟ್ಟರು. ಆದರೆ ಅವರೊಳಗೊಂದು ಕೊಂಕಿಟ್ಟರು. ಅಸೆಂಬ್ಲಿಯಾಗಲಿ, ಇಲಖೆಯ ಕೌನ್ಸಿಲುಗಳಾಗಲಿ, ಇವುಗಳ ಆಡಳಿತೆಯಲ್ಲಿ ಕೈ ಹಾಕಬಾರದೆಂಬ ನಿರ್ಬಂಧನೆಪಡಿಸಿದರು. ಇದರಿಂದ ಸಂಸ್ಥಾನಿಕರು ತಮ್ಮನ್ನು ಯಾರೂ ಹಿಡಿಯುವರಿಲ್ಲೆಂದೆಂದುಕೊಂಡರು. ಇದರಂತೆ ಸಾರ್ವಭೌಮ ಸರಕಾರದವರು ಸಂಸ್ಥಾನಿಕರ ಮೇಲೆ ತಮ್ಮ ವಜ್ರಾಯುಧವು ಮನಸ್ವೀಪೂರ್ವಕವಾಗಿ ತಿರುಗಲು ಸರ್ವತಂತ್ರ ಸ್ವತಂತ್ರರಾಯಿತೆಂದು ಘೋಷಿತ ಮಾಡಿಕೊಂಡರು. ನಾಭಾದ ಮಹಾರಾಜರನ್ನು ಪದಭ್ರಷ್ಟ ಮಾಡಿ, ಅವರನ್ನು ಗಡಿಪಾರು ಮಾಡಿದರು. ಅವರ ವಿಷಯವಾಗಿ ಸರಕಾರವು ಕೈಕೊಂಡ ಧೋರಣವು ಅನ್ಯಾಯದ ಪರಮಾವಧಿಯಾಗಿರುತ್ತದೆಂದು ದೇಶಾಭಿಮಾನಿ ಮಂಡಳಿಗಳು ತುಂಬ ಪ್ರತಿಭಟಿಸಿದವರೂ, ಈ ಪ್ರಶ್ನದ ಮೇಲೆ ಠರಾವನ್ನು ಅಸೆಂಬ್ಲಿಯಲ್ಲಿ ತೆಗೆಯಲು ಅವಕಾಶವೇ ಇಲ್ಲ. ಏಕೆಂದರೆ ಪುರಾಣದಲ್ಲಿ ಹೇಳುವಂತೆ ಅವರು ಕಾಶೀಖಂಡವಾಸಿಗಳು. ಹರಿಶ್ಚಂದ್ರನು ಎಲ್ಲ ರಾಜ್ಯದಾನ ಮಾಡಿದನು. ಕಾಶೀಖಂಡ ಮಾತ್ರ ಕೊಡುವಂತಿರಲಿಲ್ಲ ಏಕೆಂದರೆ ಅದು ಸ್ವತಂತ್ರವಾದದ್ದು. ಅದೇ ಪ್ರಕಾರ ಬ್ರಿಟಿಶ ದೇಶದಿಂದ ಹಿಂದುಸ್ಥಾನದಲ್ಲಿರುವ ಪ್ರತಿಯೊಂದು ಸಂಸ್ಥಾನವು ಕಾಶೀಖಂಡವಾಗಿರುತ್ತದೆ. ನಾಭಾ ರಾಜ್ಯದಲ್ಲಿ ಅಕಾಲಿ ಶೀಖರು ಸತ್ಯಾಗ್ರಹಮಾಡಿದರು ಸೈನಿಕರ ಗುಂಡಿನಿಂದ ರಕ್ತದ ಕಾಲುವೆ ಹರಿಯಿತು. ಈ ಘೋರಕೃತ್ಯದ ಪ್ರಸ್ತಾಪವನ್ನು ಪಂಡಿತ ಮಾಲವೀಯರವರು ಅಸೆಂಬ್ಲಿಯಲ್ಲಿ ತೆಗೆಯಲು- ಇದು ಸಂಸ್ಥಾನ; ಇದರಲ್ಲಿ ನಿಮಗೆ ಬಾಯಿ ಹಾಕಲಿಕ್ಕೆ ಬರುವದಿಲ್ಲೆಂದು ಆಳರಸರು ಹೇಳಿ ಅವರ ಬಾಯಿ ಕಟ್ಟಿದ ಕೂಡಲೆ. ಪಂಡಿತರು ತಮ್ಮ ಶಾಸ್ತ್ರ ಪುರಾಣದ ಗಂಟನ್ನು ಕಟ್ಟಬೇಕಾಯಿತು,

ಸಂಸ್ಥಾನಿಕರು ತಮ್ಮ ರಾಜ್ಯದಲ್ಲಿ ರಾಜಕೀಯ ಸ್ವಾತಂತ್ರ್ಯ ಪಡೆಯಬೇಕೆಂಬ ಮಹತ್ವಾಕಾಂಕ್ಷೆ ಪಟ್ಟವನ್ನು ಪ್ರಜಾ ಅನ್ಯಾಯ ಮತ್ತು ಕುಸುಬಿನಿಂದ ನಡಿಸಿಕೊಳ್ಳುತ್ತಾ ಬಂದಿರುತ್ತಾರೆಂಬುದಂತೂ ತಿಳಿದ ವಿಷಯವಾಗಿದೆ. ತಮ್ಮ ರಾಜ್ಯದಲ್ಲಿ ಇಂಗ್ರೇಜಿ ಪಿನಲಕೋಡ, ಪ್ರೊಸೀಜರ ಕೋಡುಗಳನ್ನು ಅಮಲಿನಲ್ಲಿ ತಂದರು. ಆದರೆ ಪ್ರೆಸ ಆಕ್ಟಿಗೆ ಅನುವು ಕೊಡಲಿಲ್ಲ. ಇನ್ನೂ ಕೊಟ್ಟಿರುವದಿಲ್ಲ. ವರ್ತಮಾನಪತ್ರಗಳನ್ನು ಒಂದು ಮಾಡುವದೆಂದರೆ- ಹುಡುಗರ ಆಟ, ನೀರ ಮೇಲಿನ ಗುಳ್ಳೆ, ಗಾಳಿಯೊಳಗಿನ ಕಂದೀಲವೆಂದಾಗಿರುತ್ತದೆ. ತಮ್ಮ ದೋಷಗಳನ್ನು ಹೇಳುವಂಥ ಪತ್ರಗಳಿಗೆಲ್ಲ ಬಹಿಷ್ಕಾರ ಹಾಕುವರು; ದಿಗ್ಬಂಧನೆಮಾಡುವರು. ಕೊಂದು ಹಾಕುವರು. ಸಂಸ್ಥಾನದ ಪ್ರಜರು ಯಾವರೀತಿಯಿಂದಲೂ ಸ್ವತಂತ್ರ ಮನೋವೃತ್ತಿಯಿಂದ ನಡೆಯದಂತೆ ಭದ್ರೋಪಾಯ ಕೈಕೊಳ್ಳುವರು. ಹೀಗಾಗಿ ಸಂಸ್ಥಾನಗಳು ಇಂದಿಗೂ ರಾಜಕೀಯ ಸ್ವಾತಂತ್ರ್ಯ ದೃಷ್ಟಿಯಿಂದ ತೀರ ಹಿಂದುಳಿದು, ರಾಜಾಪ್ರಜರ ನಡುವಿರುವಂಥ ಪ್ರೀತಿಯು ಸಂಪುಷ್ಟಕ್ಕೆ ಬಂದಿರುತ್ತದೆ ಇಂದು ಸಂಸ್ಥಾನಿಕರ ವಿರುದ್ಧ ದೂರು ಹೇಳಿಕೊಳ್ಳದಂಥ ಒಂದೂ ಸಂಸ್ಥಾನವಿರುವದಿಲ್ಲ.

ಸಂಸ್ಥಾನಿಕರ ನರೇಂದ್ರ ಮಂಡಲವಾಯಿತು. ಅವರು ಒಂದೆಡೆಯಲ್ಲಿ ಕೂತು ಮಾತಾಡುವದಾಯಿತು. ಅದರಿಂದ ಇವರಿಗಾಗಲೀ, ಇವರ ಪ್ರಜೆಗಳಿಗಾಗಲೀ ಸುಖವಿರುವದಿಲ್ಲ. ಈಗ ಇಬ್ಬರಿಗೂ ಕೆಲ ಮಟ್ಟಿಗಾದರೂ ಸುಖವಾಗುವಂಥ ಸಮಯ ಬಂದಿದೆ. ಸಾಯಮನ್ನ ಕಮೀಶನದ ಕೂಡ ಸಂಸ್ಥಾನಿಕರ ಹಾಗು ಬ್ರಿಟಿಶ ಸರಕಾರದ ಹಿತಸಂಬಂಧಗಳನ್ನು ಕುರಿತು ವಿಚಾರ ಮಾಡಲು ಬಟ್ಲರ ಕಮಿಟಿ ಕೂತಿತ್ತಷ್ಟೇ; ಈ ಕಮಿಟಿಯ ನಿರ್ಣಯವು ಭಾವೀ ಪಾರ್ಲಮೆಂಟಿನ ಸ್ವರಾಜ್ಯಕ್ಕೆ ಸಂಬಂಧವಿರಲಿಲ್ಲ. ಆ ಸಂಬಂಧವನ್ನು ನಿಶ್ಚಯಮಾಡಲು- ಮಂತ್ರಿಗಳು ರಾವುಂಡ ಟೇಬಲ್ಲ ಪರಿಷತ್ತಿಗೆ ಇವರನ್ನು ಕರೆಯುವರು. ಕರೆಯುತ್ತೇವೆಂದು ಜಾಹೀರ ಮಾಡಿದ್ದಾರೆ; ಸಂಸ್ಥಾನಿಕರಿಗಾಯಿತು. ಹಿಂದೀ ಪ್ರಜಾ ಪ್ರತಿನಿಧಿಗಳಾಯಿತು. ಆದರೆ ಸಂಸ್ಥಾನಗಳ ಪ್ರಜರಿಗೆ ಆಮಂತ್ರಣ ಬರುವದ್ದೇಕೆ? ತಮಗೂ ಆಮಂತ್ರಣ ಬರಬೇಕೆಂದು ಇವರು ಈಗಿನಿಂದಲೇ ಚಳವಳಿ ನಡೆಸಿರುವದು ಸ್ತುತ್ಯವದೆ. ಬಟ್ಲರ ಕಮಿಟಿಯು ಈ ದೇಶದಲ್ಲಿ ಸಂಚಾರ ಮಾಡುತ್ತಿದ್ದಾಗ, ಈ ಪ್ರಜರು ತಮ್ಮ ಮತವನ್ನು ಹೇಳಲಿಕ್ಕೆ ಹೋದರೆ- ಕಮಿಟಿಯವರು ಕೇಳಲಪೇಕ್ಷಿಸಲಿಲ್ಲ. ಇದರ ಬೆನ್ನು ಹತ್ತಿ ವಿಲಾಯತಿಗೆ ಹೋದರೂ, ಅಲ್ಲಿಯೂ ಬಾಗಿಲ ಬಂದ್ದಾಗಿ, ಇವರನ್ನು ಒಳಗೆ ಬಿಡಲಿಲ್ಲ. ಈಗಾದರೂ ಇವರ ಪ್ರತಿನಿಧಿಯನ್ನು ಕರಮಾಡಿಕೊಂಡು, ಇವರಿಗೆ ಮಹಾರಾಜರ ಸ್ವರಾಜ್ಯದಷ್ಟು ಇರದಿದ್ದರೂ, ಮಾಂಟೆಗು ರಿಫಾರ್ಮದಷ್ಟು ರಾಜಕೀಯ ಹಕ್ಕು ದೊರೆಯುವಂತೆ ಮಾಡಬೇಕೆಂದು ಆಶಿಸುತ್ತೇವೆ.

ಬಡವ ಮತ್ತು ಬಂಡವಲಗಾರನ ಬಡಿದಾಟ.

——(೦) ——

ಬಂಡವಲಗಾರ ಮತ್ತು ಆತನ ಕಟ್ಟಲ್ಲಿ ಗಿರಣಿ ಕಾರಖಾನೆಗಳಲ್ಲಿ ದುಡಿಯುವ ಕೂಲಿಕಾರರ ಪರಸ್ಪರ ಹಿತಾಹಿತ ಸಂಬಂಧವನ್ನು ತಿಳಿಕೊಳ್ಳುವ ಕುರಿತು ಸರಕಾರದವರು ಒಂದು ಕಮಿಶನ ನೇಮಿಸಿದ್ದಾರೆ. ಕಮಿಶನದಲ್ಲಿ ವಿಲಾಯತಿಯ ಸಭಾಸದರಿದ್ದಾರೆ. ಹಿಂದುಸ್ಥಾನದ ಶ್ರೀಮಂತರಿದ್ದಾರೆ. ಆದರೆ ಕೂಲಿಕಾರರ ಪ್ರತ್ಯಕ್ಷ ಪ್ರತಿನಿಧಿಯು ಇರುವದಿಲ್ಲ. ಶ್ರೀ. ಎನ್. ಎಮ್. ಜೋಶಿಯವರಿದ್ದಾರೆ. ಇವರು ಕೂಲಿಕಾರರಲ್ಲಿ ಸಹಾನುಭೂತಿಯುಳ್ಳವರಾಗಿದ್ದಾರೆಂಬುದು ನಿಜ. ಆದರೆ ಇವರು ಕೂಲಿಕಾರರಿಂದ ಆರಿಸಲ್ಪಟ್ಟವರಲ್ಲ. ಸರಕಾರದಿಂದ ನೇಮಿಸಲ್ಪಟ್ಟವರು ಇಷ್ಟರಿಂದ ತಮಗೆ ಈ ವ್ಹಿಟಲೀ ಕಮಿಶನದಿಂದ ಲಾಭ ಆಗುವಾ ಹಾಗಿಲ್ಲವೆಂದು ಕೂಲಿಕಾರರು ಅಂದುಕೊಂಡು, ಅದಕ್ಕೆ ಬಹಿಷ್ಕಾರ ಹಾಕಿದ್ದಾರೆ. ಕಮಿಶನವೆಂದರೆ- ಸಾಯಮನ್ನ ಕಮಿಶನದ ಸೂರ್ಪನಖಿ ಎಂದು ಭಾವಿಸಿದ್ದಾರೆ.

ಕಮಿಶನವು ಮುಂಬಯಿಗೆ ಬಂದಿದೆ. ಅಲ್ಲಿಯ ಮ್ಯುನಿಸಿಪಾಲಿಟಿಯು ಸಾಯಮನ್ನ ಕಮೀಶನಕ್ಕೆ ಬಹಿಷ್ಕಾರಹಾಕಿತು. ತನ್ನ ಕಮಿಶನರರನ್ನು ಸಹ ಸರ ಸಾಯಮನ್ನರ ಭೆಟ್ಟಿಗೆ ಹೋಗಗೊಡಲಿಲ್ಲ. ಅದೇ ಮ್ಯುನಿಸಿಪಾಲಿಟಿಯು ಇಂದು ವ್ಹಿಟಲೆ ಸಾಹೇಬರ ಭಜನೆ ನಡೆಸಿರುತ್ತದೆ ಏಕೆಂದರೆ- ಬಹುಶಃ ಮೆಂಬರರು ಗಿರಣಿ ಕಾರಖಾನೆಯವರಿರುವದರಿಂದ; ಇದರಿಂದ ಮುಂದೆ ಇವರ ಹೊಟ್ಟೆಯ ಮೇಲೆ ತಪ್ಪ ಕಾಲಕ್ಕದ್ದಿರುತ್ತದೆ. ಸಾಯಮನ್ನ ಕಮಿಶನದಂತೆ ಇದಕ್ಕೂ ಬಹಿಷ್ಕಾರಹಾಕಬೇಕೆಂದು ರಾಷ್ಟ್ರೀಯ ಪಕ್ಷದ ಒಬ್ಬ ಮೆಂಬರರು ಅಧ್ಯಕ್ಷರ ಕಡೆಗೆ ದಾವಾ ಕಳಿಸಿದರು. ಆದರೆ ಅವರು ಇದನ್ನು ಹಿಂದೆಗೆದರು. ಕಮಿಶ

ಟಿಯ ಮುಂದೆ ಬರಬೇಕಾದರೆ ಮೂರುವೇಸಿ ಮ ತಗಳು ಬೇಕಾಗುತ್ತವೆ. ಈ ಕ್ರಮವನ್ನು ಹಿಡಿಯಲು ಒತ್ತಾಯಪಡಿಸಿದರು. ಅಧ್ಯಕ್ಷರು ಹೋಟ್ಟು ಎಣಿಸುವಂತೆ ಮಾಡಿ, ಸೂಚನೆ ನಾಮಂಜೂರ ವೆಂದರು. ಮತ ತಕ್ಕೊಳ್ಳಕೂಡದೆಂದು ಅಧ್ಯಕ್ಷರು ಇಲ್ಲೆಂದರು. ಈ ಧೂರ್ತತನವು ನಮಗೆ ಬೇಕಾಗಿಲ್ಲೆಂದು ರಾಷ್ಟ್ರೀಯ ಪಕ್ಷದ ಮೆಂಬರರು ಕಮಿಟಿಗೆ ಕರಾಜುಹೊಡೆದು ಹೋಗಿಬಿಟ್ಟರು.

ಡಾಕ್ಟರ ಕಿಚಲೂಸಾಹೇಬರ ಮೇಲೆ ಪುನಃ ಕೇಸು.

—(೦)—

ಡಾಕ್ಟರ ಕಿಚಲೂಸಾಹೇಬರು ಎಪ್ರಿಲ ತಿಂಗಳಲ್ಲಿ ಪಂಜಾಬಕ್ಕೆ ಹೋದಾಗ ರಾಜದ್ರೋಹದ ಭಾಷಣ ಮಾಡಿದರೆಂದು ಅಲ್ಲಾಬಾದ ಸರಕಾರದವರು ಈಗ ಅವರ ಮೇಲೆ ರಾಜದ್ರೋಹದ ಕೆಲಸ ನಡಿಸಬೇಕೆಂದಿದ್ದಾರೆ. ಸಾಹೇಬರು ಲಾಹೋರದ ಕಾಂಗ್ರೆಸ ಸಭೆಯ ಸ್ವಾಗತ ಕಮೀಟಿಯ ಅಧ್ಯಕ್ಷರಿದ್ದು, ಕಾಂಗ್ರೆಸದ ವೇಳೆಯಲ್ಲಿ ಇವರನ್ನು ಅಟಕಾಯಿಸದಲ್ಲಿಟ್ಟು, ಇವರ ಉಪಯೋಗವು ಕಾಂಗ್ರೆಸ ಕಮೀಟಿಗೆ ಆಗಬಾರದೆಂದು ಸರಕಾರದ ದುಷ್ಟ ಹೇತುವಿರಬೇಕೆಂದು ಸಹಜವಾಗಿ ವ್ಯಕ್ತವಾಗುತ್ತದೆ. ಇಲ್ಲವಾದರೆ ಹಳೇ ಕಗಳೆ ತೆಗೆದು ಸಡ್ಡು ಹೊಡೆದು, ಜಗಳ ತೆಗೆಯ ಲಿಕ್ಕೆ ಸರಕಾರಕ್ಕೆ ಯಾವ ಕಾರಣವೂ ಇರುವದಿಲ್ಲ.

ಸಂಪೂರ್ಣ ಸ್ವಾತಂತ್ರ್ಯವೇ ಧ್ಯೇಯ.

—(೦)—

ಪಂಡಿತ ಮೋಹಿನಿಯವರು ವಸಾಹತಿನ ಸ್ವರಾಜ್ಯ ಬೇಕಿಲ್ಲ; ಸಂಪೂರ್ಣ ಸ್ವಾತಂತ್ರ್ಯವೇ ತಮ್ಮ ಧ್ಯೇಯವೆಂದು ಸಾರಿದ್ದನ್ನು ಈ ಮೊದಲು ಬರೆದಿದ್ದೇವೆ. ಇವರು ಅಖಿಲ ಭಾರತೀಯ ಮುಸಲಮಾನ ಲೀಗ ಮತ್ತು ಅಖಿಲ ಭಾರತೀಯ ಮುಸಲಮಾನ ಪರಿಷತ್ತಿನ ಮೆಂಬರರಾಗಿದ್ದರು. ಇವೆರಡೂ ಸಂಸ್ಥೆಗಳು ಲಾರ್ಡ ಆಯರ್ವಿನಸಾಹೇಬರ ವಸಾಹತಿನ ಸ್ವರಾಜ್ಯವನ್ನು ಆದರಿಸಿ, ಲಾರ್ಡಸಾಹೇಬರ ಅಭಿನಂದನ ಮಾಡಿದವು. ಇವುಗಳಿಗೂ ತಮ್ಮ ಮತಕ್ಕೂ ಸೂತ್ರ ಕೂಡುವದು ಅಸಂತರ ಶಕ್ಯವಾಗದ್ದರಿಂದ, ಮೋಹಿನಿಯವರು ಇವುಗಳ ಮೆಂಬರಶಿಪ್ಪಕ್ಕೆ ರಾಜೀನಾಮೆ ಕೊಟ್ಟರು. ಈ ಮೋಹನಿಯವರ ಮೇಲೆ ಲಾರ್ಡಸಾಹೇಬರ ಮೋಹನಾಸ್ತ್ರದ ಪರಿಣಾಮವಾಗದಂತೆ ಅನೇಕ ದೇಶಹಿತೈಷಿಗಳ ಮೇಲೆ ಆಗುವದಿಲ್ಲ.

ವಸಾಹತಿನ ಸ್ವರಾಜ್ಯವೆಂದರೂ ಸ್ವತಂತ್ರ ಸ್ವರಾಜ್ಯವೇ!

—(೧)—

ಮುಂಬಯಿಯಲ್ಲಿ ಬಿಪಿನಚಂದ್ರ ಪಾಲರ ಉಪನ್ಯಾಸವಾಯಿತು. ಆಗ ಇವರು ಮಾಡಿದ ಭಾಷಣವೇನೆಂದರೆ-

ಮಹಾಯುದ್ಧದನಂತರ ಜಗತ್ತಿನಲ್ಲಿ ವಿಶ್ವಬಂಧುತ್ವ ಬೆಳೆಯುತ್ತಿದೆ. ಎಲ್ಲ ದೇಶಗಳಲ್ಲಿಗೆ ಕೆಲಸವುಂಟಾಗಿ ಯುದ್ಧದ ರಣವಾದ್ಯದ ಕರ್ಕಶ ಧ್ವನಿಯು ಅಡಗಬೇಕೆಂಬ ಪ್ರವೃತ್ತಿಯುಂಟಾಗಿದೆ. ಜಗತ್ತಿನ ತುಂಬ ಶಾಂತತೆಯೇ ನೆಲೆಗೊಳ್ಳಬೇಕೆಂಬದೇ ಭಾವನೆಯು. ಜಗತ್ತಿನಲ್ಲಿ ತಾನೊಂದು ಬಲಾಢ್ಯ ರಾಷ್ಟ್ರವೆನಿಸಿಕೊಳ್ಳಬೇಕೆಂದು ಇಂಗ್ಲಂಡವು ಅಪೇಕ್ಷಿಸುವದಾದರೆ- ಅದು ತನ್ನ ದೊರೆತನದಲ್ಲಿ ಬದಲಾವಣೆಮಾಡಬೇಕಾಗುವದು. ಆಗ ಹಿಂದುಸ್ಥಾನವು ಅದರ ಸರಿಸಮಾನವಾಗಿ ರಾಜ್ಯವ್ಯವಸ್ಥೆಗೊಳಿಸಲು ಆಲೋಚನೆ ಹೇಳುವದು ಅನಿವಾರ್ಯವಾಗುವದು. ಇಂಗ್ಲಂಡವು ಉದಾರ ಬುದ್ಧಿಯಿಂದು ಹೀಗೆ ಮಾಡುವದೆಂದು ತಿಳಿಯಕೂಡದು. ತನ್ನ ಹಿತಕ್ಕಾಗಿಯೇ ಹಿಂದುಸ್ಥಾನವನ್ನು ಮೇಲಿನ ರೀತಿಯಿಂದ ನಡಿಸಿಕೊಳ್ಳಬೇಕಾಗುತ್ತದೆ. ಹಿಂದುಸ್ಥಾನವು ಇಂಗ್ಲಿಷರಿಂದ ವಸಾಹತಿನ ಸ್ವರಾಜ್ಯ ದೊರೆಯಲೆಂದು ಆಶಿಸಿಲ್ಲ. ಅದು ದೊರೆಯುವಂತೆ ಪ್ರಯತ್ನಿಸುತ್ತ ಬಂದಿದೆ. ವಸಾಹತಿನ ಸ್ವರಾಜ್ಯ ಮತ್ತು ಸಂಪೂರ್ಣ ಸ್ವಾತಂತ್ರ್ಯದ ಸ್ವರಾಜ್ಯವೆಂದರೂ ಒಂದೇ. ಅದರಲ್ಲಿ ಅರ್ಥಭೇದವಲ್ಲದೆ, ತತ್ವ ಭೇದವಿರುವದಿಲ್ಲ.

ಚಹಾದ ಅಂಗಡಿಗಳ ಮುಂದೆ ಅಸ್ಪೃಶ್ಯರ ಸತ್ಯಾಗ್ರಹ.

——)(೧)(——

ಮುಂಬಯಿಯ ಅಸ್ಪೃಶ್ಯರು ದೇವಾಲಯಗಳಲ್ಲಿ ಪ್ರವೇಶ ಮಾಡಲು ಸತ್ಯಾಗ್ರಹದ ದೊಡ್ಡ ಸಿದ್ಧತೆ ನಡೆಸಿದ್ದಾರೆ. ತತ್ಪೂರ್ವದಲ್ಲಿ ಚಹಾದ ಅಂಗಡಿಗಳ ಮುಂದೆ ಸತ್ಯಾಗ್ರಹ ಮಾಡುವದಕ್ಕೆ ಗುರುವುಗೊಂಡಿದ್ದಾರೆ. ನಮಗೂ ಇತರ ಹಿಂದೂಗಳಂತೆ ಅಂಗಡಿಗಳಲ್ಲಿ ಬರಗೊಡಬೇಕು. ಚಹಾ ಫಲಹಾರ ನೀಡಬೇಕು. ಇಲ್ಲವಾದರೆ- ಅಂಗಡಿಗಳಲ್ಲಿ ಧುಮ್ಮಿ ಪ್ರವೇಶ ಮಾಡಲು ಸತ್ಯಾಗ್ರಹದ ಉಪಾಯ ಕೈಕೊಳ್ಳುವೆವೆಂದು ಮುಂದಾಗಿ ನೋಟೀಸು ಕೊಡಬೇಕೆಂದಿದ್ದಾರೆ.

ಸಾಂಗಲಿಯ ಕೃಷ್ಣಾನದಿಯ ಸೇತುವೆಯು ೩೦ ಕಮಾನುಗಳುಳ್ಳದ್ದಾಗಿದೆ. ಪ್ರತಿಯೊಂದು ಕಮಾನು ೫೧ ಫೂಟು ಅಂತರವಾಗಿದೆ. ೬೮ ಫೂಟು ಎತ್ತರಿರುವದು.

ಮೋಟಾರದಿಂದ ದರೋಡೆ

—(೦)—

ದರೋಡೆಗಾರರು ಆಯುಧಪಾಣಿಗಳಾಗಿ ಮೂರು ಮೋಟಾರಗಳಲ್ಲಿ ಕೂತು ಚಿತಗಾಂಗದ ಒಂದು ಗ್ರಾಮಕ್ಕೆ ಹೋಗಿ, ನಾವು ದರೋಡೆಗಾರರು ಬಂದಿದ್ದೇವೆ. ಬಾಗಿಲ ತೆರೆಯಿರೆಂದರು. ಮನೆಯವರು ಬಾಗಿಲ ತೆರೆಯದಾಗಲು, ಅವನ್ನು ಮುರಿದು, ಒಳಗೆ ಹೊಕ್ಕು ೮ ಸಾವಿರದ ಬೆಂಕಿಗೆ ಬಗಲಿಗೆ ಹಾಕಿ, ಮೋಟಾರದಿಂದ ಅದೃಶ್ಯರಾದರು.

ಕಾಂಗ್ರೆಸದ ಸುದ್ದಿಗಳು.

—(೦)—

ಕಾಂಗ್ರೆಸ ಪ್ರದೇಶಕ್ಕೆ ಲಜಪತರಾಯನಗರವೆಂಬ ಹೆಸರಿಟ್ಟಿದ್ದಾರೆ. ಇಲ್ಲಿಗೆ ದಿನಾಲು ಲಾಹೋರ ಸ್ಟೇಶನದಿಂದ ಅರ್ಧ ತಾಸಿಗೊಂದರಂತೆ ಸ್ಪೇಶಲ ಟ್ರೇನು ಬಿಡುವರು.

ಶೀಖರು ತಮಗೆ ಜನಸಂಖ್ಯೆಯ ಪ್ರಮಾಣದಿಂದ ಪ್ರಾತಿನಿಧಿತ್ವ ಬೇಕೆಂದು ಕಾಂಗ್ರೆಸದ ಮೇಲೆ ಮುನಿಸುಗೊಂಡಿದ್ದರು. ಈಗ ಅವರು ಕಾಂಗ್ರೆಸದಲ್ಲಿ ಸೇರುವಂತೆ ಗೊತ್ತುಮಾಡಿದ್ದಾರೆ.

ಕಾಂಗ್ರೆಸದ ವರ್ಕಿಂಗ ಕಮಿಟಿಯು ೨೬ನೇ ತಾರೀಖಿನ ದಿವಸ ಕೂಡುವದು. ಮುಂದೆ ಎರಡು ದಿವಸ ವಿಷಯನಿಯಾಮಕ ಕಮಿಟಿ ಕೂಡುವದು. ೩೦-೩೧ ಮತ್ತು ೧ನೇ ಜನವರಿಯ ತನಕ ಕಾಂಗ್ರೆಸ ಸಭೆ ಕೂಡುವದು.

ಲಿಬರ್ಟಿ ಕಂಪನಿ-

ಕಲಕತ್ತೆಯ ಫಾರವಾರ್ಡ ಪತ್ರದ ಒಡೆಯರಲ್ಲಿ ಲಿಬರ್ಟಿ ಎಂಬ ಸ್ವಾತಂತ್ರ್ಯ ಪಕ್ಷದ ಪತ್ರದ ಉದಯವಾಯಿತು. ಅದಕ್ಕಾಗಿ ಐದು ಲಕ್ಷ ರೂಪಾಯದ ಒಂದು ಕಂಪನಿ ಮಾಡಿದ್ದು, ಶ್ರೀ. ಸುಭಾಷ ಬೋಸ ಮೊದಲಾದ ನಗರ ಶ್ರೀಮಂತರು ಅದರ ಡಾಯರೆಕ್ಟರರಾಗಿದ್ದಾರೆ.

ವಿವಿಧ ವರ್ತಮಾನಗಳು

—(೦)—

ಸಾಂಗಲಿಯಲ್ಲಿ ಲಾರ್ಡ ಆಯರ್ವಿನಸಾಹೇಬರಿಂದ ಕೃಷ್ಣಾನದಿಯ ಪೂಲು ತೆರೆಯಲ್ಪಟ್ಟಿತು.

ಲಾರ್ಡಸಾಹೇಬರು ಕೊಲ್ಹಾಪೂರಕ್ಕೆ ಹೋದಾಗ- ಶಿವಾಜಿ ಕಾಲದ ಮರಾಠಾ ಸ್ವತಂತ್ರ ದಂಡಿನಂತೆ ಮರಾಠರ ೧ನೇ ಪಲ್ಟಣ ಮಾಡಿ ತೋರಿಸಲ್ಪಟ್ಟಿತು.

ಜಾಹೀರ ನೋಟೀಸು

—(೦)—

ಕೆಳಗೆ ಸಹೀ ಮಾಡುವ ವೀರಬಸಪ್ಪಾ ತಂದಿ ಕುರಗೋಡಪ್ಪಾ ಮಾಸನವರ ಸಾಕೀನ ಬೇವಿನ ತಾಲೂಕ ಹೆರ್ಜಗಿ ಇವರು ಈ ಜಾಹೀರ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಸುವದೇನಂದರೆ-

ನನ್ನ ಹಿರಿಯ ಮಗನಾದ ಮಹದೇವಪ್ಪಾ ವೀರಬಸಪ್ಪಾ ಮಾಸನವರ ಈತನು ದುರ್ವ್ಯಸನಿ ಇದ್ದು, ಕೆಟ್ಟ ಜನರ ಸಂಗತಿ ಹಿಡಿದು, ಸಾಲ ವಗೈರೆ ಮಾಡುವ ಸಂಭವವದೆ ಈ ಮೊದಲಾಗಿಯೂ ಮಾಡಿರಬಹುದು ಈತನು ಮಾಡುವ ಮತ್ತು ಮಾಡಿರಬಹುದಾದ ಸಾಲವು ಗೃಹಕೃತ್ಯದ ಬೆಸೆಯಿಂದಿರುವದಿಲ್ಲ ಅದ್ದರಿಂದ ಆ ಸಾಲದ ಬೋಜಾ ನನ್ನ ಮನೆತನದ ಪಿತ್ರಾರ್ಜಿತ ಮತ್ತು ನನ್ನ ಸ್ವಾರ್ಜಿತ ಆಸ್ತಿಯ ಮೇಲೆ ಬಿಲಕೂಲ ನಡೆಯಲಾರದು ಸದರ ಮಹಾದೇವಪ್ಪನು ಏನಾದರೂ ಕಾಗದ ಬರಕೊಟ್ಟಿದ್ದರೆ- ಮತ್ತು ಮುಂದೆ ಬರಕೊಟ್ಟರೆ- ಅವು ರದ್ದಬಾತಲ ಇರುತ್ತವೆ ಅವುಗಳ ಸಂಬಂಧವು ಯಾವ ರೀತಿಯಿಂದಲೂ ನನ್ನನ್ನು ಬಾಂಧಾಯಿಸಲಾರದು ಅಂಬಂಬ ಜಾಹೀರ ಮಾಡಿದ ನೋಟೀಸು

ತಾ॥ ೨೧-೧೧-೨೯

ಸಹಿ- ವೀರಬಸಪ್ಪಾ ಕುರಗೋಡಪ್ಪಾ ಮಾಸನವರ

——

ನೋಟೀಸು

—(೦)—

ರಾ। ರಾ। ನಾಗೇಶರಾ ಕಡಾಡಿ ಇವರ ಅಂಗಡಿ ವಹಿವಾಟದಾರ ರಾ। ಗೂಳಪ್ಪಾ ಶಡಸದ ಸಾ। ಗದಗ ಇವರಿಗೆ-

ಕೆಳಗೆ ಸಹಿಮಾಡಿದವರ ಕಡಿಂದಾ ನೋಟೀಸಿನ ದ್ವಾರಾ ನಿಮಗೆ ತಿಳಿಸುವದೇನಂದರೆ- ನಿಜಾಮ ಇಲಾಖಾ ಯಲಬುರ್ಗಿ ತಾಲೂಕ ಪೈಕಿ ಉಮ್ಚಿ ಬನಹಾಳ ಗ್ರಾಮದಲ್ಲಿ ಮಾಳೇಕೊಪ್ಪದ ದೇಸಾಯಿ. ಗಣೇಶ ರಾಮನಗೌಡಾ ಇವರ ಹೆಸರಿನ ಫಕ್ತ ಖಾತೆ ಇದ್ದು ಅನಂತ ರಾಮನಗೌಡಾ ದೇಸಾಯಿ ಬನಹಾಳ ಇವರ ಮಾಲ್ಕಿ ವಹಿವಾಟಿಯೊಳಗೆ ಇರುವ ಜಮೀನುಗಳು ಕುಲ್ಲ ಅದವತ್ತೈದು (೭೫) ನಂಬರಗಳನ್ನು ಸದರ ಅನಂತ ರಾಮನಗೌಡರ ಕಡಿಂದ ಈಗ ೨೦ ವರ್ಷಗಳ ಲಾಗಾಯತು ನೀನು ಖಂಡಿ ಮಾಡುತ್ತಿದ್ದು ಇದು ಸರಕಾರದ ಲ್ಲಿ ಸನ ಫೈಸಲ ಆಗಿರುತ್ತದೆ. ಮತ್ತು ಇನ್ನು ೧೦ ವರ್ಷ ಸಿಮ್ಮ ಕವಲು ಅದೆ. ಹೀಗಿದ್ದು ಸದರ ಜಮೀನುಗಳನ್ನು ನೀವು ಗಣೇಶರಾವ ಗೌಡಾ ದೇಸಾಯಿ ಇವರ ಕಡಿಂದಾ ಖಾತೆ ಅದೆ ಅಂತಾ ತಿಳಕೊಂಡು ವತ್ತಿ ವಗೈರೆ ಹಿಡಿದರೆ ಲುಕ್ಸಾನಕ್ಕೆ ಪಾತ್ರರಾಗುವಿರಿ. ಅಂತಾ ತಿಳಿಸಿದ ನೋಟೀಸು.

ತಾ। ೨೨ ನವ್ಹಂಬರ ೧೯೨೯ ಇಸ್ವಿ

ಸಹಿ- ಮುರಾರಿ, ವೆಂಕಟಾಜಿ ರಾಮಚಂದ್ರ ನಾವೋಳೆ, ಜಂತಲಿ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಆಶ್ಚರ್ಯ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ, ಸ್ವತಃ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ. ... ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ :— ಶ್ರೀ. ನಾರಾಯಣ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಸೂಚನೆ :- ... ಯಾವ ಪತ್ರವ್ಯವಹಾರದ ಜಾಹೀರಾತಿನ ... ಈ ಪೇಪರಿನ ಹೆಸರನ್ನು ಬರೆಯಬೇಕು.

——

ನೋಟೀಸು

—(೦)—

ತಿಪ್ಪಣ್ಣಾ ಬಿನ್ ನೀಲಪ್ಪಾ ಕಳ್ಳಿಮನಿ ಸಾ॥ ಅಳಗವಾಡಿ ತಾಲ್ಲೂಕ ನವಲಗುಂದ ಇವನಿಗೆ-

ಕೆಳಗೆ ಸಹಿ ಮಾಡಿದ ನಾನು ಈ ನೋಟೀಸಿನಿಂದ ತಿಳಿಸುವದೇನಂದರೆ- ನೀನು ನನ್ನ ಮಾವಿ ಗಂಡನಿದ್ದು ನಾನೂ ನೀನೂ ಕೂಡಿ ಅಜಮಾಸು ೩-೪ ವರ್ಷ ಬಾಳ್ವೆ ಮಾಡಿದಿವಿ ಈಗ ನೀನು ದುರ್ವ್ಯಸನಕ್ಕೆ ಬಿದ್ದು ರಂಡಿಯ ಮಾತು ಕೇಳಿ ನನ್ನ ಜೀವಕ್ಕೆ ಧಕ್ಕೆ ಕೊಡುವದು ಕಂಡು ಬಂದದ್ದರಿಂದಾ ವಿಜಯಪತ್ರದಲ್ಲಿ ತಾ॥ ೨೯-೮-೨೯ ಕ್ಕೆ ಲಕ್ಷ್ಮಣರಾವ ಸಬ್ಬನೀಸ ವಕೀಲ ಇವರ ಮಾರಫತ ನೋಟೀಸ ಕೊಟ್ಟಿತ್ತು ಅದಕ್ಕೆ ಉತ್ತರವಿಲ್ಲಾ ಈಗ ಪುನಃ ತಿಳಿಸುವದೇನಂದರೆ- ಈಗ ನೀನು ಹೊರಗೆ ಹಾಕಿ ಅಜಮಾಸು ೮ ತಿಂಗಳಾಯಿತು ಈಗ ನಾನು ಎರಡನೇಯವರಲ್ಲಿ ಸಾಲ ಮಾಡಿ ಪುಪಜೀವನ ಮಾಡೇನಿ ಸಾಲಗಾರರ ತಗಾದಿ ಬಹಳ ಆಗಿರುತ್ತದೆ ನನ್ನ ಸಾಲ ಒಂದನೂರು ರೂಪಾಯಿ ತೀರಿಸಿ ನನ್ನ ಜೀವಕ್ಕೆ ಜಾಮಿನ ಕೊಟ್ಟು ಕರಕೊಂಡು ಹೋಗಬೇಕು ಜರ ಬರದಿದ್ದರೆ ಎರಡನೇ ಕಡಿಗೆ ಉಡಿಕೆ ಮಾಡಿಕೊಂಡು ಎರಡನೇ ಕಡಿಗೆ ಹೋಗುತ್ತೇನೆ ಆ ಮೇಲೆ ನಿನ್ನ ಹಕ್ಕು ನಡಿಯಲಾರದು ಈ ನೋಟೀಸು ಮುಟ್ಟಿದ ಹತ್ತು ದಿವಸದೊಳಗಾಗಿ ಉತ್ತರ ಕೊಡದಿದ್ದರೆ ಇದೇ ನೋಟೀಸು ಅಂತಾ ತಿಳಿಯತಕ್ಕದ್ದು

ತಾ॥ ೨೨-೧೧-೨೯

ಈ ಎಡಗೈ ಹೆಬ್ಬಟ್ಟಿನ ಗುರ್ತು ದ್ಯಾವಕ್ಕಾ ಕೋಮ ತಿಪ್ಪಣ್ಣಾ ಕಳ್ಳಿಮನಿ ಈಕೆ ಕೈದು ಅದೆ

——

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ನಾಲಿಗೆ ಮೂರಾಣೆ- ಇಂಗ್ಲಿಷನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ. ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

——

ಈ ಪತ್ರವನ್ನು ಅಂಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1445

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಶನಿವಾರ ತಾರೀಖು ೨೩ನೇ ಸಪ್ಟೆಂಬರ ೧೯೩೯ (ಸಂಚಿಕೆ ೩೫

ದಿ ಜಯಲಕ್ಷ್ಮೀ ಬ್ಯಾಂಕ ಲಿಮಿಟೆಡ್, ಧಾರವಾಡ-

ಮಂಗಳವಾರ ಪೇಟ ಜೋಗ ವಕೀಲರ ಮನೆಯಲ್ಲಿ.

ದಾಗೀನೆಗಳ ವತ್ತೀ ಮೇಲೆ ಸೋವಿ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನಿಗಳ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಿರುವದು. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ಬೆಳ್ಳಿ ದಾಗೀನೆಗಳ ಮೇಲೆ ಸೋವಿ ಬಡ್ಡಿ ದರದಿಂದ ಸಾಲ ಕೊಡುವ ವ್ಯವಸ್ಥೆಯು ಉಂಟು. ದಾಗೀನೆ ವತ್ತೀ ಇಟ್ಟವರು ಮೊದಲನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ ೧೫ ದಿವಸಕ್ಕೊಮ್ಮೆ ಅಷ್ಟಷ್ಟೇ ರಕಮು ತಂದು ಕೊಟ್ಟರೂ, ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಅಷ್ಟಷ್ಟೇ ರಕಮು ಕೊಡುವದರಿಂದ, ಸಾಲದ ಭಾರ ಕಡಿಮೆಯಾಗಿ, ಬಡ್ಡಿಯು ಕಡಿಮೆಯಾಗುತ್ತದೆ. ಧಾರವಾಡ ಸಮೀಪದ ಹಳ್ಳಿಯವರಿಗಳು ಈ ಸೋಯಿಯ ಪ್ರಯೋಜನ ತಕ್ಕೊಳ್ಳುತ್ತಾರೆ. ಆದರೆ ಇದರ ಸುತ್ತಮುತ್ತ ಲಿನ ಜಿಲ್ಲೆಯ ಹಳ್ಳಿಯ ಜನರಿಗೂ ತಿಳಿಯಲು ಈ ಜಾಹೀರಾತು ಪ್ರಸಿದ್ಧ ಮಾಡಿ, ಮುದ್ದಾಂ ಹಳ್ಳಿಗರಿಗೆ ತಿಳಿಸಿದ್ದೇವೆ. ಹಳ್ಳಿಯಲ್ಲಿ ಬಡ್ಡಿಯ ದರವು ರೂಪಾಯಕ್ಕೆ ಇಂದು ಅರ್ಧ ಆಣೆ ಯಿಂದ ಎರಡು ಆಣೆ ವರೆಗೆ ಇರುತ್ತದೆ. ಹೀಗಾಗಿ ಹಳ್ಳಿಯ ಜನ ಬಡವರೂ ತಮ್ಮ ದಾಗೀನೆಗಳು ಸಹ ಸಾವಕಾರರ ಕಡೆಯಲ್ಲಿ ಬಡ್ಡಿಯಲ್ಲಿ ಮುಳುಗಿಹೋಗುತ್ತವೆ. ಈ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ದಾಗೀನೆ ವತ್ತೀ ಇಟ್ಟರೆ ಆಗುವದಿಲ್ಲ. ಏಕೆಂದರೆ ಸ್ವಲ್ಪ ರಕಮು ಕೊಟ್ಟರೂ ಅದನ್ನು ತಕ್ಕೊಂಡು, ಸಾಲದ ಭಾರವನ್ನು ಕಡಿಮೆ ಮಾಡುತ್ತೇವೆ. ಇಂಥ ಸೋಯಿ ಹಳ್ಳಿಗಳಲ್ಲಿ ದೊರೆಯುವದಿಲ್ಲ. ಆದ್ದರಿಂದ ಹಳ್ಳಿಯಲ್ಲಿ ಸಾಲ ಬೇಕಾದವರು ನಮ್ಮ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ, ಅನುಭವ ಮತ್ತು ಲಾಭ ಪಡೆಯಬೇಕು. ನಮ್ಮ ಬಡ್ಡಿ ದರವು ನೂರು ರೂಪಾಯಿಯ ವರೆಗೆ ಒಂದು ತಿಂಗಳಿಗೆ ಒಂದು ರೂಪಾಯಿಗೆ ಎರಡು ಪೈ ಇರುತ್ತದೆ. ನೂರರ ಮೇಲಿನ ರಕಮಿನ ಬಡ್ಡಿ ದರ ಸಮಕ್ಷಮ ಅಥವಾ ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಗಳ ಜನರು ಶಹರದ ಊರಿಗೆ ಬಂದು ಸಾವಕಾರ ಮೊದಲಾದವರಲ್ಲಿ ಅವರು ಕೇಳಿದಷ್ಟು ಬಡ್ಡಿ ಕೊಟ್ಟರೆ ಸಾಲ ತೆಗೆದುಕೊಳ್ಳುವರು. ಮತ್ತು ಮನೆಗೆ ಬಂದು ತಿಳಿಯದೆ ನುಕ್ಸಾನ ಮಾಡಿಕೊಳ್ಳುವರು. ಹೀಗೆ ಬ್ಯಾಂಕಿನಲ್ಲಿ ಸಾಲ ಆಗುವದಿಲ್ಲ. ಹಳ್ಳಿಗಳ ಜನರು ನಮ್ಮಲ್ಲಿ ಒಮ್ಮೆ ಪ್ರಯೋಗ ವ್ಯವಹಾರ ಮಾಡಿ ಖಾತ್ರಿ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಚೀಜುಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಕೇಳಿದಲ್ಲಿ ಬಾಜಾರಕ್ಕಿಂತಲೂ ಸೋವಿಯಿಂದ ಸಿಗುವದು.

ಕೃಷ್ಣರಾವ ವೆಂಕಟರಾವ ಭಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಗಳ್ಳಿಯಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲಾಗಿದೆ. ಚಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಯೋಗ್ಯ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೆಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎಂ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೯-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ವಿಜಯ ಮ್ಯಾನೇಜರ ಧಾರವಾಡ.

ವಿಜಯ.

ಧಾರವಾಡ ತಾ- ೨೩-೧೧-೨೯ನೇ ಇಸ್ವಿ.

ಶ್ರೀ.

ಅ ನಿಜಯಂ ಶ್ರೀಕಪ್ರಿಯು
ಸೀ ವಸುಮತಿಯು ನಲಿಸಿರೆ ಸುಹಿತಸಂಸ್ಥೆಗಂ ।
ದ" "ವಿಜಯಂ" ಶ್ರೀಕರಣ ।
ನಾ ವಿಹಿತಂಗಳ ವಿವರಿಸಲಿಸ್ಸವ ಸಾಜಾ ॥೧॥

ದಿವಾನ ಜಾಧವರಾಯರಿಗೆ ಬಹಾದ್ದೂರ ಪಲ್ಲಿಯು-

ಬ್ರಾಹ್ಮಣೇತರರು ದಿವಾನ- ಜಡ್ಜ, ಕಲೆಕ್ಟ, ಮಾಮಲೇದಾರ ಮೊದಲಾದ ಕೆಲಸಗಳ ಹುದ್ದೆದಾರರಾದರೆಂದರೆ- ಬ್ರಾಹ್ಮಣೇತರ ಸಮಾಜದ ಕೋಟಿ ಕಲ್ಯಾಣವಾಗುವದೆಂದು ಈ ಚಳವಳಿಯ ಆರಂಭದಲ್ಲಿ ಸಾಮಾನ್ಯವಾಗಿ ಬ್ರಾಹ್ಮಣೇತರ ಜನ ಸಮೂಹದ ತಿಳುವಳಿಕೆಯಾಗಿತ್ತು. ಅದು ತೀರ ಭ್ರಮವೆಂದೂ, ಆ ಮನೋರಥವು ಆಕಾಶದಲ್ಲಿ ಕೋಟೆ ಕಟ್ಟುವಂಥಾದ್ದು ಆಗಿರುತ್ತದೆಂದು ಬ್ರಾಹ್ಮಣೇತರರಷ್ಟೇ ಅಲ್ಲ; ಅವರ ಹಿತೈಷಿಯಾಗಿರುವಂಥ "ವಿಜಯೀ ಮರಾಠಾ" ಎಂಬ ಪತ್ರದ ಲೇಖದಿಂದ ವಿದಿತವಾಗುತ್ತದೆ. ಈ ಪತ್ರದ ಲೇಖವು ದಿವಾನರಿಗೆ ದೊಡ್ಡ ಬಹಾದ್ದೂರ ಬಿಲ್ಲೆ ಕೊಟ್ಟು, ಅವರ ಸಮಾಚಾರ ತಕ್ಕೊಂಡದ್ದಾಗಿರುತ್ತದೆ. ಅದೇನೆಂದರೆ-

. ದಿವಾನ ಜಾಧವರಾಯರು ಸತ್ಯಶೋಧಕ ಸಮಾಜದ ಅಧ್ಯಕ್ಷ ಮತ್ತು ಬ್ರಾಹ್ಮಣೇತರರ ಮುಂದಾಳುಮೆಂದು ದಿವಾನಗಿರಿಯನ್ನು ಹೊಡಕೊಂಡರು ಆದರೆ ಸಮಾಜ ಅಥವಾ ಪಕ್ಷದ ಹಿತಕ್ಕಾಗಿ ಏನೂ ಶ್ರಮ ತಕ್ಕೊಳ್ಳಲಿಲ್ಲ. ಸಮಾಜ ಮತಪ್ರಸಾರವೆಂದುವಲ್ಲ; ಸಮಾಜದ ಸಂಘಟನೆ ಕೂಡ ಮಾಡಲಿಲ್ಲ. ಸತ್ಯಶೋಧಕ ಸಮಾಜದ ಮಂದಿರ ಕೂಡ ಇಲ್ಲ. ಸಮಾಜದ ಉಪದೇಶಕರ ಆದರ್ಶ ವಿಲ್ಲ; ಸಮಾಜದಲ್ಲಿ ಫಂಡಿಲ್ಲ. ಬ್ರಾಹ್ಮಣೇತರ ಸಮಾಜದ ಮುಂದಾಳಾಗುವದಕ್ಕೆ ನಿಯಮವಿಲ್ಲ. ಅದರ ಧೋರಣಾದ ರೂಪರೇಷೆಯಿಲ್ಲ. ಏನಿಲ್ಲ; ಏನಿಲ್ಲ; ಈ ಎಲ್ಲ ಕೃತ್ಯಗಳ ಒಗ್ಗೆ ತನ ವ್ಯಕ್ತಿಯೊಗ್ಗೆ ಜಾಹೀರ ರೀತಿಯಿಂದ ಹೇ[illegible] ದೋಷಕೊಟ್ಟುವದೆಂಬ ಹೆದರಿಕೆಯು ಇವರಿಗೆ ಇರುವದೇ ಇಲ್ಲ. ಈ ಹಳೇ ಮರಾಠಶಾಹಿಯ ಪದ್ಧತಿಯು ಮತಸ್ವಾತಂತ್ರ್ಯದ ಸಮಯುಗದಲ್ಲಿ ಒಳಿತಲ್ಲವೆಂದು ನಾವು ಒಂದೇಸವನೆ ಹೇಳುತ್ತಾ ಬಂದಿದ್ದೇವೆ. ಆದರೆ ನಮ್ಮ ನಾಮ್ದಾರ ಸಾಹೇಬರು ಇತ್ತಕಡೆಗೆ ಲಕ್ಷ ಕೊಟ್ಟಿಲ್ಲ;

ಈ ತರದ ಜವಾಬದಾರಿಶೂನ್ಯವಾದ ವೃತ್ತಿಯನ್ನು ಇವರು ಕಳೆದ ಏಳೆಂಟು ವರ್ಷಗಳಿಂದಿಟ್ಟಿದ್ದಾರೆ. ತುಸು ಒಗರಿಟ್ಟುಕೊಂಡು ಸಂಸಾರದಿಂದ ಜನಹಿತವನ್ನೇನೂ ಸಾಧಿಸಿಕೊಳ್ಳಲಿಲ್ಲ. ಸ್ವಂತದ ತನು-ಮನ-ಧನ ವೆಚ್ಚ ಮಾಡಿ, ಸ್ವಪಕ್ಷದ ಹಿತದ ಬಗ್ಗೆ ಯಾವ ಕಾರ್ಯವನ್ನೂ ಮಾಡಲಿಲ್ಲ. ಇದರ ವಿರುದ್ಧ ಶಿಕ್ಷಣಪ್ರಸಾರ, ಮದ್ಯಪಾನ ಪ್ರತಿಬಂಧ, ಹಸ್ತಿಯ ಹೆಚ್ಚುವಿಕೆ, ಭಟಿಯನ್ನು ಗುಂಡು ಮಾಡುವದು ಜನರು ನಡೆಸಿದ ಪ್ರಯತ್ನಕ್ಕೆ ವಿರುದ್ಧ ನಿಂತು, ಈ ವಿಷಯವಾಗಿ ಸಂಸ್ಥಾನದ ಕೂಡ ಸಹಕಾರ ಮಾಡಲು ಹಿಂಜರಿಯಲಿಲ್ಲ. ಇವರಿಂದ ಸತ್ಯಶೋಧಕ ಮತ್ತು ಬ್ರಾಹ್ಮಣೇತರ ಸಮಾಜದ ಹಾನಿಯು ಎಂದೂ ತುಂಬ ಬರದಷ್ಟಾಗಿರುತ್ತದೆ. ಸತ್ಯಶೋಧಕ ಸಮಾಜದ ಅಧ್ಯಕ್ಷ ಮತ್ತು ಬ್ರಾಹ್ಮಣೇತರರ ಮುಖಂಡರೆಂಬ ಹೆಸರಿಗೆ ಕಳಂಕ ತಂದರು. ಮತ್ತು ಸಮಾಜದ ಬದನಾಮಿ ಮಾಡಿದರು. ಅಜಾಗಲಸ್ತನದಂತೆ ಇವರ ಅವಸ್ಥೆಯಾಗಿದೆ. ಉಪಯೋಗವಂತೂ ಇಲ್ಲವೇ ಇಲ್ಲ. ಸಮಾಜಕ್ಕೆ ಭಾರವಾತ್ರವಾಗಿದ್ದಾರೆ. ಹೆಸರು ದೊಡ್ಡದು, ಲಕ್ಷಣ ಕೆಟ್ಟದು ಎನ್ನುವಂತೆ ಇವರ ಆಚರಣೆಯಾಗಿದೆ.

ಕೊಲ್ಹಾಪೂರದ ಸ್ವರ್ಗವಾಸಿ ಮಹಾರಾಜರ ಹಾಗು ಸತ್ಯಶೋಧಕ ಸಮಾಜದ ದೆಸೆಯಿಂದ ನಮಗೆ ಬ್ರಾಹ್ಮಣೇತರವೆನಿಸಿಕೊಳ್ಳುವದಕ್ಕೆ ಅಭಿಮಾನವೆನಿಸುತ್ತಿತ್ತು. ಅದೇ ನಮ್ಮ ನಾಲಾಯಕ ಮುಂದಾಳುಗಳ ಘಾತದ ವರ್ತನದಿಂದ ದೂಷಣವೆನಿಸುತ್ತದೆ. ಇವರ ದೆಸೆಯಿಂದ ಪ್ರತಿಪಕ್ಷದವರಿಂದ ಸತ್ಯಶೋಧಕರೂ, ಬ್ರಾಹ್ಮಣೇತರರೂ ಬದಿಕೆಗಳನ್ನು ತಿನ್ನುತ್ತಿರುವರು. ಕಾರ್ಯಕರ್ತ್ಯವಾದಂಥ ಅನೇಕರ ಮೇಲೆ ಸಂಕಟಗಳು ಬಂದವು. ಅನೇಕರು ತುರಂಗ ಕಂಡರು. ಅನೇಕರ ಹೊಲಗಳು ಹೋದವು. ಹಲವರು ಮರ್ಯಾದೆಗೇಡಾದರು. ಅನೇಕರು ಹೊಡತಗಳನ್ನೂ ತಿನ್ನಬೇಕಾಯಿತು. ಅಧ್ಯಕ್ಷರ ದಾಕ್ಷಿಣ್ಯಹೀನ ವೃತ್ತಿಯು ಮೂಲಕ, ಈ ಪ್ರಕಾರದ ಪರಿಸ್ಥಿತಿಯುಂಟಾಗಿದ್ದರೂ, ಅವರ ಸ್ವಾರ್ಥಸಾಧನೆಯ ವೃತ್ತಿಗೆ ಎಷ್ಟೂ ಕೊರತೆಯುಂಟಾಗಿಲ್ಲ. ಜವಾಬದಾರಿಹೀನರೂ, ತಳಗೆಟ್ಟವರೂ ಆದಂಥ ಜನರನ್ನು ಕಟ್ಟಿಕೊಂಡು, ಗುಪ್ತ ಕಾರಸ್ಥಾನವನ್ನು ನಡೆಸಿದರು. ಈ ಪರ್ಯಂತರ ಬ್ರಾಹ್ಮಣೇತರ ಸಮಾಜದಲ್ಲಿ ಒಳಗಿಂದೊಳಗೆ ಹೊತ್ತುತ್ತಿದ್ದ ಬೆಂಕಿಯು ಪುಣೆಯ ಸಭೆಯಲ್ಲಿ ಹೊರಬಿದ್ದು, ಉರಿ ಎದ್ದಿತು.

ದಿವಾನ ಜಾಧವರಾಯರಿಗೆ
ರಾ. ಬ. ಕಂಬಳಿಯವರ ಬೆಂಬಲ

ಮಹಾರಾಷ್ಟ್ರದಲ್ಲಿ ದಿವಾನ ಜಾಧವರಾಯರ ಮೇಲೆ ಬ್ರಾಹ್ಮಣೇತರರ ಆಕ್ರೋಶವೇ ಸುರಿದು ಬಿದ್ದಿದೆ. ಅವರನ್ನು ಈ ಸಂಕಟದೊಳಗಿಂದ ಪಾರು ಮಾಡಿಕೊಳ್ಳಲು ಬಹಳಷ್ಟು ಧಾವಿಸಿದ್ದಾರೆ. ಅವರಲ್ಲಿ ರಾ. ಬ. ಕಂಬಳಿಯವರೊಬ್ಬರಾಗಿದ್ದಾರೆ. ಇವರು ಜಾಧವರಾಯರಿಗೆ ಒಂದು ಪತ್ರ ಬರೆದು- "ಮುಂಬಯಿ ಕೌನ್ಸಿಲದೊಳಗಿನ ಬ್ರಾಹ್ಮಣೇತರ ಪಕ್ಷದ ಮುಖಂಡರೆಂಬ ವಿಷಯದಲ್ಲಿ ನಾನು ತಮ್ಮಲ್ಲಿ ಪೂರ್ಣ ವಿಶ್ವಾಸವುಳ್ಳವನಾಗಿದ್ದೇನೆ" ಎಂದಾಗ್ಗೆ ಅವರಿಗೆ ಬೆಂಬಲವಿತ್ತಿದ್ದಾರೆ

ಮಹಾತ್ಮಾಜಿನ ಸ್ವರಾಜ್ಯದ ವಿರುದ್ಧ
ಕೆಲ ಇಂಗ್ಲೀಷ ದ್ವೇಷಿಗಳ ಚಳವಳಿಯು.

——(೦)——

ಲಂಡನದ ಡೇಲಿ ಮೇಲ ಪತ್ರವು ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯ ದೊರೆಯಬಾರದೆಂದು ವಿರೋಧ ಬೆಳೆಸುವ ದೀಕ್ಷೆ ತಕ್ಕೊಂಡಿದೆ. ಇದು ಕಾರಿದ ಹಲವು ತರದ ವಿಷಗಳಲ್ಲಿ ಕೆಳಗಿನದೊಂದು ಓದುವಂತಿರುತ್ತದೆ

"ಹಳೇ ಮುಖ್ಯ ಮಂತ್ರಿಯಾದ ಮಿ ಬಾಲ್ಡವಿನ್ನ ಸಾಹೇಬರು ಜಾಗೆಗೆ ನಿಂತು, ಬ್ರಿಟಿಶ ಸಾಮ್ರಾಜ್ಯದೊಳಗಿನ ಅಮೂಲ್ಯ ರತ್ನವಾದ ಹಿಂದುಸ್ಥಾನವನ್ನು ಪಣಕ್ಕೆ ಹಚ್ಚಿದ್ದಾರೆ. ಮಿ ಬಾಲ್ಡವಿನ್ನ ಮತ್ತು ಲಾರ್ಡ ಆಯರ್ವಿನ್ನರು ಅರ್ಧ ಮರ್ಧ ಸೋಶಿಯಾಲಿಸ್ಟರಾಗಿದ್ದು, ಲಾರ್ಡ ಆಯರ್ವಿನ್ನರ ಧೋರಣವು ಅಸಮಾಧಾನಕಾರಕವಾಗಿರುತ್ತದೆ. ಆದ್ದರಿಂದ ಇವರನ್ನು ಹಿಂದುಸ್ಥಾನದಿಂದ ಹಿಂದಕ್ಕೆ ಕರಿಸಿಕೊಂಡು, ಇವರ ಸ್ಥಾನದಲ್ಲಿ ಮಿ. ಚರ್ಚಿಲ್ಲ ಸಾಹೇಬರನ್ನು ನೇಮಿಸಬೇಕು"

ಡೇಲಿ ಮೇಲದ ದುರ್ದೈವ; ಅದರ ಪಕ್ಷವು ಅಧಿಕಾರಾರೂಢವಾಗಿರುವದಿಲ್ಲ. ಅದರ ವಾಣಿಗೆ ಮೇಲಿನ ಉದ್ಗಾರವೆಲ್ಲ ಅರಣ್ಯರೋದನವೇ ಆಗುತ್ತದೆ.

ಕೊಲ್ಹಾಪುರದಲ್ಲಿ ಕಲಾಶಾಲೆ

ಕೊಲ್ಹಾಪುರ ದರಬಾರ [illegible] ಒಂದು ಕಲಾಶಾಲೆಯನ್ನು ಸ್ಥಾಪಿಸಿದ್ದು [illegible] ಅನಾವರಣ ಸಮಾರಂಭವು ಲಾರ್ಡ [illegible]ರಿಂದ ನೆರವೇರಿಸಲ್ಪಟ್ಟಿತು. [illegible] ರೂಪಾಯಿ ವೆಚ್ಚವಾಗಿದೆ. ಈ ಶಾಲೆಯಲ್ಲಿ [illegible] ಮರಿಂಗ, ವಿದ್ಯುಚ್ಛಕ್ತಿ ಮೊದಲಾಗಿ [illegible] ವಿಷಯಗಳನ್ನು ಕಲಿಸುವರು.

ಸ್ವರಾಜ್ಯ ಪಕ್ಷವೆಂದರೆ- ಬ್ರಿಟಿಶ ಸಾಮ್ರಾಜ್ಯದ ಶತ್ರುಪಕ್ಷವು.

—(೦)—

ನಾಗಪೂರ ಇಲಾಖೆಯ ಗವ್ಹರ್ನರರಾಗಿದ್ದ ಸರ ಕ್ರಾಡಾಕಸಾಹೇಬರು ಲಾರ್ಡ ಬರ್ಕನಹೆಡ್ಡ, ಸೈಡೆನಹ್ಯಾಮರಂತೆ ಹಿಂದುಸ್ಥಾನದ ಅಭ್ಯುದಯದ ದ್ವೇಷಗಾರರಾಗಿರುವರು. ಇವರು ಡೇಲಿ ಮೇಲ ಪತ್ರದ ಆರ ಯುವಾದಿ, ಅನ್ನುವದೇನಂದರೆ-

ಸ್ವರಾಜ್ಯ ಪಕ್ಷದವರು ವಸಾಹಾತಿಕ ಸ್ವರಾಜ್ಯವನ್ನು ಅಂಗೀಕರಿಸುವದರಲ್ಲಿ ಒಂದು ರಹಸ್ಯವುಂಟು. ವಸಾಹಾತಿಕ ಸ್ವರಾಜ್ಯ ದೊರೆತಕೂಡಲೆ ಬ್ರಿಟಿಶ ಸಂಬಂಧವನ್ನು ಕಡಕೊಳ್ಳುವಂತೆ ಪ್ರೇಕ್ಷಕರಿಗೆ ಉಪದೇಶಮಾಡುವದಕ್ಕೆ ಇವರಿಗೆ ಮುಕ್ತದ್ವಾರವಾಗುವದು. ಬ್ರಿಟಿಶರಿಗೆ ಶರಣುಹೋಗದೆ ಅವರನ್ನು ಹೊರಗೆ ಹಾಕಿರೆಂದು ಆಗ ಉಪದೇಶಿಸಬಹುದಾಗ- ಈಗಿನಂತೆ ರಾಜದ್ರೋಹದ ಆರೋಪ, ಶಿಕ್ಷೆ, ತುರಂಗವಾಸ ಮುಂತಾದ ಯಾವ ಪ್ರಸಂಗವೂ ಉಂಟಾಗುವದಿಲ್ಲ. ಸ್ವರಾಜ್ಯವಾದಿಗಳು ಪ್ರತಿಜ್ಞೆಮಾಡಿದಂಥ ಬ್ರಿಟಿಶ ಸಾಮ್ರಾಜ್ಯದ ವೈರಿಯಾಗಿರುತ್ತಾರಲ್ಲವೆ, ಬ್ರಿಟಿಶ ಸಾಮ್ರಾಜ್ಯದ ನಾಶವಾಗಬೇಕೆಂದು ನಿಶ್ಚಯಪೂರ್ವಕವಾಗಿ ಪ್ರಯತ್ನಿಸತಕ್ಕವರಾಗಿದ್ದಾರೆ. ಎಷ್ಟು ಗಟ್ಟಿಯಾಗಿ ಒತ್ತುವೆವೊ; ಅಷ್ಟು ಬೇಗನೆ ಬ್ರಿಟಿಶ ಸಾಮ್ರಾಜ್ಯದ ಕೋಟೆಯು ಕಡಕೊಂಡು ಬೀಳುವದೆಂದು ಇವರು ತಿಳಕೊಂಡಿದ್ದಾರೆ.

ಸರಕಾರದ ಆಣೆವಾರಿ ವಿರುದ್ಧ ಸತ್ಯಾಗ್ರಹ.

—(೦)—

ರಿವ್ಹಿಜನ ಸರ್ವೆಯ ಬೊಬ್ಬಾಟವು ಬಾರಡೋಲಿಯಂತಾಗಬಾರದೆಂದು ಮುಂಬಯಿ ಸರಕಾರದವರು ಬಾರಡೋಲಿ ಕಮೀಟಿಯು ಓರ್ವ ಜಡ್ಜರಾದ ಮಿ ಬ್ರೂಮ-ಫೀಲ್ಡ ಸಾಹೇಬರ ಆಲೋಚನೆಯಿಂದ ಲ್ಯಾಂಡ ರೆವ್ಹಿನ್ಯೂ ಕಾಯದೆಯಲ್ಲಿ ದುರಸ್ತಿಮಾಡಬೇಕೆಂದಿದ್ದಾರೆ. ಈ ದುರಸ್ತಿಯು ಕೂಡ ಆಣೆವಾರಿಯ ದೆಸೆಯಿಂದಲೂ ಎಚ್ಚರರಾಗಿ, ತಮ್ಮ ಕಾಮದಾರರಿಗೆ ಯೋಗ್ಯ ಸೂಚನೆ ಕೊಟ್ಟರೆ ರೈತರು ಸಂತೋಷದಲ್ಲಿರುವರು. ಈ ಪ್ರಕಾರ ಕಾಮದಾರರ ವೃತ್ತಿಯಾಗುವದಿಲ್ಲೆಂಬದು ದುಃಖದ ಸಂಗತಿಯು. ಬೆಳೆಯು ಕಡಿಮೆ ಬಂದಲ್ಲೆಲ್ಲ ಇವರು ಮಾಡುವ ಆಣೆವಾರಿಯು ಸರಕಾರಕ್ಕೆ ಅನುಕೂಲ, ರೈತರಿಗೆ ಪ್ರತಿಕೂಲವಾಗುತ್ತದೆ. ಅದರದೊಂದು ಪ್ರತ್ಯಕ್ಷ ದೃಷ್ಟಾಂತವು ಖಾನದೇಶ ಜಿಲ್ಹೆಗೆ ಸೇರಿದ ಚಾಳಿಸಗಾವ ತಾಲೂಕಿನಲ್ಲಿ ಕಂಡುಬಂದಿದೆ. ಅಲ್ಲಿಯ ಮುಲಕೀ ಅಧಿಕಾರಿಗಳು ಬೆಳೆಯು ಅಂದಾಜಿನಷ್ಟು ಎಂಟಾಣೆ ಮಾಡಿದ್ದು, ರೈತರು ಕೆಲವೆಡೆಯಲ್ಲಿ ಒಂದಾಣೆ, ಕೆಲವೆಡೆಯಲ್ಲಿ ಎರಡಾಣೆ ಮಾಡಿದ್ದಾರೆ. ಸರಕಾರವು ಎಂಟಾಣೆಯ ಆಕಾರವನ್ನು ಗಟ್ಟಿಯಾಗಿ ಹಿಡಿದಿದ್ದರಿಂದ, ರೈತರು ಇವರ ವಿರುದ್ಧ ಸಭೆಯ ಮೇಲೆ ಸಭೆಮಾಡುತ್ತಿದ್ದಾರೆ. ಇಂಥ ಎಂಟು ಸಭೆಗಳಾಗಿರುತ್ತವೆ. ಇವರಿಗೆ ವಕೀಲ ಡಾಕ್ತರ ಮೊದಲಾದವರ ಸಹಾಯವೂ ಉಂಟು. ಮುಖಂಡರನ್ನು ಹೆದರಿಸಿದರೆ ರೈತರು ಗಾಬರಿಯಾಗುವರೆಂದು ಆಗದಸರ ಹಳೇ ಕಲ್ಪನೆ. ಈ ಪ್ರಕಾರ ಡಾಕ್ತರ ಭೂತೇಕರರೆಂಬವರ ಮೇಲೆ ಶಸ್ತ್ರಹಿಡಿದು ವಾರಂಟು ತೆಗೆದರು. ಡಾಕ್ತರರು ಜಾಮೀನು ಕೊಡದೆ, ತುರಂಗಕ್ಕೆ ಹೋಗಲು ಸಿದ್ಧರಾದರು. ಆದರೆ ರೈತರ ಆಗ್ರಹದ ಮೂಲಕ ಜಾಮೀನು ಕೊಟ್ಟಿದ್ದಾರೆ. ಒಂದೊಂದು ಸಭೆಗೆ ಏಳೆಂಟು ಸಾವಿರದ ತನಕ ರೈತರು ಕೂಡುವರು. ಅಧಿಕಾರಿಗಳು ಸರಿಯಾಗಿ ಆಣೆವಾರಿ ಮಾಡದಿದ್ದರೆ ರೈತರು ಹಪ್ತೆ ಕೊಡಕೂಡದೆಂಬ ಸತ್ಯಾಗ್ರಹದ ಕಹಳೆ ಹಿಡಿಯುವ ಸಂಘಗಟ್ಟಿದ್ದಾರೆ.

ಬಾಲವಿವಾಹದ ದುಷ್ಪರಿಣಾಮ

—(೦)—

ಹೃದಯದ್ರಾವಕ ಸಂಗತಿಗಳು

—(೦)—

ನಿಜಾಮ ಹೈದರಾಬಾದಿನಲ್ಲಿ ಒಬ್ಬ ಜೋಡನು ಚಿಕ್ಕ ವಯಸ್ಸಿನ ಹುಡಿಗೆಯನ್ನು ತೆರವು ಕೊಟ್ಟು ಮದುವೆ ಮಾಡಿಕೊಂಡು, ಮನೆಗೆ ತಂದು ಕಾಮವಾಸನೆಯನ್ನು ತೃಪ್ತ ಮಾಡಿಕೊಳ್ಳಲುದ್ಯುಕ್ತನಾದನು. ಹುಡಿಗೆಯು ವ್ಯಥೆ ತಾಳಲಾರದೆ, ತವರ ಮನೆಗೆ ಓಡಿಹೋಗತೊಡಗಿತು. ಆಗ ಅವನು ಈಕೆಯನ್ನು ಒಂದು ದೊಡ್ಡ ಬೀಸುವ ಕಲ್ಲಿಗೆ ಕಟ್ಟಿ ಹಾಕಿ, ಹಿಂಸಿಸಿದನು. ಪೋಲೀಸರಿಗೆ ಈ ವರ್ತಮಾನ ಹತ್ತಿತು. ಅವರು ಒಂದು ಕಲ್ಲುಸಹಿತವಾಗಿ ಜೋಡನನ್ನು ಹಿಡಕೊಂಡು ಹೋಗಿದ್ದಾರೆ.

ಇದೇ ನಿಜಾಮ ರಾಜ್ಯದಲ್ಲಿ ಇನ್ನೊಂದು ಹುಡಿಗೆಯನ್ನು ಬಲವಂತಿಕೆಯಿಂದ ಅತ್ತೆಯ ಮನೆಗೆ ಕರಕೊಂಡು ಹೋಗುತ್ತಿದ್ದರು. ದಾರಿಯಲ್ಲಿ ಒಂದು ಬಾವಿ ಹತ್ತಿತು. ಹುಡಿಗೆಯು ಇದರಲ್ಲಿ ಹಾರಿಕೊಂಡು, ಗಂಡನ ಮನೆಯ ಕಾಟ ತಪ್ಪಿಸಿಕೊಂಡಳು.

ಲಾರ್ಡ ಆಯರ್ವಿನ್ನ ಸಾಹೇಬರು ಧಾರವಾಡ ಮಾರ್ಗವಾಗಿ ಮೈಸೂರಿಗೆ ಹೋದರು. ಅಲ್ಲಿ ಅವರಿಗೆ ಕಾಡಾನೆ ಹಿಡಿಯುವ ದೊಡ್ಡ ತಮಾಷೆ ಮಾಡಿ ತೋರಿಸಲ್ಪಡುವದು. ಕಂಜಿಗಿ ಸ್ಟೇಶನದಲ್ಲಿ ಇಂ..ಸಾಹೇಬರು ತಕ್ಕೊಳ್ಳುವಾಗ ಅಲ್ಲಿ ಕಾವಲಗಾರರಾಗಿದ್ದ ಪೋಲೀಸರು ನಾಯಿಗೆ ಹ ಒದರಗೊಡದಷ್ಟು ಬಂದೋಬಸ್ತು ಇಟ್ಟಿದ್ದರು.

ದುಂಡು ಮೇಜಿನ ಮಂಡಲದ ಬಹಿಷ್ಕಾರ ಮುಂದೆ ಬಿತ್ತು.

—(೦)—

ಪಾರ್ಲಮೆಂಟ ಸಭೆಯಲ್ಲಾದ ಭಾಷಣಗಳಿಂದ ವಸಾಹಾತಿಕ ಸ್ವರಾಜ್ಯವು ಬಹು ದಿನದ ಕನಸಾಗುವದೆಂದು ಹೇಳಿದ್ದರಿಂದ ರಾವುಂಡ ಟೇಬಲ ಪರಿಷತ್ತಿಗೆ ಬಹಿಷ್ಕಾರ ಹಾಕಬೇಕೆಂಬ ವಿಚಾರ ಮಾಡಲು- ಪಂಡಿತ ಮೋತೀಲಾಲರು ಅಲಹಾಬಾದಿನಲ್ಲಿ ಸರ್ವ ಪಕ್ಷೀಯರ ಸಭೆ ಕರೆದಿದ್ದರಷ್ಟೆ? ಕಾಂಗ್ರೆಸದಲ್ಲಿ ಈ ವಿಷಯದ ನಿರ್ಣಯವಾಗಬೇಕೆಂದು ಬಹುಮತದಿಂದ ಗೊತ್ತಾಯಿತು.

ಮೋಟಾರಕ್ಕೆ ಇಂಜಿನು ಹಾದು ನಾಲ್ವರು ಸತ್ತರು.

—(೦)—

ಕಾನಪೂರದ ಹತ್ತರ ಒಂದು ಮೋಟಾರು ರೇಲ್ವೆ ಗೇಟು ದಾಟುತ್ತಿದ್ದಾಗ ಉಗಿಬಂಡಿಯು ಒಂದು, ಮೋಟಾರವನ್ನು ಹಾದು, ಅದನ್ನು ಪುಡಿಪುಡಿ ಮಾಡಿತು. ಈ ಅಪಘಾತದಿಂದ ನಾಲ್ವರು ಸತ್ತರು. ನಾಲ್ವರು ಮರಣೋನ್ಮುಖರಾಗಿದ್ದಾರೆ.

ಫಲಿರೆ ಜಟ್ಟಿ-

ಪೋಲಂಡದ ಜಟ್ಟಿ ಝಬಿಸ್ಕೋನು ಹೋದ ವರ್ಷ ಹಿಂದುಸ್ಥಾನಕ್ಕೆ ಬಂದು, ಪತಿಯಾಳ ದಲ್ಲಿ ಗಾಮಾನ ಕೂಡ ಕುಸ್ತೀ ಹಿಡಿದು ಬಿದ್ದನಷ್ಟೆ; ಇದರಿಂದ ಈತನ ಅಪೊಕ್ಯ ಪತ್ರವು ಗಾಮಾನಿಗೆ ಬಂತು. ಅದನ್ನು ತಿರುಗಿ ತಕ್ಕೊಳ್ಳಬೇಕೆಂದು ಹಿಂದುಸ್ಥಾನದ ಪೈಲವಾನರಲ್ಲಿ ಶ್ರೇಷ್ಠನಾದವನು ತನ್ನ ಕೂಡ ಕುಸ್ತಿ ಹಿಡಿಯಬೇಕೆಂದು ಪುನಃ ಜಾಹೀರ ಪತ್ರವನ್ನು ಪ್ರಸಿದ್ಧ ಮಾಡಿದ್ದಾನೆ.

ದೇವಿ ಸರೋಜಿನಿಯವರು ಪೂರ್ವ ಆಫ್ರಿಕೆಯಲ್ಲಿರುವ ಹಿಂದೀ ಜನರು ಕೂಡಿಸುವ ಕಾಂಗ್ರೆಸದ ಅಧ್ಯಕ್ಷರಾಗಲೊಪ್ಪಿ ಅಲ್ಲಿಗೆ ಪ್ರಯಾಣ ಬೆಳೆಸಿದರು.

ಹುಬ್ಬಳ್ಳಿಯ ಕಾಂಗ್ರೆಸ ಕಮೀಟಿಯು ಸ್ವಯಂಸೇವಕರು ಕಾಳಿನ ಭಿಕ್ಷೆ ಬೇಡಿ. ಲಾಲಾ ಲಜಪತರಾಯರ ಪುಣ್ಯಸ್ಮರಣದ ದಿವಸ ೧೫೦೦ ಬಡ ಜನರಿಗೆ ಆ ಕಾಳಿನ ಭಿಕ್ಷೆ ಹಾಕಿದರು.

ಹೈದರಾಬಾದಿನ ನಿಜಾಮಸಾಹೇಬರು ದಿಲ್ಲಿಯಲ್ಲಿ ತಮಗಾಗಿ ಅರಮನೆ ಕಟ್ಟಿಸಿದ್ದು, ಅದಕ್ಕೆ ೩೧ ಲಕ್ಷದ ವೆಚ್ಚ ಬಂದಿದೆ.

ಪತ್ರಿಕಾಪ್ರದರ್ಶನ.

—(೦)—

ಕನ್ನಡಿಗರಲ್ಲಿ ಅಗತ್ಯದ ಬಿನ್ನಹ.

ನಾಳೆ ಬರುವ ಡಿಸೆಂಬರ ತಿಂಗಳ ೨೫-೨೬ ತಾರೀಖುಗಳಲ್ಲಿ ಜರುಗಲಿಕ್ಕಿರುವ ಪ್ರಥಮ ಕರ್ನಾಟಕ ವಾಚನಾಲಯ ಪರಿಷತ್ತಿನ ಸಮಯದಲ್ಲಿ ಕರ್ನಾಟಕ ಪತ್ರಿಕಾಪ್ರದರ್ಶನವನ್ನು ಏರ್ಪಡಿಸುವದು ಗೊತ್ತಾಗಿದೆ. ಅದು ಕಾರಣ ಯಾರ ಬಳಿಯಲ್ಲಿ ಯಾವದಾದರೂ ತೀರ ಹಳೇ ವೃತ್ತ, ಮಾಸಪತ್ರಿಕೆಗಳೇನಾದರೂ ಇದ್ದರೆ ಅವರು ದಯವಿಟ್ಟು ಕೊಟ್ಟು ಕಳಿಸಬೇಕು. ಪ್ರದರ್ಶನವು ಮುಗಿದ ಬಳಿಕ ಅವನ್ನು ತಿರುಗಿ ಅವರಿಗೆ ಮುಟ್ಟಿಸಲಾಗುವದು. ಈಗ ನಮ್ಮ ಬಳಿಯಲ್ಲಿ ಸುಮಾರು ಇನ್ನೂರು ಪತ್ರಿಕೆಗಳ ಸಂಗ್ರಹವಿದೆ. ಪತ್ರಿಕಾ ಸಂಪಾದಕರು ತಮ್ಮ ಡಿಸೆಂಬರ ತಿಂಗಳ ಹೊಸ ಸಂಚಿಕೆಯನ್ನು ಕಳಿಸಿಕೊಡುವ ಕೃಪೆ ಮಾಡಬೇಕು.

ಕನ್ನಡಿಗರ ಕೂಟ	ತಮ್ಮ ವಿಧೇಯ
ಧಾರವಾಡ	ಮು ದೇ. ರಂಗಣ್ಣ
೧೮-೧೧-೨೯	ಕಾರ್ಯದರ್ಶಿ.

ನೋಟೀಸ

—(೦)—

ರಾ॥ ದೊಡ್ಡಬಸಪ್ಪ ಹುಚ್ಚಪ್ಪ ಕುಂಬಾರ ಸಾ॥ ಹುಬ್ಬಳ್ಳಿ ತಾಲೂಕು ಉಂಡಗೋಳ ಇವನಿಗೆ-

ಈ ಕೆಳಗೆ ಸಹಿ ಮಾಡಿದವಳು ಕೊಡುವ ನೋಟೀಸು ಏನಂದರೆ ನೀನು ನನ್ನ ಲಗ್ನದ ಗಂಡನಿದ್ದು ನಾನು ನೀನು ಕೂಡಿ ಸುಂಖಿತ ಪ್ರಪಂಚ ಮಾಡಿಕೊಂಡಿರಲು ಒಂದೆರಡು ಈಗ ಅಜಮಾಸು ಒಂದು ವರ್ಷದ ಹಿಂದೆ ನನ್ನ ಮೇಲೆ ಕೆಳಗೆ ಕಂಡ ನನ್ನ ಮಕ್ಕಳ ಮೇಲೆ ಬೇಸರಾಗಿ ಮಾಡಿ ನನ್ನನ್ನು ಹೊಡದೂ ಬಡದೂ ಮಾಡಿ ಮಕ್ಕಳ ಸಹಿತ ನನ್ನನ್ನು ಉಟ್ಟ ಸೀರಿ ತೊಟ್ಟ ಕುಬಸದ ಮೇಲೆ ಹೊರಗೆ ಹಾಕಿ ಬಿಟ್ಟಿದ್ದು ಅಲ್ಲದೆ ಹೊರಗೆ ಹಾಕಿ ದುಷ್ಟ ಜನರ ದುರ್ಬೋಧನೆಗೆ ಒಳಪಟ್ಟು ರಾಂಡಬಾಜಿ ಮಾಡುವದೂ ರೊಕ್ಕದ ಇಸ್ಪೇಟ ಆಡುವದೂ ಮತ್ತು ಗಾಂಜೇ ವಗೈರೆ ಸೇದುವದೂ ದುರ್ವ್ಯಸನದಲ್ಲಿ ಮಗ್ನನಾಗಿ ಮನೆಯಲ್ಲಿದ್ದ ಸ್ಥಾವರ ಜಂಗಮ ಆಸ್ತಿ ವಿಲೇವಾಟ ಮಾಡಲಿಕ್ಕೆ ಹತ್ತಿರುತ್ತೀದಿ ಆದರ ಈ ನೋಟೀಸಿನಿಂದಾ ನಿನಗೆ ತಿಳಿಸುವದೇನಂದರೆ ನೀನು ಈ ನೋಟೀಸ ಮುಟ್ಟಿದ ಹಿಂದು ವಾರಿಸುಳಗಾಗಿ ನಿನ್ನ ಮಕ್ಕಳಾದ ಚನ್ನಪ್ಪಾ ವ ಬಸವಂತಪ್ಪಾ ಗುರಪ್ಪಾ ಅಂತಾ ಮೂರು ಮಂದಿ ಮಕ್ಕಳಿದ್ದು ಮತ್ತು ನನ್ನನ್ನು ಸಹಾ ಸಂರಕ್ಷಣ ಮಾಡುವ ಬೋಜಾ ನಿನ್ನ ಮೇಲೆ ಮತ್ತು ಆಸ್ತಿಗಳ ಮೇಲೆ ಸಹಾ ಇರುವದು ಅದ್ದರಿಂದ ನನ್ನ ವಿರುದ್ಧ ಮತ್ತು ಮೇಲ್ಕಂಡ ಮಕ್ಕಳ ವಿರುದ್ಧ ಏನಾದರೂ ವ್ಯವಹಾರ ಮಾಡಿದಲ್ಲಿ ಆ ವ್ಯವಹಾರವು ನನ್ನ ಮೇಲೆ ಮತ್ತು ಮೇಲ್ಕಂಡ ಮಕ್ಕಳ ಮೇಲೆ ಜವಾಬದಾರ ವ ಬದ್ಧರಾಗಲಿಕ್ಕಿಲ್ಲ ಮತ್ತು ನನ್ನನ್ನು ಹೊರಗೆ ಹಾಕಿದಂದಿನಿಂದಾ ಬೇರೆ ಇದ್ದು ಸಾಲಾ ಮಾಡಿ ಉಪಜೀವನ ಹೊಂದಿರುತ್ತೇವೆ ಆ ಸಾಲದ ಜವಾಬ್ದಾರೀ ಸಹಾ ನಿನ್ನ ಮೇಲೆ ಅದೆ ಮತ್ತು ನೀನು ಸುರಳೀತ ಪ್ರಪಂಚ ಮಾಡಬೇಕೆಂಬದು ನಿನ್ನ ಮನಸ್ಸಿನೊಳಗಿದ್ದರೆ ನಾಲ್ಕು ಜನ ಸಂಭಾವಿತರನ್ನು ಕರಕೊಂಡು ಬಂದು ನೀನು ಬಿಡುವದನ್ನು ಬಿಟ್ಟು ಕೊಡುವದನ್ನು ಕೊಟ್ಟು ನನ್ನನ್ನು ಮತ್ತು ಮೇಲ್ಕಂಡ ಮಕ್ಕಳನ್ನು ಕರಕೊಂಡು ಹೋಗಬೇಕು ಇಲ್ಲವೇ ಮಕ್ಕಳಿಗೆ ಮತ್ತು ನನಗೆ ಸಹಿತಾ ಹಿಸೇ ರಸೇ ಮಾಡಿಕೊಡಬೇಕು ಹಾಗೆ ಮಾಡದೇ ಇದ್ದಲ್ಲಿ ನಿನ್ನ ಮೇಲೆ ದಿವಾಣಿ ಕೋರ್ಟಿನಲ್ಲಿ ಇಲಾಜ ಮಾಡಲಾಗುವದು ಈ ನೋಟೀಸ ನಿನಗೆ ಮುಟ್ಟುವ ಪೂರ್ವದಲ್ಲಿಯೇ ಏನಾದರೂ ಆಸ್ತಿ ಪರಾಧೀನ ಮಾಡಿದಲ್ಲಿ ಅದು ಸಹಾ ನನ್ನ ಮೇಲೆ ಬದ್ಧ ಆಗಲಿಕ್ಕಿಲ್ಲ ಅಂತಾ ಬರಕೊಂಡ ನೋಟೀಸ ಈ ನೋಟೀಸಿನ ಖರ್ಚು ಸಹಾ ನಿನ್ನ ತಲೆಯ ಮೇಲೆ ಅದೆ ತಿಳಿಯುವದು ತಾ॥ ೨೩ ೧೧-೨೯

ಈ ಎಡಗೈ ಹೆಬ್ಬೆರಳಿನ ಗುರ್ತ ಬಸವ್ವಾ ಕೋಂ॥ ದೊಡ್ಡಬಸಪ್ಪಾ ಕುಂಬಾರ ಇವಳದು ಇದೆ ಇದು ನನ್ನದಕೆಂದಾ ಮೇಲ್ಕಂಡ ಮಕ್ಕಳದ ತಿಂದಾ ಸಹಾ ಮಾಡಿಟ್ಟು ಅದೆ

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿ ಲಿಮಿಟೆಡ್.

(ಇಂಗ್ಲಂಡದಲ್ಲಿ ಇನ್ ಕಾರ್ಪೋರೇಟೆಡ್ ಮಾಡಿದ್ದು.)

ನೋಟೀಸು.

ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಕಂಪನಿ ಲಿಮಿಟೆಡ್ ಇದರ ಏಜಂಟರು ಮದ್ರಾಸ ಪಾರ್ಕ ಟೌನಿನ ತಮ್ಮ ಕಚೇರಿಯಲ್ಲಿ ತಾರೀಖು ೧೭ ಡಿಸೆಂಬರ ೧೯೨೯ನೇ ಮಂಗಳವಾರ ದಿವಸ ಮಧ್ಯಾಹ್ನದ ಮೂರು ಘಂಟೆಯ ತನಕ ಸೆಕೆಂಡ ಹ್ಯಾಂಡ ಮತ್ತು ಕೆಲಸಕ್ಕೆ ಬಾರದ ಸಾಮಾನುಗಳು ಅಂದರೆ- ಉಕ್ಕು, ಬೀಡು, ಯಂತ್ರಸಾಮುಗ್ರಿ, ಗರ್ಡರ, ಟ್ರಿಫ ಪ್ಲೇಟು, ಉಕ್ಕಿನ ಟಿಫ ಪ್ಲೇಟುಗಳು, ಹಳೇ ರೇಲುಗಳು, ಸಾಗವಾನಿಯ ತುಂಡುಗಳು, ವಿದ್ಯುತ್ತಿನ ತೀಲಿಂಗು ಮತ್ತು ವಿದ್ಯುತ್ತಿನ ಬೇಸಣಿಕೆ, ತೆರವಾದ ಕಟ್ಟಿಗೆಯ ಮತ್ತು ಉಕ್ಕಿನ ಪೀಪಾಗಳು ಇವೇ ಮುಂತಾದವುಗಳ ಬಗ್ಗೆ ಮೋಹರಬಂದ ಟೆಂಡರಗಳನ್ನು ಸ್ವೀಕರಿಸುವರು.

ಟೆಂಡರ ಫಾರ್ಮ ಮತ್ತು ಮಾರಾಟದ ಸಾಮಾನುಗಳ ಯಾದಿಯನ್ನು ಐದು ರೂಪಾಯಿ ಫೀ ಕೊಟ್ಟು, ಪೆರಂಬೂರದಲ್ಲಿರುವ ಎಮ್. ಎಸ್. ಎಮ್. ರೇಲ್ವೆಯ ಕಂಟ್ರೋಲರ ಆಫ್ ಸ್ಟೋರ್ಸ ಇವರಿಂದ ಪಡೆಯಬೇಕು. ಈ ರಕಮು ತಿರಿಗಿ ದೊರೆಯಲಾರದು.

ಟೆಂಡರ ಫಾರ್ಮನ್ನು ಹ್ಯಾಂಡಪೋಸ್ಟದಿಂದ ಕಳಿಸಲಿಕ್ಕಾಗುವದಿಲ್ಲ.

"ಸ್ಕ್ರ್ಯಾಪ ಮೆಟಲಗಳ ದೆಸೆಯಿಂದ" ಎಂದು ಟೆಂಡರ ಫಾರ್ಮಿನ ಮೇಲೆ ಬರೆದು, ಲಕೋಟೆಯನ್ನು ಮೋಹರ ಬಂದ ಮಾಡಿ ಕಳಿಸಬೇಕು. ಈ ಶರತ್ತುಗಳು ಟೆಂಡರ ಫಾರ್ಮಿನ ಕೂಡ ಪ್ರಕಟಿಸಲ್ಪಡುವದು.

A. C. TURNER,
Controller of Stores,

WANTED.

Wanted Candidates for Telegraph and Station Master's Classes Full particulars and Railway Fare Certificate on 2 annas stamp. Apply to:= Imperial Telegraph College. NalS árak, Delhi.

ಈ ಪತ್ರವನ್ನು ಅಂಣ್ಣಾಚಾರ್ಯ ಬಾಳಾಚಾರ್ಯ ಕೊಸಂಬಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ # ವಿಜಯ ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಲಾಚಾರ್ಯ ಹೊಸಕೇರಿ.

ವರ್ಷ ೧೦) · ಧಾರವಾಡ ರವಿವಾರ ತಾರೀಖು ೨೬ನೇ ನವ್ಹೆಂಬರ ೧೯೩೯ (ಸಂಚಿಕೆ [illegible]

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ.

ಮಂಗಳವಾರ ಪೇಠ ಜೋಗ ವಕೀಲರ ಮನೆಯಲ್ಲಿ.

ದಾಗೀನೆಗಳ ವತ್ತೀ ಮೇಲೆ ಸೋಯಿ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು.

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಲಿದೆ. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ಮತ್ತು ಬೆಳ್ಳಿ ದಾಗಿನೆಗಳ ಮೇಲೆ ಸೋಯಿ ಬಡ್ಡಿ [illegible] ಸಾಲ ಕೊಡುವ ವ್ಯವಸ್ಥೆಯು ಉಂಟು. ದಾಗಿನೆ ವತ್ತೀ ಇಟ್ಟವರು ಮೊದಲನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ ೧೫ ದಿವಸಕ್ಕೊಮ್ಮೆ ಎಷ್ಟೇ ರಕಮು ತಂದು ಕೊಟ್ಟರೂ ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಎಷ್ಟೆಷ್ಟೇ ರಕಮು ಕೊಡುತ್ತ ಬಂದರೆ, ಸಾಲ ಭಾರ ಕಡಿಮೆಯಾಗಿ, ಬಡ್ಡಿಯು ಕಡಿಮೆಯಾಗುತ್ತಾ ಬರುವದು. ಧಾರವಾಡ ಮುಂತಾದ ಪಟ್ಟಣವಾಸಿಗಳು ಈ ಸೋಯಿಯ ಫಾಯದೆ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಇದರ ಮಹತ್ವವು ಮತ್ತು ಉಪಯೋಗವು ಹಳ್ಳಿಯ ಜನರಿಗೂ ಆಗಬೇಕೆಂದು ಈ ಜಾಹೀರಾತನ್ನು ಪ್ರಸಿದ್ಧ ಮಾಡಿ, ಮುದ್ದಾಂ ಹಳ್ಳಿಗಳಿಗೆ ಕಳಿಸಿದ್ದೇವೆ. ಹಳ್ಳಿಯಲ್ಲಿ ಬಡ್ಡಿಯ ದರವು [illegible] ಇರುತ್ತದೆ [illegible] ಕೊಡಬೇಕಾಗುತ್ತದೆ. ಹೀಗಾಗಿ ಎಷ್ಟೋ ಜನ ಬಡವರು [illegible] ದಾಗೀನೆಗಳು ಸಾಲ [illegible] ಮತ್ತು ಬಡ್ಡಿಯಲ್ಲಿ ಮುಳುಗಡೆಯಾಗಿ ಹೋಗುತ್ತವೆ. ಆ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ದಾಗೀನೆ ವತ್ತೀ ಇಟ್ಟರೆ ಆಗುವದಿಲ್ಲ. ಏಕೆಂದರೆ ಸ್ವಲ್ಪ ರಕಮು ಕೊಟ್ಟರೂ ಅದನ್ನು ತಕ್ಕೊಂಡು, ಸಾಲದ ಭಾರವನ್ನು ಕಡಿಮೆ ಮಾಡುತ್ತಾ ಬರುತ್ತೇವೆ. ಇಂಥ ಸೋಯಿಯು ಹಳ್ಳಿಗಳಲ್ಲಿ ದೊರೆಯುವದಿಲ್ಲ. ಆದ್ದರಿಂದ ಹಳ್ಳಿಯಲ್ಲಿ ಸಾಲ ಬೇಕಾದವರು ನಮ್ಮ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ, ಅನುಭವ ಮತ್ತು ಲಾಭ ಪಡೆಯಬೇಕು. ನಮ್ಮ ಬಡ್ಡಿ ದರವು ನೂರು ರೂಪಾಯಿಗೆ ವರ್ಷಕ್ಕೆ [illegible] ಒಂದು ತಿಂಗಳಿಗೆ ಒಂದು ರೂಪಾಯಿಗೆ ಎರಡು ಪೈ [illegible] ಇರುತ್ತದೆ. ಸೂದರ ಮೇಲಿನ [illegible] ಬಡ್ಡಿ [illegible] ಪ್ರತ್ಯಕ್ಷವಾಗಿ ಅಥವಾ ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಗಳ ಜನರು ಶಹರದ ಊರಿಗೆ ಬಂದು ಸಾವಕಾರ ಮೊದಲಾದವರಲ್ಲಿ ಅವರು ಕೇಳಿದಷ್ಟು ಬಡ್ಡೀ ಕರಾರ [illegible] ಸಾಲ ತೆಗೆದುಕೊಳ್ಳುವರು. [illegible] ತಿಳಿಯದೆ ಲುಕ್ಸಾನ ಮಾಡಿಕೊಳ್ಳುವರು. ಹೀಗೆ ಬ್ಯಾಂಕಿನಲ್ಲಿ ಆಗುವದಿಲ್ಲ. ಹಳ್ಳಿಗಳ ಜನರು ನಮ್ಮಲ್ಲಿ ಒಂದಾವರ್ತಿ ವ್ಯವಹಾರ ಮಾಡಿ ಖಾತ್ರೀ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಪೆಟ್ಟಿಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ ಎಲ್ಲರಕ್ಕಿಂತಲೂ ಸೋಯಿಯಿಂದ ಸಿಗುವವು.

ಕೃಷ್ಣರಾವ ವೆಂಕಟರಾವ ಭಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕಾ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾರ್ಯೇಷು ಮತ್ತು ಜೇವ ಕರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮುಕುಂದರಾವ ಡಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೨-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ವಿಜಯ ಮ್ಯಾನೇಜರ ಧಾರವಾಡ.

ವಿಜಯ.

ಧಾರವಾಡ ತಾ- ೨೪-೧೧-೨೫ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಪ್ರಿಯ
ನೀ ವಸುಮತಿಯು ನಲಿಸಿತೆ ಸುಹಿತಚರಿತೆಗಳಿಂ
ದೀ "ವಿಜಯಂ" ಶ್ರೀಶಕರುಣಾ।
ನಾ ವಿಹಿತಂಗಳ ವಿವರಿಸಲಿಪ್ಪುದು ಸಾಜಂ ॥೧॥

ಸ್ವರ್ಗವಾಸಿ ಕಲೆಕ್ಟರ ನಾಯಕಸಾಹೇಬರು.

—(೦)—

ವಿಜಾಪೂರದ ಕಲೆಕ್ಟರರಾಗಿದ್ದ ಮಿ. ವೆಂಕಣ್ಣನಾಯಕರು ಕಳೆದ ಶುಕ್ರವಾರ ಪ್ರಾತಃಕಾಲದಲ್ಲಿ ಸ್ವರ್ಗವಾಸಿಯಾದರೆಂಬ ಸಂಗತಿಯನ್ನು ಬರೆಯುವದಕ್ಕೆ ಬಹುವಾಗಿ ವಿಷಾದಿಸುತ್ತೇವೆ. ಪುರುಷನ ಭಾಗ್ಯವು ದೇವಾನುದೇವತೆಗಳಿಗೆ ತಿಳಿಯುವದಿಲ್ಲೆಂದ ಬಳಿಕ, ಮನುಷ್ಯಮಾತ್ರನು ಯಾವ ಗಿಡದ ತಪ್ಪಲವೆಂದು ಹೇಳುವ ರೀತಿಯಾಗಿ ಇವರ ಅಲ್ಪ ಚರಿತ್ರವಾಗಿರುತ್ತದೆ. ಇವರು ಹುಟ್ಟಿದ್ದು, ಪ್ರಾಥಮಿಕ ಶಿಕ್ಷಣ ಹೊಂದಿದ್ದು ಮತ್ತು ಬೆಳೆದದ್ದು ಕಾರವಾರ ಜಿಲ್ಲೆಯಲ್ಲಿ. ಇವರ ಬಾಲ್ಯಕಾಲದಲ್ಲಿ ಆ ಜಿಲ್ಲೆಯು ಅಜ್ಞಾತವಾಗಿ, ಕಾಳಾಪಾಣಿ ಎಂದೆನಿಸಿಕೊಳ್ಳುತ್ತಿತ್ತು. ಅಂಥ ಕಾಲದಲ್ಲಿ ಇವರು ಮುಲ್ಕೀ ಪರೀಕ್ಷೆ ಪಾಸಾಗಿ, ಟ್ರೇನಿಂಗ ಕಾಲೇಜದ ಶಿಕ್ಷಣ ಹೊಂದಿ, ಶಿಕ್ಷಕರಾದರು. ಮುಂದೆ ಇಂಗ್ಲಿಷ ಕಲಿಯುವ ಅಭಿಲಾಷೆ ಹುಟ್ಟಿ, ಕಲಿತು, ಒಕ್ಕಲತನದ ಗ್ರ್ಯಾಜ್ಯುಯೇಟರಾಗಿ, ಡೆಪ್ಯುಟಿ ಕಲೆಕ್ಟರರೆಂದು ಒಳ್ಳೆ ಉದ್ಯೋಗ ಮುಂದಿನ ಮಹತ್ವಾಕಾಂಕ್ಷೆಯಿಂದ ವಿಲಾಯತಿಗೆ ಹೋಗಿ ಬ್ಯಾರಿಸ್ಟರರಾಗಿ ಬಂದರು. ಆಗೊಂದು ಅನುಕೂಲ ಕಾಲ ಬಂತು. ಬ್ರಾಹ್ಮಣೇತರರಿಗೆ ಹುದ್ದೆಯ ಕೆಲಸ ಕೊಡಬೇಕೆಂದು ಹುಟ್ಟಿದ ಚಳವಳಿಯಲ್ಲಿ ಅನೇಕ ಸೀನಿಯರರ ಹಕ್ಕುಗಳು ಮುಣುಗಿ ಇವರು ಕಲೆಕ್ಟರರಾದರು. ಡೆಪ್ಯುಟಿ ಮತ್ತು ಕಲೆಕ್ಟರರಾಗಿ ಬರುವಷ್ಟಿಗೆ ಬ್ರಾಹ್ಮಣೇತರರ ಹಿತಸಂಬಂಧಿಗಳು. ವಿಜಾಪೂರ ಜಿಲ್ಲೆಯಲ್ಲಿ ಗಿಡಗಳಿಲ್ಲದ್ದರಿಂದ ಮಳೆಯಾಗುವದಿಲ್ಲ. ಆದ್ದರಿಂದ ಗಿಡಗಳನ್ನು ಹಚ್ಚುವ ಉಪಕ್ರಮ ಮಾಡಿದರು. ಅಂತೆ ಧ್ಯಾಮಿನ ಭಯ ಕಳೆದು, ಬರಗಾಲ ನಿವಾರಣೋಪಾಯವ ಕೆಲವು ಮಟ್ಟಿಗೆ ನಡೆಸಿದರು. ಹೊಲಗಳಲ್ಲಿಯ ನೀರು ಹರಿದು ಹಳ್ಳಗಳಾಗದೆ, ಅಲ್ಲಲ್ಲಿ ಇಂಗಿ, ಹಸಿಯುಳಿಯುವಂತೆ ಒಡ್ಡು ಹಾಕಿಸಲೆತ್ನಿಸಿದರು. ಕೋಳಿ, ಹುಂಜ, ಹೋರಿಗಳನ್ನು ಸಾಕಿಸಿ, ರೈತರಿಗೊಂದು ವ್ಯವಸಾಯದ ದಾರಿ ತೋರಿಸಿದರು. ಇವೇ ಮಾದರಿಯಾಗಿ ಕಲೆಕ್ಟರ ಕೆಲಸದ ಕೂಡ ಹಲವು ಉಪಾಧಿ ಹಚ್ಚಿಕೊಂಡಿದ್ದರು. ಇವರಿಗೆ ಎರಡು ತಿಂಗಳ ಹಿಂದೆ ಭಡೋಚಕ್ಕೆ ವರ್ಗ ಮಾಡಿದಂತೆ ಗ್ಯಾಝೇಟದಲ್ಲಿ ಪ್ರಸಿದ್ಧವಾಗಿತ್ತು. ಪ್ರಕೃತಿಯು ಸರಿಯಾಗಿರದ್ದರಿಂದ, ಅಲ್ಲಿಗೆ ಹೋಗದೆ, ವಿಜಾಪೂರದಲ್ಲಿಯೇ ಉಳಿದರು. ಮತ್ತು ಅಲ್ಲಿಯೇ ಮೃತ್ಯು ಬಂತು. ಇವರು ಉತ್ತರಕರ್ನಾಟಕಸ್ಥರಲ್ಲಿ ಮೊದಲನೆಯ ಕಲೆಕ್ಟರರು. ಕನ್ನಡದ ಅಭಿಮಾನಿಯಾದ್ದರಿಂದ, ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿದ್ದರು.

ಸ್ವದೇಶಾಭಿಮಾನವು ಒಂದು ಅಪರಾಧವೇನು?

—(೦)—

ಕಲಕತ್ತೆಯಲ್ಲಿ ಶ್ರೀ ಜ್ಞಾನಾಂಜನ ನಿಯೋಗಿಯವರ ಮೇಲೆ ರಾಜದ್ರೋಹದ ಆರೋಪ ಬಂದು, ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ವಿಚಾರಣೆ ನಡೆದಿದೆ. ಇವರು ತಮ್ಮ ಜವಾಬಿನಲ್ಲಿ ಹೇಳಿದ್ದೇನಂದರೆ-

ಯಾವನೊಬ್ಬನು ಸ್ವದೇಶಾಭಿಮಾನ ಪೂರ್ಣನಾಗಿ ಸ್ವಾತಂತ್ರ್ಯವನ್ನಪೇಕ್ಷಿಸುವದು ಅಪರಾಧವಾಗುತ್ತಿದ್ದರೆ- ನನಗೆ ಶಿಕ್ಷೆ ಕೊಡಿರಿ. ನಾನು ಸ್ಪಷ್ಟವಾದಿಯಾಗಿದ್ದೇನೆ. ಒರೇ ಜಂಭದ ಮಾತುಗಳನ್ನಾಗಲೀ ಅರ್ಥಮರ್ಥ ಸುಳ್ಳು ಸೊಟ್ಟುಗಳನ್ನು ನಂಬುವಂಥವನಾಗಲೀ ಇರುವದಿಲ್ಲ. ಮತ್ತು ನಿರಾಧಾರವಾದಂಥ, ತಳಬುಡವಿಲ್ಲದಂಥ ಯಾವ ಆರೋಪವನ್ನೂ ಹೊರಿಸುವದಕ್ಕೆ ಸಂತೋಷಪಡತಕ್ಕವನಲ್ಲ. ನನ್ನ ಮೇಲೆ ಹೊರಿಸಿದ ಆರೋಪದ ಪ್ರತಿಯೊಂದು ವಾಕ್ಯ, ಪ್ರತಿಯೊಂದು ಶಬ್ದ ಮತ್ತು ಪ್ರತಿಯೊಂದು ಅಕ್ಷರವು ನಿಜವಿರುತ್ತದೆ. ಸತ್ಯವು ಸ್ಪಷ್ಟದ ಸಮರ್ಥನವಾಗಿದ್ದರೆ ನಾನೇನೂ ಹೇಳತಕ್ಕದ್ದಿರುವದಿಲ್ಲ. ಪಾರತಂತ್ರ್ಯದ ಬೇಡಿಗಳಿಂದ ಮುಕ್ತರಾಗಿ, ಸ್ವಾತಂತ್ರ್ಯದ ಸೂರ್ಯ ಪ್ರಕಾಶದ ಸುಖ ಭೋಗಿಸಬೇಕೆಂದು ನನ್ನ ಜನರಿಗೆ ಉಪದೇಶ ಮಾಡುವದು ನನ್ನ ಕರ್ತವ್ಯವಾಗಿರುತ್ತದೆಂದು ತಿಳಿಯುತ್ತೇನೆ. ಸಾಂಪತ್ತಿಕ ದೃಷ್ಟಿಯಿಂದ ಇಂಗ್ಲಂಡವು ಹಿಂದುಸ್ಥಾನದ ವೈರಿಯಾಗಿರುತ್ತದಲ್ಲದೆ, ಫ್ರಾನ್ಸ, ರಶಿಯಾ, ಜರ್ಮನಿ ಅಥವಾ ಅಮೇರಿಕೆಯು ಆಗಿರುವದಿಲ್ಲೆಂದು ನ್ಯಾಯವಾಗಿ ಹೇಳಲು ಸಮರ್ಥನಾಗಿದ್ದೇನೆ. ಸಾಂಪತ್ತಿಕ ದೃಷ್ಟಿಯಿಂದ ಬ್ರಿಟಿಶ ಆಳಿಕೆಯ ಮೂಲಕ ಹಿಂದುಸ್ಥಾನವು ಅವನತಿ ಹೊಂದಿರುತ್ತದೆಂದು ಹೇಳಲು- ಬ್ರಿಟಿಶರ ಕಾಗದ ಪತ್ರಗಳ ಪುರಾವೆಯೇ ಉಂಟು. ಇಂಗ್ಲಂಡವು ಜಾಣನಾದರೆ- ಈಗಿನ ಪದ್ಧತಿಯನ್ನು ಬಿಟ್ಟು, ಜಾಣತನದ ಮಾರ್ಗ ಹಿಡಿಯಬೇಕು. ಮಾನವೀ ಭೂತದಯೆಯ ದೃಷ್ಟಿಯಿಂದ ಹಿಂದುಸ್ಥಾನವು ಸ್ವಾವಲಂಬಿಯಾಗುವಂತೆ ಇಂಗ್ಲಂಡವು ಸಹಾಯ ಮಾಡತಕ್ಕದ್ದು. ಇದೇ ಮಾರ್ಗವಾಗಿ ಇಂಗ್ಲಂಡವು ಹಿಂದುಸ್ಥಾನದ ಭಾವೀ ಸಂತತಿಯ ಕೃತಜ್ಞತೆಯನ್ನು ಸಂಪಾದಿಸಲು ಯೋಗ್ಯವಾಗುವದು.

ಮೈಸೂರ ರಾಜ್ಯದಲ್ಲಿ ರಾಮರಾಜ್ಯ.

—(೦)—

ಹೋದ ೧೭ನೆಯ ತಾರೀಖಿನ ದಿವಸ ಬೆಂಗಳೂರಲ್ಲಿ ಸ್ವರ್ಗವಾಸಿ ಲಾಲಾ ಲಜಪತರಾಯರ ಪುಣ್ಯಸ್ಮರಣದ ಒಗ್ಗೆ ಸಭೆಯಾಯಿತು. ಆಗ ಶ್ರೀ ಕಮಲಾದೇವಿ ಚಟ್ಟೋಪಾಧ್ಯಾಯರ ಉಪನ್ಯಾಸವಾಯಿತು. ದರಬಾರದವರು ಇವರ ಭಾಷಣದಿಂದ ಪ್ರಜೆಯಲ್ಲಿ ಅಸಂತೋಷ ಹೆಚ್ಚಾಗುತ್ತದೆಂಬ ವ್ಯರ್ಥಭೀತಿಯಿಂದ, ಇವರಿಗೆ ಮೈಸೂರ ರಾಜ್ಯದಲ್ಲಿರುವ ತನಕ ಭಾಷಣ ಮಾಡಬಾರದೆಂದು ಅಪ್ಪಣೆ ವಿಧಿಸಿದರು. ದೇವಿಯವರು ರಾಮರಾಜ್ಯದ ರಕ್ಷಣೆಯ ಪವಿತ್ರವಾದ ಹುಕುಮನ್ನು ಅಮಾನ್ಯ ಮಾಡಿ, ಆ ಸಾರ್ವಜನಿಕ ಸಭೆಯಲ್ಲಿ ಅಧ್ಯಕ್ಷಪದವನ್ನು ಸ್ವೀಕರಿಸಿ, ಭಾಷಣ ಮಾಡಿದರು. ತಮ್ಮ ಬಾಯಿಗೆ ಬೀಗ ಹಾಕುವದೊಂದು ರಾಮರಾಜ್ಯದ ಮಾದರಿಯೇ ಎಂದು ದರಬಾರವನ್ನು ಕೆಣಕಿ, ಹಂಗಿಸಿ, ದಸ್ತಗಿರಿ ಮಾತ್ರಾ ಶಿಕ್ಷೆ ದೇವಿಯವರು ಹಿಂಜರಿಯಲಿಲ್ಲ.

ಸೂಳೆಯ ಪಾಪಕ್ಕಾಗಿ ಸನ್ಯಾಸಿಗೆ ಗಲ್ಲು.

—(೦)—

ಸೂಳೆಯ ಪಾಪಕ್ಕಾಗಿ ಸನ್ಯಾಸಿಗೆ ಗಲ್ಲೆಂದರೆ- ಒಬ್ಬನ ಅಪರಾಧಕ್ಕಾಗಿ ಯಾವನೊಬ್ಬ ನಿರಪರಾಧಿಯನ್ನು ಶಿಕ್ಷಿಸುವಿಕೆ ಎಂಬರ್ಥವು. ಇದೇ ತರದ ಶಿಕ್ಷೆಯನ್ನು ಮೈಸೂರ ದರಬಾರದವರು ಬೆಂಗಳೂರಿನ ಮ್ಯುನಿಸಿಪಾಲಿಟಿಗೆ ವಿಧಿಸಿದರು. ಸುಲ್ತಾನಪೇಟೆಯ ಗಣಪತಿಯ ಗೊಂದಲಕ್ಕೂ ಮ್ಯುನಿಸಿಪಾಲಿಟಿಗೂ ಅರ್ಥಾರ್ಥ ಸಂಬಂಧವಿರುವದಿಲ್ಲ. ಕಸಗೂಡಿಸುವದು, ದೀಪ ಹಚ್ಚುವದು; ಬೀದಿ ಸರಿಯಾಗಿಡುವದು, ಛರಂಡಿ ಒಳಿಸುವದು ಮ್ಯುನಿಸಿಪಾಲಿಟಿಯ ಕೆಲಸ. ಆದರೆ- ದಂಗೆಯ ಸಂಬಂಧ ಹಚ್ಚಿ, ಮ್ಯುನಿಸಿಪಾಲಿಟಿಯ ಅಧ್ಯಕ್ಷರನ್ನು ಆರಿಸುವ ಹಕ್ಕು ಕಸಕೊಂಡರು. ಗಲಭೆಯ ಅಟಾಗಂಡಳಿತೆಯ ಸಂಬಂಧವಾಗಿ ಪೋಲಿಸರಿಗೆ ಶಿಕ್ಷೆಯಾಗತಕ್ಕದ್ದು. ಈ ಚೆಂಡಿಯ ಮಕ್ಕಳು ಹಾಗೇ ಕಾಕ

ವು, ಯಾವ ಸಂಬಂಧವೂ ಇಲ್ಲದ ಮ್ಯುನಿಸಿಪಾಲಿಟಿಯು ಶಿಕ್ಷೆಗೂ, ಅಪಮಾನಕ್ಕೂ ಗುರಿಯಾಯಿತು. ಈ ಅಪಮಾನದ ಬಾಗು ತೀರಿದನಂತರ ಈಗ ಮ್ಯುನಿಸಿಪಾಲಿಟಿಗೆ ಅಧ್ಯಕ್ಷರನ್ನು ಆರಿಸುವ ಅಧಿಕಾರ ಕೊಟ್ಟಿದ್ದಾರೆ.

———

ಬುದ್ಧಿವಂತಿಕೆಯುಳ್ಳ-

ದರಬಾರಿನವರು ಬೀದಿಯಲ್ಲಿ ಕಪಾಳಕ್ಕೆ ಹೊಡೆದು ಮನೆಯಲ್ಲಿ ಹೋಳಿಗೆಯ ಊಟಹಾಕಿದ ಪ್ರಮಾಣದ ಮುಯ್ಯಾವೆಂದು ಬೆಂಗಳೂರು ಅಧ್ಯಕ್ಷರನ್ನು ಆರಿಸುವ ಗೊಡವಿಗೇ ಹೋಗಬಾರದು ಎಂದರೆ ಜನರಲ್ಲಿ ಅಂಥ ಸ್ವಾಭಿಮಾನವೆಲ್ಲಿದೆ? ಅಧ್ಯಕ್ಷರನ್ನು ಆರಿಸಿಕೊಳ್ಳಬೇಕೆಂದು ಗಡಿಬಿಡಿ ನಡೆದಿದೆ. ಬಳಿ, ಪಾವಡಿ ಸುಬ್ಬಾಯಶೆಟ್ಟಿ, ಬೇಲೂರ ಶ್ರೀನಿವಾಸಯ್ಯಂಗಾರ ಮತ್ತು ದೇಶಮುಖ ಗೋವಿಂದರಾಯರು ಅಧ್ಯಕ್ಷಪದಕ್ಕೆ ಅರ್ಜಿಗೊಂಡಿದ್ದಾರೆ. ಚುನಾವಣೆಯು ಡಿಸೆಂಬರ ತಿಂಗಳ ೯ನೇ ತಾರೀಖಿನ ದಿವಸ ಆಗತಕ್ಕದ್ದಿದ್ದು, ಅವರಿಗೆ ಇನ್ನೆಷ್ಟು ಜನರು ಬುದ್ಧಿ ಬುದ್ಧಿ ಸಾಯುವರೋ ದೇವರೇ ಬಲ್ಲ?

———

ಮಾಮಲೇದಾರರಿಗೆ ಬಡಿತ-

ಬೈಲಹೊಂಗಲದ ಮಾಮಲೇದಾರರಾದ ಮಿ. ಶಿರಾಳಿಯವರು ಮೋಟರಿನಿಂದ ಬರುತ್ತಿದ್ದಾಗ, ಬದಮಾಷ ಜನರು ದಾರಿಯಲ್ಲಿ ಇವರ ಮೋಟಾರ ತರುಬಿ, ಕಲ್ಲುಗಳಿಂದ ಅವರನ್ನು ಹೊಡೆದು ಗಪ್ಪ ಹೇಳಿದ್ದಾರೆ. ಪೋಲೀಸ ತಪಾಸಣೆ ನಡೆದಿದೆ. ಮಿ. ಶಿರಾಳಿಯವರಿಗೆ ಸಿದ್ದಾಪೂರಕ್ಕೆ ವರ್ಗವಾಗಿದೆ.

———

ಸಾಯಕಲ್ಲಿನ ಮೇಲೆ ಇಬ್ಬರು ಕೂಡ್ರಬಾರದು-

ಒಂದು ಸಾಯಕಲ್ಲಿನ ಮೇಲೆ ಇಬ್ಬರು ಕೂತು ಹೋಗುವದರಿಂದ ದಾರಿಯಲ್ಲಿ ಜನರಿಗೂ, ವಾಹನಗಳಿಗೂ ತೊಂದರೆಯಾಗುವ ಕಾರಣ, ಇಬ್ಬರು ಕೂತು ಹೋಗಬಾರದು. ಹೋದರೆ ಅವರ ಮೇಲೆ ಡಿಸ್ಟ್ರಿಕ್ಟ ಪೋಲೀಸ ಆಕ್ಟಿನ ೬೧ನೆಯ ಡಿ ಕಲಮಿನ ಪ್ರಕಾರ ಖಟ್ಲೆ ಮಾಡಲಾದೀತೆಂದು ಬೆಳಗಾವಿಯ ಡಿ|| ಮ್ಯಾಜಿಸ್ಟ್ರೇಟರು ಜಾಹೀರನಾಮೆ ಪ್ರಸಿದ್ಧ ಮಾಡಿದ್ದಾರೆ.

———

ಮಾಂಡಲಿಕರ ಮೇಲೆ ಅಧಿಕಾರ-

ಕೊಲ್ಹಾಪೂರ ಸಂಸ್ಥಾನದಲ್ಲಿ ಒಂಭತ್ತು ಜನ ಮಾಂಡಲಿಕರಿದ್ದಾರೆ. ಆದರೆ ೧೮೬೨ನೇ ಇಸವಿಯಿಂದ ಈ ಮಾಂಡಲಿಕರ ಮೇಲೆ ಬ್ರಿಟಿಶ ಸರಕಾರದ ಪೊಲಿಟಿಕಲ ಏಜಂಟರು ಅಧಿಕಾರ ನಡೆಸುತ್ತಿದ್ದರು. ಲಾರ್ಡ ಇರ್ವಿನಸಾಹೇಬರು ಮೊನ್ನೆ ಕೊಲ್ಹಾಪೂರಕ್ಕೆ ಹೋದಾಗ ಈ ಅಧಿಕಾರವನ್ನು ಮಹಾರಾಜರಿಗೆ ಕೊಟ್ಟಿರುವ ಜಾಹೀರ ಮಾಡಿದ್ದಾರೆ.

ಹುಚ್ಚು ನಾಯಿಯಂತೆ ಜಗಳ-

ಹಿಂದುಸ್ಥಾನದಲ್ಲಿ ಜಾತಿ ಜಾತಿ ಮತ್ತು ಜಾತಿಗಳ ಉಪಜಾತಿಗಳ ನಡುವೆ ಪರಸ್ಪರ ಅಸಹಿಷ್ಣುತೆಯಿಂದ ನಡೆದ ಜಗಳವು ಹುಚ್ಚು ನಾಯಿಗಳು ಕಚ್ಚಾಡುವಂತಿದ್ದು, ಈ ಜಾತಿ ಸಂಬಂಧವಾದ ಉರಿಯು ಆರಬೇಕೆಂದು ಈ ದೇಶದ ಯುರೋಪಿಯನ್ನ ಅಸೋಶಿಯೇಶನದ ಸೇಕ್ರೆಟರಿಯಾದ ಕರ್ನಲ ಕ್ರಾಫರ್ಡಸಾಹೇಬರು ಹೇಳುತ್ತಾರೆ. ಈ ಕಲಹದ ಬೀಜವನ್ನು ಬಿತ್ತುವ ಕೆಲಸವು ಜಾತಿ ಜಾತಿಗಳಿಗಿಂತ ಅಧಿಕಾರಾರೂಢರಾದ ಯುರೋಪಿಯನ್ನರಿಗೇ ಹೆಚ್ಚಾಗಿರುತ್ತದೆಂದು ಯಾರಾದರೂ ಹೇಳುವೆತಿಪಿ.

———

ಮುಣುಗುವ ಪ್ರಚಂಡ ಹಡಗ-

ಫ್ರೆಂಚ ಯುದ್ಧಖಾತೆಯವರು ಸಮುದ್ರದಲ್ಲಿ ಮುಣುಗಿ ಯುದ್ಧ ಮಾಡುವ ಪ್ರಚಂಡವಾದ ಜಲಾಂತರ್ಗಾಮಿ ಹಡಗವನ್ನು ಕಟ್ಟಿದ್ದಾರೆ. ಇದು ೩೨೫೦ ಟನ್ನ ತೂಕವುಳ್ಳದ್ದು ಒಮ್ಮೆ ಮುಣುಗಿತೆಂದರೆ ಹನ್ನೆರಡು ಸಾವಿರ ಮೈಲು ಹೋಗುವಷ್ಟು ಸಾಮರ್ಥ್ಯವುಳ್ಳದ್ದಾಗಿರುತ್ತದೆ. ಇದರಲ್ಲಿ ೧೫೦ ಜನರು ಕೂಡ್ರುವರು. ಐದು ಇಂಚು ಬಾಯಿಯುಳ್ಳ ತೋಪು ಹೇರಿರುವರು. ಸಮುದ್ರದ ಕೆಳಗೆ ೪೨೦ ಫೂಟಿನವರೆಗೆ ಹೋಗುವದು.

———

ವಿವಿಧ ವರ್ತಮಾನಗಳು

—(೦)—

ನಿಜಾಮ ರಾಜ್ಯದಲ್ಲಿ ಈ ಪರ್ಯಂತರ ಪೋಸ್ಟ ಕಾರ್ಡಿಗೆ ಮೂರು ಕಾಸು ಮತ್ತು ಪಾಕೀಟಿಗೆ ಆರು ಕಾಸಿತ್ತು. ಇದರಿಂದ ಖಾತೆಯ ವೆಚ್ಚಕ್ಕೆ ಕಡತ ಬೀಳಲಾರಂಭಿಸಿದ್ದರಿಂದ ಕಾರ್ಡಿಗೆ ನಾಲ್ಕು ಮತ್ತು ಪಾಕೀಟಕ್ಕೆ ಎಂಟು ಪೈ ಮಾಡಿದ್ದಾರೆ. ಈ ವ್ಯವಸ್ಥೆಯಿಂದ ಸರಕಾರಕ್ಕೆ ಹೆಚ್ಚಿಗೆ ಐವತ್ತು ಸಾವಿರ ಆದಾಯವಾಗುತ್ತದೆ.

———

ಪುಣೆ ಮ್ಯುನಿಸಿಪಾಲಿಟಿಯಲ್ಲಿ ಶರೆ ಸಿಂದಿಯ ಕುಡಿತವನ್ನು ನಿಲ್ಲಿಸುವ ವಿಚಾರ ಹೊರಟು ಅದರ ಬಗ್ಗೆ ವಿಚಾರಮಾಡಲು ಒಂದು ಕಮಿಟಿ ನೇಮಿಸಲ್ಪಟ್ಟಿದೆ.

———

ಶ್ರೀ. ಶ್ರೀನಿವಾಸ ಅಯ್ಯಂಗಾರರು ಸಂಪೂರ್ಣ ಸ್ವಾತಂತ್ರ್ಯವಾದಿಯಾದ ಮೂಲಕ, ಕಾಂಗ್ರೆಸ ವರ್ಕಿಂಗ ಕಮಿಟಿಯ ಮೆಂಬರ ಕೆಲಸಕ್ಕೆ ರಾಜೀನಾಮೆ ಕೊಟ್ಟರು

———

ಶ್ರೀ. ಸುಭಾಷಚಂದ್ರ ಬೋಸ ಮೊದಲಾದ ೧೧ ಜನರ ಮೇಲೆ ರಾಜದ್ರೋಹದ ವಿಚಾರ ನಡೆದಿದ್ದಷ್ಟೆ; ಮ್ಯಾಜಿಸ್ಟ್ರೇಟರು ಇವರೆಲ್ಲರ ಮೇಲೂ ಚಾರ್ಜ ಇಟ್ಟರು.

———

ಒಬ್ಬ ಆಂಗ್ಲೋ ಇಂಡಿಯನ್ನ ಮುದುಕಿ ಮತ್ತು ಅವಳ ಇಬ್ಬರು ಮಕ್ಕಳನ್ನು ದರೋಡೆಯ ಆರೋಪದಿಂದ ಮುಂಬಯಿಯ ಪೋಲಿಸರು ದಸ್ತಗಿರ ಮಾಡಿದ್ದಾರೆ.

———

ಸುರಪುರದ ಹೆಸರಾದ ಪಂಚಾಂಗ ಕರ್ತರಾಗಿದ್ದ ಶ್ರೀ ರಾಮಶಾಸ್ತ್ರಿಯವರು ಸ್ವರ್ಗಸ್ಥರಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

———

ಧಾರವಾಡ—

ಇಲ್ಲಿಯ ಸುಪ್ರಸಿದ್ಧ ವಿದ್ವಾಂಸರಾದ ಶ್ರೀ ನಾಗೇಶಶಾಸ್ತ್ರಿಗಳವರಿಗೆ ಶೃಂಗೇರಿಯ ಶ್ರೀ. ಜಗದ್ಗುರು ಸ್ವಾಮಿಗಳವರು ವಿದ್ವನ್ಮಣಿ ಎಂಬ ಪದವಿಯನ್ನು ಕೊಟ್ಟಿರುತ್ತಾರೆಂದು ಬರೆಯುವದಕ್ಕೆ ಸಂತೋಷವಾಗುತ್ತದೆ.

———

ಸರದಾರ ಭೀಮರಾವ ಅಕಬರನವೀಸರ ಫಂಡಿನಿಂದ ವಿಲಾಯತಿಯಲ್ಲಿ ಸಂಶೋಧನ ಶಿಕ್ಷಣ ಪಡೆಯಲು ಕರ್ನಾಟಕದ ವಿದ್ಯಾರ್ಥಿಗೆ ಸ್ಕಾಲರಶಿಪ ದೊರೆಯುವದಿದ್ದು, ಈ ಬಗ್ಗೆ ಫೆಬ್ರುವರಿ ತಿಂಗ ೧೦ನೇ ತಾರೀಖಿನೊಳಗಾಗಿ ಯುನಿವರ್ಸಿಟಿಗೆ ಅರ್ಜಿ ಮಾಡತಕ್ಕದ್ದೆಂದು ಜಾಹೀರ ಮಾಡಲ್ಪಟ್ಟಿ

———

ತಿರುಪಟ್ಟೆಯ ವೆಂಕೋಬರಾಯರ ನಾಟಕ ಕಂಪನಿಯವರು ದಶಾವತಾರ, ಲಂಕಾದಹನ ಮೊದಲಾದ ಪ್ರಯೋಗಗಳನ್ನು ಈ ಊರಲ್ಲಿ ಮಾಡಿ, ಹೊಸ ಸೀನಸೀನರಿಗಳಿಂದಲೂ, ಗಾಯನ ಅಭಿನಯಗಳಿಂದಲೂ ಪ್ರೇಕ್ಷಕರನ್ನು ಸಂತೋಷಪಡಿಸಿ, ಹೆಚ್ಚಿಷ್ಟು ಲೋಕಾಶ್ರಯವನ್ನು ಪಡೆಯುತ್ತಿದ್ದಾರೆ. ಇವರು ಮುಂದಿನ ವಾರದಲ್ಲಿ ರಬಕವಿಗೆ ಹೋಗುವರು.

———

ತಪ್ಪು ತಿದ್ದುವಿಕೆ-

ತಾ|| ೩ನೇ ನವ್ಹೆಂಬರ ೧೯೨೯ನೇ ಇಸವಿಯ ವಿಜಯ ಪತ್ರದಲ್ಲಿ ಮಿ. ಪಾಟೀಲರವರು ಕೊಟ್ಟ ನೋಟೀಸಿನಲ್ಲಿ ಪ್ರಸಿದ್ಧವಾದ ಗಣೇಶ ರಾಮನಗೌಡಾ, ಅನಂತ ರಾಮನಗೌಡಾ ಇವರಿಗೆ ಬದಲಾಗಿ ಗಣೇಶ ರಾಯಗೌಡಾ ಮತ್ತು ಅನಂತ ರಾಯಗೌಡಾ ಅಂತ ಓದಬೇಕು.

———

ಹಿಂದಕ್ಕೆ ಹಿಂದುಸ್ಥಾನದ ಸ್ಟೇಟ ಸೇಕ್ರೆಟರಿಯಾಗಿದ್ದ ಲಾರ್ಡ ಪೀಲಸಾಹೇಬರು ಈ ದೇಶದ ವರ್ತಮಾನ ರಾಜಕೀಯ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಲು ಮುಂಬಯಿಗೆ ಬಂದಿದ್ದಾರೆ.

ಸರ ಸಾಯ [illegible] ರ [illegible] ಕಮಿಟಿಯ ವರದಿ [illegible] ತಯಾರಾಗಿದ್ದು, ಅದನ್ನು ಬೇಗನೆ ಪ್ರಸಿದ್ಧ ಮಾಡುವದೆಂದು ಮಿ [illegible] ಸಾಹೇಬರು ಹೇಳುತ್ತಾರೆ.

ಸಿಂದ [illegible] ಪ್ರಾಂತದ [illegible] ಐದು ಲಕ್ಷ ಮೀರಿದೆ

[illegible] ಪ್ರದರ್ಶನ.

—(೦)—

ಕನ್ನಡಿಗರಲ್ಲಿ ಅಗತ್ಯದ ಬಿನ್ನಹ

ನಾಳೆ ಬರುವ ಡಿಸೆಂಬರ ತಿಂಗಳ ೨೫-೨೬ ತಾರೀಖುಗಳಲ್ಲಿ ಜರುಗಲಿಕ್ಕಿರುವ ಪ್ರದರ್ಶನ ಕರ್ನಾಟಕ ವಾಚನಾಲಯ ಪರಿಷತ್ತಿನ ಸಭೆಯಲ್ಲಿ ಕರ್ನಾಟಕ ಪತ್ರಿಕಾಪ್ರದರ್ಶನವನ್ನು [illegible] ಗೊತ್ತಾಗಿದೆ ಅದು ಕಾರಣ ಯಾರ ಬಳಿಯಲ್ಲಿ ಯಾದರೂ ತೀರ ಹಳೇ [illegible] ಪತ್ರಿಕೆ [illegible] ಯಾದರೂ ಇದ್ದರೆ ಅವರು ದಯವಿಟ್ಟು [illegible] ಪ್ರದರ್ಶನ [illegible] ಮುಗಿದ ಬಳಿಕ ಅವನ್ನು ತಿರುಗಿ ಅವರಿಗೆ ಮುಟ್ಟಿಸಲಾಗುವದು [illegible] ನಮ್ಮ ಬಳಿಯಲ್ಲಿ ಸುಮಾರು ಇನ್ನೂರು ಪತ್ರಿಕೆಗಳ ಸಂಗ್ರಹವಿದೆ ಪತ್ರಿಕಾ ಸಂಪಾದಕರು [illegible] ಡಿಸೆಂಬರ ತಿಂಗಳ ಹೊಸ ಸಂಚಿಕೆ [illegible] ಕಳಿಸಿಕೊಡುವ ಕೃಪೆ ಮಾಡಬೇಕು.

ಕನ್ನಡಿಗರ ಕೂಟ	ತಮ್ಮ ವಿಧೇಯ
ಧಾರವಾಡ	ಮು. ಬೀ. ರಂಗಣ್ಣ
೧೮-೧೧-೨೫	ಕಾರ್ಯದರ್ಶಿ.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಪತ್ತಿಗೆ [illegible] ಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು [illegible] ಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ [illegible] ಲೋಕಲ್ ಬೋರ್ಡ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ [illegible] ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ [illegible] ಆರು ಆಣೆ ಡಬಲ್ ಕಾಲಮಿನ ಪಳಿಗೆ ಇಪ್ಪತ್ತು [illegible] ಕಾಯಂ ಜಾಹೀರಾತನ್ನು ಕೊಡುವವರು ಕಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

[illegible] ಬಿಳೇ, ಅಥವಾ [illegible] ಬಣ್ಣದ ಹಳೆಯ ಕುಸುಮ [illegible] ಮುಕ್ತಾಂಬರ ದಿವ್ಯೌಷಧ ಈ ಔಷಧದಿಂದ [illegible] ಗುಣವಾಗುವದು. ಇಲ್ಲಿ ಕೇವಲ ವನಸ್ಪತಿ [illegible] ಬೆಲೆ ಎರಡೇ ರೂಪಾಯಿ [illegible] ಮುಂಗಡ [illegible]

[illegible] ದೀಕ್ಷಿತ

C/ [illegible] ನ [illegible]

[illegible]

ನೋಟೀಸು.

—(೦)—

ಯಲ್ಲಪ್ಪಾ [illegible] ಸಾಕೀನ ಗುಲಗಂಜಿ [illegible] ಧಾರವಾಡ ಈತನಿಗೆ-

ಕಳಗೆ ಹುಟ್ಟಿಸಿ [illegible] ಮಾಡುವ ಪಕೀರಪ್ಪಾ ತಿಪ್ಪಣ್ಣಾ [illegible] ಸಾಕೀನ [illegible] ಈ ನೋಟೀಸಿನಿಂದ ತಿಳಿಸುವದೇನೆಂದರೆ-

ನನ್ನ ಮಗ [illegible] ಪ್ಪಾ ಈತನಿಗೆ ನಿನ್ನ [illegible] ಲಕ್ಷ್ಮವ್ವಾ ಈಕೆಯನ್ನು ಮದಿವೆ ಮಾಡಿಕೊಡುವ ನಿಶ್ಚಯ [illegible] ಮೂರು ವರ್ಷದ ಹಿಂದಾಯಿತು. [illegible] ಕಾಲಕ್ಕೆ ಹುಡಿಗೆಯ ಮೈಮೇಲೆ ಸಿರಸ್ತೆಯ ಪ್ರಕಾರ -

೧ ಕಾಲೊಳಗಿನ [illegible] ತೊ॥ ೧೫॥ ೬೦
೨ [illegible] ೧೪
೩ ಕರ್ಣಪೂ [illegible] ॥ ೪
೪ [illegible] ॥ ೧೬

ಈ [illegible] ೧೬ ರೂಪಾಯಿ ಇಷ್ಟು ಕೊಟ್ಟು, [illegible] ಮಾಡಲಾಯಿತು ಅನಂತರ ಪ್ರತಿ ವರ್ಷ ಪದ್ಧತಿಪ್ರಕಾರ ಬೀರಿಸುವ ಹಬ್ಬದ ಕಾರ್ಯಕ್ಕೆ [illegible] ಯಂತೆ ಮೂರು ವರ್ಷ ಕೊಟ್ಟಿದ್ದೇನೆ [illegible] ವರ್ಷ ಮದಿವೆಮಾಡಿ ಕೊಡುವ ಕರಾರಿತ್ತು. ಆದರೆ ಈಗ ಮದಿವೆಮಾಡಿಕೊಡುವ ದಿವಸ [illegible] ಎರಡನೇ ಕಡಿಗೆ [illegible] ನೋಡತೀರೆಂದು ತಿಳಿದು, ಪಂಚರ ಸಮಕ್ಷಮ ಕೇಳಿದ್ದು ಆಗ ನಿಮ್ಮ ಮಸಲತ್ತು ಬೈಲಿಗೆ ಬಂತು ಕಾರಣ ನಿರುಪಾಯವಾಗಿ ಈ ನೋಟೀಸು ಕೊಡಬೇಕಾಯಿತು ಈ ನೋಟೀಸು ಮುಟ್ಟಿದ ಮೂರು ದಿವಸಗಳಲ್ಲಿ ನಮ್ಮ ಕಡೆಗೆ ಬಂದು ಲಗ್ನದ [illegible] ಗೊತ್ತು ಮಾಡಿಕೊಂಡು, ಆ ತಿಥಿಗೆ ಲಗ್ನ [illegible] ಕೊಡತೀನೆಂದು ಸ್ಥಾವರದ ಜಾಮೀನು [illegible] ಇದಕ್ಕೆ ತಪ್ಪಿದರೆ ನಿನ್ನ ಮೇಲೆ ಲಗ್ನ [illegible] ಮಾಡಿಕೊಡುವ ಬಾಬು ಮತ್ತು [illegible] ಮತ್ತು ಖರ್ಚಿನ ಬಾಬತು [illegible] ಕಾಯದೇಶೀರ ಇಲಾಜ ಮಾಡಬೇಕಾಗುತ್ತದೆ ಮತ್ತು ಈ ನೋಟೀಸಿನ ವಿರುದ್ಧ ನೀನು ಯಾರಿಗಾದರೂ ಹುಡಿಗೆಯನ್ನು ಮದಿವೆ ಮಾಡಿಕೊಡುವ ವೇಳೆಯ ಕಾರ್ಯ ನಡಸುವದಾದರೆ ನಿನ್ನ ಮೇಲೆ ಮತ್ತು ಆ ಬೀಗರ ಮೇಲೆ ಏಕದಂ ಫೌಜದಾರಿ ಮಾಡುವೆನು ತಿಳಿಯುವದು ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲುಂಟು.

ತಾ॥ ೨೪-೧೧-೧೯೨೫

ಈ ಎಡಗೈ ಹೆಬ್ಬೆರಳ ನಿಶಾನಿ ಫಕೀರಪ್ಪಾ ತಿಪ್ಪಣ್ಣಾ ಆಡೆಪ್ಪ ಈತನ [illegible] ಅದೆ

ಈ ಪತ್ರವನ್ನು ಅಂಣ್ಣಾಜಿರಾವ ಜಾಲಿಹಾಳ ಹೊಸಯೇರಿ ಇವರು ಧಾರವಾಡದ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1448

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಸೋಮವಾರ ತಾರೀಖು ೨೯ ನೇ ಸಪ್ಟೆಂಬರ ೧೯[illegible] (ಸಂಚಿಕೆ [illegible]

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ.

ಸಂಗಳವಾ[illegible] ಪೇಟ ಬೋಗ [illegible] ಮನೆಯಲ್ಲಿ.

ಠೇವಣೆಗಳ ಮೇಲೆ [illegible] ಬಡ್ಡಿ [illegible] ದೊರೆಯುವ ಬ್ಯಾಂಕು

ಈ ಬ್ಯಾಂಕು ಜಾಯಿಂಟ ಸ್ಟಾಕ [illegible] ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವನ್ನು [illegible] ಬಂಗಾರ ಮತ್ತು ಬೆಳ್ಳಿ, ಠಾಗಿನೆ [illegible] ಸೋಯಿ [illegible]. ಠಾಗಿನೆ [illegible] ಮೊದಲನೇ ತಿಂಗಳು ಬಿಟ್ಟು [illegible] ಅದನ್ನು ಸ್ವೀಕಾರ [illegible]. [illegible] ಕಡಿಮೆಯಾಗಿ [illegible]. [illegible] ಸೋಯಿಯು [illegible] ಬಡ್ಡಿಯ ದರವು [illegible] ಬಡ್ಡಿಯಲ್ಲಿ [illegible] ನಮ್ಮ ಬ್ಯಾಂಕಿನಲ್ಲಿ ಠಾಗಿನೆ [illegible] ಆಗುವದಿಲ್ಲ. [illegible] ಕಾಲದ [illegible] ಬರುತ್ತದೆ. [illegible] ನಮ್ಮ ಬ್ಯಾಂಕಿನಲ್ಲಿ [illegible]. ನಮ್ಮ ಬಡ್ಡಿ ದರವು [illegible] ಎರಡು [illegible] ತಿಳಿಯಬೇಕು.

ಹಳ್ಳಿಗಳ ಜನರು ಶಹರದ ಊರಿಗೆ [illegible] ಅವರು ಕೇಳಿದಷ್ಟು ಬಡ್ಡಿ [illegible] ಹೀಗೆ ಬ್ಯಾಂಕಿನಲ್ಲಿ [illegible] ನಡೆಯುವದಿಲ್ಲ. ಹಳ್ಳಿಗಳ ಜನರು [illegible] ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಫಟ್ಟಿಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. [illegible]ಯಲ್ಲಿ ಎಲ್ಲರಕ್ಕಿಂತಲೂ ಸೋಯಿಯಿಂದ ಸಿಗುವವು.

ಕೃಷ್ಣರಾವ ವೆಂಕಟರಾವ ಭಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

[illegible] ಧಾರವಾಡ ಅರ್ಬನ್ ಕೋ[illegible] [illegible] ಬ್ಯಾಂಕ ಲಿಮಿಟೆಡ

[illegible] ಪೇಟ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ [illegible] ಸ್ಥಾನ.

ಬಂಡಿಗಲು [illegible] ಲಕ್ಷದ ಮೇಲುಂಟು. [illegible] ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ [illegible] ಮಾಡಲ್ಪಡುವವು. ಕಾಯಮ ಮತ್ತು ಬೇರೆ [illegible] ದರಗಳಿಗೆ [illegible] ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಿಕೊಳ್ಳಬೇಕು.

ಮಲ್ಹಾರರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ [illegible] ಬ್ಯಾಂಕ ಲಿಮಿಟೆಡ್

[illegible]ವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳಲಾಗುವದು. ದರವನ್ನು [illegible] ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಠಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯು ಇರುತ್ತದೆ.

ಎ. ಜಿ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೨-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು [illegible] ಕೊಳ್ಳಿರಿ.

ವಿಜಯ [illegible]

ವಿಜಯ.

ಧಾರವಾಡ ತಾ- ೨೬-೧೧-೨೮ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಪ್ರಿಯ
ಕೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ,
ದೀ "ವಿಜಯಂ" ಶ್ರೀಕರಣ।
ನಾ ವಿಹಿತಂಗಳ ವಿವರಿಸಬಿಪ್ಪುದು ಸಾಜಂ ॥೧॥

ನಾಮದಾರ ಗವ್ಹರ್ನರಸಾಹೇಬರ ಗಮನಾಗಮನದ ಫಲಶ್ರುತಿ.

ದೀವಳಿಗೆಯ ಹಬ್ಬದಲ್ಲಿ ನಾಮದಾರ ಗವ್ಹರ್ನರಸಾಹೇಬರು ಕರ್ನಾಟಕ ಪ್ರಾಂತದಲ್ಲಿ ಸಂಚಾರ ಮಾಡಿ ಹೋದ್ದರಿಂದ, ಅವರ ಗಮನಾಗಮನದ ವಿಷಯವಾಗಿ ಜನತೆಯ ಹಾಗು ವರ್ತಮಾನಪತ್ರಕಾರರ ಲಕ್ಷ್ಯ ಹೋಗಲಿಲ್ಲ. ಸಾಹೇಬರು ಬಂದು ಹೋದ ವೆಂದರೆ- ಪರ್ವಣಿ ಎಂದು ತಿಳಿಯುವ ಕಾಲ ಹಿಂದಾಗಿ, ಅವರ ಆಗಮನದಿಂದಾದ ಲಾಭಹಾನಿಯ ಫಲಶ್ರುತಿಯನ್ನು ನೋಡುವ ಕಾಲ ಉಂಟಾಗಿದೆ. ೩೦ ವರ್ಷಗಳ ಹಿಂದೆ ಅದ್ದ ಪಲ್ಲಕ್ಕಿಗೆ ದೊಡ್ಡ ಮಹತ್ವವಿತ್ತು. ಅದು ಈಗ ಮೂರು ಹಳ್ಳಿಯಲ್ಲಿಯೂ ಆಗುತ್ತಿರುವದರಿಂದ, ಅದರ ಸ್ವಾರಸ್ಯವೆಲ್ಲ ಹೊರಟು ಹೋದಂತೆ, ಗವ್ಹರ್ನರರ ಮಾನಪತ್ರದ ಮಹತ್ವವೂ ಹೋಗಿರುತ್ತದೆ. ಸರಕಾರದವರು ಹಿಂದಕ್ಕೆ ಜಲ್ಸಾದರಬಾರ ಕೂಡಿಸುತ್ತಿದ್ದಾಗ ಕೌನ್ಸಿಲದಂತೆ ಪ್ರಶ್ನೋತ್ತರಗಳು ನಡೆಯುತ್ತಿದ್ದವು. ಆಗ ಜನರು ಕೇಳುವ ಪ್ರಶ್ನಗಳಿಗೆ ಸಮಾಧಾನವಾಗಿ ಉತ್ತರ ಕೊಡಬೇಕಾಗಿದ್ದರಿಂದ, ದರಬಾರಗಳು ನಿಂತವು. ಗವ್ಹರ್ನರಸಾಹೇಬರು ಮಾನಪತ್ರಗಳಿಗೆ ಕೊಡುವ ಉತ್ತರಕ್ಕೆ ಪ್ರತಿಪ್ರಶ್ನೆ ಮಾಡುವ ಹಕ್ಕು ಇರುವದಿಲ್ಲ- ಸಾಹೇಬರ ಭಾಷಣದ ಹುಳುಕೆಲ್ಲ ಹೊರಬೀಳುತ್ತಿತ್ತು. ಹಾಗೇನೂ ವ್ಯವಸ್ಥೆ ಇರುವದಿಲ್ಲ. ಸಾಹೇಬರು ಎಷ್ಟು ಅಸಮಾಧಾನವೆನಿಸುವಂಥ ಉತ್ತರ ಕೊಟ್ಟರೂ, ಹಿಪ್ ಹಿಪ್ ಹುರ್ರೆ ಎಂದು ಅವರ ಹೆಸರಿನಿಂದ ಮುಂದೆ ನಿಂತ ಜನರು ಜಯಘೋಷ ಮಾಡುವದಂತೂ ತೀರ ಹಾಸ್ಯಾಸ್ಪದವು.

ಗವ್ಹರ್ನರಸಾಹೇಬರು ಧಾರವಾಡ ಜಿಲ್ಲೆಯ ... ಪಟ್ಟ ಮಾನಪತ್ರಗಳಿಗೆ ಉತ್ತರ ಕೊಡುವಾಗ ಕರ್ನಾಟಕವನ್ನು ಮುಂಬಯಿ ಇಲಾಖೆಯಿಂದ ಬೇರ್ಪಡಿಸಲು ಸಾಧ್ಯವೆಂದು ... ನೋಡಲಿಲ್ಲೆಂದು ಸಿಂಧ ಮತ್ತು ಕರ್ನಾಟಕದ ಹೋಲಿಕೆಯಲ್ಲಿ ಹೇಳಿದ್ದಾರೆ. ಸಾಹೇಬರ ಈ ಹೇಳಿಕೆಯನ್ನು ವಿಚಾರಶೈಥಿಲ್ಯದಿಂದ ಖಂಡಿಸುವಂತಿದೆ. ಸಿಂಧದಲ್ಲಿ ಸಂಪೂರ್ಣ ಆರ್ಟ್ಸ್‌ಕಾಲೇಜವುಂಟು. ಸಿಂಧೀ ಜನರು ಎಷ್ಟು ವರ್ಗಣಿ ಕೊಟ್ಟಿಲ್ಲ. ಕರ್ನಾಟಕದವರು ಎರಡು ಲಕ್ಷ ರೂಪಾಯಿ ಕೂಡಿಸಿ ಕೊಟ್ಟಾಗ- ಕರ್ನಾಟಕ ಕಾಲೇಜ ಸ್ಥಾಪಿಸುವ ಕೆಲಸದಲ್ಲಿ ಮುಂದೊರೆದರು. ಕರ್ನಾಟಕವು ಸಿಂಧದಷ್ಟು ಶ್ರೀಮಂತವಲ್ಲ. ಸಾಪ್ ಸ್ಟ್ರೀಟ್ ಶ್ರೀ ನಿವಾಸರಾಯರು ಗಂಧರ್ವ ನಾಟಕದಿಂದ ಕಾಲೇಜ ಫಂಡಿನ ಎತ್ತುಗಡೆಯನ್ನು ಪ್ರಾರಂಭಿಸಿದರು. ಈ ಪರೀಕ್ಷ ತೀರ್ಥಕ್ಕೆ ಸಿಂಧದಂತೆ ಮೆಡಿಕಲ ಸ್ಕೂಲನ್ನು ಸ್ಥಾಪಿಸಬೇಕೆಂದು ಹುಬ್ಬಳ್ಳಿಯ ಮಾನಪತ್ರದಲ್ಲಿ ಕೇಳಿದಾಗ, ಮೊದಲು ಸ್ಥಳೀಕ ಫಂಡು ಕೊಡಿರೆಂದು ಸಾಹೇಬರು ಅಂದಿದ್ದಾರೆ. ಸಿಂಧದಲ್ಲಿ ಜನರಿಂದ ಎಷ್ಟು ಫಂಡು ಕೂಡಿತು? ಸರಕಾರವೆಷ್ಟು ಹಾಕಿತೆಂದು ರಾ. ಬ. ಕಂಬಳಿಯವರೇ ಕೌನ್ಸಿಲದಲ್ಲಿ ಪ್ರಶ್ನ ಮಾಡಬೇಕೆಂದು ಸೂಚಿಸುತ್ತೇವೆ. ಸಿಂಧದಂಥ ಕಾಲೇಜಗಳಂತಿರಲಿ; ಅಲ್ಲಿಯ ಹಾಗೆ ಜ್ಯುಡಿಶಿಯಲ ಕೋರ್ಟು ಕರ್ನಾಟಕದಲ್ಲಿರುವದಿಲ್ಲ. ಇಂಥ ಬಡಿಷ್ಟ ತುತ್ತು ಸಹ ಬೇಡ. ನವಲಗುಂದದಲ್ಲಿ ಮುನಸಫಕೋರ್ಟನ್ನಿಡಬೇಕೆಂದು ಮಾಡುತ್ತಿರುವ ಎಲ್ಲ ವಿನಂತಿಗಳು ಅರಣ್ಯರೋದನವಾಗಿರುತ್ತವೆ.

ವಿಲಾಯತಿ ಸರಕಾರದವರು ಹಿಂದುಸ್ಥಾನಕ್ಕೆ ವಸಾಹಾತಿನ ಸ್ವರಾಜ್ಯ ಕೊಡಲಿಕ್ಕೆ ಸಿದ್ಧರಾಗಿರುವಾಗ ನಮ್ಮ ಗವ್ಹರ್ನರ ಸಾಹೇಬರು ಜ್ಯೂರೀ ಪದ್ಧತಿಯನ್ನು ಕೊಡಲಿಕ್ಕೆ ಧಾರವಾಡ ಜಿಲ್ಲೆಯ ನಾಗರೀಕರಿಗೆ ಅಪಾತ್ರತೆಯ ಸರ್ಟಿಫಿಕೇಟು ಕೊಟ್ಟರು. ಈ ನಮ್ಮ ಲಿಂಗಾಯತರಾದೊದು ವೀರಶೈವರು ಕೊಟ್ಟಂಥ ಮಾನಪತ್ರದಲ್ಲಿ ವೀರಶೈವರಲ್ಲಿ ಶಿಕ್ಷಣ ಪ್ರಸಾರ ಹೇಗಾಗಿರುತ್ತದೆಂಬದು ವ್ಯಕ್ತವಾಗಿರುತ್ತದೆ. ಬ್ರಾಹ್ಮಣ- ವೀರಶೈವರ ನಂತರ ಬೇರೆ ಜನಾಂಗಗಳಲ್ಲಿಯೂ ಶಿಕ್ಷಣ ಪ್ರಸಾರವಾಗಿದ್ದು, ಜ್ಯೂರಿಗಳಾಗಿ ನಿಃಪಕ್ಷಪಾತದಿಂದ ನ್ಯಾಯ ಹೇಳುವಂಥ ಸಾವಿರಾರು ಜನರು ಈ ಜಿಲ್ಲೆಯಲ್ಲಿ ನಿಃಸಂದೇಹವಾಗಿ ದೊರಕುವರು. ಅದೇ ಆಗ ಇಂಗ್ಲಿಷ ಶಿಕ್ಷಣ ಪ್ರಾರಂಭವಾಗುವ ಮತ್ತು ಜನರು ಹೆಚ್ಚಾಗಿ ಅಶಿಕ್ಷಿತರಾಗಿದ್ದ ಕಾಲದಲ್ಲಿ ಬೆಳಗಾವಿಗೆ ಜ್ಯೂರಿಯ ಅಧಿಕಾರ ಕೊಡಲಿಕ್ಕೆ ಬಂದು, ಬೀದಿ ಬೀದಿಗೆ ಗ್ರ್ಯಾಜ್ಯುಏಟರೂ, ಪ್ಲೀಡರರೂ ಇರುವಂಥ ಕಾಲದಲ್ಲಿ ಇನ್ನೂ ನೀವು ಜ್ಯೂರಿಗಳಾಗಲಿಕ್ಕೆ ಸಮರ್ಥರಾಗಿರುವದಿಲ್ಲೆಂದು ಹೇಳುವದು ಒಂದು ಪೂರ್ಣವಾಗಿ ಕನ್ನಡಿಗರ ಅಪಮಾನಮಾಡಿದಂತಾಗಿರುತ್ತದೆ.

ರೇಲ್ವೆಯ ದೃಷ್ಟಿಯಿಂದಲೂ ಸಾಹೇಬರ ಉತ್ತರವು ನಿರಾಶಜನಕವಾಗಿರುತ್ತದೆ. ಹುಬ್ಬಳ್ಳಿಯಿಂದ ದುಂಧೂರ ಮಾರ್ಗವಾಗಿ ನರಗುಂದ-ಬಾಗಲಕೋಟೆಗೆ ರೇಲ್ವೆ ಹಾಕಿದರೆ- ಮಲ್ಲಾಪುರ ಪ್ರದೇಶದಲ್ಲಿ ದನಗಳಿಗೆ ರೋಗಿಯಿಂದ ಮುಳ್ಳಾದದ ಹುಲ್ಲು ದೊರೆಯುವದಕ್ಕೆ ಬಹುವಾಗಿ ಸೋಯಿಯಾಗಿ ಪೂರ್ಣ ಪ್ರಾಣಿಗಳ ರಕ್ಷಣೆಯ ಬಗ್ಗೆ ನಿಜವಾದ ಭೂತದಯೆಯನ್ನು ತೋರಿಸಿದಂತಾಗುತ್ತದೆ. ಬೇರೊಂದು ರೇಲ್ವೆಯ ಹವಾಲಿ ಹಾಕಿ, ಇದಕ್ಕೆ ಗ್ರಹಗತಿಯ ಮಂಗಳ ತಿಥಿ ನಕ್ಷತ್ರ ಹೇಳಿದ್ದು ತೀರ ಅಸಮಾಧಾನಕಾರಕವಾದದ್ದು. ಬೆಳಗಾವಿ ಸವದತ್ತಿ ಧಾರವಾಡ ರೇಲ್ವೆಗಿಂತ ಮುಂದಾಗಿ ಅವಶ್ಯವಾಗಿ ಹುಬ್ಬಳ್ಳಿ- ನರಗುಂದ ರೇಲ್ವೆಯು ಬೇಕಾಗಿರುತ್ತದೆ.

ಗವ್ಹರ್ನರ ಸಾಹೇಬರ ಬರುಹೋಗುವಿಕೆಯಿಂದ ಮ್ಯುನಿಸಿಪಾಲಿಟಿಗಳಿಗೆ ತಿಂಗಳೊಪ್ಪತ್ತಿನ ದುಡಿತಕ್ಕೆ ಕಿಂಚಿತ್ ಫಲ ಸಹ ಆಗಲಿಲ್ಲ. ಮಾನಪತ್ರ ಮತ್ತು ಸಮಾರಂಭಗಳಿಗಾಗಿ ಮಾಡಿದ ವೆಚ್ಚದಲ್ಲಿ ಸಾಹೇಬರ ಹೆಸರಿನಿಂದ ನೀರಿನ ಕಾರಂಜಿಗಳನ್ನು ಕಟ್ಟಿಸಿದ್ದರೆ- ಅನಂತಕಾಲ ಪರ್ಯಂತರ ಜನದನದ ಹಿತವಾಗುತ್ತಿತ್ತು. ಯೋಗ್ಯರೀತಿಯನ್ನನ್ನು ಸರಿಸಲಿಕ್ಕೆ ಮ್ಯುನಿಸಿಪಾಲಿಟಿ, ಲೋಕಲ ಬೋರ್ಡು ಗಳಿಗೆ ಎಂದು ಸುಬುದ್ಧಿ ಹುಟ್ಟಬೇಕು?

ಪುರುಷಸ್ವಾತಂತ್ರ್ಯ: ಸ್ತ್ರೀಸ್ವಾತಂತ್ರ್ಯ?

——)(o)(——

ಕಾಯಿದೆ ಕಾನೂನ- ವ್ಯವಹಾರ, ಮನೆಗೆಲಸ, ದಾಯಾದಿಭಾಗ, ಮದಿವೆ ಮತ್ತು ಸೋಡಪತ್ರ ಮುಂತಾದ ವಿಷಯಗಳಲ್ಲಿ ಗಂಡಸರಿಗಿರುವಷ್ಟೇ ಹಕ್ಕು ಬಾಧ್ಯತೆಯು ಹೆಂಗಸರಿಗೂ ಇರಬೇಕೆಂದು ಇಲ್ಲಿಯ ಶಲಿತ ಹೆಣ್ಣುಮಕ್ಕಳು ವಿಲಾಯತಿಯ ತೆ ಈ ದೇಶದಲ್ಲಿಯೂ ಚಳವಳ ನಡೆಸಿದ್ದಾರೆ. ಸಭೆಗಳನ್ನು ಸೇರಿಸಿ, ಠರಾವು ಮಾಡುತ್ತಿದ್ದಾರೆ. ಇಂಥದೊಂದು ಸಭೆಯು ಹೋದ ಆದಿತ್ಯವಾರದ ದಿವಸ ಮದ್ರಾಸದಲ್ಲಿ ಶ್ರೀ॥ ಪ್ರೊ॥ ಕೌಶಿನರವರ ಅಧ್ಯಕ್ಷತೆಯಲ್ಲಿ ಸೇರಿತು. ಈ ಸಭೆಯಲ್ಲಿ ಸೋಡಪತ್ರ ಕೊಡುವ ಅಧಿಕಾರವು ಗಂಡಸರಷ್ಟೇ ಹೆಂಗಸರಿಗೂ ಇರಬೇಕೆಂಬ ಠರಾವು ಬಂತು. ಅದು ಮುಂದೆ ಕೊಟ್ಟಂತಿರುತ್ತದೆ.

"ಗಂಡಸರಿಗೆ ಮತ್ತು ಹೆಂಗಸರಿಗೆ ನೀತಿ ಸಂಬಂಧವಾಗಿ ಸರಿಸಮಾನ ಹಕ್ಕುಗಳಿರತಕ್ಕದ್ದು. ಗಂಡಸರಿಗೆ ಈಗ ಹೆಂಡಂದಿರನ್ನು ಅಗಲುವದಕ್ಕೆ ಇರುವಂಥ ಹಕ್ಕು ಹೆಂಡಂದಿರಿಗೆ ಗಂಡಂದಿರನ್ನು ಅಗಲುವದಕ್ಕೂ ಇರಬೇಕು."

ಹೆಂಡತಿ ಬೇಡವಾದ ಕೂಡಲೆ, ಗಂಡನು ಸೋಡಪತ್ರ ಕೊಡುವಂತೆ, ಗಂಡಬೇಡವಾದ ಕೂಡಲೆ ಹೆಂಡತಿಯು ಗಂಡನಿಗೆ ಸೋಡಪತ್ರ ಕೊಡುವ ಅಧಿಕಾರವಿರಬೇಕೆಂದು ಮೇಲಿನ ಠರಾವಿನ ಆಶಯು ವಿರುತ್ತದೆ. ಈ ಠರಾವನ್ನು ತಂದ ಶ್ರೀ. ಸೌ|| ಪಟವರ್ಧನ ಮಾಲತಿಬಾಯಿಯವರು ಅಂದದ್ದೇನಂದರೆ-

ಸ್ತ್ರೀ ಪು[illegible] [illegible]ಬಂಧವನ್ನು ದಾಸ್ಯತ್ವದಿಂದ ಬಿಡಿಸುವ [illegible] ಜಗತ್ತಿನ [illegible] ದೆ ಇದು [illegible] ದ ಲಕ್ಷ್ಯವನ್ನು [illegible] ರ್ಷಿಸಿದೆ. [illegible] ತಾವು ಗಂಡನು ಶ್ರೇಷ್ಠರೆಂಬ [illegible] ಗಂಡಸರಲ್ಲಿ [illegible] ರಿಂದ, ಸದ್ಯ [illegible] ಮೇಲೆ ಪ್ರತ್ಯಾಘಾತ [illegible] ಡೆದಿದೆ. ಪ್ರಪಂಚದ ಎಲ್ಲಾ ವಿಚಾರಗಳಲ್ಲಿ [illegible] ತನಗೆ ಗಂಡಸರಷ್ಟೇ ಸಕ್ಕ ಸ್ವಾತಂತ್ರ್ಯ [illegible] ಕೆಂದು ಹೆಂಗಸರಿಗೆ [illegible]ನಿಸಹತ್ತಿದೆ. [illegible] ಕಾಲದಲ್ಲಿ ಸ್ತ್ರೀಯರು ಸ್ವಕೀಯ ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತಾರೆ. ಸೋಡಪತ್ರವು ಈ ಸ್ವಾತಂತ್ರ್ಯದ ಒಂದು ಭಾಗವಾಗಿದ್ದು, ಅದನ್ನು ಬೇಡುವದು ಎಷ್ಟು ಅಪದ್ಧ ಅಥವಾ ಅನುಚಿತವಲ್ಲ.

ಮೇಲಿನ ಠರಾವಿನಲ್ಲಿ ಪೋಟಗಿ ಅಥವಾ ಪೋಟಗಿ ಇಲ್ಲದೆ ಸೋಡಪತ್ರ ಬೇಕಾಗುವದೆಂದು ಶ್ರೀ. ಅಂಬುಜಮ್ಮನವರು ಉಪಸೂಚನೆ ತಂದರು. ಗಂಡಸರು ಪುರುಷತ್ವ ಹೀನರೂ, ನೆಟ್ಟಗಾಗದಂಥ ರೋಗಿಗಳೂ, ಘಟೀಂಗರೂ, ಲಫಂಗರೂ ಆದಾಗ ಮಾತ್ರ ಸ್ತ್ರೀಯರು ಸೋಡಪತ್ರ ಕೊಡಬೇಕೆಂದು ಶ್ರೀ ಕೃಷ್ಣವೇಣಿಯಮ್ಮನವರೆಂದರು. ಇಮ್ಮಡೀ ಇಂಥ ಬದಲಾವಣೆ ಮಾಡುವ ದೀರ್ಘ ಸಾಹಸದ ಭರಿಗೆ ಬೀಳಬಾರದೆಂದು ಶ್ರೀ. ಅಲಮೇಲುಮಂಗಾಧಿಕಾರಿಯಮ್ಮನವರಿಂದ ಬಳಿಕ, ಹೋಟು ತಕ್ಕೊಳ್ಳಲ್ಪಟ್ಟಿತು. ಬಹುಮತದಿಂದ ಶ್ರೀ. ಮಾಲತಿಯವರ ಠರಾವು ಪಾಸಾಯಿತು.

ಶ್ರೀ. ಶಕಲಾತವಾಲಾನವರಿಗೆ

ಪ್ರವಾಸದ ಪ್ರತಿಬಂಧ.

—(೦)—

ಎರಡು ವರ್ಷಗಳ ಹಿಂದೆ ಶ್ರೀ. ಶಕಲಾತವಾಲಾನವರು ಹಿಂದುಸ್ಥಾನಕ್ಕೆ ಬಂದು ಹೋದದ್ದು ವಾಚಕರ ಸ್ಮರಣದಲ್ಲಿರಬಹುದು. ಆಗ ಒಕ್ಕಲತನ ಮತ್ತು ಸಹಕಾರಿ ಉದ್ಯೋಗಸ್ಥರು ಇವರಿಗೆ ಸಹಾಯಮಾಡಬೇಕೆಂದು ಸರಕಾರದವರು ಸರಕ್ಯೂಲರ್ ತೆಗೆದಿದ್ದರು. ಆಗ ಕಾನ್ಸರವೇಟಿವ್ಹ ದರಬಾರವಿತು. ಈಗ ಕ್ರಾಲಿಕಾರ ದರಬಾರವಿದ್ದು, ಸ್ತ್ರೀ ಸ್ವಾತಂತ್ರ್ಯ, ಭಾಷಣ ಸ್ವಾತಂತ್ರ್ಯ ಹೆಚ್ಚಾಗಿರತಕ್ಕದ್ದು. ಈ ಸ್ವಾತಂತ್ರ್ಯವು ಇಂಗ್ಲಂಡದಲ್ಲಿ ಮಾತ್ರ ಇದ್ದು, ಹಿಂದುಸ್ಥಾನದಲ್ಲಿರುವದಿಲ್ಲ! "ನಾನು ಹಿಂದುಸ್ಥಾನಕ್ಕೆ ಹೋಗುವೆನು. ಸಾಮ್ರಾಜ್ಯವಾದದ ವಿರುದ್ಧ ಮತ್ತು [illegible] ಅನುಕೂಲವಾಗಿ ಕಾಂಗ್ರೆಸ ಸಭೆಯಲ್ಲಿ ಮಾತಾಡುವೆನು. [illegible]" ಇವರು [illegible] ಅವರು ಈ [illegible] ಅಪ್ಪಣೆಯನ್ನು ಕೊಡಲಾಗದೆಂದು [illegible] ಕೊಟ್ಟಿದ್ದಾರೆ.

[illegible] ಇದೇ [illegible] ಕೊಡದೆ, [illegible]. ಅ[illegible] ಹೋಗಿ, ಅಲ್ಲಿ [illegible] ಕೆಗೆ [illegible]. ಅಲ್ಲಿಂದ [illegible], [illegible]. [illegible] ದಿಲ್ಲ [illegible].

ಒಂದು [illegible]-

[illegible] ರಂಗವನ್ನು [illegible] ಪಿಡುಸ್ಟ ಮತ್ತು [illegible] ಭಾಗವನ್ನೇ ತೋರಿಸುವರು ಉಳಿದ ಭಾಗವೆಂದರೆ- ಎರಡು [illegible] ವಿರ [illegible] ವಂಥ ಭಾಗದ ಬಾಗಿಲ [illegible] ವರೆಂಬ ರಹಸ್ಯ ಹೊರಬಿದ್ದಿದೆ. [illegible] ಳಿಗೇನೂ ಹೇಳಿಕೊಳ್ಳುವದು [illegible]ವಿಲ್ಲವೇ? ಈ ಬಗ್ಗೆ ಮತ್ತು ಆ ತುರಂಗದಲ್ಲಿಯ ನೂರಾರು ತಕರಾರು- ಅನ್ಯಾಯಗಳ ಬಗ್ಗೆ ಶ್ರೀ. ಗುಂಜಾಳ ನಾರಾಯಣರಾಯರು ಕೌನ್ಸಿಲಕ್ಕೆ ಹಲವು ಪ್ರಶ್ನೆ ಬರೆದುಕಳಿಸಿದ್ದಾರೆ.

ಸೊಲ್ಲಾಪುರದಲ್ಲಿ ಹರತಾಳ-

ಸೊಲ್ಲಾಪೂರದ ಸಾರ್ವಜನಿಕ ಮೇಳಿಗಳ ಆಟ ನಡೆದಾಗ ಅಕಾರಣವಾಗಿ ಪೋಲೀಸರು ಮೇಳಿಯ ಉತ್ಸವದಲ್ಲಿ ಹೊಕ್ಕು ಜನರನ್ನು ಹೊಡೆದ ಸಾರ್ಜಂಟನ ಈ ಅನ್ಯಾಯ ಮತ್ತು ಹಿಂಸೆಯ ಕೃತ್ಯದ ನಿಷೇಧವೆಂದು ಪಟ್ಟಣಿಗರು ಶುಕ್ರವಾರ ದಿವಸ ಹರತಾಳ ಮಾಡಿ, ಎಲ್ಲ ವ್ಯವಹಾರ ನಿಲ್ಲಿಸಿದರು-

---

ಮಹಾತ್ಮರು ಅಲ್ಲಾಬಾದ, ಅಯೋಧ್ಯಾ ಪ್ರಾಂತದಲ್ಲಿ ಸಂಚಾರ ಮಾಡುತ್ತಿದ್ದಾಗ, ಗುಪ್ತ ಪೋಲಿಸರು ಅವರ ನೆರಳಗುಂಟ ಇದ್ದರೇನು? ಇದ್ದರೆ ಕಾರಣವೇನೆಂದು ಪಂಡಿತ ಗೋವಿಂದ ಪಂತರು ಅಲ್ಲಿಯ ಕೌನ್ಸಿಲದಲ್ಲಿ ಪ್ರಶ್ನೆ ಮಾಡಿದ್ದಾರೆ.

ಅಸ್ಪೃಶ್ಯರಿಗಾಗಿ ಎಂಟು ಗುಡಿಗಳ ಬಾಗಿಲ ತೆರೆದವು.

—(೦)—

ಜಬಲಪೂರದಲ್ಲಿ ಶ್ರೀ. ಜಮುನಾಲಾಲ ಬಜಾಜರ ಪ್ರೋತ್ಸಾಹನ ಮತ್ತು ಪ[illegible]ದಿಂದ ಅಸ್ಪೃಶ್ಯರಿಗಾಗಿ ಎಂಟು ಗುಡಿಗಳನ್ನು [illegible] ರ ಮಾಡಿದರು. ಈ ಆನಂದದ ಬಗ್ಗೆ [illegible] ಅಸ್ಪೃಶ್ಯರು ಊರೊಳಗೆ ಪ್ರಚಂಡ [illegible] ತೆಗೆದರು.

ಧ್ವಜಾರೋಹಣ-

[illegible] ಪದಕಸ್ಥಲರ ಪ್ರಕಾರ ನಿನ್ನೆ ದಿವಸ ಈ ಊರಲ್ಲಿ ಧ್ವಜಾರೋಹಣ ಸಮಾರಂಭವಾಯಿತು. [illegible] ಶ್ರೀ. ನಾರಾಯಣರಾವ [illegible] ಇಂಗ್ಲಿಷ ಜನರು [illegible] ಸಿಪಾಯಿ [illegible], ಅದರ ರಕ್ಷಣೆಗಾಗಿ ಜೀವ ಸಹ ಕೊಡಲು ಸಿದ್ಧವಾಗುವಂತೆ [illegible] ನಿಶಾನಿಯ ಗೌರವ ಕಾಯ್ದುಕೊಳ್ಳಬೇಕೆಂದು ಭಾಷಣ ಮಾಡಿದರು. ಬಳಿಕ [illegible] ಮತ್ತು [illegible] ದಿಂದ ಊರೊಳಗೆ [illegible] ಮೆರವಣಿಗೆ ತೆಗೆಯಲ್ಪಟ್ಟಿತು.

ಲಂಚದ ಕಾಯದೆಯಲ್ಲಿ ದುರಸ್ತಿ-

ಸರಕಾರೀ ಅಮಲದಾರರಿಗೆ ಲಂಚ ಕೊಟ್ಟವರಿಗೂ, ತಕ್ಕೊಂಡವರಿಗೂ ಶಿಕ್ಷೆಯುಂಟು. ಖಾಸಗಿ ವ್ಯವಹಾರದಲ್ಲಿ ಲಂಚ ಕೊಡತಕ್ಕೊಳ್ಳುವಂಥವರಿಗೆ ಶಿಕ್ಷೆ ಇಲ್ಲ. ಇಂಗ್ಲಂಡದಲ್ಲಿ [illegible] ಅಕ್ಟವೆಂಬ ಕಾಯದೆಯುಂಟು. ಅಂಥ ಕಾಯದೆಯು ಹಿಂದುಸ್ಥಾನದಲ್ಲಿರುವದಿಲ್ಲ. ಈ ಕಾಯದೆ ಮತ್ತು ಲಂಚದ ಬಗ್ಗೆ ಹೊಸ ನಿಯಮಗಳ ವಿಷಯವಾಗಿ ಪಿನಲಕೋಡಿನಲ್ಲಿ ತಿದ್ದುಪಡಿ ಮಾಡಬೇಕೆಂದು ಶ್ರೀ [illegible] ಮಾಧವರಾಯರು ಅಸೆಂಬ್ಲಿಯಲ್ಲಿ ಠರಾವು ತರತಕ್ಕವರಿದ್ದಾರೆ.

ಕರ್ನಾಟಕ ಕಾಂಗ್ರೆಸ ಕಮಿಟಿ-

ಎರಡು ದಿವಸ ಇಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ವಾರ್ಷಿಕ ಸಭೆಯಾಯಿತು. ಶ್ರೀ. ರಂಗರಾವ ದಿವಾಕರರು ಮುಂದಿನ ವರ್ಷದ ಬಗ್ಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಕಮೀಟಿಗಾಗಿ ಬಂದ ಪ್ರಮುಖರು ನಿನ್ನಿನ ದಿವಸ ವಸಾಹತಿನ ಸ್ವರಾಜ್ಯ ವಿಚಾರವನ್ನು ಕುರಿತು ಜಾಹೀರ ವ್ಯಾಖ್ಯಾನ ಕೊಟ್ಟರು. ಹೈದರಾಬಾದಿನ ಬ್ಯಾರಿಸ್ಟರ ವಾಮನ ನಾಯಕ ಮೊದಲಾದ [illegible] ರಿನ ಗೃಹಸ್ಥರು ಕಮೀಟಿಗೆ ಬಂದಿದ್ದರು.

ಗೊತ್ತುಪಡಿಸುವ ಮಂಡಲವನ್ನು ನಿರ್ಮಿಸುವದು
೬ ಅಧ್ಯಕ್ಷರಿಂದ ಬಂದ ಅನ್ಯ ವಿಷಯಗಳು

ತಮ್ಮ
ಶಾ. ಶ್ರೀ. ಕಮಲಾಪೂರ.
ವೆ ಶ್ರೀ ಮೀಜಿ
ರು ಘ. ಸಂಕಣ್ಣವರ.
ಕಾರ್ಯದರ್ಶಿಗಳು

ಸೊಲ್ಲಾಪೂರದ ಹರತಾಳ-

ಪೋಲಿಸ ಸಾರ್ಜಂಟರು ಸೊಲ್ಲಾಪೂರದಲ್ಲಿ ಮೇಳೆಯ ಹುಡುಗ- ಹುಡುಗಿಯರನ್ನು ಕೆಲ ಪ್ರಮುಖರನ್ನು ಹೊಡೆದರಷ್ಟೇ; ಸಾರ್ಜಂಟರ ಈ ದುಷ್ಕೃತ್ಯಕ್ಕೆ ತೀಕ್ಷ್ಣ ಮಾಡುವದೊಂದೆಡೆಗೆ ಉಳಿಯಿತು. ಪ್ರಮುಖರಲ್ಲಿ ಕೆಲವರನ್ನು ಹಿಡಿದು, ಸಾರ್ವಜನಿಕ ಬೀದಿಯ ವ್ಯವಹಾರಕ್ಕೆ ವಿಘ್ನ ತಂದರೆಂದು ಪ್ರತಿಯೊಬ್ಬರಿಗೆ ಹತ್ತತ್ತು ರೂಪಾಯಿ ದಂಡ ಮಾಡಿಸಿದರು. ವಸಾಹತಿಕ ಸ್ವರಾಜ್ಯ ದೊರೆಯುವ ಭಾವೀ ಸುಚಿನ್ಹವೇ ಸರಿ!

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳಿಯ ಮುಟ್ಟಿನ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇಸಿಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ನ್ಯಷ್ಠರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ ಅಂಚೆಖರ್ಚ ಇಲ್ಲ. ಈ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ವಿಧ್ಯಬ್ಯಾಂಕ ಧಾರವಾಡ

ಪತ್ರ ಬರೆಯುವಾಗ ಯಾವ ವರ್ತಮಾನಪತ್ರದ ಜಾಹೀರಾತಿನಿಂದ ಈ ಔಷಧಿಯನ್ನು ತರಿಸಿಕೊಳ್ಳುವದನ್ನು ಬರೆಯಬೇಕು.

ಜಾಹೀರ ನೋಟೀಸು

ಹುಸೇನಬಿ ಕೋಂ ಬುಡ್ಡಣಸಾಬ ವಂಟಿಗಾಣಿಗೇರ ಸಾ|| ಮುದಕಟ್ಟಿ ತಾ|| ಬಾಗಲಕೋಟ ಪೋಸ್ಟ ಕೆರೂರ ಇವಳಿಗೆ-

ನಾನು ಕೆಳಗೆ ಸಹಿ ಮಾಡಿದ ಬುಡ್ಡಣಸಾಬ ವಲ್ಲದ ರಿಂದೇಸಾಬ ವಂಟಿಗಾಣಿಗೇರ ಸಾ|| ನರಗುಂದ ನೋಟೀಸ ಕೊಡುವ ದೇನಂದರೆ- ನೀನು ನೀನು ನನ್ನ ಎರಡನೇ ಲಗ್ನದ ಹೆಂಡತಿಯಿದ್ದು ನೀನು ಕೆಲವು ದಿವಸ ಬಾಳುವೆಮಾಡಿದಿ ಹೆಣ್ಣು ಅಗರ ಗಂಡುಮಕ್ಕಳು ಹುಟ್ಟದಲೆ ನೀನು ನಿನ್ನ ತವರ ಮನೆಗೆ ಹೋಗಿಬರುತ್ತೇನೆ ಅಂತಾ ನನ್ನ ಮಾಲ್ಕಿ ವುಳ್ಳ ೬ ತೊಲಿ ಬಂಗಾರದ ಬಳೆ ಜೋಡು, ೧೨ ತೊಲಿ ಬೆಳ್ಳಿ ಸರಿಗಿ, ೧೨ ತೊಲಿ ಬೆಳ್ಳಿ ಪಟ್ಟಿ, ೮ ತೊಲಿ ಬೆಳ್ಳಿ ಖಡೆ ವ ಕಾಪಡ ಸಾಮಾನ ವಗೈರೆ ತಗೊಂಡು ಹೋಗಿ ೩ ವರ್ಷಗಳಾದವು ನಾನು ಅನೇಕ ಸಾರೆ ಬರಲಿಕ್ಕೆ ಹೇಳಕಳಿಸಿದರೆ- ಈ ವರೆಗೂ ಬರಲಿಲ್ಲಾ ಕಾರಣ ನೀನು ಈ ನೋಟೀಸ ಮುಟ್ಟಿದ ೮ ದಿವಸಗಳಲ್ಲಿ ಮೇಲೆ ಬರೆದ ನನ್ನ ಸಾಮಾನ ತಗೊಂಡು ಬಂದು ಬಾಳುವೆಮಾಡಬೇಕು - ಜರ ಮುದ್ದತಿ ವಳಗಾಗಿ ಬಂದಿದ್ದರ ಇದೇ ಫಾರೀಕತ್ತು ಇರುತ್ತದೆ ನೀನು ನಿನ್ನ ಮರ್ಜಿ ಬಂದವರನ್ನು ಲಗ್ನಮಾಡಿಕೋಬೇಕು ವ ನಾನು ನನ್ನ ಮರ್ಜಿ ಬಂದವರಿಗೆ ಲಗ್ನಮಾಡಿಕೋತೇನೆ ನನ್ನ ಯಾವ ಜಸ್ತಿ ಮೇಲೆ ನಿನ್ನ ಯಾವ ತರದ ಹಕ್ಕು ಇರುವದಿಲ್ಲಾ ನೀನು ಉಡಿಕೆ ಮಾಡಿಕೊಳ್ಳದೆ ಹಾಗೆ ಉಳಿದು ಮುಂದೆ ಪೋಟಗಿ ಬೇಡಿದರೆ ಅದು ಹಿಂದಿನ ಮುಂದಿನ ದೆಸೆಯಿಂದ ಬಿಲಕೂಲ ದೊರೆಯಲಾರದು ಈ ನೋಟೀಸಿನ ಖರ್ಚು ನಿನ್ನ ಮೇಲೆ ಇರುತ್ತದೆ ಅಂತಾ ಕೊಟ್ಟ ನೋಟೀಸು

ತಾ| ೨೫-೧೧-೨೯

ಈ ಎಡಗೈ ಹೆಬ್ಬಟಿನ ಗುರ್ತ ಬುಡ್ಡಣಸಾಬ ವಲ್ಲದ ರಿಂದೇಸಾಬ ವಂಟಿಗಾಣಿಗೇರ ಸಾ| ನರಗುಂದ ಈತನ ಕೈದು ಅದೆ

ಜಾಹೀರ ನೋಟೀಸ

ಮರಿಯಂಬೀ ಕೋಂ ಬುಡ್ಡಣಸಾಬ ವಂಟಿಗಾಣಿಗೇರ ಅಸೂಟಿ ಸಂಸ್ಥಾನ ರಾಮದುರ್ಗ ಇವಳಿಗೆ-

ನಾನು ಕೆಳಗೆ ಸಹಿ ಮಾಡಿದ ಬುಡ್ಡಣಸಾಬ ರಿಂದೇಸಾಹೇಬ ವ|| ವಂಟಿಗಾಣಿಗೇರ ಸಾ|| ನರಗುಂದ ಪೈಕಿ ಪೇಟೆ ನರಗುಂದ ಈತನು ಕೊಡುವ ಜಾಹೀರ ನೋಟೀಸ ಏನಂದರೆ ನೀನು ನನ್ನ ಮೊದಲನೇ ಹೆಂಡತಿಯು ಇದ್ದು ನೀನು ಈಗ ೧೨-೧೩ ವರ್ಷದ ಹಿಂದೆ ಮಕ್ಕಳು ಇಲ್ಲದೆ ನನ್ನನ್ನು ಬಿಟ್ಟು ತವರ ಮನಿಗೆ ಹೋಗುವಕಾಲಕ್ಕೆ ನನ್ನ ಬಾಬತ್ತ ೫ ತೊಲಿ ಬಂಗಾರದ ಬಳೆ ಜೋಡು ಒಂದು ೧೨ ತೊಲಿ ಬೆಳ್ಳಿ ಸರಿಗಿ ಒಂದು ೮ ತೊಲಿ ಖಡೆ ೧೨ ತೊಲಿ ಪಟ್ಟಿ ವಗೈರೆ ವ ಕಾಪಡ ಸಾಮಾನ ತಗೊಂಡು ಹೋದಿ ವ ತಿರಗಿ ಬರಲಿಲ್ಲಾ ನಾನು ನಿನಗೆ ಅನೇಕಸಾರೆ ಬರಲಿಕ್ಕೆ ಹೇಳಕಳಿಸಿದರೆ ಬರಲಿಲ್ಲಾ ಕಾರಣ ನಾನು ನಿನ್ನನ್ನು ಬಿಟ್ಟು ಇನ್ನೊಬ್ಬಾಕೆ ಹುಸೇನಬಿ ಎಂಬಾಕೆಯನ್ನು ಲಗ್ನ ಮಾಡಿಕೊಂಡೆ ಆಕೆಯು ಕೆಲವು ದಿವಸ ಬಾಳುವೆ ಮಾಡಿ ಬಿಟ್ಟು ಹೋದಳು ಕಾರಣಾ ನೀನು ಈ ನೋಟೀಸ ಮುಟ್ಟಿದ ೮ ದಿವಸಗಳಲ್ಲಿ ಮೇಲೆ ಬರೆದ ಯಾವತ್ತೂ ದಾಗೀನೆ ತಗೊಂಡು ಬಂದು ಬಾಳುವೆ ಮಾಡಬೇಕು ಜರ ಬರದಿದ್ರೆ ಇದೇ ನನ್ನ ಫಾರೀಕತ್ತು ನೀನು ಮರ್ಜಿ ಬಂದವರಿಗೆ ಲಗ್ನ ಮಾಡಿಕೋಬೇಕು ವ ನಾನು ನನ್ನ ಮರ್ಜಿ ಪ್ರಕಾರ ಎರಡನೇ ಲಗ್ನ ಮಾಡಿಕೋತೇನೆ ನೀನು ನನ್ನ ಮನಿ ಬಿಟ್ಟು ಹೋದಲಾಗಾಯಿತ ಬರಲೇ ಇಲ್ಲಾ ಕಾರಣಾ ಈ ನೋಟೀಸು ಕೊಟ್ಟಿರುತ್ತೇನ ವ ನನ್ನ ಯಾವ ಜಸ್ತಿ ಮೇಲೆ ನಿನ್ನ ಯಾವ ತರದ ಹಕ್ಕು ಇರುವದಿಲ್ಲಾ ನೀನು ಉಡಿಕೆ ವಗೈರೆ ಮಾಡಿಕೊಳ್ಳದೆ ಹಾಗೆ ಉಳಿದು ಪೋಟಗಿ ಬೇಡಿದರೆ- ಹಿಂದಿನ ಮತ್ತು ಮುಂದಿನ ಉಪಬೋಗ ವದಿಸಯಿಂದ ಬಿಲಕೂಲ ಪೋಟಗಿ ದೊರೆಯಲಾರದು ಈ ನೋಟೀಸಿನ ಖರ್ಚ ನಿನ್ನ ಮೇಲೆ ಇರುತ್ತದೆ ತಿಳಿಯುವದು ತಾ||೨೫-೧೧-೧೯೨೯ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಬುಡ್ಡಣಸಾಬ ವಲ್ಲದ ರಿಂದೇಸಾಬ ವಂಟಿಗಾಣಿಗೇರ ಸಾ|| ನರಗುಂದ ಹಾಲಿವಸ್ತಿ ಧಾರವಾಡ ಈತನ ಕೈದು ಅದೆ

ಈ ಪತ್ರವನ್ನು ಅಂಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- [illegible]

ವರ್ಷ ೧೦) ಧಾರವಾಡ ಬುಧವಾರ ತಾರೀಖು ೨೭ನೇ ನವ್ಹೆಂಬರ ೧೯೨೯ (ಸಂಚಿಕೆ ೨೫೪?

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ.

ಮಂಗಳವಾರ ಪೇಠ ಜೋಗ ವಕೀಲರ ಮನೆಯಲ್ಲಿ.

ದಾಗೀನೆಗಳ ವತ್ತೀ ಮೇಲೆ ಸೋಯಿ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಿರುವದು. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ಮತ್ತು ಬೆಳ್ಳಿ ದಾಗೀನೆಗಳ ಮೇಲೆ ಸೋಯಿ ಬಡ್ಡೀ ದರದಿಂದ ಸಾಲ ಕೊಡುವ ವ್ಯವಸ್ಥೆಯುಂಟು. ದಾಗೀನೆ ವತ್ತೀ ಇಟ್ಟವರು ಮೊದಲನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ ೧೫ ದಿವಸಕ್ಕೊಮ್ಮೆ ಎಷ್ಟೇ ರಕಮು ತಂದು ಕೊಟ್ಟರೂ ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಎಷ್ಟೆಷ್ಟೇ ರಕಮು ಕೊಡುವದರಿಂದ, ಸಾಲದ ಭಾರ ಕಡಿಮೆಯಾಗಿ, ಬಡ್ಡಿಯೂ ಕಡಿಮೆಯಾಗುತ್ತಾ ಬರುವದು. ಧಾರವಾಡ ಮುಂತಾದ ಪಟ್ಟಣವಾಸಿಗಳು ಈ ಸೋಯಿಯ ಲಾಭ ತಕ್ಕೊಳ್ಳುತ್ತಿದ್ದಾರೆ. ಇದರ ಅನುಕೂಲತ ಮತ್ತು ಉಪಯೋಗವ ಹಳ್ಳಿಯ ಜನರಿಗೂ ದೊರೆಯಲೆಂದು ಈ ಜಾಹೀರಾತು ಪ್ರಸಿದ್ಧ ಮಾಡಿ, ಹಳ್ಳಿಗರಿಗೆ ತಿಳಿಸಿದ್ದೇವೆ. ಹಳ್ಳಿಯಲ್ಲಿ ಬಡ್ಡಿಯ ದರವು [illegible] ಇಂದ ಆರು ಪಟ್ಟ ಇರುತ್ತದೆ. ಅದೂ ಒಮ್ಮೆಲೆ ಕೊಡಬೇಕಾಗುತ್ತದೆ, [illegible] ಎಷ್ಟೋ [illegible] ಇಲ್ಲ; ತೀರಿಸಿದ ನಂತರ ದಾಗೀನೆಗಳು [illegible] ಅಸಲು ಮತ್ತು ಬಡ್ಡಿಯಲ್ಲಿ ಮುಳುಗಿಹೋಗುತ್ತವೆ. ಆ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ದಾಗೀನೆ ವತ್ತೀ ಇಟ್ಟರೆ ಆಗುವದಿಲ್ಲ. ಏಕೆಂದರೆ ಸ್ವಲ್ಪ ರಕಮು ಕೊಟ್ಟರೂ ಅದನ್ನು ತಕ್ಕೊಂಡು, ಸಾಲದ ಭಾರವನ್ನು ಕಡಿಮೆಮಾಡುತ್ತಾ ಬರುತ್ತೇವೆ. ಇಂಥ ಸೋಯಿಯು ಹಳ್ಳಿಗಳಲ್ಲಿ ದೊರೆಯಲಾರದು. ಆದ್ದರಿಂದ ಹಳ್ಳಿಯಲ್ಲಿ ಸಾಲ ಬೇಕಾದವರು ನಮ್ಮ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ, ಅನುಭವ ಮತ್ತು ಲಾಭ ಪಡೆಯಬೇಕು. ನಮ್ಮ ಬಡ್ಡೀ ದರವು ನೂರು ರೂಪಾಯಿಯ ವರೆಗೆ ಒಂದು ತಿಂಗಳಿಗೆ ಒಂದು ರೂಪಾಯಿಗೆ ಎರಡು ಪೈ ಇರುತ್ತದೆ. ನೂರರ ಮೇಲಿನ ರಕಮಿನ ಬಡ್ಡೀ ದರ ಸಮಕ್ಷಮ ಅಥವಾ ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಗಳ ಜನರು ಶಹರದ ಊರಿಗೆ [illegible] ಸಾವಕಾರ ಮೊದಲಾದವರಲ್ಲಿ ಅವರು ಕೇಳಿದಷ್ಟು ಬಡ್ಡೀ ಕರಾರ ಮಾಡಿ ಸಾಲ ತೆಗೆದುಕೊಳ್ಳುವರು. ಮತ್ತು ಮುಂದೆ ಲೆಕ್ಕ ತಿಳಿಯದೆ ಲುಕ್ಸಾನ ಮಾಡಿಕೊಳ್ಳುವರು. ಹೀಗೆ ಬ್ಯಾಂಕಿನಲ್ಲಿ ಮಾತ್ರ ಆಗುವದಿಲ್ಲ. ಹಳ್ಳಿಗಳ ಜನರು ನಮ್ಮಲ್ಲಿ ಒಂದಾವರ್ತಿ ವ್ಯವಹಾರ ಮಾಡಿ ಖಾತ್ರೀ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಘಟ್ಟಿಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ ಎಲ್ಲರಕ್ಕಿಂತಲೂ ಸೋಯಿಯಿಂದ ಸಿಗುವದು.

ಕೃಷ್ಣರಾವ ವೆಂಕಟರಾವ ಧಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗಳು ಎಂಟು ಲಕ್ಷದ ಮೇಲುಂಟು. ಚಕು, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.

ಮ್ಯಾನೇಜಿಂಗ ಡಾಯರೆಕ್ಟರ.

[illegible] ಬ್ಯಾಂಕ [illegible]

[illegible]

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦?
೬ ,,	೬-೨-೦?
೪ ,,	೪-೦-೦?
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦?

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ವಿಜಯ ಮ್ಯಾನೇಜರ ಧಾರವಾಡ.

ವಿಜಯ.

ಧಾರವಾಡ ತಾ॥ ೨೭-೧೧-೨೯ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಪ್ರಿಯು
ಶ್ರೀ ವಸುಧಾತಿಯು ನಲಿಸಿದ ಸುಹಿತಕರಸೀಳಿಂ ೧
ದ " ವಿಜಯಂ " ಶ್ರೀಕಳರುಣ
ವಾ ವಿಹಿತಂಗಳ ವಿವರಿಸಲಿಪ್ಪುದು ಸಾಜಾ ॥೧॥

ವಿಜಾಪೂರ ಮ್ಯುನಿಸಿಪಾಲಿಟಿಯ ಅಧ್ಯಕ್ಷರ ದಸ್ತಗಿರಿ.

—(೦)—

ಮ್ಯುನಿಸಿಪಾಲಿಟಿಯ ದ್ರವ್ಯಾಪಹಾರಮಾಡಿದ ಆರೋಪ.

—(೦)—

ವಿಜಾಪೂರ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ವಿ. ಅಂಗಡಿಯವರ ಮೇಲೆ ಮ್ಯುನಿಸಿಪಾಲಿಟಿಯ ದ್ರವ್ಯಾಪಹಾರಮಾಡಿದ ಆರೋಪ ಹೊರಿಸಿ ಅವರನ್ನು ದಸ್ತಗಿರ ಮಾಡಿದಂತೆ ವರ್ತಮಾನ ಬಂದಿದೆ. ಈ ಆರೋಪದ ಅಲ್ಪ ಸಂಗತಿಯು ಮುಂದೆ ಕೊಟ್ಟೇತಿರುತ್ತದೆ.

ಬರಗಾಲದಲ್ಲಿ ನೆರವೆಂದು ನೇಯಕಾರರಿಗೆ ಮ್ಯುನಿಸಿಪಾಲಿಟಿಯಿಂದ ಸ್ವಲ್ಪ ಸ್ವಲ್ಪ ರಕಮುಗಳ ಸಾಲ ಕೊಟ್ಟಿತು. ಮುಂದೆ ಈ ಸಾಲ ವಸೂಲಿಗಾಗದವರ ಮೇಲೆ ದಿವಾಣಿಯಲ್ಲಿ ದಾವೆ ಮಾಡಲು ವಿ. ಅಂಗಡಿಯವರಿಗೆ ವಕೀಲಿ ಕೊಡಲ್ಪಟ್ಟಿತು. ಕೋರ್ಟಿನ ಡಿಕ್ರಿಯಾಯಿತು. ವಿ. ಅಂಗಡಿಯವರು ಈ ರಕಮನ್ನು ವಸೂಲ ಮಾಡಿಕೊಂಡರು. ಆದರೆ ಮ್ಯುನಿಸಿಪಾಲಿಟಿಗೆ ಜಮೆ ಮಾಡಲಿಲ್ಲ. ಈ ಸಂಗತಿ ನಡೆದ ಬಳಿಕ ವಿ. ಅಂಗಡಿಯವರು ಅಧ್ಯಕ್ಷರಾದರು. ಡಿಕ್ರಿಯಿಂದ ವಸೂಲಾದ ರಕಮು ಖಟ್ಲೆ ಬಾಕಿಯಾಗಿದೆಂದೂ, ಇದನ್ನು ವಜಾಮಾಡಬೇಕೆಂದೂ ಮ್ಯುನಿಸಿಪಾಲಿಟಿಯಲ್ಲಿ ಠರಾವು ಪಾಸ ಮಾಡಿಕೊಂಡರು. ಇವರ ಆಳಿಕೆ ಮುಗಿದು ಬೇರೆಯವರು ಅಧ್ಯಕ್ಷರಾದ ಬಳಿಕ, ಖಟ್ಲೆ ಬಾಕಿಯ ಠರಾವನ್ನು ರದ್ದುಮಾಡಿ, ಋಣಕೋ ಜನರಿಂದ ವಸೂಲುಮಾಡಬೇಕೆಂಬ ಠರಾವು ಬಂತು. ಆಗ ಋಣಕೋ ಜನರು ತಾವು ರೊಕ್ಕ ಕೊಟ್ಟಂತೆ ಪಾವತಿಗಳನ್ನು ತೋರಿಸಿದರು ರೊಕ್ಕ ಬಂದದ್ದು ನಿಜ. ತನ್ನ ಕಾರಕೂನನ ದುರ್ಲಕ್ಷ್ಯದಿಂದ ಜಮೆಯಾಗಲಿಲ್ಲೆಂದು ಹೇಳಿ, ವಿ. ಅಂಗಡಿಯವರು ಆ ರಕಮನ್ನು ಜಮೆಮಾಡಿದರು. ಈ ಪ್ರಕರಣವು ಪೋಲೀಸ ತಪಾಸಣೆಗೆ ಹೋಯಿತು. ಅವರು ಪೂರ್ಣ ವಿಚಾರ ಮಾಡಿದರು. ಇಷ್ಟರಲ್ಲಿ ಶ್ರೀ ಕೌಜಲಗಿಯವರ ಸ್ಥಳದಲ್ಲಿ ಇವರನ್ನು ಅಧ್ಯಕ್ಷರಾಗಿ ಆರಿಸಬೇಕೆಂಬ ಆಲೋಚನೆ ನಡೆಯಿತು ಇದೇ ವಿಷಯವಾಗಿ ಜನರಲ ಕಮಿಟಿ ಕೂಡಿದಾಗ ವಿ. ಅಂಗಡಿಯವರ ಮೇಲೆ ಆರೋಪವುಂಟು. ವಿಚಾರಣೆ ನಡೆದಿದೆ ಅವರನ್ನು ಅಧ್ಯಕ್ಷರಾಗಿ ಆರಿಸಬೇಡಿರೆಂದು ಶ್ರೀ ಕೌಜಲಗಿಯವರು ಕೂಡಿದ ಸಭೆಯಲ್ಲಿ ಹೇಳಿದರು. ಆದರೂ ಮೆಂಬರರು ಬಹುಮಾನದಿಂದ ಇವರನ್ನು ಅಧ್ಯಕ್ಷರನ್ನಾಗಿ ಮಾಡಿದರು ಅಧ್ಯಕ್ಷರಾಗಿ ಒಂದು ತಿಂಗಳು ಕೂಡ ಆಗಿಲ್ಲ. ಇಷ್ಟರಲ್ಲಿ ದಸ್ತಗಿರಿಯ ಸಂಕಟ ಬಂದಿರುತ್ತದೆ. ಸದ್ಯ ಇವರು ಜಾಮೀನದ ಮೇಲಿದ್ದಾರೆ.

ರಾವುಂಡ ಟೇಬಲಿನ ಒಂದು ವಿಶೇಷ.

ರಾವುಂಡ ಟೇಬಲಿನ ಬಗ್ಗೆ ಹಿಂದುಸ್ಥಾನದ ಕುರಿತು ಸಾಕಷ್ಟು ಚರ್ಚೆ ನಡೆದಿದೆ. ಅದರಿಂದೇನೂ ಪ್ರಯೋಜನವಾಗಲಾರದೆಂದು ಒಂದು ಮತ; ತಕ್ಕಮಟ್ಟಿಗಾದರೂ ಹಿತವಾಗುವದೆಂದು ಮವಾಳರ ಮತ ನೀವು ವಸಾಹತಿನ ಸ್ವರಾಜ್ಯವನ್ನು ಕೊಡುತ್ತಿರೋ ಇಲ್ಲವೋ ತಿಳಿಯುವದಕ್ಕಾಗಿ ನಮ್ಮನ್ನು ವಿಲಾಯತಿಗೆ ಕರೆಯುವದು ನಿಜ. ಆದರೆ ಆ ಬಗ್ಗೆ ಒರೇ ಮೇಲೋಷ ಚಾರದ ಮಾತುಗಳನ್ನಾಡದೆ, ಅದರ ಘಟನೆಯನ್ನು ಸಿದ್ಧ ಪಡಿಸುವದಕ್ಕೇ ಕರೆಯುತ್ತೀರೆಂದು ನಮ್ಮ ಖಂಡಿತವಾದ ತಿಳುವಳಿಕೆ ಎಂದು ಸರ್ವಪಕ್ಷೀಯರು ಬ್ರಿಟಿಶ ಮುತ್ಸದ್ದಿಗಳನ್ನುದ್ದೇಶಿಸಿ ಉದ್ಗಾರ ತೆಗೆದಿದ್ದಾರೆ. ರಾವುಂಡ ಟೇಬಲ ಪರಿಷತ್ತು ಬ್ರಿಟಿಶ ಮುತ್ಸದ್ದಿಗಳ ತಲೆಯಿಂದಲೇ ಹೊರಟಿಲ್ಲ. ಹಿಂದೀ ಜನರು ಮುಂದಾಗಿ ಹೇಳಿದಂಥ ಮಾತು. ಕಮಿಶನದ ಫಾರ್ಸ ಮಾಡಬೇಡಿರಿ ಹೀಗೇ ಯೋಜನೆ ಸುಕ್ತಲು ಮಿತ್ರರಂತೆ ಕೂತು, ಹಿಂದುಸ್ಥಾನದ ಭವಿತವ್ಯದ ಪ್ರತ್ಯಲಿಖಿತವನ್ನು ಬರೆಯುವಾ ಎಂಬದಾಗಿ ಇವರು ಹೇಳುತ್ತಾ ಬಂದಿದ್ದರ ಅನುವಾದವನ್ನೇ ಬ್ರಿಟಿಶ ಮುತ್ಸದ್ದಿಗಳು ಮಾಡಿರುತ್ತಾರೆ. ಈ ಅನುವಾದವು ಯಾವ ಸ್ವರೂಪದಿಂದ ಪೂರ್ಣವಾಗುವದೆಂಬದನ್ನು ಸದ್ಯ ನೋಡಬೇಕಾಗಿದೆ. ಈ ಟೇಬಲಿಗಾಗಿ ವಿಲಾಯತಿಗೆ ಹೋಗುವಂಥ ಜನರು ಆತ್ಮವಿಶ್ವಾಸದಿಂದಲೂ ಸಂತೋಷದಿಂದಲೂ ಪ್ರಯಾಣ ಬೆಳೆಯಿಸಬೇಕಾದರೆ- ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡುವದು ಅವಶ್ಯವದೆ ಕೈದಿಗಳನ್ನು ಬಿಡುವಿರಾ ಎಂದು ಕೇಳಿದ ಪ್ರಶ್ನಕ್ಕೆ ಮೆ. ವೆಜ್ವುಡ್ಬೆನ್ ಸಾಹೇಬರು ಸರಕಾರದ ಉತ್ತರ ಕೊಟ್ಟಿದ್ದಾರೆ. ಇವರು ಹೀಗೆ ಉತ್ತರ ಕೊಟ್ಟರೂ, ವಾಯ್ಸರಾಯ ಆಯರ್ವಿನಸಾಹೇಬರು ಕೈದಿಗಳನ್ನು ಬಂಧಮುಕ್ತ ಮಾಡಿಸಬಹುದೆಂದೂ, ಅವರಲ್ಲಿ ವಿಶ್ವಾಸವಿಡಬಹುದೆಂದೂ ಕೆಲವರ ಮತವಾಗಿದೆ.

ವಿಲಾಯತಿಗೆ ಹೋಗುವ ಜನರಲ್ಲಿ ಕಾಂಗ್ರೆಸ ಪಕ್ಷದವರ ಸಂಖ್ಯೆಯು ಹೆಚ್ಚಿರಬೇಕೆಂದು ಹೇಳುವದು ನ್ಯಾಯವಾಗಿದೆ ಯಾಕೆಂದರೆ- ಸ್ವರಾಜ್ಯದ ದೆಸೆಯಿಂದ ಸಂಕಟ ಪಟ್ಟವರು, ಸಂಕಟಕಾಲದಲ್ಲಿ ಈಸುತ್ತಿರುವಂಥವರು ಕಾಂಗ್ರೆಸದವರೇ ಆಗಿದ್ದಾರೆ. ಅದ್ದರಿಂದ ಹೆಚ್ಚು ಪ್ರತಿನಿಧಿಗಳನ್ನು ಕಳಿಸುವ ಹಕ್ಕು ಇವರಿಗೇ ಇರುತ್ತದೆ. ಲಿಬರಲ ಮುಂತಾದವರು- ಬಾಕ್ಸ ಗೋತರರು ಸರ್ವತ್ರ ಪರಿಪೂರ್ಣರಾಯಿತೆಂದು ಎಷ್ಟು ಬೇಕಾದಷ್ಟು ಹೇಳಲಿ; ಕಾಂಗ್ರೆಸವು ಹಾಗೆ ಅನ್ನದಿದ್ದರೆ- ಎಲ್ಲವೂ ವ್ಯರ್ಥವೇ ! ಆದ್ದರಿಂದ ಕಾಂಗ್ರೆಸವು ಸಮಾಧಾನ ಹೊಂದಿದರೇ- ವಿಲಾಯತಿಗೆ ಹೋದ ಜನರ ಶ್ರಮದ ಸಾರ್ಥಕವಾಗ ವದು. ಕಾಂಗ್ರೆಸಕ್ಕೆ ಜಾತಿಯ ಅಭಿಮಾನವಿಲ್ಲ. ತತ್ವದ ಅಭಿಮಾನವುಂಟು. ನೆಹರು ರಿಪೋರ್ಟ ಪ್ರತ್ಯಕ್ಷ ಪ್ರಮಾಣವಾಗಿರುತ್ತದೆ ಅದ್ದರಿಂದ ಅಸಂಚಿತ ವಿಚಾರದ ಜನರನ್ನು ವಿಲಾಯತಿಗೆ ಕಳಿಸುವ ಹವ್ಯಾಸಕ್ಕೆ ಬೀಳದೆ, ಹೆಚ್ಚಾಗಿ, ಬಹುಮತವಾಗುವಂತೆ ಕಾಂಗ್ರೆಸದ ಪ್ರತಿನಿಧಿಗಳನ್ನು ವಿಲಾಯತಿಗೆ ಕಳಿಸುವಂತೆ ಭಾರತೀಯರು ಪ್ರಯತ್ನ ಶೀಲರಾಗುವದು ಅವಶ್ಯಕವಾದದ್ದು.

ನಂಬಿಗೆ ಇಲ್ಲ-

ಬ್ರಿಟಿಶ ಸರಕಾರದ ದುಂಡು ಮೇಜಿನ ಪರಿಷತ್ತಿನಲ್ಲಿ ನಂಬಿಗೆ ಇಲ್ಲೆಂದು ಅನೇಕರು ಹೇಳುತ್ತಾ ಬಂದಿದ್ದಾರೆ ಇವರಲ್ಲಿ ಮದ್ರಾಸದ ಶ್ರೀ. ಸಾಂಬ ಲಕ್ಷ್ಮೀಪತಿಯಮ್ಮನವರೊಬ್ಬರಾಗಿದ್ದಾರೆ. ರಾವುಂಡ ಟೇಬಲದಿಂದ ಹಿತಕರವಾದ ಯಾವ ಪ್ರಯೋಜನವೂ ಆಗಲಾರದು. ಸ್ತ್ರೀಯರು ತಮ್ಮಲ್ಲಿ ಸಂಘಟನೆಯನ್ನುಂಟು ಮಾಡಿಕೊಂಡು, ರಾಷ್ಟ್ರೀಯ ಧ್ಯೇಯಸಾಧನೆಗಾಗಿ ಪುರುಷರ ಕೂಡ ಸಹಕಾರ ಮಾಡಬೇಕೆಂದು ಇವರು ಅಭಿಪ್ರಾಯಪಟ್ಟಿದ್ದಾರೆ.

ವಿಚಿತ್ರ ಪದ್ಧತಿ-

ಹಿಂದುಸ್ಥಾನದಲ್ಲಿ ಮನೆ- ಮಠ, ಗುಡಿ- ಗುಂಡಾರಗಳಿಗೆ ನಂಬರ ಹಾಕುವದು ಇಂಗ್ಲಿಷರಿಂದಲೇ ಬಂದಿದೆ. ಆದರೆ ಇಂಗ್ಲಂಡದಲ್ಲಿಯ ಚಮತ್ಕಾರ ಕೇಳಿರಿ. ಜನರು ತಮ್ಮ ಮನೆಗಳ ನಂಬರು ಕಾಣಿಸಿದಂತೆ ಅವನ್ನು ತಿಕ್ಕಿ ಅಸ್ಪಷ್ಟ ಮಾಡುವರು. ಬಹುತೇಕವಾಗಿ ಅಳಿಸಿದಂತೆ ಮಾಡಿಬಿಡುವರು ರಾತ್ರಿಯಂತೂ ಕಾಣಿಸುವದೇ ಇಲ್ಲ. ಮನೆಯ ನಂಬ

ರಿನ ಮೇಲೆ ಗುರ್ತು ಹಿಡಿಯಲಿಕ್ಕೆ ಹೋಗುವವನ ಫಜೀತಿಯಾಗಿ ಹೋಗುತ್ತದೆ.

ಮೀರತದ ಆರೋಪಿಗಳ ಜವಾಬುಗಳು.

ಮೀರತದ ಆರೋಪಿಗಳ ವಿಚಾರಣೆಯು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಮುಗಿದು, ಆರೋಪಿಗಳ ಜವಾಬು ನಡೆದಿವೆ. ಎಲ್ಲ ಆರೋಪಿಗಳು ಜವಾಬು ಕೊಟ್ಟಿಲ್ಲ. ಕೆಲವರು ಮಾತ್ರ ಕೊಟ್ಟಿದ್ದಾರೆ. ಉಳಿದವರು ಸೆಶನ್ಸ-ಕೋರ್ಟಿನಲ್ಲಿ ಜವಾಬು ಕೊಡುವರು. ಜವಾಬು ಕೊಟ್ಟಿರುವ ಕೆಲವರ ಜವಾಬುಗಳು ಮುಂದೆ ಕೊಡಲ್ಪಟ್ಟಿರುತ್ತವೆ.

ಮಿ ಸ್ಪ್ರಾಟ

ನಾನೊಬ್ಬ ಪುಸ್ತಕ ವ್ಯಾಪಾರಿಯು. ನನ್ನ ಪಾಸಪೋರ್ಟಿನಲ್ಲಿ ಹಾಗೇ ಬರೆದಿದೆ. ನನ್ನ ಜಂಗಮ ಜೊಂದಿಗೆ ಜಪ್ತ ಮಾಡಿದ್ದರ ವಿಷಯವಾಗಿ ಅಥವಾ ನಾನು ಬೊಲ್ಸೆವಿಕನಿದ್ದೇನೆಂಬ ವಿಷಯವಾಗಿ ಈಗೇನೂ ಹೇಳುವದಿಲ್ಲ. ಬ್ರಾಟಿಶ ರಾಜ್ಯವನ್ನು ಬುಡಮೇಲ ಮಾಡಬೇಕೆಂದು ಎಂದೂ ನನ್ನ ಇಚ್ಛೆ ಇರಲಿಲ್ಲ.

ಕಿಶೋರಿಲಾಲ ಘೋಷ-

ನನ್ನ ಮೇಲೆ ತಂದ ಒಳಸಂಚಿನ ಆರೋಪವು ಪೂರಾ ಸುಳ್ಳು. ನಾನು ಬೊಲ್ಸೆವಿಕನಿರುವದೇ ಇಲ್ಲ. ನಾನು ಟ್ರೇಡ ಯೂನಿಯನ್ನ ಸಂಘದ ಸೇಕ್ರೆಟರಿ ಇದ್ದು, ಅದರ ತತ್ವಪ್ರಕಾರ ಚಳವಳಿ ಮಾಡಿರುತ್ತೇನೆ.

ಮುಜಫರ ಅಹಮದ-

ನನಗೆ ಜಾತಿಯಿಲ್ಲ. ಯಾವ ಜಾತಿ ಎಂಬದು ನನಗೆ ಗೊತ್ತಿಲ್ಲ. ನನಗೆ ಧರ್ಮದಲ್ಲಿ ನಂಬಿಗೆ ಇಲ್ಲ. ನಾನು ವರ್ತಮಾನಪತ್ರದ ಸಂಪಾದಕನಾಗಿದ್ದೇನೆ. ಇದಕ್ಕಿಂತ ಹೆಚ್ಚಿಗೆ ಹೇಳಬಯಸುವದಿಲ್ಲ.

ಶಿಬೋರಿಲಾಲ ಘೋಷ-

ನಾನು ವಕೀಲನೂ, ಪತ್ರ ಸಂಪಾದಕನೂ ಆಗಿದ್ದೇನೆ. ನಾನೆಂದೂ ಬೊಲ್ಸೆವಿಕನಿರಲಿಲ್ಲ. ವರ್ತಮಾನಪತ್ರಕಾರಕನಾಗಿರುವದರಿಂದ ಬೊಲ್ಸೆವಿಕ ತತ್ವದ ಕಾಗದಪತ್ರಗಳು ನನ್ನಲ್ಲಿರಬಹುದು. ಇಂಥ ಲೇಖ ಮತ್ತು ಪತ್ರಗಳು ಸ್ಪ್ರೇಟ್ಸಮನ್ನದ ಕಚೇರಿಯಲ್ಲಿ ಕೂಡ ಹೊರಡಬಹುದು.

ಕೇದಾರನಾಥ ಸೈಗಾಲ-

ಸದ್ಯ ನಾನೊಬ್ಬ ಗುಲಾಮನು. ಸ್ವಾತಂತ್ರ್ಯ ದೊರೆತನಂತರ ಮನುಷ್ಯ ಪ್ರಾಣಿಯಾಗುವೆನು. ಬಂಗವಾಸಿಯಾಗಿರುವದಕ್ಕೆ ಪೋಲೀಸರಿಂದ ದಸ್ತಗಿರ ಮಾಡಲ್ಪಡುವದೇ ನನ್ನ ಉದ್ಯೋಗ. ಸದ್ಯ ನಾನು ಬೊಲ್ಸೆವಿಕನಾಗಿಲ್ಲ. ಮುಂದೆ ಆಗಬೇಕೆಂಬ ವಿಚಾರದಲ್ಲಿರುವೆನು. ಈಗಿನ ವಿಚಾರಣೆಯು ನಾಟಕದೊಳಗಿನ ಪ್ರಹಸನಂತಿದ್ದು, ಸಾರ್ವಜನಿಕ ದ್ರವ್ಯದ ದುರುಪಯೋಗ ಮಾತ್ರ ನಡೆದಿರುತ್ತದೆ. ಬಾಂಬು, ರಾಯಫಲ, ತೋಫುಗಳಿಲ್ಲದೆ ಬಾದಶಹರ ರಾಜ್ಯವನ್ನು ಹೇಗೆ ನಾಶಮಾಡುವದು?

ಕೋರ್ಟ- ನಿಮಗೆ ಮಜಾಹಾತಿನ ಸ್ವರಾಜ್ಯ ಬೇಕೇ?

ಉತ್ತರ- ಆ ವಿಚಾರವನ್ನು ಸದ್ಯ ಕಾದಿಸುವ- ಕೋರ್ಟಿನವರು ಸರಕಾರ ಪಕ್ಷದ ಪುರಾವೆಯನ್ನು ಗ್ರಹಿತಮಾಡಿದರೆ- ಬ್ರಿಟಿಶ ಸಂಕಟದ ವಿಷಯ-ಗಿದ್ದ ಅಲ್ಪಸ್ವಲ್ಪ ನಂಬಿಗೆಯು ಹಾರಿಹೋಗುವದು.

ಗೌರೀಶಂಕರ-

ನನ್ನ ಜಾತಿ ಹಿಂದುಸ್ಥಾನಿ, ನನ್ನ ವಾಸಸ್ಥಾನ ಹಿಂದುಸ್ಥಾನ, ಉದ್ಯೋಗ ಗುಲಾಮಗಿರಿ; ಮತ್ತು ಪರದಾಸ್ಯದಲ್ಲಿಗುವದು.

ಗೋಪೇಂದ್ರ ಚಕ್ರವರ್ತಿ, ರಾಧಾರಮಣ ಮಿತ್ರ ಅಯೋಧ್ಯಾಪ್ರಸಾದ ಈ ಮೂವರೂ ಜಾತಿಗೋತ್ರದಲ್ಲಿ ತಮ್ಮ ನಂಬಿಗೆಯಿಲ್ಲೆಂದು ಜವಾಬು ಕೊಟ್ಟಿದ್ದಾರೆ.

ಮೈಸೂರ ರಾಜ್ಯದ ಬ್ರಾಹ್ಮಣ ಬಂಧುಗಳಲ್ಲಿ ಪ್ರಾರ್ಥನೆ.

ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆಗಳ ಚುನಾವಣೆಯು ಆರಂಭವಾಗುವುದಷ್ಟೇ. ಇವುಗಳಿಗೆ ಬ್ರಾಹ್ಮಣರು ಯಾವ ಉಮೇದುವಾರರಾಗಿ ನಿಲ್ಲಬಾರದೆಂದು ನಮ್ಮ ಅಭಿಮತ.

ಅಸಹಕಾರ ಬುದ್ಧಿಯಿಂದ ನಾವೀ ಸಲಹೆ ಕೊಡುವದಿಲ್ಲ. ಪರಸ್ಪರ ಭಿನ್ನಾಭಿಪ್ರಾಯಗಳು ತೊಲಗಿ, ಎಲ್ಲರೂ ಒಂದಾಗಿ, ಏಕಬುದ್ಧಿಯಿಂದ ವಿಶಾಲ ಭಾರತದ ಹಿತಸಾಧನೆಯು ಈ ವರ್ತಕಾಲದಲ್ಲಿ (ನಮ್ಮ ಸಂಸ್ಥಾನವೂ ಭಾರತ ದೇಶದೊಳಗೇ ಸೇರಿದ ಮುಖ್ಯಭಾಗ) ಸೇವೆ ಮಾಡಲು ಅನುಕೂಲವಾಗಲಿ ಎಂಬ ಆಸೆಯಿಂದ ತ್ರಿಕರಣಪೂರ್ವಕವಾಗಿ ಈ ಸೂಚನೆ ಮಾಡಿರುತ್ತೇವೆ.

ನಾವು ಆ ಕ್ಷೇತ್ರಗಳನ್ನು ಪ್ರವೇಶಿಸುವುದಿಲ್ಲವೆಂದು ಹೇಳಿ ಅಟಸ್ಥರಾಗುವುದಿಲ್ಲ. ಉದಾರ ಹೃದಯರೂ, ರಾಷ್ಟ್ರಭಾವನೆಗಳಿಂದ ತುಂಬಿ ತುಳುಕುತ್ತಿರುವವರೂ, ದೂರದರ್ಶಿಗಳೂ, ಸಂಕುಚಿತ ದೃಷ್ಟಿಯಿಲ್ಲದೆ ದೇಶವೇ ಸರ್ವಸ್ವವೆಂದು ಸೇವೆಗೆ ಸಿದ್ಧರಾಗಿರುವವರೂ ಆದ ನಮ್ಮ ಬ್ರಾಹ್ಮಣೇತರ ಬಂಧುಗಳಿಗೆ ಪೂರ್ಣ ಸಹಾಯವನ್ನು ಮಾಡಲು ಮಾತು ಕೊಡುತ್ತೇವೆ.

ನಮ್ಮ ಆಶೆಯೇ ಎಲ್ಲಾ ಬ್ರಾಹ್ಮಣೇತರ ಬಂಧುವರ್ಗಕ್ಕೆ ಶುಭೇಚ್ಛೆ ನನ್ನು ಬಯಸಬೇಕೆಂದು ಶ್ರದ್ಧೆಯಿಂದಲೂ ನಮ್ರತೆಯಿಂದಲೂ ಪ್ರಾರ್ಥಿಸುತ್ತೇವೆ.

ಆಗ ಚುನಾವಣೆಗಳಲ್ಲಿ ದ್ವೇಷಾಸೂಯೆಗಳಿರುವುದಿಲ್ಲ. ಮನೆಗಳಲ್ಲಿ ವಿಷಮಾಹಿತಿಗಳಿರುವುದಿಲ್ಲ. ಎಲ್ಲಾ ಸಂದೇಹಕ್ಕಾಗಲಿ ಅನುಮಾನಕ್ಕಾಗಲಿ ಕಾರಣವೇ ಇರುವುದಿಲ್ಲ. ದೇಶಾಭಿವೃದ್ಧಿಗಾಗಿ ಏಕಕಂಠದಿಂದ ಹೊರಟ ಜಯಘೋಷವು ಅಧೀನ ಮೆಸಿಸುವುದರಲ್ಲಿ ಸಂದೇಹವಿಲ್ಲವೆಂದು ನಾವು ನಂಬುತ್ತೇವೆ.

ಶ್ರೀ|| ರಾವ್ ಬಹದ್ದೂರ್ ಡಾ|| ಸಿ. ಬಿ. ರಾಮರಾವ್, ಬೆಂಗಳೂರು

ಶ್ರೀ|| ಎಸ್. ವೆಂಕಟವರದಯ್ಯ, ವಕೀಲ್, ಬೆಂಗಳೂರು

ಶ್ರೀ|| ಮಿರ್ಲೆ. ಎಸ್. ಲಕ್ಷ್ಮೀನಾರಣಪ್ಪ, ವಕೀಲ್, ಬೆಂಗಳೂರು

ಶ್ರೀ|| ಹೊಸೂರು ವೆಂಕಟರಾಮಯ್ಯ, ವಕೀಲ್, ತುಮಕೂರು

ಶ್ರೀ|| ಎಂ. ವೆಂಕಟಕೃಷ್ಣಯ್ಯ, ಮೈಸೂರು

ಶ್ರೀ|| ಎ. ಕೃಷ್ಣರಾವ್, ವಕೀಲ್, ಮೈಸೂರು

ಶ್ರೀ|| ಬಿ. ನರಸಿಂಗರಾವ್, ವಕೀಲ್, ಮೈಸೂರು

ಪ್ರಥಮ ಕರ್ನಾಟಕ ವಾಚನಾಲಯ ಪರಿಷತ್ತು ಧಾರವಾಡ.

—(೦)—

ಸ್ವಾಗತ ಮಂಡಲದ ಸದಸ್ಯರಲ್ಲಿ ಅಗತ್ಯದ ವಿನಂತಿ

—(೦)—

ತಾ|| ೧ನೇ ದಿಸೆಂಬರ ೧೯೩೮ ರವಿವಾರ ಮಧ್ಯಾಹ್ನ ೩|| ಗಂಟೆಗೆ ಶ್ರೀಕಂಠೇಶ ವಾಚನಾಲಯದಲ್ಲಿ ಪ್ರಥಮ ಕರ್ನಾಟಕ ವಾಚನಾಲಯ ಪರಿಷತ್ತಿನ ಸ್ವಾಗತ ಮಂಡಲದ ಸಭೆಯು ಕೆಳಗಿನ ವಿಷಯಗಳನ್ನು ಚರ್ಚಿಸುವದಕ್ಕಾಗಿ ಕೂಡುವದು. ಅದುದರಿಂದ ಸ್ವಾಗತ ಮಂಡಲದ ಎಲ್ಲ ಸದಸ್ಯರು ಅತ್ಯಗತ್ಯವಾಗಿ ಬರಬೇಕಾಗಿ ವಿನಂತಿ. ಪರಸ್ಥಳದ ಜನರಿಗೆ ಬಂದು ಹೋಗಲು ಅನುಕೂಲವಾಗಬೇಕೆಂದು ಬೇಕಂತಲೇ ೩|| ಗಂಟೆ ವೇಳೆಯನ್ನು ಗೊತ್ತು ಪಡಿಸಲಾಗಿದೆ.

ಚರ್ಚಿಸತಕ್ಕ ವಿಷಯಗಳು-

೧ ಸ್ವಾಗತ ಮಂಡಲವನ್ನೂ ಅದರ ಅಧಿಕಾರಿಗಳನ್ನೂ ಗೊತ್ತು ಪಡಿಸುವದು.

೨ ಸ್ವಾಗತಾಧ್ಯಕ್ಷರನ್ನು ಗೊತ್ತು ಮಾಡುವದು.

೩ ಕಾರ್ಯಾಧ್ಯಕ್ಷರನ್ನು ಆರಿಸುವದು

೪ ಪರಿಷತ್ತಿನ ಅಧ್ಯಕ್ಷರನ್ನು ಆರಿಸುವದು.

೫ ಪರಿಷತ್ತಿನಲ್ಲಿ ಚರ್ಚಿಸತಕ್ಕ ವಿಷಯಗಳನ್ನು

ಶ್ರೀ

ಸರಸ್ವತೀ ವಿದ್ಯಾರಣ್ಯ ಧರ್ಮಾರ್ಥ ವಾಚನಾಲಯ.

ಜಾಹೀರ ಪ್ರಕಟನೆ

ಇಲ್ಲಿ ಆಟವಾಡುತ್ತಿರುವ ಗಂಧರ್ವ ನಾಟಕ ಮಂಡಳಿಯವರ ಕಡೆಗೆ ಸರಸ್ವತೀ ವಿದ್ಯಾರಣ್ಯ ವಾಚನಾಲಯದ ಸ್ವಯಂಸೇವಕರು ಡೋರಕೀಪಿಂಗದ ಕೆಲಸಕ್ಕಾಗಿ ಹೋಗುತ್ತಿದ್ದರಷ್ಟೇ? ಆದರೆ ಈಗ ಅವರ ಆ ಕೆಲಸದ ಮೇಲೆ ಇರ್ದವನ್ನು ನೋಡಿ ಊರಲ್ಲಿಯ ಕೆಲ ಕುಹಕ ಹಾಗು ಉಪದ್ವ್ಯಾಪಿ ಜನರಿಂದ ಸಂಸ್ಥೆಯ ವಿಷಯವಾಗಿ ತಪ್ಪು ತಿಳುವಳಿಕೆ ಹಾಗು ಅನಾದರ ಉಂಟು ಮಾಡತಕ್ಕ ನಿರಾಧಾರ ಹಾಗು ವಿಪರೀತ ಸಂಗತಿಗಳು ಹರಡುವದು ಸಂಸ್ಥೆಗೆ ತಿಳಿದು ಬಂದಿದೆ. ಸಂಸ್ಥೆಯ ಹಾಗು ಸ್ವಯಂಸೇವಕರ ಕೆಲಸದ ಪರಿಚಯವಿದ್ದ ಜನರು ಇಂಥ ಸುಳ್ಳು ಸುದ್ದಿಯ ಮೇಲೆ ಎಂದೂ ವಿಶ್ವಾಸವಿಡಲಾರರು ಸಂಸ್ಥೆಗೆ ಪೂರ್ಣ ನಂಬಿಗೆಯದೆ ಆದರೂ ಸಾರ್ವಜನಿಕರಲ್ಲಿ ತಪ್ಪು ತಿಳುವಳಿಕೆಯಾಗಬಾರದೆಂದು ಈ ಪ್ರಕಾರವಾಗಿ ಜಾಹೀರ ರೀತಿಯಿಂದ ಪ್ರಕಟ ಮಾಡಬೇಕಾಗಿದೆ.

ಸ್ವಯಂಸೇವಕರ ಪ್ರಯತ್ನದಿಂದ ಮಂಡಳಿ ಅವರನ್ನು ಡೋರಕೀಪಿಂಗ ಕೆಲಸದಿಂದ ತೆಗೆದಿರ ವಷ್ಟೇ. ಆದರೆ ಸಂಸ್ಥೆಯ ಸ್ವಯಂಸೇವಕರು ... ಕಂಪನಿಯ ... ಸ್ವಾರ್ಥ ತ್ಯಾಗ ಹಾಗು ಸಂಸ್ಥೆಯ ಗೌರವವನ್ನು ಕಾಯ್ದುಕೊಳ್ಳುವ ಪ್ರಸಂಗವು ಬಂದದ್ದರಿಂದ ಸ್ವಯಂಸೇವಕರು ಆ ಕೆಲಸವನ್ನು ಬಿಡಬೇಕಾಯಿತು. ಈ ಸಂಸ್ಥೆಯ ವಿಷಯವಾಗಿ ಯಾರೂ ತಪ್ಪು ತಿಳುವಳಿಕೆಯನ್ನು ಮಾಡಿಕೊಳ್ಳಬಾರದೆಂದು ವಿನಂತಿ.

ಈ ಪ್ರಕಟನೆಯ ಮೂಲಕ ವ್ಯಕ್ತಿಶಃ ಬಾಲಗಂಧರ್ವ ಹಾಗು ಆ ನಾಟಕ ಮಂಡಳಿಯ ವಿಷಯವಾಗಿಯೂ ಜನತೆಯು ತಪ್ಪು ತಿಳುವಳಿಕೆಯಾಗಬಾರದೆಂದು ನಮ್ಮ ಇಚ್ಛೆ. ಯಾವ ಕಾರಣದಿಂದಾದರೇನು, ಆದ ಪ್ರಕರಣದ ಬಗ್ಗೆ ಶ್ರೀ ಬಾಲಗಂಧರ್ವರಿಗೆ, ವಿಷಾದವಾಗಿ ಕಾಣುತ್ತಿರುವದು ಅವಶ್ಯವೆಂದು ಕಂಡಿರುವದು. ಇದರಿಂದ ಗಂಧರ್ವ ನಾಟಕ ಮಂಡಳಿ ಹಾಗು ನಮ್ಮ ಸಂಸ್ಥೆಯ ನಡುವೆ ಅಸಮಾಧಾನವಾಗಲು ಏನೂ ಕಾರಣವಿಲ್ಲ. ಆದರೆ ಇಷ್ಟರಲ್ಲಿಯೂ ಮೊದಲಿನಂತೆಯೇ ಪ್ರೇಮದ ಹಾಗು ಆದರಾತ್ಮಕ ಸಂಬಂಧವಿದೆ. ಹಾಗು ಅಂಥ ಸಂಬಂಧವು ಇದ್ದೇ ಇರುವದೆಂಬ ಸಂಸ್ಥೆಯ ಪ್ರತ್ಯಯಕ್ಕೆ ಕೂಡ ಬಂದಿರುವದೆಂದು ತಿಳಿಸಲು ಆನಂದವಾಗುತ್ತದೆ.

ಟೆಂಬೇ ರೋಡ ಹುಬ್ಬಳ್ಳಿ	ಗಜಾ. ರಾ. ಕಾಂಬೇಕೆ.
ತಾ|| ೪-೧೧-೨೭	ಕಾರ್ಯದರ್ಶಿ

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹೋಗುವ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ... ಗುಣವಾಗುವದು. ಇದಲ್ಲ ಕೇವಲ ... ಬೇರೆ ಎರಡು ... ರೋಗಗಳನ್ನು ಮನಿ ಆರ್ಡರದಿಂದಾಗಲಿ, ... ಮುಂಗಡ ಕಳಿಸತಕ್ಕದ್ದು.

... ರಾಮಚಂದ್ರ ದೀಕ್ಷಿತ

ಮು|| ಮಂತ್ರ ... ಧಾರವಾಡ

... ಪಡಿಸಿ ಬರೆಯಬೇಕು.

THE ANKALIGI BANK LTD.

Head Office-

Kamankatta Dharwar

Branches

Ranebennur & Hirekerur

5%

Interest allowed on

ANNA SAVINGS BANK

DEPOSIT.

Dharwar K B ANKALIGI

3-1-1927 Managing Director

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ಸಾಲಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ. ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಶೀರೆ!! ಪತ್ತಲ!! ಕಿರಗಿ

ಶ್ರೀದತ್ತ ವೀವಿಂಗ್ ಮಿಲ್ ಹುಬ್ಬಳ್ಳಿ

ಕರ್ನಾಟಕದಲ್ಲಿ ಇದೇ ಮೊದಲನೆಯ ಶೀರೆಯ ಮಿಲ್ಲು

—(೦)

ಈಗೀ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ ವ ಅತ್ಯ ಯೋಗ್ಯ ದರದಿಂದ ಸಿಗುತ್ತವೆ. ಹವಣಿಕೆ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಒಮ್ಮೆ ಪರೀಕ್ಷಿ, ಒಮ್ಮೆ ಹೋದರೆ ಮಾಲು ತಿರುಗಿ ತಕ್ಕೊಳ್ಳುವೆವು.

ಮಾಲಕ:— ಡಿ. ಜಿ ಕಾಳೆ ಬ್ರದರ್ಸ್

ಕೊಪ್ಪಿಕರ ರೋಡ ಹುಬ್ಬಳ್ಳಿ

ಸೂಚನೆ.

ವಿ. ರ್. ಶ್ರೀನಿವಾಸಯ್ಯಂಗಾರ್, ಗೌರವ ಕಾರ್ಯದರ್ಶಿ, ವಿಧವಾ ವಿವಾಹ ಸಹಾಯಕ ಸಭಾ, [ಕೊಳ್ಳೇಗಾಲ ಬ್ರಾಂಚ] ಕೊಳ್ಳೇಗಾಲ ಇವರಿಗೆ ಬರೆದು ತಿಳಿಕೊಳ್ಳಿರಿ

ಈ ಪತ್ರವನ್ನು ಅಂಕಲ್ಗಿ ಬಾಳಾಚಾರ್ಯ ಬಾಳಾಚಾರ್ಯ ಹೊಸರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R N. B. 1443

ನಿತ್ಯ ಪತ್ರ — ವಿಜಯ — ಬೆಲೆ ಅರ್ಧ ಆಣೆ

[illegible] ಯಾಗ ಯಶಃಕೀರ್ತಿ,

ವರ್ಷ ೧೦) ಧಾರವಾಡ ಗುರುವಾರ [illegible] ನವ್ಹೆಂಬರ [illegible] (ಸಂಚಿಕೆ [illegible]

ದಿ ಜನಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ

ಮಂಗಳವಾರ ಪೇಟ ಜೋಗಿ ಪಾಳ್ಯದ ಮನೆಯಲ್ಲಿ.

ದಾಗೀನೆಗಳ ಮೇಲೆ ಕಡಿಮೆ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು

ಈ ಬ್ಯಾಂಕು [illegible] ವ್ಯವಹಾರವು ಅಭಿವೃದ್ಧಿ ಹೊಂದು[illegible] ದಾಗೀನೆಗಳ ಮೇಲೆ ಸಾಲ [illegible] [illegible] ಬಡ್ಡಿಯಲ್ಲಿ [illegible] ಬ್ಯಾಂಕಿನಲ್ಲಿ ದಾಗೀನೆ ಇಟ್ಟಿರೆ [illegible] [illegible] ಬ್ಯಾಂಕಿನಲ್ಲಿ [illegible] ಕೊಡಬೇಕು.

ತಮ್ಮಗಳ [illegible] ಸಾಲ ತೆಗೆದುಕೊಳ್ಳುವರು, [illegible] ಕೀಗೆ ಬ್ಯಾಂಕಿನಲ್ಲಿ [illegible] ನಮ್ಮಲ್ಲಿ ಒಂದಾವರ್ತಿ ವ್ಯವಹಾರ ಮಾಡಿ ಖಾತ್ರಿ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರದ ಮತ್ತು ಬೆಳ್ಳಿ [illegible] ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ ಎಲ್ಲರಕ್ಕಿಂತಲೂ ಸೋವಿಯಿಂದ ಸಿಗುವದು.

ಕೃಷ್ಣರಾವ ವೆಂಕಟರಾವ [illegible]

ಮ್ಯಾನೇಜಿಂಗ [illegible], ಧಾರವಾಡ.

[illegible] ಬ್ಯಾಂಕ ಲಿಮಿಟೆಡ

[illegible] ಹೆಡ್ ಆಫೀಸು ಧಾರವಾಡ.

[illegible] ಕ್ರಮಿಟಿ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

[illegible] ಬ್ಯಾಂಕಿನ ವ್ಯವಹಾರದಲ್ಲಿ [illegible] ಸ್ಥಾನ.

[illegible] ಲಕ್ಷದ ಮೇಲೆ [illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. [illegible] ಮತ್ತು [illegible] ಬಡ್ಡಿ ದೊರೆಯುವದು

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. [illegible]

ಮ್ಯಾನೇಜಿಂಗ ಡೈರೆಕ್ಟರ.

[illegible] ಬ್ಯಾಂಕ [illegible]

[illegible]

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು [illegible] ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು [illegible] ಇಟ್ಟುಕೊಳ್ಳಲಾಗುವದು. ದರವನ್ನು [illegible] ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡಿಯು [illegible] ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

[illegible]

ಮ್ಯಾನೇಜಿಂಗ ಡೈರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	[illegible]
೬ ,,	[illegible]
೪ ,,	[illegible]
ವಾರ ಪತ್ರಕ್ಕೆ ೧ ವರ್ಷಕ್ಕೆ	[illegible]

ವಿಶೇಷ ಮಾಹಿತಿ ಕಳಗಿನ [illegible]

ವಿಜಯ [illegible]

ವಿಜಯ.

ಧಾರವಾಡ ತಾ- ೨೮-೧೧-೨೯ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಪ್ರಿಯ
ಶ್ರೀ ಕಳಾಸ...ಯಃ ಸಲಹಿಸೆ ಸುಹಿತಗರಿಕೆಗಳಂ ।
ದೀ "ವಿಜಯಂ" ಶ್ರೀಕರಪಟುವಾ ।
ತಾ ವಿಹಿತಾಗಸೆ ಸಿವಾ ಹಿತರಿಪ್ಪುದು ಹಾಹಾ ॥೧॥

ಮೈಸೂರ ರಾಜ್ಯದಲ್ಲಿಯು ಬ್ರಾಹ್ಮಣರ ಅರ್ಧ ದಾರಿಯು.

ನಿನ್ನಿನ ಸಂಚಿಕೆಯಲ್ಲಿ ಮೈಸೂರು ರಾಜ್ಯದ ಕೆಲ ಬ್ರಾಹ್ಮಣರು ಪ್ರಸಿದ್ಧ ಮಾಡಿದ ವಿನಂತಿ ಪತ್ರವನ್ನು ಅಚ್ಚು ಹಾಕಿದ್ದೇವೆ. ಇದನ್ನು ಓದಲಾಗಿ, ಆ ದೇಶದ ಕಲ ಬ್ರಾಹ್ಮಣರು ಮಾತ್ರ ಬ್ರಾಹ್ಮಣೇತರರಿಗೆ ಸರ್ವತಂತ್ರಗಳನ್ನು ಒಪ್ಪಿಸಬೇಕೆಂದು ಅಪೇಕ್ಷಿಸುವದಾಗಿಲ್ಲದೆ, ಎಲ್ಲ ಬ್ರಾಹ್ಮಣರು ಅನುಕೂಲರಾಗಿಲ್ಲೆಂದು ಧ್ವನಿತವಾಗುತ್ತದೆ. ಶ್ರೀ. ಕರ್ಪೂರ ಶ್ರೀನಿವಾಸರಾಯರು, ಶ್ರೀ. ಸಬಲೂರರು, ಶ್ರೀ. ವೆಂಕಟಕೃಷ್ಣಯ್ಯನವರು ಶ್ರೀ ಹೊಸಕೋಟೆಯ ಕೃಷ್ಣರಾಯರು ಶ್ರೀ ಗರುಡಾಚಾರ್ಯ ಮೊದಲಾದ ಪ್ರಮುಖ ಬ್ರಾಹ್ಮಣರು ಈ ಒಗ್ಗಿ ಕಮಿಟಿ ಕೂಡಿ, ಅಥವಾ ಮೈಸೂರ ರಾಜ್ಯದ ಬ್ರಾಹ್ಮಣ ಸಂಸತ್ತು ಕೂಡಿಸಿ, ನಿರ್ಣಯ ಮಾಡಿದರೆ- ಬ್ರಾಹ್ಮಣರು ಚುನಾವಣೆಯಲ್ಲಿ ಉಮೇದವಾರರಾಗಿ ನಿಲ್ಲಬಾರದೆಂದು ಬಹಿಷ್ಕಾರ... ಹಾಗೇನೂ ಇಲ್ಲದ್ದರಿಂದ, ಇದು ಕೆಲವರ ಮತವೇ ಹೊರತು ಗೊತ್ತುವಳಿಯಾಗುವದಿಲ್ಲ.

ಬ್ರಾಹ್ಮಣೇತರರಿಗೆ ಮನಃಪೂರ್ವಕವಾಗಿ ಕೆಲಸ ಮಾಡಿ... ದೇಶ ಹಿತಸಾಧಿಸಿಕೊಳ್ಳಲು ಅವಕಾಶ ಕೊಡಬೇಕೆಂದು ಅನೇಕರಿಂದ ಅಭ್ಯುದಯದಲ್ಲಿ ಮಹಾತ್ಮಾ ಗಾಂಧಿಯವರು ಮಾಡಿದ ಸೂಚನೆಯ ಮೇರೆಗೆ ಮುಂಬಯಿ ಕರ್ನಾಟಕ ಪ್ರಾಂತದ ಬ್ರಾಹ್ಮಣರು ಕೌನ್ಸಿಲು, ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡುಗಳಿಗೆ ತಲೆಯು ಹಾಕದೆ... ಬ್ರಾಹ್ಮಣೇತರರು... ಅಧಿಕಾರಗಳನ್ನು ರಾಷ್ಟ್ರೀಯ ಪಕ್ಷಕ್ಕೆ ಮನ್ನಣೆಯಾಗುವ ರೀತಿಯಿಂದ ನಡಸದೆ, ಅವರಸಂ... ನಡೆಯಗಿನ ... ದ್ದರಿಂದ, ಸ್ವರಾಜ್ಯ ... ಮತ್ತು ಈ ಪಕ್ಷಕ್ಕೆ ಸೇರಿದ ಬ್ರಾಹ್ಮಣರು ಉಮೇದವಾರರಾಗಿ ಚುನಾವಣೆಯಲ್ಲಿ ಯಶ ಹೊಂದಿದರು. ಮುಂಬಯಿ ಕರ್ನಾಟಕದಲ್ಲಿ ನಾಲ್ವರು ಬ್ರಾಹ್ಮಣೇತರರು ಕೌನ್ಸಿಲದ ಮೆಂಬರರಿದ್ದು, ಅವರಲ್ಲಿ ಒಬ್ಬರೂ ಸ್ವರಾಜ್ಯ ಪಕ್ಷೀಯರಿರುವದಿಲ್ಲ. ಕಾಂಗ್ರೆಸದ ಧ್ಯೇಯದ ಪ್ರಕಾರ ಕೌನ್ಸಿಲದಲ್ಲಿ ಮೆಂಬರರಿದ್ದ ಹೊರತು, ಕೌನ್ಸಿಲದಲ್ಲಿ ರಾಷ್ಟ್ರಹಿತದ ಕೆಲಸವು ವ್ಯವಸ್ಥಿತವಾಗಿ ನಡೆಯಲಾರದೆಂದು ನಿದರ್ಶನಕ್ಕೆ ಬಂದ ಮಾತಾಗಿದೆ. ಮೈಸೂರ ರಾಜ್ಯದಲ್ಲಿ ಕಾಂಗ್ರೆಸತತ್ತ್ವ ಪ್ರಕಾರ ಪ್ರಜಾಪ್ರತಿನಿಧಿಸಭೆಗಳು; ಅಸೆಂಬ್ಲಿಯಲ್ಲಾಗಲಿ ಕೌನ್ಸಿಲಗಳಲ್ಲಾಗಲಿ ಎಷ್ಟು ಜನರು ನಿಲ್ಲಬಲ್ಲರೆಂಬದನ್ನು ನೋಡಲು ನೋಡಿಕೊಂಡು, ಅನಂತರ ಇವರು ತಮ್ಮ ... ಬಹೀರ ಮಾಡಬೇಕಾಗಿತ್ತು.

ಬೇರೆ ಚುನಾವಣೆಯಲ್ಲ; ಅಧಿಕಾರ ನಡೆಸುವ ವಿಷಯದಲ್ಲಿಯೂ, ಆದರ ... ಯು ಸಮಾಧಾನವಿಲ್ಲೆಂಬ ಮಾತಿಲ್ಲ. ... ಪ್ರಸಿದ್ಧ ಮಾಡಿದ ನಿರ್ಣಯಗಳಿಗಿಂತ ಬೇರೆ ಪುರಾವೆಗಳೇ ಬೇಕಾಗಿಲ್ಲ. ... ದಿನಾನ ... ವಿಜಯೀ ಮರಾಠ" ಪತ್ರದ ... ಮಾಡಿದ್ದೇವೆ ಅದನ್ನು ಮೈಸೂರಿನ ಬ್ರಾಹ್ಮಣರು ಓದಿದರೆ- ಅವರೆಂದೂ ಬಹೀರ ಸ... ಗೊಡವೆಗೆ ಹೋಗುತ್ತಿದ್ದಿಲ್ಲ.

ಬ್ರಾಹ್ಮಣೇತರರು ಒಂದೇ ಮತದವರಾಗಿದ್ದರೆಂದು ತಿಳಿಯುವದಂತೂ ತಪ್ಪಿನದು. ಅವರಲ್ಲಿಯೂ ಮತಭೇದ ಮತ್ತು ಪಂಗಡಗಳುಂಟು. ಮದ್ರಾಸ, ಮುಂಬಯಿಯಲ್ಲಿ ನೋಡಿರಿ. ಇವು ಒಡೆದು ಕಾಣಿಸುತ್ತವೆ. ಅವರಿಗೆ ಮಂಜಗಳಂತೆ ಕೊಡದಾಗಲಿಕ್ಕೆ ಹಚ್ಚಿ, ಬ್ರಾಹ್ಮಣರು ಹೊರಗಿನಿಂದ ನೋಡುವರೇನು? ಮೈಸೂರಿನ ಬ್ರಾಹ್ಮಣೇತರರಲ್ಲಿಯೂ ಪಂಗಡಗಳಿಲ್ಲವೆಂಬಂತಿಲ್ಲ. ಬೆಂಗಳೂರಗಲಭೆಯು ಇದನ್ನು ಪ್ರತ್ಯಕ್ಷವಾಗಿ ತೋರಿಸುತ್ತಿದೆ. ಬ್ರಾಹ್ಮಣೇತರರೆಲ್ಲರೂ ಒಂದೇ ಮನದವರು ಆದರೂ ದರಬಾರಿನಿಂದ ರಾಜಕೀಯ ಹಕ್ಕುಗಳನ್ನು ಒತ್ತಾಯ, ಪ್ರಸಂಗಬಿದ್ದರೆ- ಅಸಹಕಾರ ಮತ್ತು ಕಾಯದೆ ಭಂಗದಿಂದ ಪಡೆಯುವರೆಂದು ಹೇಳಲು ಯಾರಾದರೂ ಹೊಣೆಗಾರರಾಗುವರೇ?

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಲಿರುವದು. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ಮತ್ತು ಬೆಳ್ಳಿ ದಾಗೀನೆಗಳ ಮೇಲೆ ಸೋಯಿ ಬಡ್ಡೀ ದರದಿಂದ ಸಾಲ ಕೊಡುವ ವ್ಯವಸ್ಥೆಯುಂಟು. ದಾಗೀನೆ ಒತ್ತೀ ಇಟ್ಟವರು ಮೊದಲನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ ೧೫ ದಿವಸಕ್ಕೊಮ್ಮೆ ಅಷ್ಟಷ್ಟೇ ರಕಮು ತಂದು ಕೊಟ್ಟರೂ, ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಅಷ್ಟಷ್ಟೇ ರಕಮು ಕೊಡುವದರಿಂದ, ಸಾಲದ ಭಾರ [illegible]ಯಾಗಿ, ಬಡ್ಡಿಯು ಕಡಿಮೆಯಾಗುತ್ತಾ ಬರುವದು. ಧಾರವಾಡ ಮುಂತಾದ ಪಟ್ಟಣವಾಸಿಗಳು ಈ ಸೋಯಿಯ ಫಾಯದೆ ತಕ್ಕೊಳ್ಳುತ್ತಿದ್ದಾರೆ. ಆದರೆ ಇದರ ಮಹತ್ವವು ಮತ್ತು ಉಪಯೋಗವು ಹಳ್ಳಿಯ ಜನರಿಗೂ ಆಗಲೆಂದು ಈ ಜಾಹೀರಾತನ್ನು ಪ್ರಸಿದ್ಧ ಮಾಡಿ, ಮುದ್ದಾಂ ಹಳ್ಳಿಗಳಿಗೆ ಕಳಿಸಿದ್ದೇನೆ. ಹಳ್ಳಿಯಲ್ಲಿ ಬಡ್ಡಿಯ ದರವು ರೂಪಾಯಿಕ್ಕೆ ಮೂರು ಪೈ ಇಂದ ಆರು ಪೈ ವರೆಗೆ ಇರುತ್ತದೆ. ಅದೂ ಒಪ್ಪಿಯಲೆ ಕೊಡಬೇಕಾಗುತ್ತದೆ. ಹೀಗಾಗಿ ಎಷ್ಟೋ ಜನ ಬಡವರಾದರು [illegible]; ಶ್ರೀಮಂತರ ದಾಗೀನೆಗಳು ಸಹ ಸಾವಕಾರರ ಅಸಲು ಮತ್ತು ಬಡ್ಡಿಯಲ್ಲಿ ಮುಳುಗಡೆಯಾಗಿ ಹೋಗುತ್ತವೆ. ಈ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ದಾಗೀನೆ ಒತ್ತೀ ಇಟ್ಟರೆ ಆಗುವದಿಲ್ಲ. ಹಾಗಿದ್ದರೆ ಸ್ವಲ್ಪ ರಕಮು ಕೊಟ್ಟರೂ ಅದನ್ನು ತಕ್ಕೊಂಡು, ಸಾಲದ ಭಾರವನ್ನು ಕಡಿಮೆಮಾಡುತ್ತಾ ಬರುತ್ತೇನೆ. ಇಂಥ ಸೋಯಿಯು ಹಳ್ಳಿಗಳಲ್ಲಿ ದೊರೆಯಲಾರದು. ಆದ್ದರಿಂದ ಹಳ್ಳಿಯಲ್ಲಿ ಸಾಲ ಬೇಕಾದವರು ನಮ್ಮ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ, ಅನುಭವ ಮಾತ್ರ ತಿಳಿಯಬೇಕು. ನಮ್ಮ ಬಡ್ಡೀ ದರವು ನೂರು ರೂಪಾಯಿಗೆ ತಿಂಗಳಿಗೆ ಒಂದು ರೂಪಾಯಿಗೆ ಎರಡು ಪೈ ಇರುತ್ತದೆ. ನೂರರ ಮೇಲಿನ ರಕಮಿಗೆ ಬಡ್ಡೀ ದರ ಸಮಕ್ಷಮ ಅಥವಾ ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಗಳ ಜನರು ಶಹರದ ಊರಿಗೆ ಬಂದು ಸಾವಕಾರ ಮೊದಲಾದವರಲ್ಲಿ ಅವರು ಹೇಳಿದಷ್ಟು ಬಡ್ಡಿ ಕರಾರ ಮಾಡಿ ಸಾಲ ತೆಗೆದುಕೊಳ್ಳುವರು. ಮತ್ತು ಮುಂದೆ ಲೆಕ್ಕ ತಿಳಿಯದೆ ಲುಕ್ಸಾನ ಮಾಡಿಕೊಳ್ಳುವರು. ಹೀಗೆ ಬ್ಯಾಂಕಿನಲ್ಲಿ ಮಾತ್ರ ಆಗುವದಿಲ್ಲ. ಹಳ್ಳಿಗಳ ಜನರು ನಮ್ಮಲ್ಲಿ ಒಂದಾವರ್ತಿ ವ್ಯವಹಾರ ಮಾಡಿ ಖಾತ್ರೀ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಚೀಜುಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ ಎಲ್ಲರಕ್ಕಿಂತಲೂ ಸೋಯಿಯಿಂದ ಸಿಗುವದು.

ಕೃಷ್ಣರಾವ ವೆಂಕಟರಾವ ಧಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರದಾರ, (?)

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಂಟಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ವಿಜಯ ಮ್ಯಾನೇಜರ ಧಾರವಾಡ.

ವಿಜಯ.

ಧಾರವಾಡ ತಾ. ೪-೧೧-೨೯ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಶಪ್ರಿಯು
ಶ್ರೀ ವಸುಮತಿಯು ನಲಿಸಿರೆ ಸುಹಿತಚರಿತೆಗಳಿಂ ಪ್ರ
ದ“ ವಿಜಯಂ ” ಶ್ರೀಶಕರುಣಾ ।
ನಾ ವಿಹಿತಂಗಳೆ ವಿವರಿಸಲೆಳಸುವ ಸಾಜಂ ॥೧॥

ವಸಾಹಾತಿನ ಸ್ವರಾಜ್ಯ; ಸ್ವರಾಜ್ಯ ಸ್ವಾತಂತ್ರ್ಯ.

ಕಾಂಗ್ರೆಸದಲ್ಲಿ ವಸಾಹಾತಿನ ಸ್ವರಾಜ್ಯ ಮತ್ತು 'ಸ್ವರಾಜ್ಯ ಸ್ವಾತಂತ್ರ್ಯದ ಬಗ್ಗೆ ದೊಡ್ಡ ಚಕಮಕಿಯಾಗತಕ್ಕದ್ದುಂಟು. ಮಹಾತ್ಮಾ ಗಾಂಧಿಯವರು ಸಕಲ ಕಾರಸ್ಥಾನಗಳ ಸೂತ್ರಧಾರಿಗಳಾಗಿರುವದರಿಂದ, ಅವರ ಕೂಡ ಭಾವೀ ರಾವುಂಡ ಟೇಬಲ ಪರಿಷತ್ತನ್ನು ಕುರಿತು ವಿಚಾರಮಾಡಲು ಬ್ಯಾರಿಸ್ಟರ ಜಿನ್ನಾ ಮತ್ತು ಅಸೆಂಬ್ಲಿಯ ಶ್ರೀ. ಪಟೇಲರು ಅಹಮದಾಬಾದಿಗೆ ಹೋಗಿದ್ದರು. ಅಲ್ಲಿ ಯಾವ ಪ್ರಸಕ್ತಿ ಹೇಗೆ ನಡೆಯಿತೆಂದು ಹೇಳಲಿಕ್ಕಾಗುವದಿಲ್ಲ. ಪ್ರಸ್ತುತದ ರಾಜಕೀಯ ಧೋರಣದ ವಿಚಾರಮಾಡಲೋಸುಗ ಲಾರ್ಡ ಆಯರ್ವಿನಸಾಹೇಬರು ಮಹಾತ್ಮರನ್ನು ಕಾಣಲಪೇಕ್ಷಿಸಿದ್ದು, ಸಾಹೇಬರ ಆಮಂತ್ರಣವನ್ನು ಇವರು ಬಹುಶಃ ಅಂಗೀಕರಿಸಬಹುದೆಂದು ತೋರುತ್ತದೆ. ರಾವುಂಡ ಟೇಬಲಿಗೆ ಯಾರನ್ನು ಕರೆಸಬೇಕೆಂಬದು ಬಹ್ವಂಶವಾಗಿ ಗೊತ್ತಾಗಿದ್ದು, ಆ ಹೆಸರುಗಳು ಇನ್ನೂ ಗುಪ್ತವಾಗಿವೆ. ಈ ಬಹುಮಾನವು ತಮಗೆ ದೊರೆಯಬೇಕೆಂದು ಅನೇಕರು ಹಾತೊರೆದು, ಆ ಬಗ್ಗೆ ಪ್ರತ್ಯಕ್ಷಪ್ರತ್ಯಕ್ಷವಾಗಿ ದಿಲ್ಲಿಯ ಮಹಾದ್ವಾರದಲ್ಲಿ ಧರಣೆ ಕೊಟ್ಟು ಕೂತಿದ್ದಾರೆ.

ಒಂದು ಬದಿಯಲ್ಲಿ ರಾವುಂಡ ಟೇಬಲಿನ ಬಗ್ಗೆ ಈ ತೆರವಾಗಿ ಚರ್ಚೆ ನಡೆಯುವಾಗ, ಕಾಂಗ್ರೆಸ ಸಭೆಯು ಬ್ರಿಟಿಶರ ಗುಲಾಮಗಿರಿಯನ್ನು ಒಪ್ಪುವಂಥ ವಸಾಹಾತಿನ ಸ್ವರಾಜ್ಯದ ರಾಡಿಯಲ್ಲಿ ಹೊರಳಾಡದೆ, ಸಂಪೂರ್ಣ ಸ್ವಾತಂತ್ರ್ಯದ ಶುದ್ಧ ಗಂಗಾಜಲದಲ್ಲಿ [illegible] ಆಗಬೇಕೆಂದು ಹೇಳುವಂಥವರ [illegible] ಬಹುಮಂದಿಯಾಗಿ ಹೆಚ್ಚುತ್ತಲಿದೆ. ಕಾಂಗ್ರೆಸದ ಅಧ್ಯಕ್ಷರಾಗುವ ಶ್ರೀ. ಪಂಡಿತ ಜವ್ಹೆರಿಲಾಲರು ಸಂಪೂರ್ಣ ಸ್ವಾತಂತ್ರ್ಯವಾದಿಯಾಗಿದ್ದು, ಅವರು ಈ ವಾರದಲ್ಲಿ ನಾಗಪೂರಿನಲ್ಲಿ ಕೂಡಿದ ಕೂಲಿಕಾರರ ಕಾಂಗ್ರೆಸದಲ್ಲಿ ಇದೇ ತತ್ವದ ಅನುವಾದಮಾಡಿ, ಕಾಂಗ್ರೆಸ ಸಭೆಯಲ್ಲಿ ಈ ಬಗ್ಗೆ ವಿಸ್ತೃತವಾಗಿ ಅನುವಾದಮಾಡುವಂತೆ ಭಾಷೆ ಕೊಟ್ಟಿದ್ದಾರೆ. ಅಲಹಾಬಾದ ಪ್ರಾಂತವನ್ನು ಬಿಟ್ಟು ಹೊರಡುವಾಗ- ಪ್ರತಿಯೊಬ್ಬರು ಪಂಡಿತ ಜವ್ಹೆರಿಲಾಲರಾಗಬೇಕೆಂದೇ ತಮ್ಮ ಅಪೇಕ್ಷೆಯಾಗಿದೆಂದು ಮಹಾತ್ಮರು ನುಡಿದದ್ದನ್ನು ಈ ಮೊದಲು ಬರೆದಿದ್ದೇವೆ. ಮಹಾತ್ಮರ ಈ ಆಶೆ ಮತ್ತು ರಾವುಂಡ ಟೇಬಲದ ಭಾವೀ ಘಟನೆಯು ಒಂದಕ್ಕೊಂದು ವಿರುದ್ಧವಾದ ಭಾವಗಳಾಗುತ್ತವೆಂದು ಸಹಜವಾಗುತ್ತದೆ.

ಸಂಪೂರ್ಣ ಸ್ವಾತಂತ್ರ್ಯಮತವಾದಿಗಳ ವಿರುದ್ಧ ಗೌರಕಾಯಸ್ಥರು ಕತ್ತೀ ಹಿಂದಿರುತ್ತಾರೆ. ಇಂದು ಕತ್ತೀ ಹಿಡಿದವರು ಮುಂದೆ ಮೂರನೇ ಕಣ್ಣು ತೆರೆಯುವದಕ್ಕೂ ಅಸಿಮಿಸಿ ನೋಡಲಾರರು. ಲಾರ್ಡ ಬರ್ಕನ್ನಹೆಡ್ಡಸಾಹೇಬರು ವಸಾಹಾತಿನ ಸ್ವರಾಜ್ಯದ ವೈರಿಯಾಗಿದ್ದು, ಈ ರಾಜ್ಯಾಧಿಕಾರಕೊಟ್ಟರೆ- ಹಿಂದುಸ್ಥಾನದ ತುಂಬ ಅನಾಯಕತನ ಮಾಜುವದೆಂದು ಒಂದೇ ಸವನೆ ಕೀಸರಿಟ್ಟಿದ್ದಾರೆ. ವ್ಯರ್ಥ ಕಂಠಶೋಷವನ್ನೇ ಕೆಲಸಮಾಡಿಕೊಳ್ಳುತ್ತೀರೆಂದು ಈ ಹಳೇ ಮಂತ್ರಿಗೆ ಈಗಿನ ಮಂತ್ರಿಗಳು ಹಂಗಿಸಿ ಹೇಳುತ್ತಿದ್ದರೂ, ಸಾಹೇಬರು ಹಾಡಿದ್ದೇ ಹಾಡುತ್ತಿದ್ದಾರೆ. ಎಣ್ಣೆ ತೀರಿದ ದೀಪವಾಗಿರುವ ಲಾರ್ಡ ಬರ್ಕನ್ನಹೆಡ್ಡರಿರಲಿ; ಬಂಗಾಲದ ಗವರ್ನರರಾದ ಮಿ. ಜಾಕಸನ್ನಸಾಹೇಬರು ಸಂಪೂರ್ಣ ಸ್ವರಾಜ್ಯವಾದಿಗಳನ್ನು ಕೆಣಕಿದ್ದಾರೆ. ನೀವು ವಸಾಹಾತಿನ ಸ್ವರಾಜ್ಯದ ಅಭಿಮಾನಿಗಳಾಗಿ, ದೇಶದಲ್ಲಿ ಶಾಂತಿಸಮಾಧಾನಕ್ಕೆ ಅನುವುಕೊಟ್ಟರೇ ಸೈ. ಇದರ 'ವಿರುದ್ಧ ಸಂಪೂರ್ಣ ಸ್ವಾತಂತ್ರ್ಯವೆಂದೂ, ಅಸಹಕಾರ ಕಾಯದೆಭಂಗವೆಂದೂ ದೇಶದತುಂಬ ಪುಂಡಾಟಿಕೆ ಆರಾಟಿಕೆಯನ್ನೆಬ್ಬಿಸಿದರೆ- ಶಾಂತತೆಯನ್ನು ಕಾಯಲು ತಮಗೆ ಕಠೀಣೋಪಾಯಗಳನ್ನು ಕೈಕೊಳ್ಳಬೇಕಾದೀತೆಂದು ಗುಡುಗು ಹಾಕಿದ್ದಾರೆ; ಬಂಗಾಲದಲ್ಲಿಯೇ ವಿಶೇಷವಾಗಿ ಸಂಪೂರ್ಣ ಸ್ವರಾಜ್ಯ ಸ್ವಾತಂತ್ರ್ಯ ಧ್ಯೇಯದ ಪ್ರಸಾರ ನಡೆದಿದ್ದು, ರಾಜದ್ರೋಹವಂತೂ ನಿತ್ಯ ನತ್ತರೆ- ಅಳುವವರಾರೆಂಬಂತಾಗಿದೆ. ಕಾಂಗ್ರೆಸದಲ್ಲಿ ಕಲಕತ್ತೆಯ ಠರಾವಿನದೇ ಅನುವಾದವಾದರೆ- ರಾವುಂಡ ಟೇಬಲ ಮತ್ತು ವಸಾಹಾತಿನ ಸ್ವರಾಜ್ಯವೊಂದೆಡೆಯಲ್ಲುಳಿದು, ದೇಶದತುಂಬ ದೊಡ್ಡ ಗೊಂದಲವೇ ಏಳುವದು.

ಕೂಲಿಕಾರರ ಕಾಂಗ್ರೆಸ ಸಭೆಯು.

——)(o)(——

ಹಿಂದುಸ್ಥಾನದ ಭಾವೀ ಸ್ವರಾಜ್ಯವು ಕೂಲಿಕಾರ ಮತ್ತು ರೈತರದೇ ಆಗುವದು. ರೈತನು ಅಷ್ಟು ಚಟುವಟಿಕೆಯುಳ್ಳವನಾಗಿರುವದಿಲ್ಲ. ಆದರೆ ಕೂಲಿಕಾರನು ಕಲಿಯಾಗಿರುವನು. ಕೂಲಿಕಾರರೆಂದರೆ- ಹಳ್ಳಿಗಳಲ್ಲಿ ಕೂಲಿ ಕುಂಬಳಿಗೆ ಹೋಗುವ ಆಳಲ್ಲ. ಗಿರಣಿ- ಕಾರಖಾನೆ, ರೇಲ್ವೆ ವರ್ಕಶಾಪಿನಲ್ಲಿ ಹತ್ತುತ್ತು ಸಾವಿರ ಸಂಖ್ಯೆಯಿಂದ ಕೆಲಸ ಮಾಡುತ್ತಾ ಸಂಘಶಕ್ತಿಯುಳ್ಳ ಕೂಲಿಕಾರರು. ಇಂಥವರ ಕಾಂಗ್ರೆಸ ಸಭೆಯು ನಾಗಪೂರಿನಲ್ಲಿ ಕೂಡಿತ್ತು. ಸಭಾಮಂದಿರದಲ್ಲಿ ಬರೆದು ಹಚ್ಚಿದ ವಾಕ್ಯಗಳು ರಾಜ್ಯಕ್ರಾಂತಿ ಪ್ರವರ್ತಕವೇ ಆಗಿದ್ದವು. (೧) ರಾಜ್ಯಕ್ರಾಂತಿಯು ಚಿಯುಚಿಯುಕಾರವಾಗಲಿ; (೨)ಸಾಮ್ರಾಜ್ಯಮದದ ಅಧಃಪಾತವಾಗಲಿ; (೩)ಎರತದ ಕೈದಿಗಳ ಕಡೆಗೆ ದೃಷ್ಟಿ ಕೊಡಿರಿ; ಮುಂತಾದ ವಾಕ್ಯಗಳಿದ್ದವು. ಈಗಿನ ಕೂಲಿಕಾರ ಮಂತ್ರಿಗಳೆಂದರೆ- ಪ್ರಚ್ಛನ್ನಬೌದ್ಧರೆನ್ನುವಂತೆ ಸಾಮ್ರಾಜ್ಯವಾದಿಗಳಾದಂಥ ಕಾನ್ಸರವೇಟಿವ್ಹರೇ ಆಗಿದ್ದಾರೆ ಅವರನ್ನು ನಂಬಬೇಡಿರಿ. ಠಳಿಯಾದ ಕೂಲಿಕಾರರು ಕೂಡ ಸಂಗನಮತ ಮಾಡಿಕೊಳ್ಳಲಿಕ್ಕೆ ರಾಜಕೀಯ ಪರಿಸ್ಥಿತಿಯು ಅನುಕೂಲವಿಲ್ಲ. ಅದ್ದರಿಂದ ಸ್ವಂತ ಕಾಲಿನ ಮೇಲೆ ನಿಲ್ಲಿರೆಂದೂ ಕೂಲಿಕಾರನು ಕಾಂಗ್ರೆಸದ ಅಧ್ಯಕ್ಷನಾಗುವ ಸುದಿನವನ್ನು ಎದುರು ನೋಡುತ್ತೇವೆಂದೂ, ನೀವೇ ಸ್ವರಾಜ್ಯ ಸ್ವಾತಂತ್ರ್ಯ ದೊರಕಿಸಬೇಕೆಂದೂ ಭಾಷಣ ಮಾಡಿದ್ದಾರೆ.

ಮುಸಲಮಾನರ ಅವಿಚಾರಗಳ ಅತ್ಯಾಚಾರ.

——)(o)(——

ಲಾಹೋರಿನ ಕಾಂಗ್ರೆಸದ ಲಜಪತರಾಯನಗರದಲ್ಲಿ ಪ್ಲ್ಯಾಸ್ಟರದಿಂದ ಮಾಡಿದ ಲಜಪತರಾಯರ ಮೂರ್ತಿಯನ್ನು ತೆರೆಯುವ ಸಮಾರಂಭವು ಡಾಕ್ಟರ. ಕಿಚಲುಸಾಹೇಬರಿಂದಲೇ ನೆರವೇರಿಸಲ್ಪಟ್ಟಿತು. ಆದರೆ ಕಿಚಲುಸಾಹೇಬರ ಕುಲಪವರೇ ಆದಂಥ ಈರ್ವರು ತರುಣರು ಮೊಬ್ಬುಗತ್ತಲೆಯಾದ ಕೂಡಲೆ- ಈ ಮೂರ್ತಿಯ ಹತ್ತರ ಹೋದವರೇ- ಕಲ್ಲು ಇಟ್ಟಿಗೆಗಳಿಂದ ಅದನ್ನು ಭಿನ್ನ ಮಾಡಿ, ಸಾಯಕಲ ಹತ್ತಿ ಪಲಾಯನ ಹೇಳಿಸಿದರು. ಈ ಕೃತ್ಯವು ಲಾಹೋರಿನಲ್ಲಿ ವಿಶೇಷ ಚಳವಳಿಯನ್ನುಂಟುಮಾಡಿದೆ.

ಮುಂಬಯಿ ಸಂಸ್ಥಾನದವರು [illegible]ಕಗಳ ಧ್ವಂಸಮಾಡುವ . ಕುರಿತು ಉಪಾಯ ಯೋಚಿಸಲು ಒಂದು ಕಮಿಟಿ ನೇಮಿಸಿದ್ದರು. ಈ ಕಮಿಟಿಯವರ ರಿಪೋರ್ಟು ಬರೆದು ಸಿದ್ಧವಾಗಿದ್ದು, ಮಂಗಗಳಿಂದ ಪ್ರತಿವರ್ಷ ೨೦ ಲಕ್ಷದ ಹಾನಿಯಾಗುತ್ತದೆಂದು ಅಭಿಪ್ರಾಯ ಪಟ್ಟಿದ್ದಾರೆ.

ಆರೋಪಿಗಳ ಸಂಖ್ಯೆಯು ಹೆಚ್ಚಿತು.

—(೦)—

ಲಾಹೋರಿನಲ್ಲಿ ನಡೆದ ಕೊಲೆಯ ಆರೋಪಿಗಳ ಸಂಖ್ಯೆಯು ಆಗಾಗ್ಗೆ ಬೆಳೆಯುತ್ತದೆ. ಈ ವಾರದಲ್ಲಿ ಕನ್ನಯಲಾಲನೆಂಬವನನ್ನು ಸೇರಿಸಿಕೊಂಡರು. ಈತನು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಕಾಲಿಟ್ಟ ಕೂಡಲೆ- ಸಾಮ್ರಾಜ್ಯಕ್ರಾಂತಿಯ ಜಯಜಯಕಾರವಾಗಲಿ; ಲಜಪತರಾಯ ಭಗತಸಿಂಗ, ಜತೀನದಾಸರ ಜಯಜಯಕಾರವಾಗಲಿ ಎಂದು ಕೂಗಿ ಮ್ಯಾಜಿಸ್ಟ್ರೇಟರೇ ಆರೋಪಿಗಳ ಸಂಖ್ಯೆಯು ಹೆಚ್ಚುತ್ತಿರುವದು. ಅದಕ್ಕೆ ತಕ್ಕಂತೆ ಕೂಡ್ರುವ ಸ್ಥಳವನ್ನು ಹೆಚ್ಚಿಸಲೊಲ್ಲಿರೆಂದನು. ತಥಾಸ್ತು ಸ್ಥಳದ ವ್ಯವಸ್ಥೆ ಮಾಡುವೆನೆಂದು ಸರಕಾರೀ ವಕೀಲನು ಇವನಿಗೆ ಉತ್ತರ ಕೊಟ್ಟನು.

ಕೊಡಗು ಮತ್ತು ಕರ್ನಾಟಕ ಏಕೀಕರಣ.

—೦—

ಲಾರ್ಡ ಆಯರ್ವಿನ ಸಾಹೇಬರು ಮೈಸೂರನ್ನು ನೋಡಿಕೊಂಡ ನಂತರ ಕೊಡಗಿಗೆ ಹೋದರು. ಅಲ್ಲಿಯ ಜಮೀನದಾರ ಸಂಘದವರು ಸಾಹೇಬರಿಗೆ ಮಾನಪತ್ರವನ್ನರ್ಪಿಸಿ, ಕರ್ನಾಟಕದ ಏಕೀಕರಣಮಾಡಬೇಕೆಂದು ವಿನಂತಿ ಮಾಡಿಕೊಂಡರು "ಏಕೀಕರಣದ ವಿಷಯವು ಸಾಯಮನ್ನ ಕಮಿಟಿಯ ಮುಂದೆ ಉಂಟು. ಆದ್ದರಿಂದ ಈ ವಿಷಯವಾಗಿ ಸಧ್ಯದಲ್ಲಿ ನಾನೇನೂ ಹೇಳಲಾರೆನು. ಸಾಯಮನ್ನ ಕಮೀಶನದ ನೆವನ ಮುಂದೆ ಮಾಡಿಕೊಂಡು, ನಾನು ನಿಮಗೆ ಉತ್ತರ ಕೊಡುವದನ್ನು ತಪ್ಪಿಸಿಕೊಳ್ಳುತ್ತೇನೆಂದು ಮಾತ್ರ ತಿಳಿಯಬೇಡಿರೆಂದು ಸಾಹೇಬರು ಉತ್ತರ ಕೊಟ್ಟಿದ್ದಾರೆ.

ಹೆಂಡತಿಯು ಸತ್ತದ್ದಕ್ಕಾಗಿ ಗಂಡನ ಆತ್ಮಹತ್ಯೆ.

—(೦)—

ಜಪಾನ ದೇಶದ ಮುತ್ಸದ್ದಿ ಮತ್ತು ಚೀನ ದರಬಾರದಲ್ಲಿ ಉಪ ರಾಯಭಾರಿಯಾಗಿರುವ ಸಾಬೂರಿ ಎಂಬವನು ತನ್ನ ಸತ್ತ ಹೆಂಡತಿಯ ಮೂರನೆಯ ವರ್ಷದ ಶ್ರಾದ್ಧ ಮಾಡಲಿಕ್ಕೆ ಟೋಕಿಯೋಕ್ಕೆ ಹೋದನು. ಅಲ್ಲಿ ಶ್ರಾದ್ಧ ಮಾಡುವ ಬದಲು ಗುಂಡು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡನು. ಇಂಥ ಹುಚ್ಚು ಜಪಾನರಲ್ಲಿ ಬಹಳ. ಮಿಕಾಡೋಸಾಹೇಬರು ಸತ್ತ ಕೂಡಲೆ- ತಮಗೆ ಈ ನಂತರ ಇಂಥ ಧನಿಯು ದೊರೆಯಲಾರನೆಂದು ಜಗದ್ವಿಖ್ಯಾತ ವೀರನಾಗಿದ್ದ ಓಯಾಮಾ ಮತ್ತು ಆತನ ಹೆಂಡತಿಯು ಚೂರಿಯಿಂದ ನಾಲಿಗೆ ಕೊಯ್ದುಕೊಂಡು ಜೀವ ಕೊಟ್ಟದ್ದು ಇತಿಹಾಸ ಪ್ರಸಿದ್ಧ ಸಂಗತಿಯಾಗಿರುತ್ತದೆ.

ಪ್ರಥಮ ಕರ್ನಾಟಕ ವಾಚನಾಲಯ ಪರಿಷತ್ತು.

—೦—

ಸ್ವಾಗತ ಮಂಡಲದ ಮೊದಲನೆಯ ಸಭೆ.

—(೦)—

ಈ ಮೊದಲೇ ತಿಳಿಸಿದಂತೆ ೧-೧೨-೨೮ನೆಯ ದಿನ ೩॥ ಗಂಟೆಗೆ ಶ್ರೀ. ಶಾಂತೇಶ ವಾಚನಾಲಯದಲ್ಲಿ ಶ್ರೀ. ಸಾಡಗೀರ ಭಾಸ್ಕರರಾಯರ ಅಧ್ಯಕ್ಷತೆಯಲ್ಲಿ ಸ್ವಾಗತ ಮಂಡಲದ ಸಭೆಸೇರಿತ್ತು. ಹಾನಗಲ್ಲ, ದೇವಗಿರಿ, ಹಿರೇಕೇರೂರ, ಹುಬ್ಬಳ್ಳಿ, ಮೊದಲಾದ ಊರಿಂದ ವಾಚನಾಲಯಗಳ ಪ್ರತಿನಿಧಿಗಳು ಬಂದಿದ್ದರು. ಕೆಳಗೆ ಕಾಣಿಸಿದ ಗೊತ್ತುಗಳು ಅಂಗೀಕೃತವಾದುವು.

೧ ಶ್ರೀ. ಕುಲಕರ್ಣಿ ಕರವೀರಪ್ಪನವರು ಸ್ವಾಗತಾಧ್ಯಕ್ಷರಾಗಬೇಕು. ಶ್ರೀ. ಮಹಿಷಿ ಅಶ್ವತ್ಥರಾಯರೂ (ತಿರಪಟ್ಟಿ) ಶ್ರೀ. ದಿವಾಕರ ರಂಗರಾಯರೂ ಉಪಾಧ್ಯಕ್ಷರಾಗಬೇಕು. ೨ ಶ್ರೀ. ಗುಂಜೆ ಕೃಷ್ಣರಾಯರು ಕಾರ್ಯಾಧ್ಯಕ್ಷರು. ಶ್ರೀ. ಕಮಲಾಪೂರ ಶಂಕರರಾಯರೂ ಶ್ರೀ. ಮಿರ್ಜಿ ವೆಂಕಣ್ಣವರೂ ಶ್ರೀ. ಸಂಕಣ್ಣವರ ರುದ್ರಪ್ಪನವರೂ (ಬ್ಯಾಡಗಿ) ಕಾರ್ಯದರ್ಶಿಗಳು. ಶ್ರೀ. ಕುಲಕರ್ಣಿ ಗುರುರಾಯರು ಕೋಶಾಧ್ಯಕ್ಷರು. ೩ ಕಾತರ್ಯಾತ್ತ ಉಪಮಂಡಲಗಳೇ ಪರಿಷತ್ತಿನ ಕಾರ್ಯಕಾರೀ ಉಪಮಂಡಲಗಳಾಗಿರತಕ್ಕದ್ದು. ೪ ವಿಷಯಾಲೋಚನಾ ಸಭೆಯಲ್ಲಿ ಶ್ರೀ. ಆಲೂರ ವೆಂಕಟರಾಯರು, ದಿವಾಕರ ರಂಗರಾಯರು, ಕುಲಕರ್ಣಿ ಕರವೀರಪ್ಪನವರು, ನವಗುಂದ ರಾಮರಾಯರು, ಬೆಂದ್ರೆ ದತ್ತಾತ್ರೇಯರು ರಾಜಪುರೋಹಿತ ನಾರಾಯಣಾಚಾರ್ಯರು ಇವರು ಇರಬೇಕು. ೫ ಪರಿಷತ್ತಿನ ಅಧ್ಯಕ್ಷಪದಕ್ಕಾಗಿ ಆಂಧ್ರ ದೇಶವಾಚನಾಲಯ ಸಂಘದ ಅಧ್ಯಕ್ಷರಾದ ಬಿಜವಾಡದ ಶ್ರೀ. ಎಸ್. ವ್ಹಿ. ನರಸಿಂಹಶಾಸ್ತ್ರಿ ಅವರನ್ನು ಕೇಳಿಕೊಳ್ಳಬೇಕೆಂದು ಗೊತ್ತಾದ ಮೇರೆಗೆ ಬಿನ್ನಯಿಸಿಕೊಳ್ಳಲಾಯಿತು. ಅವರಿಂದ ಆಮಂತ್ರಣವನ್ನು ಸ್ವೀಕರಿಸಿದ ಬಗ್ಗೆ ಇದೀಗ ತಂತಿ ಬಂದಿದೆ.

ಧಾರವಾಡ ಜಿಲ್ಹೆಯ ಎಲ್ಲ ಭಾಗದ ಅಭಿಮಾನಿಗಳೂ ವಿಶೇಷ ಪ್ರಯತ್ನದಿಂದ ಈ ಕಾರ್ಯದಲ್ಲಿ ನೆರವಾಗಿ ತಮ್ಮ ಜಿಲ್ಹೆಗೆ ಶ್ರೇಯಸ್ಸನ್ನು ದೊರಕಿಸಬೇಕೆಂದು ಪ್ರಾರ್ಥನೆ. ಎಲ್ಲ ಕನ್ನಡಿಗರೂ ಧಾರವಾಡ ಜಿಲ್ಹೆಯವರು ಕೈಕೊಂಡ ಈ ಕಾರ್ಯದಲ್ಲಿ ಪ್ರತಿನಿಧಿಗಳಾಗಿ ಬಂದು ವಾಚನಾಲಯದ ಚಟುವಟಿಕೆಯು ಕರ್ನಾಟಕದಲ್ಲಿ ಪ್ರಸಾರವಾಗುವಂತೆ ಪರಿಷತ್ತನ್ನು ಯಶಸ್ವಿಯಾಗಿ ಮಾಡಬೇಕಾಗಿ ಬೇಡಿಕೆ.

ತಮ್ಮ ವಿಧೇಯರಾದ

ಧಾರವಾಡ — ಕಾ. ಶ್ರೀ. ಕಮಲಾಪೂರ.

೩-೧೨-೨೮ — ವೆ. ಶ್ರೀ. ಮಿರ್ಜಿ.

ರು. ಫ. ಸಂಕಣ್ಣವರ

ಕಾರ್ಯದರ್ಶಿಗಳು.

೧೯೩೦ನೇ ಇಸ್ವಿಯ ಹಿಂದೀ ಪರೀಕ್ಷೆಗಳ ಪಾಠ್ಯಕ್ರಮ.

—(೦)—

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ ಮದ್ರಾಸದ ಪರವಾಗಿ ಬರುವ ೧೯೩೦ ಫೆಬ್ರುವಾರಿ ಮತ್ತು ಸಪ್ಟಂಬರ ತಿಂಗಳುಗಳಲ್ಲಿ ಜರುಗತಕ್ಕ ಹಿಂದೀ ಪರೀಕ್ಷೆಗಳ ಪಾಠ್ಯಕ್ರಮ ಮತ್ತು ಪಾಠ್ಯಪುಸ್ತಕಗಳು ಕೆಳಗೆ ಬರೆದ ಪ್ರಕಾರವಿರುತ್ತವೆ.

ಪಾಠ್ಯಕ್ರಮ.

ಪ್ರಾಥಮಿಕ ಪರೀಕ್ಷೆ:- ಈ ಪರೀಕ್ಷೆಯಲ್ಲಿ ೩ ತಾಸಿನ ಒಂದು ಪ್ರಶ್ನಪತ್ರವಿರುವದು. ಪ್ರಶ್ನೆಗಳು ಪಾಠ್ಯಪುಸ್ತಕದೊಳಗಿನವೇ ಇದ್ದು; ಮಾತೃಭಾಷೆಯಿಂದ ಹಿಂದೀ ಭಾಷೆಗೂ, ಹಿಂದೀ ಭಾಷೆಯಿಂದ ಮಾತೃಭಾಷೆಗೂ ಭಾಷಾಂತರಿಸುವ ಪ್ರಶ್ನೆಗಳೂ ಇರುವವು. ಈ ಪರೀಕ್ಷೆಯಲ್ಲಿ ನೂರಕ್ಕೆ ೩೫ ಗುಣ ಹೊಂದಿದವರು ಪಾಸಾಗುವರು.

ಮಧ್ಯಮಾ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳು:- ಈ ಪರೀಕ್ಷೆಗಳಲ್ಲಿ ೩ ತಾಸಿನ ಎರಡು ಪ್ರಶ್ನಕಾಗದಗಳು ಇರುವವು. ಮೊದಲನೇ ಪ್ರಶ್ನಕಾಗದದಲ್ಲಿ ಪಾಠ್ಯಪುಸ್ತಕಗಳೊಳಗಿನ ಪ್ರಶ್ನೆಗಳು ಇರುವವು. ಮತ್ತು ಎರಡನೇದರಲ್ಲಿ ನಿಬಂಧ, ವ್ಯಾಕರಣ ಮತ್ತು ಭಾಷಾಂತರದ ಪ್ರಶ್ನೆಗಳು ಇರುವವು. ಈ ಪರೀಕ್ಷೆಗಳಲ್ಲಿ ೧೦೦ಕ್ಕೆ ೩೫ ಗುಣ ಹೊಂದಿದವರು ಉತ್ತೀರ್ಣರೆಂದು ತಿಳಿಯಲ್ಪಡುವರು.

ಪಾಠ್ಯಪುಸ್ತಕಗಳು.

ಪ್ರಾಥಮಿಕ ಪರೀಕ್ಷೆ:- ಬಾಲಬೋಧಿನೀ; ಹಿಂದೀಕೀ ಪಹಲೀ ಪುಸ್ತಕ; ಹಿಂದೀಕೀ ದೂಸರೀ ಪುಸ್ತಕ; ಮಹೋಪಕಾರ ಕಹಾನಿಯಾ ಮತ್ತು ಅನುವಾದಮಾಲಾ, ಭಾಗ ೧ ಪರೀಕ್ಷೆಯ ಫೀ. ೬ ಆಣೆ.

ಮಧ್ಯಮಾ ಪರೀಕ್ಷೆ:- ತೀಸರೀ ಪುಸ್ತಕ, ಮೋಹನಪತನ; ಆರೋಗ್ಯದ್ವಾರ; ಏಕಾಂತವಾಸೀ ಯೋಗಿ ಪರೀಕ್ಷೆಯ ಫೀ. ೧೨ ಆಣೆ.

ರಾಷ್ಟ್ರಭಾಷಾ ಪರೀಕ್ಷೆ:- ದುರ್ಗಾದಾಸ (ನಾಟಕ) ಸಿಂಹಗಡ ವಿಜಯ; ರೇಲ ಹಿಂದೀನಾರಾ; ತಿಲಿಸ್ಮಾತಿಮುಂದಿರಿ ಮತ್ತು ವಿಲಿನ ಪರೀಕ್ಷೆಯ ಫೀ. ೧ ರೂ. ೮ ಆಣೆ.

ಈ ಮೇಲ್ಕಂಡ ಮೂರು ಪರೀಕ್ಷೆಗಳಲ್ಲದೆ; ರಾಷ್ಟ್ರಭಾಷಾವಿಶಾರದ ಮತ್ತು ಪ್ರಚಾರಕ ಎಂಬ ಎರಡು ಉಚ್ಚ ತರಗತಿಯ ಪರೀಕ್ಷೆಗಳು ಜರುಗುತ್ತವೆ. ಸದರೀ ಉಚ್ಚ ತರಗತಿಯ ಪರೀಕ್ಷೆಗಳಿಗೆ ಕೂಡ್ರಬಿಚ್ಛಿಸುವವರು ಅವುಗಳ ಪಾಠ್ಯಕ್ರಮ ಮತ್ತು ಪಾಠ್ಯಪುಸ್ತಕಗಳನ್ನು ದ. ಭಾ. ಹಿಂದೀ ಪ್ರಚಾರ ಸಭೆ ಮದ್ರಾಸಕ್ಕಾಗಲೀ ಅಥವಾ ಕೆಳಗೆ ಸಹೀ ಮಾಡಿದವರ ಕಡೆಗಾಗಲೀ ೨ ಆಣೆಯ ಸ್ಟಾಂಪು ಕಳಿಸಿ

ಜಾಹೀರ ನೋಟೀಸು

—(೦)—

ಕೆಳಗೆ ಸಹಿ ಮಾಡಿದ ಜಮಾಲಸಾಬ ವಲ್ಲದ ಶಿಲಾರಸಾಬ ಬಳ್ಳಾರಿ ಸಾ|| ತುಮ್ಮಿನಕಟ್ಟಿ ತಾಲ್ಲೂಕ ರಾಣೆಬೆನ್ನೂರ ಜಿಲ್ಲಾ ಧಾರವಾಡ ನಾನು ಯಾವತ್ತು ಜನರಿಗೆ ತಿಳಿಸುವದೇನಂದರೆ- ನನ್ನ ಮುಡಿಕೆ ಹೆಂಡತಿ ಬಾಲೇಖಾಬು ಯಂಬುವ ಹೆಸರಿನ ಯಣ್ಣೆಗರೆ ಬಣ್ಣದ ಸ್ವಲ್ಪ ಗಿಡ್ಡ ಹೆಂಗಸು ಕಣ್ಣುಗಳು ಸ್ವಲ್ಪ ದೊಡ್ಡವಾಗಿ ಸಣ್ಣ ಮೂಗಿನ ದುಂಡು ಮುಖದವಳು ಎಡದು ಕಾಲಿನ ಮೀನ ಖಂಡದ ಕೆಳಗೆ ಕೆರೆದಿರುವಂಥ ಗುರ್ತು ಇರುತ್ತದೆ ಇಂಥಾ ಚಹರೆಯುಳ್ಳ ಅಸಮಾಸು ೨೫ ವರ್ಷದ ವಯಸ್ಸಿನವಳು ತನ್ನ ಹೊಟ್ಟೆಲೆ ಹುಟ್ಟಿದ ಅಸಮಾಸ ಮೂರು ವರ್ಷದ ವಯಸ್ಸಿನ ಕೆಂಪು ಬಣ್ಣದ ವ ಕೆಂಗೂದಲುಳ್ಳ ಥಂದ ಮುಖದ ಒಂದು ಹೆಣ್ಣು ಕೂಸನ್ನು ತನ್ನ ಸಂಗಡ ತಗೊಂಡು ತನ್ನ ತವರಮನಿಗೆ ಹಿರೆಕೇರೂರ ತಾಲ್ಲೂಕ ಪೈಕಿ ರಟ್ಟಿಹಳ್ಳಿ ಗ್ರಾಮಕ್ಕೆ ಹೋದವಳು ಅಲ್ಲಿಂದಾ ತಲಿ ಕೆಟ್ಟವಳಾಗಿ ಕೂಸು ತಗೊಂಡು ಮೈಮೇಲೆ ಇದ್ದ ದಾಗೀನೆ ಸಮೇತವಾಗಿ ಎಲ್ಲಿಯೋ ಹೋಗಿರುತ್ತಾಳೆ ಅವಳ ಪತ್ತೆ ಹಚ್ಚಿ ಅವಳನ್ನು ಕೂಸು ದಾಗೀನೆ ಸಮೇತವಾಗಿ ತಂದು ಕೊಟ್ಟು ನನ್ನ ಮನಸ್ಸು ಸಂತೋಷ ಪಡಿಸಿದವರಿಗೆ ಇಪ್ಪತ್ತೈದು ೨೫ ರೂಪಾಯಿ ಇನಾಮು ಕೊಡುವದರಲ್ಲಿ ಬರುವದು ತಿಳಿಯುವದು ತಾ|| ೧-೧೨-೧೯೨೭

ಸಹಿ- ಜಮಾಲಸಾಬ ಶಿಲಾರಸಾಬ ಬಳ್ಳಾರಿ
ಸಾಕೀನ ತುಮ್ಮಿನಕಟ್ಟಿ

ಶೀರೆ|| ಪತ್ತಲ|| ಕಿರಗಿ|

ಶ್ರೀದತ್ತ ವೀವ್ಹಿಂಗ್ ಮಿಲ್
ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ
ಶೀರೆಯ ಮಿಲ್ಲು.

—(೦)—

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯ ದರದಿಂದ ಸಿಗುತ್ತವೆ. ಅವಕಾಶ ಮಾಡಿ, ನಿಮಗೆ ಬೇಕಾದ ಮಾಲು ಕೊಂಡು ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ, ಬಣ್ಣ ಹೋದರೆ ಮಾಲು ತಿರಿಗಿ ತಕ್ಕೊಳ್ಳುವೆವು.

ಮಾಲಕ:— ಡಿ. ಜಿ. ಕಾಳೆ ಬ್ರದರ್ಸ
ಕೊಪ್ಪಿಕರ ರೋಡ ಹುಬ್ಬಳ್ಳಿ

ಅನೇಕ ಔಷಧಗಳನ್ನು ಸೇವಿಸಿ
ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂಜೀವ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವದೇ ಬಣ್ಣದ ಹಳಿಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದೆಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ನೃಸ್ವರ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕಿಬಾಯಿ ದೀಕ್ಷಿತ
C/o ಮಧ್ಯಬ್ಯಾಂಕ ಧಾರವಾಡ

ಪ್ರಿಯ ಸಿವ್ಹ ಔಷಧ ಬೇಡುವಾಗ, ಯಾವ ವರ್ತಮಾನಪತ್ರದ ಜಾಹೀರಾತಿನ ಮೂಲಕ ಈ ಬೇಡಿಕೆಯನ್ನು ಮಾಡಿರುವಿರೆಂಬುದನ್ನು ಬರೆಯಬೇಕು. ೮

THE ANKALIGI BANK LTD.

Head Office–
Kamankatta Dharwar
Branches
Ranebennur & Hirekerur
5%
Interest allowed on
ANNA SAVINGS *BANK*
DEPOSIT.

Dharwar 3-1-1927 } K. B. ANKALIGI
Managing Director

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಪತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ- ಇಂಗ್ಲಿಷನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

THE- UNITED KARNATAK IN-SURANCE OC LTD DHARWAR-

ದಿ ಯುನಾಯಿಟೆಡ್. ಕರ್ನಾಟಕ
ಇನ್ಸ್ಯುಯರನ್ಸ ಕಂಪನಿ ಲಿಮಿಟೆಡ್
ಧಾರವಾಡ.

ಎಜಂಟರು ಬೇಕು.

ಮೇಲೆ ಕಾಣಿಸಿದ ಕಂಪನಿಯ ಶೇರುಗಳನು ಕಮಿಶನದ ಮೇಲೆ ಮಾರಾಟ ಮಾಡಲಿಕ್ಕೆ ಎಜಂಟರು ಬೇಕಾಗಿದ್ದಾರೆ ಈ ಕೆಲಸ ಮಾಡಲಿಚ್ಛಿಸುವರು ಪತ್ರ ಬರೆದು ಅಥವಾ ಸಮಕ್ಷಮ ಮಾಹಿತಿ ಪಡಕೊಳ್ಳಬೇಕು

ಸೇಕ್ರೆಟರಿ
ಯು. ಕ. ಇ. ಕ. ಧಾರವಾಡ.

ಚಂದಾದಾರರಿಗೆ ಸೂಚನೆ

ಡಿಸೆಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು ಅಂಗಣ್ಣಾಚಾರ್ಯ ವಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧಮಾಡಿದರು.

R N. B. 1440

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೦) ಧಾರವಾಡ ಗುರುವಾರ ತಾರೀಖು ೫ ನೇ ಡಿಸೆಂಬರ ೧೯೨೮ (ಸಂಚಿಕೆ ೨೬೩

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ.

ಮಂಗಳವಾರ ಪೇಠ ಜೋಗ ವಕೀಲರ ಮನೆಯಲ್ಲಿ.

ದಾಗೀನೆಗಳ ಮತ್ತೀ ಮೇಲೆ ಸೋಯಿ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನಿಯ ಅಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಲಿರುವದು. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ಮತ್ತು ಬೆಳ್ಳಿ ದಾಗಿನೆಗಳ ಮೇಲೆ ಸೋಯಿ ಬಡ್ಡೀ ದರದಿಂದ ಸಾಲ ಕೊಡುವ ವ್ಯವಸ್ಥೆಯುಂಟು. ದಾಗಿನೆ ಮತ್ತೀ ಇಟ್ಟವರು ಮೊದಲನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ ೧೫ ದಿವಸಕ್ಕೊಮ್ಮೆ ಅಷ್ಟಷ್ಟೇ ರಕಮು ತಂದು ಕೊಟ್ಟರೂ, ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಅಷ್ಟಷ್ಟೇ ರಕಮು ಕೊಡುವದರಿಂದ, ಸಾಲದ ಭಾರ ಕಡಿಮೆಯಾಗಿ, ಬಡ್ಡಿಯೂ ಕಡಿಮೆಯಾಗುತ್ತಾ ಬರುವದು. ಧಾರವಾಡ ಮುಂತಾದ ಪಟ್ಟಣವಾಸಿಗಳು ಈ ಸೋಯಿಯ ಫಾಯದೆ ತಕ್ಕೊಳ್ಳುತ್ತಿದ್ದಾರೆ. ಇದರ ಇದರ ಮಹತ್ವವು ಮತ್ತು ಉಪಯೋಗವು ಹಳ್ಳಿಯ ಜನರಿಗೂ ಆಗಲೆಂದು ಈ ಜಾಹೀರನಾಮೆ ಪ್ರಸಿದ್ಧ ಮಾಡಿ, ಮುದ್ದಾಂ ಹಳ್ಳಿಗರಿಗೆ ತಿಳಿಸಿದ್ದೇವೆ. ಹಳ್ಳಿಯಲ್ಲಿ ಬಡ್ಡಿಯ ದರವು ರೂಪಾಯಕ್ಕೆ ಒಂದು ಪೈ ದಿಂದ ಆರು ಪೈ ವರೆಗೆ ಇರುತ್ತದೆ. ಅದೂ ಒತ್ತಾಯದಿಂದ ಕೊಡಬೇಕಾಗುತ್ತದೆ. ಹೀಗಾಗಿ ಎಷ್ಟೋ ಜನ ಬಡವರೂ ಇಲ್ಲಿ; ಶ್ರೀಮಂತರ ದಾಗಿನೆಗಳು ಸಹ ಸಾಹುಕಾರರ ಅಸಲು ಮತ್ತು ಬಡ್ಡಿಯಲ್ಲಿ ಮುಳುಗಿಹೋಗಿ ದೊರೆಯುವದಿಲ್ಲ. ಆ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ದಾಗಿನೆ ಮತ್ತೀ ಇಟ್ಟರೆ ಆಗುವದಿಲ್ಲ. ಹೇಗೆಂದರೆ ಸ್ವಲ್ಪ ರಕಮು ಕೊಟ್ಟರೂ ಅದನ್ನು ತಕ್ಕೊಂಡು ಸಾಲದ ಭಾರವನ್ನು ಕಡಿಮೆಮಾಡುತ್ತಾ ಬರುತ್ತೇವೆ. ಇಂಥ ಸೋಯಿಯು ಹಳ್ಳಿಗಳಲ್ಲಿ ದೊರೆಯುವದಿಲ್ಲ. ಆದ್ದರಿಂದ ಹಳ್ಳಿಯಲ್ಲಿ ಸಾಲ ಬೇಕಾದವರು ನಮ್ಮ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ. ಅದರ ಫಾಯದೆ ಪಡೆಯಬೇಕು. ನಮ್ಮ ಬಡ್ಡೀ ದರವು ನೂರು ರೂಪಾಯಿಯ ವರೆಗೆ ಒಂದು ತಿಂಗಳಿಗೆ ಒಂದು ರೂಪಾಯಿನ ಎರಡು ಪೈ ಇರುತ್ತದೆ. ನೂರರ ಮೇಲಿನ ರಕಮಿಗೆ ಬಡ್ಡೀ ದರ ಖಾಸ ಭೆಟ್ಟಿಯಿಂದ ಅಥವಾ ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಗಳ ಜನರು ಶಹರದ ಊರಿಗೆ ಬಂದಾಗ ಸಾಹುಕಾರರ ಮನೆಯಲ್ಲಿ ಅವರು ಹೇಳಿದಷ್ಟು ಬಡ್ಡಿ ಕರಾರ ಮಾಡಿ ಸಾಲ ತೆಗೆದುಕೊಳ್ಳುವರು. ಮತ್ತು ಗಂಡಾಂತರ ತಿಳಿಯದೆ ಲುಕ್ಸಾನ ಮಾಡಿಕೊಳ್ಳುವರು. ಹೀಗೆ ಬ್ಯಾಂಕಿನಲ್ಲಿ ಮಾತ್ರ ಆಗುವದಿಲ್ಲ. ಹಳ್ಳಿಗಳ ಜನರು ನಮ್ಮಲ್ಲಿ ಒಂದಾವರ್ತಿ ವ್ಯವಹಾರ ಮಾಡಿ ಖಾತ್ರಿ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಪೆಟ್ಟಿಗೆಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ ಎಲ್ಲದಕ್ಕಿಂತಲೂ ಸೋಯಿಯಿಂದ ಸಿಗುವದು.

ಕೃಷ್ಣರಾವ ವೆಂಕಟರಾವ ಭಂಡಿವಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ೨ ಎಂಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಚಾಲು ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀ.

ಮ್ಯಾನೇಜಿಂಗ ಡಾಯರೆಕ್ಟರ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಖಾಸ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಮತ್ತೀ ಇಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨
೬ ,,	
೪ ,,	

ವಾರ ಪತ್ರಕ್ಕೆ ೧ ವರ್ಷಕ್ಕೆ

ಹೆಚ್ಚಿನ ಮಾಹಿತಿ ಕೆಳಗಿನ ಕೊಳ್ಳಿರಿ,

ವಿಜಯ

ವಿಜಯ.

ಧಾರವಾಡ ತಾ- ೫-೧೧-೨೯ನೇ ಇಸ್ವಿ.

ಶ್ರೀ.

ಅ ವಿಜಯಂ ಶ್ರೀಶಪ್ರಿಯ
ನೀ ವಸುಮತಿಯ ನಲಿಸಿ ಸುಹಿತಚರಿತೆಗಳಿಂ ||
ದೀ " ವಿಜಯಂ " ಶ್ರೀಶಕರುಣ ।
ನಾವಿಹಿತಂಗಳ ವಿನಾಶಿಸಲಿಪ್ಪುದು ಸಾಜಂ ||೧||

ದಶಮುಖರಾವಣಗೆ ಶತಮುಖರಾವಣನ ದರ್ಶನ.

ಲಾರ್ಡ ಬರ್ಕನಹೆಡ್ಡ ಸಾಹೇಬರು ಭಾರತ ಮಂತ್ರಿಯಾಗಿರುವಾಗ ಹಿಂದುಸ್ಥಾನಕ್ಕೆ ಮಂಗಲಬಹಿ ಬಿಸುನ್ನು ತಿನಿಸುತ್ತಾ ಹೋದರು. ಲಾರ್ಡ ರೀಡಿಂಗರ ಕುಚೇಷ್ಟೆಯಿಂದ ಹೆಸರಿಗೆ ಮುದಿಮನ ಕಮೀಟಿ ನೇಮಿಸಿ, ಜನರು ರೊಟ್ಟಿ ಬೇಡಿದರೆ- ತಾವು ಕಲ್ಲು ಕೊಟ್ಟಂತೆ ಮಾಡಿದರು. ಸರ ಹೇಲಿಸಾಹೇಬರಿಂದ ಜವಾಬದಾರ ರಾಜ್ಯಪದ್ಧತಿಯೆಂದರೆ- ವಸಾಹಾತಿನ ಸ್ವರಾಜ್ಯವಲ್ಲೆಂದು ಅನಿಸಿದರು. ಮಹಾಭಾಷ್ಟ್ರ ದೇಶದ ಓರ್ವಸಾಧುವು ಕೋಣನಿಂದ ವೇದವನ್ನು ನುಡಿಸಲಿಲ್ಲವೇ? ಕಾನ್ಸರವೇಟಿವ್ಹರೇ ದಿವಾನರಾಗಿದ್ದರೆ- ಲಾರ್ಡ ಬರ್ಕನಹೆಡ್ಡರೇ ಭಾರತ ಮಂತ್ರಿಯಾಗಿದ್ದರೆ- ಹಿಂದುಸ್ಥಾನವು ವಸಾಹಾತಿನ ಸ್ವರಾಜ್ಯದ ಹೆಸರು ತೆಕ್ಕೊಳ್ಳುವದು ಕೂಡ ಬಹುದಿನದ ಕನಸಾಗುತ್ತಿತ್ತು. ಮಹಾತ್ಮಾ ಗಾಂಧಿಯವರು ಜನಿವರಿಯ ೧ನೆಯ ತಾರೀಖು ಬೆಳಗಾದ ಕೂಡಲೆ- ಅಸಹಕಾರ ಮತ್ತು ಕಾಯದೆಭಂಗದ ವೀರನಾದ ಮಾಡುವದು ಬ್ರಹ್ಮಲಿಖಿತವಾಗುತ್ತಿತ್ತು. ದೇವರ ಇಚ್ಛೆಗೆ ಸದ್ಯ ಇವೆಲ್ಲ ನೋಡಲಿಕ್ಕೆ ಕೇಳುವ ಇಚ್ಛೆ ಇದ್ದಂತೆ ತೋರುವದಿಲ್ಲ. ಲಾರ್ಡ ಬರ್ಕನಹೆಡ್ಡ ಸಾಹೇಬರಿಗೆ, ತಮ್ಮ ಪಕ್ಷವು ಅಧಿಕಾರಾರೂಢವಾಗಿರುವಾಗಲೇ, ಯಾವನೊಂದು ವ್ಯಾಪಾರದ ಕಂಪನಿಯಲ್ಲಿ ಸೇರಿ, ಹೆದಿಗೆ ತುಂಬ ದ್ರವ್ಯಸಂಪಾದನೆ ಮಾಡುವ ಬುದ್ಧಿ ಕೊಟ್ಟನು. ಮುಂದೆ ಕಾನ್ಸರವೇಟಿವ್ಹರಿಗೇ ಇಳಿತರ ಕಂಡು ಕೂಲಿಕಾರರ ಮೇಲ್ಮೆಯನ್ನು ಹೆಚ್ಚಿಸಿದನು. ಕೂಲಿಕಾರರು ಮುಂದೆ ಹೀಗೇ ನಡೆದರೆ; ಈಗ್ಗೆ ಹಿಂದೂ ಜನಾಂಗದ ತಲೆಗೆ ವಸಾಹಾತಿನ ಸ್ವರಾಜ್ಯದ ಬಾಸಿಂಗ ಕಟ್ಟಿ ಕೂಡ್ರಿಸಿದ್ದರೆ. ಇದು ಕೂಡ ಲಾರ್ಡ ಬರ್ಕನಹೆಡ್ಡ ಸಾಹೇಬರಿಗೆ ಸಮಾಧಾನ್ನುಂಟು ಮಾಡಿಲ್ಲ. ತಮ್ಮ ಪಾಲಿಗೆ ಅಪಕೀರ್ತಿ ಬಂದು ಕೂಲಿಕಾರರ ಪಾಲಿಗೆ ಕೀರ್ತಿ ಬಂತೆಂದು ಕಸವಿಸಿ ಪಡುತ್ತಿರಬಹುದು. ಆದ್ದರಿಂದ ಇವರು ದೈತ್ಯಗುರು ಶುಕ್ರಾಚಾರ್ಯನು ಬಲಿರಾಜನ ಉದಕದ ಗಿಂಡಿಯ ಬಾಯಿಯಲ್ಲಿ ಕೂತು, ಕಣ್ಣುಕಳಕೊಂಡನಷ್ಟೇ; ಅದೇ ಪ್ರಕಾರ ಇಂದು ಈ ಸಾಹೇಬರು ಕಣ್ಣಿಲ್ಲವಿದ್ದರೂ; ಮರ್ಯಾದೆ ಕಳಕೊಳ್ಳುತ್ತಿದ್ದಾರೆ. ತಾವು ಬಹಳ ದೊಡ್ಡ ಅನುಭವಿಗಳು; ರಾಜ್ಯ ತೂಗಿದವರು; ಎಂಬ ಹೆಮ್ಮೆಯಿಂದ ಸಾಹೇಬರು ಸ್ವರಾಜ್ಯದಿಂದ ಹಿಂದುಸ್ಥಾನದಲ್ಲಿ ಬೇಬಂದಶಾಹಿಯು ಮಾಜುವದೆಂದು ಸಾರಿ ಸಾರಿ ಹೇಳುತ್ತಲಿದ್ದಾರೆ. ಸಾಹೇಬರ ಈ ನುಡಿಯು ಅರಣ್ಯರೋದನವಾಗಿ ಪರಿಣಮಿಸುವದೆಂದು ನಿಃಸಂದೇಹವಾದದ್ದು.

ಲಾರ್ಡ ಬರ್ಕನ್ಹೆಡ್ಡ, ಚರ್ಚಹಿಲ್ಲ, ಮಾರ್ನಿಂಗ ಪೋಸ್ಟದ ಹೆಸರಿಸುವದಕ್ಕೆ ಕೂಲಿಕಾರರೆಷ್ಟು ಬೆದರಿರುವದಿಲ್ಲ. ಇವರು ಪ್ರತಿಪಕ್ಷಗಳ ಸಮಾಚಾರವನ್ನು ಚೆನ್ನಾಗಿ ತಕ್ಕೊಂಡಿದ್ದಾರೆ. ಪಾರ್ಲಮೆಂಟ ಸಭೆಯಲ್ಲಿಯೇ ಮಿ. ಬೆನ್ನ ವಜ್ಜವೃಡ್ಡ ಸಾಹೇಬರು ಬರ್ಕನ್ಹೆಡ್ಡರಿಗೆ ಹೆಡ್ಡ ಅಂದರೆ ತಲೆಯೇ ಇಲ್ಲೆಂದು ಧಿಕ್ಕರಿಸಿದರು. ಈಗ ಇವರ ಅಂಡರ ಸೇಕ್ರೆಟರಿಯಾದ ಡಾಕ್ಟರ ಡ್ರ್ಯುಮಂಡ ಸೀಲ ಸಾಹೇಬರು- ತಿಳಕೊಂಡವರಿಗೆ ಇರಕೊಂಡಂತಾಗುವಂಥ ಉತ್ತರ ಕೊಟ್ಟಿದ್ದಾರೆ ಲಾರ್ಡ ಸಾಹೇಬರೇ- ಹಿಂದುಸ್ಥಾನದ ಆಡಳಿತೆಯಲ್ಲಿ ನಮಗುಂಟಾದ ಎಡರುಗಳಿಗೆ ನೀವು ಬಹುಮಾಗಿ ಕಾರಣರಾಗಿದ್ದೀರಿ. ಜವಾಬದಾರರಾಗಿದ್ದೀರಿ. ಮತ್ತು ಹಿಂದುಸ್ಥಾನ ವಿಷಯವಾಗಿ ಯಾರೊಬ್ಬರ ಅಭಿಪ್ರಾಯ ಕೇಳುವದಾದರೆ. ಕಟ್ಟ ಕಡೆಗೆ ನಿಮ್ಮ ಬಾಗಿಗೆ ಬರುವದು. ಹಿಂದೀ ಜನರಲ್ಲಿ ಯಾವನೊಂದು ದೋಷವಿಲ್ಲ; ಅವರು ಮರ್ಯಾದಸ್ಥರೂ, ಸಜ್ಜನರೂ ಆಗಿದ್ದಾರೆ. ನೀವು ಅವರ ಈ ಗುಣಗಳನ್ನರಿಯದಿದ್ದದ್ದು ಆಶ್ಚರ್ಯವಲ್ಲ. "ಎಂದು ಇವರ ಮರ್ಮಕ್ಕೆ ಹತ್ತುವಂಥ ಉತ್ತರ ಕೊಟ್ಟಿದ್ದಾರೆ. ಈ ಉತ್ತರವು ಶತಮುಖ ರಾವಣನಿಗೆ ದಶಮುಖ ರಾವಣನು ಗಂಟುಬಿದ್ದಂತಾಗಿದ್ದು, ಈ ನಂತರ ಕೂಲಿಕಾರರ ಕೌನ್ಸಿಲದಲ್ಲಿ ತಮ್ಮ ಶಕುನಿ ನೀತಿಗೆ ಸ್ಥಳ ದೊರೆಯುವದಿಲ್ಲೆಂದು ಇವರು ತಿಳಕೊಂಡು ಸುಮ್ಮನಾಗುವದೇ ತಮ್ಮ ಮಾನವನ್ನು ತಾವು ಉಳಿಸಿ ಕೊಂಡಂತಾಗುತ್ತದೆ.

ಶ್ರೀಉತ್ತರಾದಿಮಠ ಮತ್ತು ಪದ್ಮಸರೋವರದ ತೀರ್ಥದ ನ್ಯಾಯ

ಶ್ರೀಮದುತ್ತರಾದಿ ಮಠದ ಶ್ರೀ ಪಾದಂಗಳವರು ತಿರುಪತಿಯ ಹತ್ತರಿರುವ ಪದ್ಮ ಸರೋವರದಲ್ಲಿ ಪ್ರತಿವರ್ಷ ನಾತಾಳ ರಜೆಯಲ್ಲಿ ನೆರೆಯುವ ಶ್ರೀಮನ್ಮಧ್ವಸಿದ್ಧಾಂತೋನ್ನೋಹಿನಿ ಸಭೆಯ ಕಾಲದಲ್ಲಿ ದೇಶದೇಶಗಳಿಂದ ಬರುವ ಮಾಧ್ವವೃಂದಕ್ಕೆ ತೀರ್ಥಕೊಡುವ ಮಾನವು ತಮಗೇ ಇರಬೇಕೆಂದು ಕೇಳಹತ್ತಿದ್ದು ಎರಡು ವರ್ಷಗಳಾದವು. ಮಾಧ್ವರಲ್ಲಿ ಉತ್ತರಾದಿ ರಾಘವೇಂದ್ರ ಮತ್ತು ವ್ಯಾಸರಾಯ ಎಂಬ ಮೂರು ಮಠಗಳಿದ್ದು, ಇವೂ ತಂತಮ್ಮ ಆಚಾರವಿಚಾರದಲ್ಲಿ ಸರ್ವತಂತ್ರ ಸ್ವತಂತ್ರವಾಗಿರುತ್ತವೆ. ಆದ್ದರಿಂದ ಮೂರೂ ಮಠಗಳ ಶಿಷ್ಯರು ಕೂಡಿದಲ್ಲಿ ಯಾರು ಹೆಚ್ಚು, ಯಾರು ಕಡಿಮೆ ಎಂಬ ಪ್ರಶ್ನಕ್ಕೆ ಜಾಗವೇ ಇರುವದಿಲ್ಲ. ಆದರೂ ಉತ್ತರಾದಿ ಮಠದ ಸ್ವಾಮಿಗಳು ತಾವೇ ಹೆಚ್ಚಿನವರೆಂದು ಉಳಿದ ಮಠಗಳ ಕೂಡ ನ್ಯಾಯ ತೆಗೆದದ್ದು ಅಯೋಗ್ಯ ಮತ್ತು ಅನ್ಯಾಯವಾದದ್ದು. ಶ್ರೀಗಳವರು ತಮ್ಮ ಶಿಷ್ಯರ ಬಹುಮತದ ಬಲದಿಂದ ತೀರ್ಥದ ಹಕ್ಕು ತಮ್ಮದೇ ಎಂದು ಬಹುಮತ ಮಾಡಿಕೊಂಡು, ಉತ್ತರಾದಿ ಮಠಕ್ಕೆ ಜಯವೆಂದು ದಕ್ಷಿಣ ದೇಶದಲ್ಲಿ ಘಂಟೆಗಳ ಹೊಡೆಯಿಸಿದರು. ವಾಸ್ತವಿಕವಾಗಿ ಈ ಪ್ರಕಾರ ಜಯಸೂಚಕ ಘಂಟೆಗಳ ಹೊಡಿಸುವ ಹಕ್ಕು ಮುಂದಿಲ್ಲಿಯೇ ಈ ಮಠಕ್ಕೆ ಇರುವದಿಲ್ಲ. ಏಕೆಂದರೆ- ವೈ. ಕಂ. ಚೀ. ಸುಬ್ಬರಾಯರೂ, ಅವರ ಅಣ್ಣಂದಿರಾದ ತ್ರಾವಣಕೋರದ ದಿವಾನರಾಗಿದ್ದ ಶ್ರೀ. ಕೃಷ್ಣಸ್ವಾಮಿರಾಯರೂ ಸಭೆಯನ್ನು ಸ್ಥಾಪಿಸಿದಾಗ, ಆಗಿನ ಸ್ವಾಮಿಗಳು ವೈದಿಕರ ಪಾಂಡಿತ್ಯದ ಪರೀಕ್ಷೆ ಮಾಡಿ, ಅವರ ಬೆಲೆ ಕಟ್ಟುವ ಇವರಾವ ಮಹಾಮಹಿಮರೆಂದು ಇವರನ್ನು ಜರಿದು, ಬಹಿಷ್ಕೃತ ಮಾಡಿದ್ದರು. ಈ ಬಂಧುದ್ವಯರು ಯಾವ ವರಕಾರ್ಯ ಶ್ರೇಷ್ಠ, ಕನಿಷ್ಠವೆಂಬದಕ್ಕೆ ಆಸ್ಪದಕೊಡದೆ, ಸಭಾಮಂದಿರದಲ್ಲಿ ಶ್ರೀ ಬಾದರಾಯಣರ ಪ್ರತಿಮೆಯ ಪ್ರತಿಷ್ಠಾಪನೆ ಮಾಡಿ, ಎಲ್ಲ ಮತದವರೂ ಒಮ್ಮನಸ್ಸಿನಿಂದ ಸಭೆಗೆ ಬರುವಂತೆ ಮಾಡಿದ್ದಾರೆ. ಮತ್ತು ಮೂರು ಮಠಗಳ ಶಿಷ್ಯರು ಉದಾರ ಹಸ್ತದಿಂದ ದ್ರವ್ಯಸಹಾಯ ಮಾಡುತ್ತಾ ಬಂದರು. ಸಭೆಯ ದಕ್ಷಿಣೆಯ ಕಾಲದಲ್ಲಿ ಮೂರೂ ಮಠಗಳಿಗೆ ಸರಿಯಾಗಿ ದಕ್ಷಿಣೆಕೊಡುತ್ತಾ ಬಂದರು. ಈ ಸಂಗತಿಯು ಸಭೆಯ ವರದಿಯಲ್ಲಿ ಸ್ಪಷ್ಟವಾಗಿ ಕಂಡು ಬರುವದು. ಸಭಾರಂಭದ ಇತಿಹಾಸವು ಈ ಪ್ರಕಾರವಿದ್ದಾಗ್ಯೂ ಉತ್ತರಾದಿಮಠದವರು ನ್ಯಾಯ ತೆಗೆದು, ಮೇಲೆ ಹೇಳಿದಂತೆ ತಮ್ಮ ಶಾರ್ಯತನ ನಡೆಸಿದರು. ಇವರ ಬಲ

ವಂತಿಕೆಯ ವಿರುದ್ಧ ದಿವಾಣಿ ಕೋರ್ಟಿನಲ್ಲಿ ದಾವೆಯಾಗಿ ಮದ್ರಾಸದ ಹಾಯ ಕೋರ್ಟಿಗೆ ಅಪೀಲಾಯಿತು. ಇಲ್ಲಿ ನ್ಯಾಯಮೂರ್ತಿಗಳಾದ ಶ್ರೀ ಕುಮಾರಸ್ವಾಮಿ ಮತ್ತು ವಾಲ್ಸ ಸಾಹೇಬರು „ಸಭೆಯ ಉದ್ದೇಶವನ್ನು ನೋಡಿದರೆ-ಈತರದ ಜಗಳಕ್ಕೆ ಆಸ್ಪದವಿಲ್ಲ' ಶ್ರೀ ಕರ್ಪೂರ ಶ್ರೀನಿವಾಸರಾವ ಮತ್ತು ಶ್ರೀ. ರಾಜಾಚಾರ್ಯರು ಸಾಕ್ಷೀ ಹೇಳಿದ್ದು ಸತ್ಯವಿರುತ್ತದೆ. ಮತ್ತು ಉತ್ತರಾದಿ ಮಠವು ಪ್ರತಿಕಕ್ಷಿಯ ಎಲ್ಲ ವೆಚ್ಚ ಕೊಡಬೇಕೆಂದು" ತೀರ್ಪು ಹೇಳಿದ್ದಾರೆ. ಶ್ರೀಗಳವರು ಇದರಮೇಲೆ ಪ್ರೀವ್ಹಿ ಕೌನ್ಸಿಲಕ್ಕೆ ಅಪೀಲು ಮಾಡತಕ್ಕವರಿದ್ದಾರೆಂದೂ ವರ್ತಮಾನವುಂಟು, ತಮ್ಮ ಹಕ್ಕು ಬಾಧ್ಯತೆಯನ್ನು ಸಾಧಿಸಿಕೊಳ್ಳುವದಕ್ಕೆ ಶ್ರೀಗಳವರು ಅಪೀಲು ಮಾಡಲಿಕ್ಕೆ ಪ್ರತ್ಯವಾಯವಿಲ್ಲ. ಆದರೆ ವಿಚಾರಮೂರ್ತಿಯ ಬ್ಯಾರಿಸ್ಟರಿಗೆ ಮಠದ ತೀರ್ಥಪ್ರಸಾದದ [illegible] ತಿಳಿಯಲಿಕ್ಕಿಲ್ಲ ಆದ್ದರಿಂದ ಅವರಿಗೆ ತಿಳಿಸಿ ಹೇಳುವದಕ್ಕಾಗಿ ಮಠದ [illegible], [illegible] ವಕೀಲರನ್ನು [illegible] ಮಾಡಿ, ವಿಲಾಯತಿಗೆ ಕಳಿಸಬೇಕೆಂದು ಸೂಚಿಸುತ್ತೇವೆ.

ಶ್ರೀಮಂತ ಬಸಪ್ಪಗೌಡಾ ಸರದೇಸಾಯಿ
ಹಾಯಸ್ಕೂಲ
ಧಾರವಾಡ

—(೧)—

ಇಲ್ಲಿಯ ಲಿಂಗಾಯಿತ ಹಾಯಸ್ಕೂಲಿಗೆ ವಂಟಮೂರಿಯ ಶ್ರೀಮಂತ ಸರದೇಸಾಯರ ಹೆಸರಿಡಬೇಕೆಂದು ಗೊತ್ತಾಯಿತೆಂದು ಬರೆಯುವದಕ್ಕೆ ಸಂತೋಷ ಪಡುತ್ತೇವೆ. ಸ್ವರ್ಗವಾಸಿ ಶಿರಸಂಗಿಯ ದೇಸಾಯರ ತರುವಾಯ ಲಿಂಗಾಯಿತ ಸಮಾಜದ ಶಿಕ್ಷಣಾಭಿವೃದ್ಧಿಗಾಗಿ ಧನ ಸಹಾಯ ಮಾಡಿದವರು ಇವರೇ ಆಗಿದ್ದಾರೆ. ಬೆಳಗಾವಿಯಲ್ಲಿ ಆ ದಟ್ಟಾಳ ಗಿಲಗಂಚಿ ಹಾಯಸ್ಕೂಲಾದ್ದರಿಂದ, ಧಾರವಾಡದಲ್ಲಿ ಶ್ರೀಮಂತ ಹೆಸರು ಚಿರಸ್ಮಾರಣೀಯವಾಗುವಂತೆ ವ್ಯವಸ್ಥೆಗೊಳಿಸಿದ್ದು ಯೋಗ್ಯವೇ ಆಯಿತು. ಶ್ರೀಮಂತ ಲಿಂಗಾಯಿತ ಫಂಡಿಗೆ ೫೦ ಸಾವಿರ ರೂಪಾಯಿ ಕೊಟ್ಟಿದ್ದಾರೆ. ಅದಲ್ಲದೆ, ಲಿಂಗಾಯಿತ ಎಜ್ಯುಕೇಶನಲ ಸೊಸಾಯಿಟಿಗೆ ೨೫೦೦೦ ರೂಪಾಯಿ ಕೊಟ್ಟಿದ್ದಾರೆ. ಉಳಿದ ಎಷ್ಟೋ ಧರ್ಮದಾನಗಳುಂಟು. ಶ್ರೀಮಂತರು ನಮ್ಮ ಕರ್ನಾಟಕ ಪ್ರಾಂತದಲ್ಲಿ ಕುಬೇರರಂತಿದ್ದಾರೆ. ದೇವರು ಸಂಪೂರ್ಣ ಆಯುರಾರೋಗ್ಯ ಕೊಟ್ಟಿರುವನು. ತಮ್ಮ ಕಾಲದಲ್ಲಿ ಈಸಂತರ ಸಾವಿರ ಸಂಖ್ಯೆಯಿಂದ ಶಿಕ್ಷಣಪ್ರಸಾರಕ್ಕಾಗಿ ದ್ರವ್ಯಸಹಾಯ ಮಾಡುವದು ಹೀಗಾಗಿ, ಲಕ್ಷ ಸಂಖ್ಯೆಯಿಂದ ಕೊಡುವ ಕಾಲ ಮುಂದಾಗಿದೆ. ಕರ್ನಾಟಕದಲ್ಲಿ ಸಧ್ಯಾ ಮುಡಿಕಲ ಮತ್ತು ಔದ್ಯೋಗಿಕ ಶಾಲೆ-ಕಾಲೇಜಗಳ ಅವಶ್ಯಕತೆಯು ನೀವು ಫಂಡು ಕೂಡಿಸಿದರೆ ನಾವು ಸಹಾಯ ಮಾಡುವೆವೆಂದು ಗವ್ಹರ್ನರ ಸಾಹೇಬರು ಇಡಿ ತೋರಿಸಿದ್ದಾರೆ. ಶ್ರೀಮಂತರು ಇವೆರಡರಲ್ಲಿ ತಮಗೆ ಉಚಿತ ತೋರಿದ ಶಿಕ್ಷಣಕ್ಕಾಗಿ ಲಕ್ಷ ಸಂಖ್ಯೆಯಿಂದ ದ್ರವ್ಯ ಕೊಟ್ಟು ತಮ್ಮ ಹೆಸರು ಸೂರ್ಯಚಂದ್ರರುವತನಕ ಮಾಡುವರೆಂದು ನೆರೆನಂಬಿರುತ್ತೇವೆ.

ರಾಷ್ಟ್ರೀಯ ಧ್ವಜವು.

ಧಾಟಿ:— [illegible]

([illegible])

ರಾಷ್ಟ್ರೀಯ ಧ್ವಜವ ನಿಲಿಸೈ |
ಮಹಾತ್ಮಾರಾಜ್ಞೆಯ ನುಸ್ಮೈ || ||ಪಲ್ಲ||
ಬಿಳಿದಾದ ಒಣ್ಣದ ಪಟ್ಟಿ |
ಹಸುರಾದ ಪಸರಿನ ಪಟ್ಟಿ ||
ಸಳೆಕೆಂಪು ಒಣ್ಣದ ಪಟ್ಟಿ |
ಶುಭಧರ್ಮ ತಿಳಿಸುವ ಪಟ್ಟಿ || ||೧||
ಯಮುದೀಯಧರ್ಮಕೆ ಬಿಳಿದು |
ಮಹಮ್ಮದ ಪಸರೆನಿಸುವದು ||
ಬಹುಭಾಗೆ ಕೆಂಪದು ಹಿಂದು |
ಮಹಿಯಲ್ಲಿ ತಿಳಿಸೈ ಮುಂದು || ||೨||
ಚರಕವ ತಿರುಗಿಸಿ ಛಂದಿಂ |
ಸ್ವರಾಜ್ಯ ಪೊಂದಿರಿ ಜವದಿಂ ||
ಪರಮಾತ್ಮನಂ ಸಂಸ್ಮರಿಸಿ |
ಪರತರಧ್ವಜಕೆ ನಮಿಸಿ || ||೩||

ಗಂಡ ಹೆಬ್ಬೆಟ್ಟಿನವನು;
ಹೆಂಡತಿ ಓದುಬರಹ ಬಲ್ಲವಳು !!

—(೦)—

ಶಾಲೆ ಕಾಲೇಜದಲ್ಲಿ ಓದಿ,ಶಿಕ್ಷಿತೆಯಾಗಿರುವ ಓರ್ವಳು ಹೆಬ್ಬೆಟ್ಟಿನ ಗುರ್ತಿನವನಾದ ಗಂಡನಿಂದ ಹೇಗೋ ಗುಟುಕು ತಕ್ಕೊಂಡು, ಅದರ ಮೇಲೆ ನೋಂದಪತ್ರದ ಕಾಗದ ಮಾಡಿದಳು. ಕೆಲವು ದಿವಸಗಳ ಮೇಲೆ ಗಂಡನಿಗೆ ಹೆಂಡತಿಯ ಮೋಸ ತಿಳಿದು ಈತನು ಈಗ ಹೆಂಡತಿಯಮೇಲೆ ತನ್ನನ್ನು ಮೋಸಪಡಿಸಿದ ಬಗ್ಗೆ ಫೌಜದಾರಿಯಲ್ಲಿ ಫಿರ್ಯಾದಿ ಮಾಡಿದಂತೆ ತಿಳಿಯುತ್ತದೆ. ಈಬಗ್ಗೆ ವಿಶೇಷವಾಗಿ ಬೇಗನೆ ಬರೆಯುವೆವು.

ತಾ|| ೨-೧೨-೩೧

ಪ್ರಕಟನೆ.

—(೦)—

ಸಾತಾರಿಯ ಆಯುರ್ವೇದ ವೈದ್ಯಕ ವಿದ್ಯಾಲಯದಲ್ಲಿ ಬರುವ ೧೪-೧-೩೦ ತಾರೀಖಿಗೆ ಅಂದರೆ ಮಕರ ಸಂಕ್ರಾಂತಿಯ ದಿವಸ ಸಿದ್ಧೌಷಧಿಗಳ ಪ್ರದರ್ಶನವಿರುವದು. ಆ ಕಾಲಕ್ಕೆ ಸಿದ್ಧೌಷಧಗಳನ್ನು ಕಳಿಸುವವರು ಅಥವಾ ಅದರ ಬಗ್ಗೆ ಏನಾದರೂ ಮಾಹಿತಿ ಬೇಕಾದರೆ ಕೆಳಗೆ ಬರೆದ ಪತ್ತೆಗೆ ಬರೆದರೆ ಸಿಗುವದು.

ಪತ್ತೆ:- ಕಾರ್ಯವಾಹಕ ಸಿದ್ಧೌಷಧಿ ಪ್ರದರ್ಶನ
ಆಯುರ್ವೇದ ವೈದ್ಯಕ ವಿದ್ಯಾಲಯ,
ಸಾತಾರಾ

[illegible]

—(೦)—

[illegible]

ಹಿಂದುಸ್ತಾನದ [illegible] ಸಾಹೇಬರು [illegible] ಸಾಯಮನ [illegible] ಪ್ರಸಿದ್ಧವಾದ [illegible] ಪ್ರಸಿದ್ಧವಾಗಿದೆ.

ಪುಣೆಯ ಫರ್ಗ್ಯುಸನ್ನ ಕಾಲೇಜದ [illegible] ಸಮ್ಮೇಲನದಲ್ಲಿ ಹಾಯಕೋರ್ಟ [illegible] ಸಾಹೇಬರು ಪುಣೆಗೆ [illegible] ವಿದ್ಯಾಲಯ ಬೇಕೆಂದೂ [illegible] ನಿಲಯವು ಮುಂಬೈ ದುಟ್ಟಿಗೆ ಬೇ[illegible] ಮಾಡಿದ್ದಾರೆ. ಕರ್ನಾಟಕದ ವಿ[illegible]?

ಧಾರವಾಡ-

ಕೆಲವರು ಚಾವ್ಪೂರಾಳಸೆಂಬ [illegible]ನ್ನು ನಿನ್ನೆಸ ದಿವಸ [illegible] ಹೊಡೆದಿದ್ದು, ಆತನ ತಲೆಯೊಡೆದು, ರಕ್ತ [illegible]ಗಿರುತ್ತಾನೆ.

ವರ್ತಮಾನ.

—(೦)—

ಲಜಪತರಾಯರ ಭಿನ್ನವಾದ ಮೂರ್ತಿಯನ್ನು ಪುನಃ ನೆಟ್ಟಗೆ ಮಾಡಿದರು. ಕಾಂಗ್ರೆಸದ ನಾಲ್ವರು ಸ್ವಯಂಸೇವಕರು ಅದರ ರಕ್ಷಕರಾಗಿ ನೇಮಿಸಲ್ಪಟ್ಟಿದ್ದಾರೆ. ಲಾಲಜಿಯವರ ಎರಕದ ಮೂರ್ತಿಯನ್ನೂ ಮಾಡಿಸಿದ್ದಾರೆ. ಅದನ್ನು ತೆರೆಯುವ ಸಮಾರಂಭವು ಅಸೆಂಬ್ಲಿಯ ಅಧ್ಯಕ್ಷ ಶ್ರೀ ಪಟೇಲರಿಂದ ನೆರವೇರಿಸಲ್ಪಡುವದು.

ಅಮೇರಿಕೆಯ ಒಬ್ಬ ಕೋಟ್ಯಾಧೀಶಳಿಗೆ ವಿಮಾನದಲ್ಲಿ ಹಡೆಯಬೇಕೆಂಬ ಬಯಕೆಯಾಗಿ ಆ ಪ್ರಕಾರ ಪೂರ್ವಸಿದ್ಧತೆ ಮಾಡಿಟ್ಟಳು. ಬೇನೆಹತ್ತಿದ ಕೂಡಲೆ ಸೂಲಗಿತ್ತಿ ಮೊದಲಾದವರೊಂದಿಗೆ ವಿಮಾನದಲ್ಲಿ ಕೂತಳು. ವಿಮಾನವು ಆಕಾಶದಲ್ಲಿ ಸಂಚರಿಸುತ್ತಿದ್ದಾಗ ಗಂಡುಕೂಸನ್ನು ಹೆತ್ತಳು.

ಚಿದಂಬರದಲ್ಲಿ ಶ್ರೀ. ಗೋವಿಂದರಾಜನ ಗುಡಿಯ ಒಂದು ಗೋಡೆಯು ಕುಸಿಬಿದ್ದು, ಮೂವರು ಸತ್ತರು. ಅನೇಕರು ಘಾಯವಾಗಿದ್ದಾರೆ.

ಪಾಲಿಸ್ತಾಯಿನದಲ್ಲಿ ನಡೆದ ಅರಬ-ಯಹೂದಿಯ ವಿಚಾರಣೆಯಲ್ಲಿ ಕಮೀಶನದವರು ಅರಬರ ಮುಫ್ತಿಯ ಸಾಕ್ಷಿಯನ್ನು ಏಕಾಂತದಲ್ಲಿ ತಕ್ಕೊಂಡರು. ಈ ಬಗ್ಗೆ ಯಹೂದಿ ಜನರು ನಿಷೇಧವನ್ನು ವ್ಯಕ್ತಪಡಿಸಿದ್ದಾರೆ.

ರೌಂಡ ಟೇಬಲ ಅಥವಾ ಬೇರೆ ಮಹತ್ವದ ರಾಜಕೀಯ ವಿಷಯದ ಪ್ರಸ್ತಾಪಮಾಡಲು ಲಾರ್ಡ ಆಯರ್ವಿನ್ನಸಾಹೇಬರು ತಮಗೆ ದಿಲ್ಲಿಗೆ ಬರಮಾಡಿರುತ್ತಾರೆಂದು ಪ್ರಸಿದ್ಧವಾದ ಸುದ್ದಿಯು ನಿರಾಧಾರವಾದದ್ದೆಂದು ಸ್ವತಃ ಮಹಾತ್ಮರೇ ಜಾಹೀರ ಮಾಡಿದ್ದಾರೆ.

ಪುಣೆಯಲ್ಲಿ ಮೈಸೂರಿನ ಸ್ಯಾಂಡೋನಿಗೂ, ಅಲ್ಲಿಯವನೇ ಆದ ಗಾವಡೆ ಎಂಬವನಿಗೂ ಒಂದಿನ ಕುಸ್ತಿಯಾಗಿ, ಸ್ಯಾಂಡೋನು ಗೆದ್ದನು. ಗಾವಡೆನು ತಂಟೆ ತೆಗೆದದ್ದರಿಂದ, ಸ್ಯಾಂಡೋನು ಕೋರ್ಟಿಗೆ ಹೋಗಿ ಇನಾಮು ಪಡೆಯಬೇಕಾಗಿದೆ.

ಬಂಗಾಲದ ಗವ್ಹರ್ನರ ಸಾಹೇಬರು ಇಬ್ಬರು ಮುಸಲಮಾನ ಮತ್ತು ಒಬ್ಬ ಹಿಂದೂ ಈ ಪ್ರಕಾರ ಮೂವರ ಮಂತ್ರಿಮಂಡಲ ಕಟ್ಟುವರು ಇದು ಎಷ್ಟರಮಟ್ಟಿಗೆ ನಡೆಯುವದೆಂಬ ಪ್ರಶ್ನೆ ಉಂಟೇ ಯು

ಅನೇಕ ಔಷಧಗಳನ್ನು ಸೇವಿಸಿ

ನಿರಾಶರಾಗಿರುವ ಭಗಿನಿಯರಿಗೆ ಅಮೃತ ಸಂದೇಶ

ಮುಕ್ತಾಂಬರ

ಕೆಂಪು, ಬಿಳೀ, ಅಥವಾ ಯಾವುದೇ ಬಣ್ಣದ ಹಳೆಯ ಕುಸುಮ ರೋಗಕ್ಕೆ ನಮ್ಮ ಮುಕ್ತಾಂಬರ ದಿವ್ಯೌಷಧವು. ಈ ಔಷಧದಿಂದ ಬೇನೆಯು ಮೂರೇ ದಿನಗಳಲ್ಲಿ ಸಂಪೂರ್ಣ ಗುಣವಾಗುವದು. ಇದಲ್ಲ ಕೇವಲ ವನಸ್ಪತಿಗಳ ಅದ್ಭುತ ಪ್ರತಾಪ! ನಮ್ಮ ಅನೇಕ ವರ್ಷಗಳ ಅನುಭವ!! ಬೆಲೆ ಎರಡೇ ರೂಪಾಯಿ, ಅಂಚೆವೆಚ್ಚವಿಲ್ಲ. ೨ ರೂಪಾಯಿಗಳನ್ನು ಮನಿ ಆರ್ಡರದಿಂದಾಗಲಿ, ಪೋಸ್ಟ ತಿಕೀಟಿನ ರೂಪದಿಂದಾಗಲಿ, ಮುಂಗಡ ಕಳಿಸತಕ್ಕದ್ದು.

ವಿಳಾಸ:— ಶ್ರೀ. ಜಾನಕೀಬಾಯಿ ದೀಕ್ಷಿತ

C/o ಮಧ್ಯಬ್ಯಾಂಕ ಧಾರವಾಡ

ಸೂಚನೆ:— ಈ ಔಷಧ ಬೇಡುವಾಗ, ಯಾವ ವರ್ತಮಾನಪತ್ರದ ಜಾಹೀರಾತು ನೋಡಿ ಈ ಬೇಡಿಕೆಯನ್ನು ಮಾಡುತ್ತಿರುವದನ್ನು ಬರೆಯಬೇಕು.

THE ANKALIGI BANK LTD.

Head Office—
Kamankatta Dharwar
Branches
Ranebennur & Hirekerur

5%
Interest allowed on
ANNA SAVINGS *BANK*
DEPOSIT.

Dharwar 3-1-1927 — K. B. ANKALIGI, Managing Director

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ- ಇಂಗ್ಲಿಷನಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ದಿ ಧಾರವಾಡ ಅರ್ಬನ ಕೋ-ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟಿ ಧಾರವಾಡ.

ಕೋ-ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಎಂಟು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೇಜಿಂಗ ಡಾಯರೆಕ್ಟರ.

ಚಂದಾದಾರರಿಗೆ ಸೂಚನೆ

ಡಿಶೆಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ, ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R N. B. 1443

ನಿತ್ಯ ಪತ್ರ

ವಿಜಯ

ಟೆಲಿಗ್ರಾಫ ಆಫೀಸ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮.೦) ಧಾರವಾಡ ಶುಕ್ರವಾರ ತಾರೀಖು ೬ ನೇ ಡಿಸೆಂಬರ ೧೯೨೯ (ಸಂಚಿಕೆ ೨೬೬

ಡಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ್, ಧಾರವಾಡ.

ಮಂಗಳವಾರ ಪೇಠ ಜೋಗ ಪಟೇಲರ ಮನೆಯಲ್ಲಿ.

ದಾಗೀನೆಗಳ ಒತ್ತೆ ಮೇಲೆ ಸೋವಿಯ ಬಡ್ಡಿಯಿಂದ ಸಾಲ ದೊರೆಯುವ ಬ್ಯಾಂಕು

ಈ ಬ್ಯಾಂಕು ಜಾಯಿಂಟ ಸ್ಟಾಕ ಕಂಪನಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಬ್ಯಾಂಕಿನ ವ್ಯವಹಾರವು ಅಭಿವೃದ್ಧಿ ಹೊಂದುತ್ತಲಿರುವದು. ಈ ಬ್ಯಾಂಕಿನಲ್ಲಿ ಮುಖ್ಯವಾಗಿ ಬಂಗಾರ ಮತ್ತು ಬೆಳ್ಳಿ ದಾಗಿನೆಗಳ ಮೇಲೆ ಸೋವಿಯ ಬಡ್ಡಿ ದರದಿಂದ ಸಾಲ ಕೊಡುವ ವ್ಯವಸ್ಥೆಯುಂಟು. ದಾಗಿನೆ ಒತ್ತೆ ಇಟ್ಟವರು ಮೂರನೇ ತಿಂಗಳು ಬಿಟ್ಟು ಮುಂದೆ ಪ್ರತಿ ತಿಂಗಳಿಗೆ ಅಥವಾ ಬೇಕಾದಷ್ಟು ಅಷ್ಟಷ್ಟೇ ರಕಮು ತಂದು ಕಟ್ಟಿದರೂ, ಅದನ್ನು ಸ್ವೀಕಾರ ಮಾಡಲಾಗುವದು. ಮತ್ತು ಈ ಪ್ರಕಾರ ಅಷ್ಟಷ್ಟೇ ರಕಮು ಕೊಡುವದರಿಂದ, ಸಾಲದ ಭಾರ ಕಡಿಮೆಯಾಗಿ, ಬಡ್ಡಿಯು ಕಡಿಮೆಯಾಗುತ್ತಾ ಬರುವದು. ಧಾರವಾಡ ಸುತ್ತಲಿನ ಹಳ್ಳಿಗಳವರು ಈ ಸೋವಿಯ ಫಾಯದೆ ತಕ್ಕೊಳ್ಳುತ್ತಿದ್ದಾರೆ. ಇದರ ಕಾರಣ ಮುಖ್ಯವು ಮತ್ತು ಹಳ್ಳಿಗಳ ಜನರಿಗೂ ದಾರಿದ್ರ್ಯ ಈ ಬಾಬತೀನ ಪ್ರಸಿದ್ಧ ಮಾಡಿ, ಮುದ್ದಾಂ ಹಳ್ಳಿಗಳಿಗೆ ಕಳಿಸಿದ್ದೇವೆ. ಹಳ್ಳಿಯಲ್ಲಿ ಬಡ್ಡಿಯ ದರವು ನೂರಾರುಕ್ಕೆ ಹನ್ನೆರಡು ಇಂದ ಆರು ಪ್ರತಿ ವರೆಗೆ ಇರುತ್ತದೆ ಅದೂ ಒತ್ತೆಯಾಗಿ ಕೊಡಬೇಕಾಗುತ್ತದೆ. ಹೀಗಾಗಿ ಎಷ್ಟೋ ಜನ ಬಡವರಿಗೂ ಇಲ್ಲ; ತಿಂಗಳದ ದಾಗಿನೆಗಳು ಸಾವಕಾರರ ಬಳಿ ಮತ್ತು ಬಡ್ಡಿಯಲ್ಲಿ ಮುಳುಗಿ ಹೋಗುತ್ತವೆ. ಈ ಪ್ರಕಾರ ನಮ್ಮ ಬ್ಯಾಂಕಿನಲ್ಲಿ ದಾಗಿನೆ ಒತ್ತೆ ಇಟ್ಟರೆ ಆಗುವದಿಲ್ಲ. ಏಕೆಂದರೆ ಸ್ವಲ್ಪ ರಕಮು ಕಟ್ಟಿದರೂ ಅದನ್ನು ತಕ್ಕೊಂಡು, ಸಾಲದ ಭಾರವನ್ನು ಕಡಿಮೆ ಮಾಡುತ್ತಾ ಬರುತ್ತೇವೆ. ಇಂಥ ಸೋವಿಯು ಹಳ್ಳಿಗಳಲ್ಲಿ ದೊರೆಯಲಾರದು. ಆದ್ದರಿಂದ ಹಳ್ಳಿಯಲ್ಲಿ ಸಾಲ ಬೇಕಾದವರು ನಮ್ಮ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ, ಅನುಭವ ಮತ್ತು ಲಾಭ ಪಡೆಯಬೇಕು. ನಮ್ಮ ಬಡ್ಡಿ ದರವು ನೂರು ರೂಪಾಯಿಯ ಮೇಲೆ ಒಂದು ತಿಂಗಳಿಗೆ ಒಂದು ರೂಪಾಯಿಗೆ ಹೆಚ್ಚು ಇರುವದಿಲ್ಲ. ಇದರ ಮೇಲಿನ ರಕಮು ಬಡ್ಡಿ ಪ್ರತ್ಯಕ್ಷವಾಗಿ ಅಥವಾ ಪತ್ರದ್ವಾರಾ ತಿಳಕೊಳ್ಳಬೇಕು.

ಹಳ್ಳಿಗಳ ಜನರು ಸಹಜವಾಗಿ ಊರಿಗೆ ಬಂದಾಗ ಸಾವಕಾರರ ಅಂಗಡಿಯಲ್ಲಿ ಅವರು ಹೇಳಿದಷ್ಟು ಬಡ್ಡಿ ಕರಾರ ಮಾಡಿ ಸಾಲ ತೆಗೆದುಕೊಳ್ಳುವರು. ಮತ್ತು ಮುಂದೆ ಲೆಕ್ಕ ತಿಳಿಯದೆ ನುಕ್ಸಾನ ಮಾಡಿಕೊಳ್ಳುವರು. ಹೀಗೆ ಬ್ಯಾಂಕಿನಲ್ಲಿ ಆಗುವದಿಲ್ಲ. ಹಳ್ಳಿಗಳ ಜನರು ನಮ್ಮಲ್ಲಿ ಒಂದಾವರ್ತಿ ವ್ಯವಹಾರ ಮಾಡಿ ಖಾತ್ರಿ ಮಾಡಿಕೊಳ್ಳಬೇಕು.

ವಿಶೇಷ ಸೂಚನೆ:— ಬಂಗಾರ ಮತ್ತು ಬೆಳ್ಳಿ ಷೇಟ್ಟುಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಪೇಟೆಯಲ್ಲಿ ಎಲ್ಲರಕ್ಕಿಂತಲೂ ಸೋವಿಯಿಂದ ಸಿಗುವವು.

ಕೃಷ್ಣರಾವ ವೆಂಕಟರಾವ ಧಂಡಿಮಾಡ,

ಮ್ಯಾನೇಜಿಂಗ ಏಜಂಟ, ಧಾರವಾಡ.

THE UNITED KARNATAK
INSURANCE CO LTD
DHARWAR

ದಿ ಯುನಾಯಿಟೆಡ್. ಕರ್ನಾಟಕ
ಇನ್ಸ್ಯೂರೆನ್ಸ ಕಂಪನಿ ಲಿಮಿಟೆಡ್
ಧಾರವಾಡ.

ಏಜಂಟರು ಬೇಕು.

ಮೇಲೆ ಕಾಣಿಸಿದ ಕಂಪನಿಯ ಶೇರುಗಳನ್ನು ಕಮಿಶನದ ಮೇಲೆ ಮಾರಾಟ ಮಾಡಲಿಕ್ಕೆ ಏಜಂಟರು ಬೇಕಾಗಿದ್ದಾರೆ ಈ ಕೆಲಸ ಮಾಡಬಲ್ಲವರು ಪತ್ರ ಬರೆದು ಅಥವಾ ಸಮಕ್ಷಮ ಮಾಹಿತಿ ಪಡಕೊಳ್ಳಬೇಕು

ಸೇಕ್ರೆಟರಿ
ಯು. ಕ. ಇ. ಕ. ಧಾರವಾಡ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟುಕೊಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಜೀ. ಶೆಟ್ಟಿ.
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೪ ,,	೪-೦-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಕೊಳ್ಳಿರಿ.

ವಿಜಯ ಮ್ಯಾನೇಜರ ಧಾರವಾಡ.

ವಿಜಯ.

ಧಾರವಾಡ ತಾ- ೬-೧೨-೧೯೨೪ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಪ್ರಿಯ
ಕೀ ವಸುಮತಿಯು ವರಿಸಿ ಸುಖಕರಿತೆಗಳಿಂ ॥
ದೀ "ವಿಜಯಂ" ಶ್ರೀಕರಣ ।
ನಾ ವಿಹಿತಂಗಳ ವಿನಾಶನವಿವುಗು ಸಾಜಂ ॥೧॥

ಚೀನ ರಶಿಯಾದ ಸತ್ತ ಯುದ್ಧ.

—(೮)—

ಚೀನ ಮತ್ತು ರಶಿಯಾಕ್ಕೆ ಯುದ್ಧ ಹತ್ತುವದೆಂದು ಎರಡು ತಿಂಗಳಿಂದ ಕೇಳುತ್ತಾ ಬಂತು. ಆದರೆ ಈಗ ಅದು ಕಳೆಗುಂದುತ್ತಾ ಬಂದಿದೆ. ಚೀನರು ರೇಲ್ವೆಯಿಂದ ಮತ್ತು ರಾಜದರಬಾರದ ಕ್ಷೇತ್ರದಿಂದ ರಶಿಯರನ್ನು ತಮ್ಮ ದೇಶಬಿಟ್ಟು ಹೊರಗೆ ಹಾಕುತ್ತಾ ಬಂದದ್ದರಿಂದ, ಈ ಯುದ್ಧಕ್ಕೆ ಕಾರಣವಾಯಿತು. ಚೀನರನ್ನು ಹಣ್ಣಿಗೆ ತರಬೇಕೆಂದು ರಶಿಯರು ಇವರ ದೇಶದಲ್ಲಿ ಹೊಕ್ಕು ಊರುಗಳನ್ನು ಸುಟ್ಟರು. ಜನರನ್ನು ಕೊಂದರು. ರೇಲ್ವೆಯನ್ನು ಹಾಳು ಮಾಡಿದರು. ಆದರೂ ಚೀನರು ಸುಮ್ಮನೆ ಇದ್ದು, ರಶಿಯರ ಪುಂಡಾಟಿಕೆಯನ್ನು ಸಹಿಸುತ್ತಾ ಬಂದರು. ಚೀನವು ರಾಷ್ಟ್ರಸಂಘದ ಮೆಂಬರನಾಗಿರುತ್ತದೆ ಅದ್ದರಿಂದ, ಶಾಂತತಾ ಪ್ರಧಾನವಾದ ಕೆಲಾಗಕೂಟಕ್ಕೆ ರಶಿಯಾದ ಉಪಟಳ ತಿಳಿಸಿ, ಮಧ್ಯಸ್ಥಿ ಮಾಡಲಿಕ್ಕೆ ಹೇಳಿತು. ಚೀನದಂತೆ ರಶಿಯವು ಕೆಲಾಗಕೂಟದ ಮೆಂಬರ ಇರುವದಿಲ್ಲ ಅದ್ದರಿಂದ, ರಶಿಯವನ್ನು ಹೇಗೆ ಒಡಂಬಡಿಸುವದೆಂಬ ಅಡ್ಡ ಪ್ರಶ್ನೆ ಹುಟ್ಟಿತು. ಆದರೆ ರಶಿಯವು ತಾನಾಗಿ ಮುಂದೊರೆದು, ತನಗೆ ಚೀನ ದೇಶದ ಒಂದಂಗುಲ ಭೂಮಿ ಸಹ ಬೇಕಾಗಿಲ್ಲ. ಈ ಮೊದಲಿದ್ದ ಹಕ್ಕು ಬಾಧ್ಯತೆಗಳಿದ್ದರೆ ಸಾಕೆಂದು ಹೇಳಿತು. ಈ ಸಂಗತಿಯಿಂದ ವಿಶ್ವಾಸ ಹುಟ್ಟಿ, ಇಂಗ್ಲಂಡ, ಜಪಾನ, ಜರ್ಮನಿ, ಫ್ರಾನ್ಸ, ಅಮೇರಿಕಾ ಮತ್ತು ಇಟಲಿ ಈ ಆರು ದೇಶಗಳು ಎರಡೂ ರಾಷ್ಟ್ರಗಳ ನಡುವೆ ಒಡಂಬಡಿಕೆ ಮಾಡಲು ಹಚ್ಚಿಗಿಸಿವೆ. ಈ ವಿಷಯದಲ್ಲಿ ರಶಿಯವು ಅಮೇರಿಕವನ್ನು ಚೆನ್ನಾಗಿ ಹಂಗಿಸಿದೆ. ರಶಿಯಾದ ಕೂಡ ಯಾವದೇ ಪ್ರಕಾರದ ರಾಜಕೀಯ ಸಂಬಂಧವಿಡಲಿಚ್ಛಿಸದಂಥ ಅಮೇರಿಕೆಗೆ ನಮಗೆ ಬುದ್ಧಿ ಹೇಳಲು ಹೇಗೆ ಹಕ್ಕು ಅಥವಾ ಅಪೇಕ್ಷೆಯುಂಟಾಯಿತೆಂದಿರುತ್ತದೆ. ರಶಿಯವು ಕೆಲಾಗಕೂಟದಲ್ಲಿರದಿದ್ದರೇನಾಯಿತು. ತಮ್ಮ ಕೂಟದಲ್ಲಿಯ ಮೆಂಬರನಾದ ಚೀನದ ಮೇಲೆ ಬಂದ ಸಂಕಟವನ್ನು ಸಾಮೋಪಚಾರದಿಂದ, ತಪ್ಪಿದರೆ- ಸೇನಾ ಸಾಮರ್ಥ್ಯದಿಂದ ದೂರ ಮಾಡುವದು ಈ ರಾಷ್ಟ್ರಸಂಘದ ಕರ್ತವ್ಯ ಕರ್ಮವೇ ಆಗುತ್ತದೆ.

ಮಧ್ಯಮ ಸ್ಥಿತಿಯ ಜನರ ಹೀನಾವಸ್ಥೆಯು.

——(೦)——

ಶ್ರೀ ಸೇನಗುಪ್ತರು ಮಧ್ಯಮ ಸ್ಥಿತಿಯ ಜನರ ಹೀನಾವಸ್ಥೆಯನ್ನು ಕಳೆದೆಯುವರಲ್ಲಿ ಸಹ ಅಂತಃಕರಣ ದ್ರವಿಸುವಂತೆ ಹೇಳುತ್ತಾರೆ. ಅದೆಂತೆಂದೊಡೆ:-

ದಿನಾಲು ನಿಮ್ಮ ಸುತ್ತಲೇನು ನೋಡುತ್ತೀರಿ? ಅನೇಕ ಜನ ವಿದ್ಯಾರ್ಥಿಗಳಿಗೆ ನಿಶ್ಚಿಂತೆಯಿಂದ ಚೆನ್ನಾಗಿ ಜೀವಿಸಿಕೊಂಡಿರಲಿಕ್ಕೆ ಸಾಧನವೇ ಇಲ್ಲದಂತಾಗಿರುತ್ತದೆ ಅವರಿಗೆ ಊಟದ ಸೋಯಿಯಿಲ್ಲ; ಮನೆಯ ಅನುಕೂಲತೆಯಿಲ್ಲ; ಶಾಲೆಯ ಫೀ ಕೊಡಲಿಕ್ಕೆ ಹತ್ತರ ದುಡ್ಡಿಲ್ಲ; ಬಿ. ಎ. ನಾಮಾಂಕಿತರಂಥವರು ದಿನಾಲು ಹತ್ತು ಹದಿನೈದು ಜನರು ೪೦ ಅಥವಾ ೫೦ ರೂಪಾಯದ ಕೆಲಸ ಕೊಡಿರೆಂದು ನನ್ನೆಡೆಗೆ ಬರುತ್ತಾರೆ. ಮೂರು ಆಂಕೆಯ ಸಂಬಳ ಕೇಳಿದರೆ- ಕೆಲಸವೇ ದೊರೆಯಲಾರದೆಂದು ಎರಡೇ ಅಂಕಿಯಲ್ಲಿ ತೃಪ್ತರಾಗುತ್ತಾರೆ ಪಾಪ, ಅವರಿಗೆ ಒಪ್ಪತ್ತು ಕೂಡ ಹೊಟ್ಟೆತುಂಬ ಅನ್ನದೊರೆಯುವದಿಲ್ಲ. ಈ ದುರವಸ್ಥೆಗೆ ಕಾರಣವೇನೆಂಬದನ್ನು ನೀವು ತಿಳಿದು ನೋಡ ಬೇಕಾಗಿದೆ. ಸ್ವದೇಶೀ ಸರಕಾರವಿಲ್ಲದ್ದರಿಂದಲೇ ಈ ಅನವಸ್ಥೆಯುಂಟಾಗಿರುತ್ತದೆ ಏನು ಮಾಡಿದರೂ, ಎಷ್ಟು ಬುರುಕಿ ಹಾಕಿದರೂ ಈ ಕಾರಣವು ಮುಚ್ಚಲಾರದು. ರಾಷ್ಟ್ರೀಯ ಸರಕಾರವಿಲ್ಲದೆ, ರೇಲ್ವೆ ಟ್ರಾಮು, ಪೋಸ್ಟ, ಟೆಲಿಗ್ರಾಮು ಇವೆಲ್ಲವೂ ನಿರುಪಯೋಗವು ಏಕೆಂದರೆ- ಬಾಹ್ಯಾತ್ಕಾರದ ಈ ಡೌಲುಗಳು ಹೊಟ್ಟೆಬಟ್ಟೆಯ ಬಿಕ್ಕಟ್ಟಿನ ಪ್ರಶ್ನವನ್ನು ಬಿಡಿಸಲಾರವು.

ನಮಗೇನು ವಸಾಹಂತಿನ ಸ್ವರಾಜ್ಯ ಬೇಕೆ? ಬ್ರಿಟಿಶ ಬಾಹ್ಯ ಸಂಪೂರ್ಣ ಸ್ವಾತಂತ್ರ್ಯದ ಸ್ವರಾಜ್ಯ ಬೇಕೆ? ಎಂಬ ವಾದ ನಡೆದಿದೆ. ನಾನು ಶಬ್ದಪಾಂಡಿತ್ಯ ಬೆಳೆಯಿಸಲಿಚ್ಛಿಸುವದಿಲ್ಲ. ನಾನು ಶಬ್ದಗಳ ಗುಲಾಮನಲ್ಲ. ನನಗೆ ಸಂಪೂರ್ಣ ಸ್ವತಂತ್ರ ಸರಕಾರಬೇಕು. ಅದಕ್ಕೆ ಬೇಕಾದ ಹೆಸರಿಡಿರಿ. ನನಗೆ ಇಪ್ಪತ್ತದಂಥ ಸ್ವಾತಂತ್ರ್ಯ ಬೇಕಾಗಿಲ್ಲ. ನನಗೆ ನಿಜವಾದ ಸ್ವಾತಂತ್ರ್ಯ ಬೇಕಾಗಿದೆ. ಆಸ್ಟ್ರೇಲಿಯಾ, ಕಾನಡಾ, ಫ್ರಾನ್ಸ, ಜರ್ಮನಿಯಂತೆ ಹಿಂದುಸ್ಥಾನವು ಸ್ವತಂತ್ರವಾಗತಕ್ಕದ್ದು. ಅದ್ದರಿಂದ ವೈಯ್ಯಾಕರಣಿಗಳಂತೆ ವಸಾಹಾತು ಅಥವಾ ಸ್ವಾತಂತ್ರ್ಯವೆಂದು ಶಬ್ದಗಳ ವಾದದಿಂದ ಕಾಲಕ್ಷೇಪ ಮಾಡಿಕೊಳ್ಳತಕ್ಕ ಅಗತ್ಯವಿಲ್ಲ.

ಟ್ರಾಮಿನಲ್ಲಿ ಬೀಡಿ ಸೇದಿದ್ದಕ್ಕೆ ದಂಡ.

ರೇಲ್ವೆಯವರ ವಿಚಾರವೇನು ?

— (೦) —

ಮುಂಬಯಿಯಲ್ಲಿ ಟ್ರಾಮುಗಳಲ್ಲಿ ಕೂತು ಹೋಗುವಾಗ- ಬೀಡಿ, ಸಿಗರೆಟ್ಟ ಸೇದಬಾರದೆಂದು ನಿರ್ಬಂಧವಿಯುಂಟು. ಈ ನಿಯಮ ಮುರಿದು ಮುಸಲಮಾನರೊಬ್ಬನು ಬೀಡಿ ಸೇದಲು- ಆತನನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಮ್ಯಾಜಿಸ್ಟ್ರೇಟರು ಆತನಿಗೆ ಒಂದು ರೂಪಾಯಿ ದಂಡ ಮಾಡಿದರು. ಟ್ರಾಮಿನಂತೆ ರೇಲ್ವೆಯಲ್ಲಿಯೂ ಬೀಡೀ ಸೇದಬಾರದೆಂದು ನಿಯಮವುಂಟು ನಿಯಮೋಲ್ಲಂಘನ ಮಾಡಿದವರಿಗೆ ೫೦ ರೂಪಾಯಿ ದಂಡ ಮಾಡುವಂತೆ ರೇಲ್ವೆ ಆಕ್ಟಿನಲ್ಲಿ ಹೇಳಿದೆ ಆದರೆ ಈ ಆಕ್ಟು ರೇಲ್ವೆಯ ಪ್ರಾರಂಭದಿಂದ ಅಮಲಿನಲ್ಲಿ ಬಂದಿದೇನೆಂಬ ಸಂಶಯವುಂಟು ನೋಟೀಸದಲ್ಲಿ ಬೀಡಿ, ಚುಟ್ಟಾ ಸೇದಬಾರದೆಂದು ಹಸ್ತಪತ್ರಿಕೆಯಲ್ಲಿ ಬರೆಯುವಂತೆ. ಈ ಆಕ್ಟಿನ ಪಣಿಪುರಸವಾಗಿ ತುತ್ತದೆ ಬೀಡಿಯ ನಾತ ಸಹಿಸುದವರೂ, ಹೆಣ್ಮಕ್ಕಳೂ ಬೀಡಿ ಸೇದಬೇಡಿರೆಂದು ಎಷ್ಟು ಹೇಳಿದರೂ, ಜನರು ಬೇಕೆಂದು ಹಟದಿಂದ ಸೇದುವರು. ಟ್ರಾವ್ಹಲಿಂಗ ಟಿಕಿಟ ಕಲೆಕ್ಟರರು ಟಿಕೀಟಿನ ಕೂಡ ಬುದ್ಧಿಪೂರ್ವಕವಾಗಿ ತಂಬಾಕ ಸೇದುವಂಥವರ ಮೇಲೆ ಖಟ್ಲೆ ಹಾಕುತ್ತಾ ಹೋದರೆ- ಕೆಲವು ದಿವಸಗಳಲ್ಲಿ ಉಗಿಬಂಡಿಯಲ್ಲಾಗುವ ಹೊಗೆಸೊಪ್ಪಿನ ಹೊಗೆಯುಡಗುವದು.

ನಿಪ್ಪಾಣಿಯಲ್ಲಿ ಹಿಂದೂ ಮುಸಲಮಾನ ಕಲಹ.

——)(೦)(——

ನಿಪ್ಪಾಣಿಯಲ್ಲಿ ಶಿವಾಜಿಯ ಕಾಲ ಅಂದರೆ ೨೦೦ ವರ್ಷಗಳಿಗಿಂತ ಪುರಾತನವಾಗಿ ನಿತ್ಯ ಪೂಜೆ- ಸೇವೆಯನ್ನು ಹೊಂದುತ್ತಿದ್ದ ಶ್ರೀ. ವಿಠ್ಠಲನ ಮೂರ್ತಿಯನ್ನು ಮುಸಲಮಾನರು ಭಿನ್ನ ಮಾಡಿದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಯಾವನೊಬ್ಬನು ಮೂರ್ಖತನದಿಂದ ಮಾಡಿದ ನೀಚಕೃತ್ಯದ ಕಲಂಕವು ಇಡೀ ಮುಸಲಮಾನ ಸಮಾಜಕ್ಕೇ ಹತ್ತುವದನ್ನು ಕಂಡು, ಅಲ್ಲಿಯ ಮುಸಲಮಾನರು ಹೊಸದಾಗಿ ಶ್ರೀ ವಿಠ್ಠಲನ ಮೂರ್ತಿಯ ಪ್ರತಿಷ್ಠಾಪನೆಗೊಳಿಸಲು- ಐನೂರು ರೂಪಾಯಿ ಕೊಟ್ಟು, ಹಿಂದೂ ಮುಸಲಮಾನ ಜಗಳವನ್ನು ನೊಂದಿಸಿದರೆಂದು ತಿಳಿಯುತ್ತದೆ.

ಆಂಗ್ಲೋ ಇಂಡಿಯನ್ನರ ವಸಾಹಾತು.

—(೦)—

ವಸಾಹಾತು ಅಂದರೆ ಒಂದು ದೇಶದವರು ಬೇರೊಂದು ನಿರ್ಜನ ದೇಶಕ್ಕೆ ಹೋಗಿ, ವಾಸಮಾಡಿಕೊಂಡಿರುವದಕ್ಕೆ ವಸಾಹಾತುವೆನ್ನುತ್ತಾರೆ. ಆದರೆ ಈ ದೇಶದ ಆಂಗ್ಲೋ ಇಂಡಿಯನ್ನರು ಹಿಂದುಸ್ಥಾನದಲ್ಲಿಯೇ ಸ್ವಜನರಿಗಾಗಿ ವಸಾಹಾತು ಮಾಡಿಕೊಳ್ಳುವ ಯೋಚನೆ ನಡೆಸಿದ್ದಾರೆ. ಯಾವದೊಂದು ಆರೋಗ್ಯಕರವಾದ ಮತ್ತು ನೀರಿನ ಸಮೃದ್ಧಿಯುಳ್ಳಂಥ ಪರ್ವತಾವಳಿಯಲ್ಲಿ ಪುಷ್ಕಳವಾಗಿ ಸ್ಥಳ ತಕ್ಕೊಂಡು, ಅಲ್ಲಿ ತಮ್ಮ ಜನರಿಗಾಗಿ ಊರು ಕಟ್ಟಬೇಕು. ಕೋಟ- ಪಟ್ಟಿ, ಹೊಲಮನಿ, ಅವಶ್ಯವಿದ್ದರೆ- ಕಾರಖಾನೆಗಳನ್ನು ತೆಗೆಯಬೇಕು. ಮತ್ತು ಈ ವಸಾಹಾತಿನ ವ್ಯವಸ್ಥೆಯನ್ನು ಸಹಕಾರಿ ತತ್ವದ ಮೇಲೆ ನಡೆಸಬೇಕೆಂದು ಇವರ ಸೇಕ್ರೆಟರಿಯಾದ ಮಿ. ಗಿಡನಿಸಾಹೇಬರು ಒಂದು ಸ್ಕೀಮು ಸಿದ್ಧಮಾಡುತ್ತಲಿದ್ದಾರೆ. ೫೦ ಲಕ್ಷದ ಬಂಡವಲವಾದರೆ- ಒಂದು ವಸಾಹಾತಾಗುವದೆಂದು ಅಂದಾಜು ಗಟ್ಟಿದ್ದಾರೆ.

ಇದೇನು ಅಸೂಯವಲ್ಲವೇ?

—(೦)—

ಕಲಕತ್ತೆಯ ಮ್ಯುನಿಸಿಪಾಲಿಟಿಯ ಆದಾಯವು ಮುಂಬಯಿಯಂತೆ ಕೋಟಿಯಿಂದಿರುವದು. ಯಾವದಾದರೊಂದು ಜನೋಪಕಾರಿ ಕೆಲಸಕ್ಕೆ ಲಕ್ಷ ಸಂಖ್ಯೆಯಿಂದ ದುಡ್ಡು ಬೇಕಾಗುವದು. ಇಂಥ ಸಾಲವನ್ನು ಡಿಬೆಂಚರಗಳಿಂದ ಬ್ಯಾಂಕು ಮತ್ತು ಬೇರೆ ಶ್ರೀಮಂತರಿಂದ ತೆಗೆಯುವ ವಾಡಿಕೆಯುಂಟು. ಯುರೋಪಿಯನ್ನರು ಮ್ಯುನಿಸಿಪಾಲಿಟಿಯ ಅಧ್ಯಕ್ಷ ಮತ್ತು ಕಮೀಶನರರಾಗಿದ್ದಾಗ, ಸಾಲವು ಸಹಜವಾಗಿ ಹುಟ್ಟುತ್ತಿತ್ತು. ಆದರೆ ಅದು ಸ್ವದೇಶಿಯರು ಮಾತ್ರವಲ್ಲ; ಸ್ವರಾಜ್ಯ ಪಕ್ಷದವರ ಕೈಸೇರಿದ್ದರಿಂದ, ಈ ಸಾಲ ಸಿಗುವದು ಕಠಿಣವಾಗುತ್ತದೆ. ಸಿಕ್ಕರೆ ಬಹಳ ತಡವಾಗಿ ಸಿಗುತ್ತದೆ. ಅದ್ದರಿಂದ, ಮ್ಯುನಿಸಿಪಾಲಿಟಿಯದೇ ಒಂದು ಬ್ಯಾಂಕು ತೆಗೆಯಬೇಕು. ಎರಡು ಕೋಟಿ ಬಂಡವಲವಾಗಿ, ೫೦ ಲಕ್ಷ ರೂಪಾಯಿಗಳು ಕಾದಿಟ್ಟ ದ್ರವ್ಯವಾಗಬೇಕೆಂಬ ವಿಚಾರವು ಅಲ್ಲಿಯ ಮ್ಯುನಿಸಿಪಾಲಿಟಿಯಲ್ಲಿ ಹೇಳಲ್ಪಟ್ಟಿತು. ಇಂಗ್ಲಂಡದಲ್ಲಿ ಮ್ಯುನಿಸಿಪಲ ಬ್ಯಾಂಕುಗಳಿರುತ್ತವೆ. ಈ ಸಂಗತಿಯು ಹೇಗಿದ್ದರೂ, ಯುರೋಪಿಯನ್ನರ ಬ್ಯಾಂಕುಗಳು ಸ್ವದೇಶಿಯರ ಆಡಳಿತೆಗೆ ಅದಿಷ್ಟು ವಿಷ್ಟು ಕಂಬು ಹೇಗೆ ಅಸೂಯ ಪಡುತ್ತವೆಂಬದು ಈ ಸಂಗತಿಯಿಂದ ಧ್ವನಿತವಾಗುತ್ತದೆ.

ಬ್ಯಾಂಕ ಮಾನೇಜರ ಸೊಸಾಯಿಟಿ ಧಾರವಾಡ.

ಸೊಸಾಯಿಟಿಯವರು ನಿರ್ಣಯಿಸಿದ್ದೇನಂದರೆ- ತಾ|| ೧-೧೨-೨೯ರಿಂದ ತಾ|| ೩೧-೨-೩೦ರ ವರೆಗೆ ಗದಗ ತಾಲೂಕ ಮತ್ತು ಮುಂಡರಗಿ ಪೇಟಾಗಳಲ್ಲಿಯ ಜಮೀನುಗಳ ಕಿಮ್ಮತ್ತು ಕಟ್ಟುವ ಕೆಲಸ ನಡೆಯುವದು. ಈ ಸಂಬಂಧವಾಗಿ ಆ ಕ್ಷೇತ್ರದೊಳಗಿನ "ಅ" ಮತ್ತು "ಬ" ವರ್ಗಗಳಲ್ಲಿರುವ ಸಂಘಗಳ ಮೆಂಬರರ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವವು. ಅರ್ಜಿದಾರರು ಬೇಡಿದ ಸಾಲದ ಪ್ರತಿ ರೂ ೧೦೦ಗಳಿಗೆ (ರೂ ೧೦ ಕಿಮ್ಮತ್ತಿನ) ಒಂದು ಶೇರಿನ ರಕಮು ಮೆಂಬರತನದ ಫೀ ಮತ್ತು ಜಮೀನಿನ ಕಿಮ್ಮತ್ತು ಕಟ್ಟುವ ಖರ್ಚು ಮೊದಲೇ ಕೊಡತಕ್ಕದ್ದು..

"ವತನಿ ಜಮೀನುಳ್ಳವರ ಸಾಲದ ಅರ್ಜಿಗಳನ್ನು ಸದ್ಯ ಹಿಡಿಯಬಾರದೆಂದು ಠರಾಯಿಸಿರುತ್ತದೆ. ಈ ವಿಷಯವಾಗಿ ಖಲಾಸ ಚರ್ಚೆ ಮಾಡಿ ಕಮಿಟಿಯವರು ಮಾಡುವ ಠರಾವು ಇನ್ನು ಮೇಲೆ ಜಾಹೀರ ಮಾಡತಕ್ಕದ್ದು. ಈ ಗೊತ್ತುವಳಿಗಳಿಗೆ ಅನುಸಾರವಾಗಿ ಅರ್ಜಿ ಮಾಡುವವರು ತ್ವರೆ ಮಾಡಬೇಕು.

ಅರ್ಜಿ ಮತ್ತು ಇತರ ಮಾಹಿತಿಯ ಫಾರ್ಮುಗಳು ಗದಗಿನಲ್ಲಿ ಸಂಘದ ಮೆ|| ಚೇರಮನ್, ರಾ. ಸಾ. ವ್ಹಿ. ಪಿ. ಚವಡಿ ಇವರ ಕಡೆಗೂ, ಮೆ|| ಡಿ. ಆರ. ಗರ್ನಾಯಕರ, ಮಿ|| ಎಮ್. ಎಸ್ ಕುಲಕರ್ಣಿ ಇವರ ಕಡೆಗೂ ಮತ್ತು ಮೆ|| ಲ್ಯಾಂಡವ್ಹ್ಯಾಲುಅರ ಇವರ ಕಡೆಗೂ ಸಿಗುವ ವ್ಯವಸ್ಥೆಯಾಗಿದೆ.

ಶ್ರೀಮಂತರ ಮನೆಯ ಮದುವೆ

ಪಂಜಾಬದ ಸರ ಶಾದಿಲಾಲರು ತಮ್ಮ ಮಗಳ ಮದುವೆ ಮಾಡಿದರು. ಅಳಿಯನಿಗೆ ೨೦ ಸಾವಿರ ವರದಕ್ಷಿಣೆ, ೫೦೦೦ ಆಭರಣ, ಒಂದು ಆಕಳು, ಆರು ಎಕರೆ ಭೂಮಿ. ಜರತಾರಿಯ ವಸ್ತ್ರ ಮತ್ತು ಬೆಳ್ಳಿ ಬಂಗಾರದ ಪಾತ್ರೆಗಳನ್ನು ಕೊಟ್ಟರು.

ಅಗದೀ ಕೆಟ್ಟ ವ್ಹಾಯಿಸರಾಯರು-

ಹಿಂದುಸ್ಥಾನಕ್ಕೆ ವಸಾಹಾತಿನ ಸ್ವರಾಜ್ಯ ಕೊಟ್ಟ ಅಥವಾ ಕೊಡಲಪೇಕ್ಷೆಯುಳ್ಳವರಾದ ಲಾರ್ಡ ಆಯರ್ವಿನಸಾಹೇಬರು ಘನವಂತರೂ, ದೊಡ್ಡ ವ್ಹಾಯಿಸರಾಯರೂ ಎಂದು ಶ್ಲಾಘನೆ ಮಾಡುವದು ತಪ್ಪು. ಅವರು ಅತಿ ಕೆಟ್ಟ ವ್ಹಾಯಿಸರಾಗಿದ್ದಾರೆಂದು ಲಂಡನದ ನ್ಯೂಸ್ಟೇಟ್ಸಮನ್ನ ಪತ್ರವು ಟೀಕೆ ಮಾಡಿದೆ.

ಕಾಜಿಯ ಮೇಲೆ ಫೌಜದಾರಿ-

ಮುಂಬಯಿಯ ಕಾಜಿಸಾಹೇಬರ ಮೇಲೆ ಒಬ್ಬನು ಕಚೇರಿಯಲ್ಲಿ ಫಿರ್ಯಾದಿ ಮಾಡಿದ್ದಾನೆ. ತಾನು ಜೀವಂತನಿರಲಿಕ್ಕೆ ಕಾಜಿಸಾಹೇಬರು ತನ್ನ ಹೆಂಡತಿಯನ್ನು ಬೇರೊಬ್ಬನಿಗೆ ಮದುವೆ ಮಾಡಿಸಿದರೆಂದು ಫಿರ್ಯಾದಿಯ ಅಂಬೋಣವಿರುತ್ತದೆ.

ಇಂಗ್ಲಿಷ ಕನ್ನಡ ನಿಘಂಟು-

ಮೈಸೂರ ದರಬಾರಿನವರು ಇಂಗ್ಲಿಷ ಮತ್ತು ಕನ್ನಡದಲ್ಲಿ ಒಂದು ಅಚ್ಚುಕಟ್ಟಾದ ಡಿಕ್ಷನರಿಯನ್ನು ಬರೆಯಿಸಲು ೫೦ ಸಾವಿರ ರೂಪಾಯಿಗಳನ್ನು ಮಂಜೂರ ಮಾಡಿದ್ದಾರೆ. ಐದು ವರ್ಷಗಳ ವರೆಗೆ ಪ್ರತಿವರ್ಷ ಹತ್ತು ಸಾವಿರದಂತೆ ಕೊಡುತ್ತಾ ಹೋಗುವರು. ನಿಘಂಟ ಸಿದ್ಧ ಪಡಿಸಲು- ಕೆಲವರನ್ನು ನೇಮಿಸಿದ್ದಾರೆ.

ವಿವಿಧ ವರ್ತಮಾನಗಳು.

—(೦)—

ರಾವುಂಡ ಟೇಬಲದಲ್ಲಿ ಸನಾತನ ಹಿಂದೂ ಧರ್ಮಾಭಿಮಾನಿಗಳ ಪ್ರತಿನಿಧಿಗಳಿಗೆ ಹೆಚ್ಚು ಸ್ಥಳ ಕೊಡಬೇಕೆಂದು ವಿನಂತಿ ಮಾಡಿಕೊಳ್ಳಬೇಕೆಂಬ ಠರಾವು ಮದ್ರಾಸದಲ್ಲಿ ಸೇರಿದ ಸನಾತನ ಧರ್ಮಾಭಿಮಾನಿಗಳ ಪರಿಷತ್ತಿನಲ್ಲಿ ಪಾಸಾಯಿತು.

ಪಂಡಿತ ಮಾಲವೀಯರವರು ಕುಂಭಮೇಳೆಯ ಸಮಯದಲ್ಲಿ ಸನಾತನ ಧರ್ಮದ ಮಹಾ ಪರಿಷತ್ತು ಕೂಡಿಸತಕ್ಕವರಿದ್ದಾರೆ.

ಮುಂಬಯಿ ಹಾಯಕೋರ್ಟಿನಲ್ಲಿ ಒಬ್ಬ ಮುದುಕನು ಹೃದಯಕ್ರಿಯೆ ಬಂದಾಗಿ ಸತ್ತನು. ಇನ್ನೊಬ್ಬನು ಸತ್ತು ಬಿದ್ದದ್ದು ಕಂಡಿತು. ವಾರಸದಾರರ ಗೊತ್ತುಹತ್ತದ್ದರಿಂದ ಎರಡೂ ಹೆಣಗಳನ್ನು ಪೋಲೀಸರ ವಶ ಮಾಡಿದರು.

ಸರ ಕೆ. ವ್ಹಿ. ರಡ್ಡಿಯವರ ಜಡ್ಡು ಕೆಲಮಟ್ಟಿಗೆ ಚಿಂತಾಜನಕವಾಗಿರುವದರಿಂದ, ಜನರ ಕೂಡ ಮಾತಾಡಬಾರದೆಂದೂ, ಸಂಪೂರ್ಣ ವಿಶ್ರಾಂತಿ ತಕ್ಕೊಳ್ಳಬೇಕೆಂದೂ ಡಾಕ್ಟರರು ಕಡ್ಡಾಯವಾಗಿ ಹೇಳಿದ್ದಾರೆ.

ತುಮಕೂರದಲ್ಲಿರುವ ಇಂಗ್ಲಿಷ ಕಾಲೇಜವನ್ನು ಬಂದು ಮಾಡಿ, ಶಿವಮೊಗ್ಗಿಯಲ್ಲಿಯ ಕಾಲೇಜವನ್ನು ಬೆಳೆಸಬೇಕೆಂದು ಮೈಸೂರ ಯುನಿವರ್ಸಿಟಿಯಲ್ಲಿ ಠರಾವಾಯಿತು.

ವಿಜಯ.

ಧಾರವಾಡ ತಾ. ೬-೧೧-೧೯೨೯ನೇ ಇಸ್ವಿ.

ಶ್ರೀ.

ವಿಜಯೋಂ ಶ್ರೀರನ್ನೀತಿ
ರ್ಧ್ರುವಾ ನೀತಿ ರ್ಮತಿರ್ಮಮ ॥
ದಿ "ವಿಜಯಂ" ಶ್ರೀಶರ್ವಶ್ಚ ।
ನಾವಿ ಶ್ರೇಯಸ ವಿಜಯಸನ್ನಿಧೌ ಮಾಸ್ಮಾ ॥೧॥

ಸಂಸ್ಥಾನದ ಪ್ರಜರೂ, ರಾವುಂಡ ಟೇಬಲವೂ.

ಸಂಸ್ಥಾನದ ಪ್ರಜರು ರಾವುಂಡ ಟೇಬಲಿನ ಪರಿಷತ್ತಿನಲ್ಲಿ ಪ್ರವೇಶಿಸಿ ಪ್ರತಿನಿಧಿಗೆ ಆಮಂತ್ರಣವಿರಬೇಕೆಂದು ಲಾರ್ಡ ಇರ್ವಿನ ಸಾಹೇಬರಿಗೆ ಪತ್ರ ಬರೆದಿದ್ದರು. ಸಾಹೇಬರು ಆ ಬಗ್ಗೆ ಸರಕಾರದ ಉತ್ತರ ಕೊಟ್ಟಿದ್ದಾರೆ. ರಾವುಂಡ ಟೇಬಲ ಪರಿಷತ್ತಿನಲ್ಲಿ ಹಿಂದೀ ಸರಕಾರ ಮತ್ತು ಸಂಸ್ಥಾನಿಕರ ಸಂಬಂಧಗಳನ್ನು ಕುರಿತು ವಿಚಾರ ನಡೆಯುವದಲ್ಲದೆ, ಅವರ ಭಾಗಗಳ ಆಡಳಿತದ ವಿಚಾರ ನಡೆಯಲಾರದು. ಸಂಸ್ಥಾನಿಕರು ಅಲ್ಲಿ ದೊರೆತನದ ಮಟ್ಟಿಗೆ ಸ್ವತಂತ್ರರಾಗಿದ್ದು ಭಿನ್ನ ಭಿನ್ನವಾದ ವ್ಯವಸ್ಥೆಗಳಿಂದ ಆಳ್ವಿಕೆ ನಡೆಸುವವರು ಅವರ ಆಡಳಿತದಲ್ಲಿ ಕೈ ಹಾಕುವದೆಂದು ಅರ್ಥ ಆಗುವದಿಲ್ಲವೆಂಬುದು. ಇವರಿಗೆ ಕೊಟ್ಟ ಉತ್ತರದ ತಾತ್ಪರ್ಯವಾಗಿರುತ್ತದೆ. ಸಂಸ್ಥಾನಿಕರು ಸ್ವತಂತ್ರರಾಗಿದ್ದರೆ ಪ್ರಜರು ಸಂಸ್ಥಾನಿಕರನ್ನು ಹಿಂದಿಗೆ ತಳ್ಳಿ ಜೀವನವು ಪರತಂತ್ರವಾಗಿ ಇಟ್ಟುಕೊಳ್ಳುವುದೇಕೆ? ಇಂಗ್ರೇಜಿ ರಾಜ್ಯದಲ್ಲಿ ಇವರೆಲ್ಲ ದೊಡ್ಡ ಜಹಗೀರದಾರರಾಗಿದ್ದು ಇವರ ಪ್ರಜರು ಇಂಗ್ರೇಜಿ ರಾಜ್ಯದಲ್ಲಿ ಅನುಭವಿಸುವಂಥ ಎಲ್ಲ ಹಕ್ಕುಗಳನ್ನು ಅನುಭವಿಸುವದಕ್ಕೆ ಹಕ್ಕುದಾರರಿರುತ್ತಾರೆ. ಸಂಸ್ಥಾನಿಕರು ಪ್ರಜರ ಮೇಲೆ ಕಾಂಗ್ರೆಸ್ಸನ್ನು, ಹತೋಟಿಯನ್ನು, ಅವರು ತೀರ್ಮಾನಿಸಿದರೆ ಬ್ರಿಟಿಶ ಸರಕಾರದ ತೀರ್ಮಾನವಾಯಿತು. ಸರಕಾರದ ಸ್ವರಾಜ್ಯ ಅನುಭವಿಸುವ ಹಿಂದೀ ಸರಕಾರವು ಸಂಸ್ಥಾನಿಕರನ್ನು ಒತ್ತಾಯದಿಂದ ಆಳುವಂಥಾದ್ದಾಗಿದೆ. ಸಂಸ್ಥಾನಿಕರು ಭಯಂಕರವೆನಿಸುವಂಥ, ಅಸ್ವಸ್ಥವೆನಿಸುವಂಥ, ಅನ್ಯಾಯಕರವೆನಿಸುವಂಥ ಕೃತ್ಯಗಳನ್ನು ಮಾಡುತ್ತಾರೆ; ಇಂಥವನ್ನು ಮಾಡಿದ್ದಾರೆಂದು ಕಂಡು ಬಂದರೇ ಬ್ರಿಟಿಶ ಸರಕಾರದವರು ಕೈ ಹಾಕುವರೆಂಬ ಮಾತು ಸಮಂಜಸವೆನಿಸುವದಿಲ್ಲ. ತಿರುಪ್ರಾಂತಗಳ ಅನೇಕ ಕಷ್ಟಗಳನ್ನು ಮಾಡಲಿ; ಕೊಲೆ ಸುಲಿಗೆಗಳನ್ನು ಮಾಡಲಿ; ಅದರ ಬಗ್ಗೆ "ಬಹಳ ಹಾನಿ ಮಾಡಿದ ದಾಯಾದನ" ನೆಂದು ಸ್ಪಷ್ಟ ಮಾಡಿದರೆ ಆತನ ಸಮಾಚಾರ ತಕ್ಕೊಳ್ಳಲ್ಪಡುವದು. ಶ್ರೀಕೃಷ್ಣನ ಹೇಳಿದಂತೆ ಗ್ರಹದಲ್ಲಿ ಅರ್ಥ ಆಯಿತೆನಿಸುತ್ತದೆ. ಸಂಸ್ಥಾನದಲ್ಲಿ ಪ್ರಜರು ಕೊಡುವಂಥ ಅನ್ಯಾಯಗಳಿಗೆ ಸರಕಾರ ಇದ್ದರೆ, ಬಹುಮಟ್ಟಿಗೆ ಪ್ರಜಾಪಕ್ಷದ ಅಧಿಕಾರ ಕೊಡುವದೇ ಲಾಭದಾಯಕವಾಗುತ್ತದೆ.

ಶ್ರೀ ಕುಲಕರ್ಣಿ ಕರವೀರಪ್ಪನವರ ದತ್ತಕ ಪ್ರಕರಣದ ಜಯ.

ಇಲ್ಲಿಯ ವಕೀಲರಾದ ಶ್ರೀ. ಕರವೀರಪ್ಪ ಕುಲಕರ್ಣಿಯವರ ಮಗನ ದತ್ತಕ ಪ್ರಕರಣದ ಅಪೀಲು ಪ್ರೀವ್ಹಿ ಕೌನ್ಸಿಲಕ್ಕೆ ಹೋಗಿತ್ತಷ್ಟೇ; ಅದರಲ್ಲಿ ಶ್ರೀ ಕರವೀರಪ್ಪನವರಿಗೆ ಜಯ ಬಂದಿತೆಂದು ನಿನ್ನೆ ದಿವಸ ಇಲ್ಲಿಗೆ ಟೆಲಿಗ್ರಾಂ ತಾರು ಬಂದಿರುತ್ತದೆ. ಅಪೀಲು ನಡೆಸಲು ಬ್ಯಾರಿಸ್ಟರಿಗೆ ಸಹಾಯ ಮಾಡಲು ಶ್ರೀ ಕರವೀರಪ್ಪನವರು ಸ್ವತಃ ವಿಲಾಯತಿಗೆ ಹೋಗಿದ್ದರು. ವಿಲಾಯತಿಗೆ ಹೋದವರಲ್ಲಿ ಜನಾಂಗಗಳಾಗಲಿ, ತಾರೆಂಬ ಕಲ್ಪನೆಯು ಆಗ ಸ್ಪಷ್ಟ, ಅಲ್ಲಿ ಆ ಮಾಂಸಾಹಾರಿ ಭೋಜನಾಲಯಗಳು, ಮನೆ ಸಹ ಊಟ ಇವರು ಪ್ರತ್ಯಕ್ಷ ಅನುಭವದ ಸಂಗತಿಯನ್ನು ಹೇಳುತ್ತಾರೆ. ಇವರು ಅಲ್ಲಿ ಫ್ರಿ ಟಸ ನನ್ನು ಎಂಬ ಹೆಣ್ಣುಮಗಳ ಮನೆಯಲ್ಲಿ ಬಿಡಾರ ಮಾಡುತ್ತಿದ್ದರು. ಇವಳು ಫ್ರೆಂಚ ಸ್ತ್ರೀ ತನ್ನ ಅಪ್ಪನಂತೆ ಮಾಯಾದವಳು ಅಲ್ಲದೇ ಪವಿತ್ರ ಸ್ವಭಾವದವಳು. ಇವಳು ಹಿಂದುಸ್ತಾನದ ಶಾಕಾಹಾರವನ್ನು ಮಾಡುವದನ್ನು ಇವರು ಕಲಿಸಿದರು. ಇವರು ಇಂಗ್ಲಂಡ, ಫ್ರಾನ್ಸ, ಜರ್ಮನಿ ದೇಶಗಳಲ್ಲಿ ದೊಡ್ಡ ದೊಡ್ಡ ಭೋಜನಾಲಯಗಳಲ್ಲಿ ಶಾಕಾಹಾರಿ ಆಗಿ ಅಡಿಗೆ ಮಾಡಿಸಿ ಕೊಟ್ಟರು. ಒಂದು ಹೊಟೆಲಿನಲ್ಲಿ ಶಾಕಾಹಾರದ ಊಟವು ಬಹು ರುಚಿಯಾಗಿತ್ತು. ಈ ಊಟ ಕಂಡು ಶ್ರೀ ಕುಲಕರ್ಣಿಯವರು ಬೆರಗಾದರು. ಮಾಂಸಾಹಾರಕ್ಕಿಂತ ಶಾಕಾಹಾರಕ್ಕೆ ಇವತ್ತು ಮುಮ್ಮಡಿ ಬೆಲೆ ಕೊಡಬೇಕಾಗುತ್ತದೆ.

ವಿಲಾಯತಿ ಪ್ರವಾಸದ ವರ್ಣನೆಯನ್ನು ಅನೇಕರು ಮಾಡಿದ್ದಾರೆ. ಅಲ್ಲಿ ಶಾಕಾಹಾರದಿಂದಲೇ ಇದ್ದು ಜೀವಿಸಬಹುದೆಂದು ಸ್ಪಷ್ಟವಾಗಿ ಬರೆದದ್ದು ಕಂಡು ಬಂದಿಲ್ಲ. ಶ್ರೀ ಕರವೀರಪ್ಪನವರು ಈ ಸಂಗತಿಯನ್ನು ವಿಶದವಾಗಿ ಬರೆದು ಪ್ರಕಟಿಸ ಬೇಕೆಂದು ತಿಳಿಯಬೇಕಾಗಿದ್ದು.

ಶ್ರೀ ನೀತಿಬೋಧಿನಿ

—(೭)

ವಿದ್ವತ್ ಅಗ್ರಗಣ್ಯರಾದ ಶ್ರೀ ನಾರಾಯಣ ಶಿವರಾಮ ದೀಕ್ಷಿತರು ರಚಿಸಿದುದು. ಕ್ರೌನ ೧೬ ಪೇಜಿನ ೨೦೦+೧೪೪ (ಕ್ರೌನ ೧/೧೬.) ಪುಟಗಳುಳ್ಳ ಗ್ರಂಥಗಳು. ಅಲ್ಲಲ್ಲಿ ಸಂಸ್ಕೃತ ವಾಕ್ಯಗಳೂ ಇವೆ. ಬೇರೆ ಭಾಷೆಯಲ್ಲಿ ಪ್ರಸಿದ್ಧ ನೀತಿಯ ಗ್ರಂಥಗಳು ಅಲ್ಲಲ್ಲಿ ಸ್ವಲ್ಪ ವಿಷಯದ ಬಿಡಿ ಬಿಡಿ ಗಳೇ ಇದ್ದು, ಹಳೆಯ ಕಾಲದ ಮಾತ್ರ ಉಳಿದಿರುವವು. ಶ್ರೀ. ದೀಕ್ಷಿತರ ದೀಕ್ಷಿತರು ಪರಂಪರೆಯ ಅಭಿಮಾನವನ್ನು ಹೊಂದಿದುದು ಸ್ಪಷ್ಟವೇ ಇದೆ. ನೀತಿ ಸಂಬಂಧದ ಸುಭಾಷಿತ ಪದ್ಯದಿಂದಲೇ ಹೆಚ್ಚು ಸ್ಪಷ್ಟವಾಗುವದು. ಪದ್ಯಗಳು ಮನೋರಂಜಕ ವಿಷಯವನ್ನು ಬಾಯಲ್ಲಿ ನೆಲೆಗೊಳಿಸುವ ಶಕ್ತಿ ಸಾಧಕವಾಗಿದೆ. ಮಕ್ಕಳಿಗೆ ನನ್ನ ಪದ್ಯಗಳನ್ನು ಕಲಿಸಿದರೆ ಅವರ ಮನಸ್ಸಿನ ಮೇಲೆ ಹೃದಯದ ಮೇಲೆ ಪರಿಣಾಮ ಮಾಡುತ್ತಲೇ ಇರುತ್ತದೆ. ಈ ಗ್ರಂಥದ ಮಹಾ ನೀತಿ ವಿಷಯವನ್ನು ಛಂದಸ್ಸಿನಲ್ಲಿ ಹೇಳುವದು ಅತಿ ಕಷ್ಟ. ಆದರೆ ಅವು ಸುಗಮವಾಗಿ ಬೇಕು; ಸರಳವಾಗಿರಬೇಕು; ಶಿವಗೂ ಸಾಧ್ಯವಾಗುವ ಯುಕ್ತಿಗಳಿಂದ ಇರಬೇಕು. ಇಂಥ ನೋಡಿದರೆ ಗ್ರಂಥ ರಚನೆ ಉದ್ದೇಶ ವಿಫಲವಾಗುವ ಸಂಭವವೂ ಉಂಟು. ಪ್ರಸ್ತುತ ಗ್ರಂಥದಲ್ಲಿ ಕಂದಗಳ ರಚನೆ ಚೆನ್ನಾಗಿಲ್ಲ. ಪರಂತು ಅಲ್ಪ ವೃತ್ತಗಳು ಮಾತ್ರ ಮನೋಹರವಾಗಿವೆ. ಕಂದಗಳನ್ನು ಕಟ್ಟುವ ಹೊರತಿನ ಬೀಳದ ತರುಗೆ ನಡೆಯಲಾಗಿರುವ ನೀತಿ ಕಾವ್ಯದಲ್ಲಿಯೇ ಇದೇ ವೃತ್ತವನ್ನು ರಚಿಸಿದ್ದರೆ ಹೆಚ್ಚು ಉಪಯುಕ್ತವಾಗುತ್ತಿತ್ತು. ಸಂಸ್ಕೃತ ಗ್ರಂಥ ದಿಂದ ಆರಿಸಿದ ಪದ್ಯಗಳಿಂದ ಕೆಲವನ್ನು ಅಯ್ದು ತನ್ನ ಅನುವಾದದಿಂದ ಹಲವನ್ನು ಕೂಡಿಸಿ ಸಂಸ್ಕೃತದಲ್ಲಿಯ ಎಲ್ಲ ವಿಷಯಗಳ ಸಮಾವೇಶವಾಗುವಂತೆ ಕಡಿಮೆಯಲ್ಲಿ ಶ್ಲೋಕಗಳ ಅರ್ಥವನ್ನು ಕೊಟ್ಟು, ಪರಿಶ್ರಮದಿಂದ ಅಭ್ಯಾಸಿಸಿ ಬರೆದ ಈ ಗ್ರಂಥವು ಸಂಗ್ರಹಯೋಗ್ಯವಾಗಿದೆ. ಮುದ್ರಣ ಮುದ್ರಾದ ಸುಣ್ಣ ಶುಂಠಿ ಕಾಗದದಿಂದ ಕಳೆದು ನಿಂತ ಪುಸ್ತಕಕ್ಕೆ ನೀತಿ ಪ್ರಸಾರದ ಉದ್ದೇಶದಿಂದಲೇ ಆ ರೀತಿ ಮಾತ್ರ ಬೆಲೆ ಇಟ್ಟಿರುವರು. ಮುಂದೆ ಜನರು ಪ್ರೋತ್ಸಾಹಿಸಬೇಕು.

ಪ್ರಕಟನೆ ೩.

ಪ್ರಥಮ ಕರ್ನಾಟಕ ವಾಚನಾಲಯ ಪರಿಷತ್ತು

ಧಾರವಾಡ.

—(೦)—

ಈ ಮೊದಲು ಪ್ರಸಿದ್ಧ ಪಡಿಸಿದಂತೆ ಸ್ವಾಗತ ಮಂಡಳದ ಸಭಾಸದರ ಸಭೆಯು ತಾ॥ ೧- ೧೦-೧೯೩೬ರಲ್ಲಿ ಶ್ರೀ ಶಾಂತೇಶ ವಾಚನಾಲಯದಲ್ಲಿ ಸೇರಿ; ಶ್ರೀನಿವಾಸ ಕುಲಕರ್ಣಿ ಕಡಿಮನಿಯವರನ್ನು ಸ್ವಾಗತ ಮಂಡಳದ ಅಧ್ಯಕ್ಷರನ್ನಾಗಿ ಆರಿಸಲಾಗಿದೆ. ಕಿರಪಟ್ಟಿ ಶ್ರೀ ವೀರಭದ್ರನಾಥ ವಾಚನಾಲಯದ ಸಂಸ್ಥಾಪಕರಾಗಿರುವ ಶ್ರೀ ಪುಟ್ಟ ... ಹಾಗೂ "ಕರ್ಮವೀರ" ದ ಸಂಪಾದಕರಾಗಿರುವ ಶ್ರೀ ದಿವಾಕರ ರಂಗರಾಯರು ಸ್ವಾಗತ ಮಂಡಳದ ಉಪಾಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ. ... ವಾಚನಾಲಯಗಳ ಸಂಘದ ಅಧ್ಯಕ್ಷರಾಗಿರುವ ಬಿಜಾಪುರದ ಶ್ರೀಮಾನ್ ಎಸ್. ವ್ಹಿ. ನರಸಿಂಹಶಾಸ್ತ್ರಿಗಳವರನ್ನು ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಕೇಳಿಕೊಂಡಿತು; ಅವರಿಂತ ಒಪ್ಪಿಗೆಯು ತಂತಿಯು ಬಂದಿದೆ. ಇಲ್ಲಿಯ ಸುಪ್ರಸಿದ್ಧ ಶ್ರೀ ... ಗರುಡರವರು ತಮ್ಮ ಅನ ... ನಾಟಕಗೃಹವನ್ನು ಪರಿಷತ್ತಿನ ಉಪಯೋಗಕ್ಕಾಗಿ ತಾ॥ ೨೫- ೨೬-೨೭ ಈ ಮೂರು ದಿನ ಅವರಿಗೆ ಕೊಟ್ಟಿದ್ದು, ಅಲ್ಲಿಯೇ ಪರಿಷತ್ತುಗಳು ಜರಗುವವು. ವಾಚನಾಲಯ ಪರಿಷತ್ತು ತಾ॥ ೨೫-೨೬ನೇ ತಾ॥ ಗಳಲ್ಲಿ ಮಧ್ಯಾಹ್ನ ೩ ರಿಂದ ೬ ಗಂಟೆಯವರೆಗೆ ಕೂಡಲಿದೆ. ಇದೇ ಸಮಯದಲ್ಲಿ ಅಖಿಲ ಕರ್ನಾಟಕ ನಾಟ್ಯ ಪರಿಷತ್ತು, ಆಯುರ್ವೇದ ಪರಿಷತ್ತುಗಳು ಜರಗುವವು. ಆದಪರಿಂದ ಅಖಿಲ ಕರ್ನಾಟಕದೊಳಗಿನ ವಾಚನಾಲಯದ ಅಭಿಮಾನಿಗಳೂ, ನಾಟ್ಯಪ್ರೇಮಿಗಳೂ, ಆಯುರ್ವೇದ ಭಿಮಾನಿಗಳೂ ತಂಡ ತಂಡವಾಗಿ ಬಂದು ಪರಿಷತ್ತುಗಳನ್ನು ಯಶಸ್ವಿಯನ್ನಾಗಿ ಮಾಡಬೇಕಾಗಿ ವಿನಂತಿ.

ವಾಚನಾಲಯಗಳ ಪ್ರತಿನಿಧಿ ಫೀ- ೩ ರೂ.

ಸ್ವಾಗತ ಮಂಡಳದ ಸಭಾಸದರಿಗೆ- ೨ ರೂ.

ಪ್ರತಿನಿಧಿ ಫೀ- ೧ ರೂ.

ಪತ್ರಿಕಾಪ್ರದರ್ಶನ- ಪ್ರದರ್ಶನಕ್ಕಾಗಿ ಪತ್ರಿಕೆಗಳನ್ನು ಸಂಗ್ರಹಿಸುವ ಕಾರ್ಯವು ಭರದಿಂದ ಸಾಗಿದೆ. ಸನಾತನ ಧರ್ಮಸಂಜೀವಿನಿ, ವಿಶ್ವಕರ್ನಾಟಕ, ಕರ್ನಾಟಕ ವೃತ್ತ ಮೊದಲಾದವುಗಳ ಸಂಪಾದಕರು ತಮ್ಮ ತಮ್ಮ ಪತ್ರಿಕೆಗಳ ದೊಡ್ಡ ತಿಂಗಳ ಸಂಚಿಕೆಯನ್ನು ಕಳಿಸಿದ್ದಾರೆ. ಎಲ್ಲ ಪತ್ರಿಕಾಕರ್ತರೂ ಶೀಘ್ರವಾಗಿ ದೀಪಾವಳಿ ಕಂಗಾಲ ... ಸಂಚಿಕೆಯನ್ನು ೧೫ನೇ ತಾ॥ ದೊಳಗಾಗಿ ಕಳಿಸಬೇಕೆಂದು ವಿನಂತಿ.

ಪರಿಷತ್ತಿನ ಪ್ರಚಾರಕರಾಗಿರುವ ಶ್ರೀ ಪ್ರ. ಶ್ರೀ. ಹೊಸೂರರವರು ಈಗ ಆಲೂರ, ರೋಣ, ಗದಗ, ಬಳಗಾನೂರ, ಕಿರಪಟ್ಟಿ, ಲಕ್ಷ್ಮೇಶ್ವರ ಮೊದಲಾದವುಗಳ ಪ್ರವಾಸವನ್ನು ಮುಗಿಸಿಕೊಂಡು ಈಗ ಬ್ಯಾಡಗಿ, ಹಾವೇರಿಗಳ ಕಡೆಗೆ ತೆರಳಿದ್ದಾರೆ. ಅವರಿಗೆ ಹೋದಲ್ಲೆಲ್ಲ ವಿಶೇಷವಾದ ಬೆಂಬಲವು ಸಿಕ್ಕಿದೆಯೆಂದು ತಿಳಿದು ಬಂದಿದೆ.

ಸೂಚನೆ.— ಪರಿಷತ್ತಿನಲ್ಲಿ ಚರ್ಚೆಗಾಗಿ ಗೊತ್ತುಗಳನ್ನು ದಯವಿಟ್ಟು ಆದಷ್ಟು ಶೀಘ್ರವಾಗಿ ಕಳಿಸಿಕೊಡಬೇಕು.

ತಮ್ಮ ವಿಧೇಯರಾದ

ಕಾರ್ಯದರ್ಶಿಗಳು

ಶ್ರೀ

"ಶ್ರೀ ಚಿದಂಬರೇಶ್ವ ... "

ಗುರುಳ್ಹೊಸೂರ [illegible]

(ಲೇಖ - [illegible])

೧೭ನೇಯ [illegible] ದ ಚಿದಂಬರ ಸ್ವಾಮಿಗಳ ಜನ್ಮಸ್ಥಾನ ... ಮುರಗೋಡದ ಬಳಿಯಲ್ಲಿಯ ... ಕ್ಷೇತ್ರ ... ದಿನದಲ್ಲಿ ... ಧರ್ಮಸ್ಥರೂ, ... ಶ್ರೀ ಚಿದಂಬರ ದೀಕ್ಷಿತರು ಗುರ್ಲಹೊಸೂರಿನಲ್ಲಿ ಶ್ರೀ ಚಿದಂಬರೇಶ್ವರನ ದೇವಾಲಯವನ್ನು ಸ್ಥಾಪಿಸಿದರು. ಅಂದಿನಿಂದ ಇಂದಿನವರೆಗೆ ನವರಾತ್ರಿಯ ... ಕಾರ್ತಿಕ ... ದಿನದ ... ಅಧ್ಯಾಪಕರೂ ಬ್ರಾಹ್ಮಣ ಸುವಾಸಿನಿ, ಅತಿಥಿ-ಅಭ್ಯಾಗತರಿಗೆ ಅನ್ನಸಂತರ್ಪಣೆ ... ಶ್ರೀ ಚಿದಂಬರೇಶ್ವರ ... ದ ಉತ್ಸವ ನಡೆಯುತ್ತ ಬಂದಿದೆ. ಈ ವರ್ಷವೂ ಉತ್ಸವವು ಸಾಂಗವಾಗಿ ಜರುಗಿತು. ... ದ ಉತ್ಸವ ... ವೇ॥ ... ದೀಕ್ಷಿತರು ... ದೀಪಾರಾಧನ ... ವಿಶ್ವಾಸ ... ವೇ॥ ಬಾಪು ದೀಕ್ಷಿತರು ವೇ॥ ... ದೀಕ್ಷಿತರು, ... ಸುಖಿಗಳೂ, ... ವೇ॥ ಬಾಪೂ ದೀಕ್ಷಿತರು ... ಇದ್ದರು.

ಈ ಸಲದ ಉತ್ಸವದಲ್ಲಿ ಶ್ರೀ ... ವ ... , ... ಗುರ್ಲ ... ಬಂಧುಗಳು, ಗದಗ, ಹೊಸಪೇಟೆ ಮೊದಲಾದ ... ಬಂದಿದ್ದರು. ಇವರೇ ಹೀಗೆ ಶ್ರಮಬಟ್ಟ ಬಳಿಕ ಶ್ರೀ ಚಿದಂಬರ ಭಕ್ತರಾದ ವೇ॥ ಮ ... , ಮಿ. ... ಶ್ರಮಬಟ್ಟಿರೆಂದನ್ನು ಹೇಳಬೇಕು. ಶ್ರೀ. ರಂಗರಾವ ದೇಶಪಾಂಡೆ (ಧಾರವಾಡ) ಶ್ರೀ ... (ನರಗುಂದ) ಈ ಉಭಯ ಗವಯಿಗಳ ಗಾಯನವಾಯಿತು. ... ಬ್ಯಾಡಗಿ, ... ಕುಲಕರ್ಣಿ ಈ ತ್ರಿವರ್ಗದ ಕೀರ್ತನಗಳಾದವು. ೪ ಸಾವಿರ ... ಭೋಜನವಾಯಿತು. ೧-೨ ಸಾವಿರ ಇತರ ಜನರು ಸಂತುಷ್ಟರಾದರು. ಉತ್ಸವಕ್ಕೆ ಬಂದವರ ... ನೋಡಿಕೊಳ್ಳುವಲ್ಲಿ ದೀಕ್ಷಿತ ಬಂಧುಗಳು ತತ್ಪರರಾಗಿದ್ದರು. ಮುಖ್ಯ ... ಪೂರ್ಣ ವಯಸ್ಸಿನವರಿದ್ದರೂ ... ಕಾರ್ಯ ಮಾಡುತ್ತಿದ್ದರು. ಶ್ರೀ ಚಿದಂಬರ ... ಜನರು ... ಕೆಲಸಗಳನ್ನು ... ಶ್ರೀ. ... ಅತಿಥಿ ಅಭ್ಯಾಗತರ ... ಮಾಡುವಂತಾಗಿ ... ಸಭೆ ... ಗುರುವರ್ಯ ... , ತ. ಸ. ಕುಲಕರ್ಣಿ ... ಶ್ರೀ ಚಿದಂಬರೇಶ್ವರನ ... ವಿನಂತಿ.

ಶ್ರೀ ಚಿದಂಬರ ... ದ ... ಅದನ್ನು ... ಗವೆ.

ಗಂಡನು ಹೆಂಗಸಾದನು !!!

—(೦)—

ಮದ್ರಾಸ ಇಲಾಖೆಗೆ ಸೇರಿದ ... ಮುಂದೆ ... ಗಂಡನು ... ಹೆಂಗಸು ... ಗಂಡಸು. ... ಗಂಡಸೇ ಆಗಿದ್ದನು. ಗಂಡಸಿನಂತೆಯೇ ಎಲ್ಲ ಅವಯವಗಳಿದ್ದವು. ಮುಂದೆ ... ಎಲ್ಲ ಅವಯವಗಳು ಹೆಂಗಸಿನಂತಾದವು. ... ಆತನು ... ಗಂಡನ ... ನಾಡಿದಳು.

ವಿಜಯ.

ಧಾರವಾಡ ತಾ ೮-೧೨-೧೯೧೮ನೇ ಇಸ್ವಿ.

ಶ್ರೀ.

ಆ ವಿಜಯೋ ತ್ರಿಶಕ್ತ್ಯಾ
ಸೀ ವರ್ತಕ ಶಿಯ ದೇವತೆ ಖೊಟ್ಟ ಶರತ್ತಿಂ
ದ" ವಿಜಯ " ಶ್ರೀಕರ್ತಃ ।
ನಾವಿಕರಾಗಿ ನಡೆಸುತ್ತಿರುವಾಗ ॥೧॥

ಸ್ವಾಧೀನ ಶಕ್ತಿಯಾಗಿ ಸಹಸ್ರಾಯು.

ಸನಾತನ ಸ್ವರಾಜ್ಯದ ಯುಕ್ತಿಯಿಂದ ಆ ಅರಸರ ಕಾಲದಲ್ಲಿ ಸುದ್ದಿ ಸಡಿಲ ಪ್ರಕರಣಗಳು ನಡೆಯುತ್ತವೆ. ಇದರಿಂದ ಸುದ್ದಿ ಹುಟ್ಟಿಸುವರು; ಕೈಯಲ್ಲಿ ಕೊಟ್ಟು, ಕಾಯದೆಬಿಟ್ಟಿರುವ ದೆವರಕ್ಕೆ ನೆತ್ತಿಗೆ ಇರುವದಿಲ್ಲ. ಲಂಕನ ಸಂತೆ ಟಾಯಿಮ್ಸ ಎಂಬ ಪ್ರಸಿದ್ಧ ಪತ್ರವು ಹುಟ್ಟಿದ ಸುದ್ದಿಯು ಅತ್ಯಂತ್ಯ ಯಶಸ್ವಿಯಾಗಿರುತ್ತದೆ. ಹಿಂದ ಸ್ಥಾನಕ್ಕೆ ಪರಾಕ್ರಾಂತಿದ ಸ್ವಧರ್ಮ ದೊರೆತ ಕಡತ, ಸಂಸ್ಥಾನಿಕರ ಸ್ವಾತಂತ್ರ್ಯ ನಷ್ಟವಾಗುವದು. ಅವರು ಅಧಿಕಾರ ಪ್ರಸ್ತಾವಗಳನ್ನು ಕ ಣ್ಣಾರೆ ಕಾಣುವ ಮುಂಚಿತವಾಗಿಯೇ ತಾವಾಗಿ ತಮ್ಮ ಸುತ್ತಾನಗಳನ್ನು ಮಾಡಿಕೊಂಡು, ಬ್ರಿಟಿಶ ಸರಕಾರದಿಂದ ದೊರೆಯುವ ಸವಲತ್ತುಗಳಿಕ್ಕೆ ಮಾಡಿಕೊಂಡು, ಕಾಲಕ್ರಮದ ದಾರುವದರಿಂದಲೂ, ಇದರಲ್ಲಿ ಎಲ್ಲಕ್ಕೂ ದೇಶದ ಬ್ರಿಟಿಶ ಸರಕಾರದ ಕ್ಕೆ ಮೇರೆ ಖುದರ ಅಧಿಕಾರವು ಕಾಡಿ ದರದ ಸು ಹಾಯವಾಗಿದ್ದರಿಂದಲೇ ಈ ಪತ್ರ ಹೇಳುತ್ತದೆ. ಶ್ರೀ ಮಂತ್ರಿಗಳು ಈ ಪತ್ರದಲ್ಲಿ ಅರಬಸ್ತಾನ ಸ್ವತಂತ್ರ ಬನಕ್ಕೆ ಗೂಢತೆಯಿಂದ. ಶಾಂತಿಯ ಜಗತ್ತಿನಲ್ಲಿ ಸುಂದರ ಮತ್ತು ಅರಬಸ್ತಾನದ ದೇಶವಾಗಿದ್ದು, ಆಲ್ಲಿಯ ಪ್ರಜೆಗಳು ಗೌರವದಿಂದ ಸ್ವದೇಶಿಗೆ ಹಣೆ ಸುಮನಾದರೆ ಸಿನಾಯಿಪೆನಿನ್ಸುಲಿ ಪ್ರಾಂತ್ಯವನ್ನು ಮುಸಲ್ಮಾನರಿಗೆ ಕೊಟ್ಟು ಇದನ್ನ ಬ್ರಿಟಿಶ ರಾಜ್ಯಕ್ಕೆ ಸೇರಿಸುವರೆಂದು ಕೆಲವು ಪತ್ರಗಳು ಹಿಂದೆ ಪ್ರಕಟಿಸಿದ್ದವು. ಆದರೆ ಪುನರಾವೃತ್ತಿಯನ್ನು ಬೇರೊಂದು ರೀತಿಯಿಂದ ಈ ಸಂತೆ ಟಾಯಿಮ್ಸ ಪತ್ರವು ತಿಳಿಸುತ್ತದೆ. ಈ ಸುದ್ದಿಯು ಹಿಂದೆ ಧರ್ಮದ್ವೇಷದ ಪರಿಣಾಮದ ಸ್ವತಂತ್ರ್ಯಕ್ಕೆ ವಿರುದ್ಧವಿರುವಂಥ ಜನರ ಅಧಿಕಾರಗಳ ಪಕ್ಷ್ಮ ಕ್ಕವೆಂದೂ, ಸಹಜವಾಗುತ್ತದೆ. ರಾಷ್ಟ್ರ ಹೋಲಿಗೆ ಅಮುಕ್ತ ಸಿಗುವ ಸಂಸ್ಥಾನಿಕರಲ್ಲಿ ಈ ಮಹಾರಾಜರು ಬ್ರಿಟಿಶರಾಗಲಿದ್ದವರು, ಅವರು ಆ ಸೀಮೆಯಲ್ಲಿ ಶಕ್ತವಾದಷ್ಟು ಸ್ವದೇಶ ಸ್ವಾತಂತ್ರ್ಯ ಕಾಯ್ದುಕೊಳ್ಳಲಿಚ್ಛಿಸುವರು. ಇಂಥ ರಾಜ್ಯತ್ಯಾಗ ಮಾಡಿ, ಎಲ್ಲರೂ ಸನ್ಮಾನದಿಂದ ಪ್ರೋಟರಿನಿಂದ ಜೀವಿಸುವರೆಂದು ಸ್ವಾಯತ್ತ ಹರ ಸದು. ಹೀಗೆ ಬ್ರಿಟಿಶ ಸರಕಾರಕ್ಕೆ ಮಾಡಿದ್ದಾಗಿರುತ್ತದೆ.

ಕೊರಿಯದ ಮಂತ್ರಿಗಳು ಕುತ್ತು ದಾಟಿದರು.

— (೮) —

ಇಂಗ್ಲಂಡದ ಆಲ್ಬರ್ಟ ಸಭೆಯಲ್ಲಿ ರಶಿಯಾ ಮತ್ತು ಇಂಗ್ಲಂಡದ ಸರಕಾರ ರಾಜಕೀಯ ವಿಷಯ ಭಿನ್ನ. ವ್ಯಾಪಾರ ಮುಂತಾದ ಇತರ ಬಾಬುಗಳ ಬಗ್ಗೆ ಕೊರಿಯಾದವರು ಮಾಡಿಕೊಂಡ ಒಪ್ಪಂದಕ್ಕೆ ವಿರುದ್ಧ ಅರ್ಜಿ ಒಳ್ಳೆ ನಡೆಸಿದ್ದರು. ಬ್ರಿಟಿಶರವು ತಂದು, ಅವನ್ನು ಬಹುಮತದಿಂದ ಪಾಸ ಮಾಡಿಕೊಂಡರು. ಇದರ-ತ ನಿರ್ದಿಷ್ಟವಾಗಿ ಜನರ ವಿಷಯವಾಗಿರಲು ಇದೇ ಆಲ್ಬರ್ಟ ಸಭೆಯಲ್ಲಿ ಎರಡು ಬಲವಾಗಿ ಕೊರಿಯಾದವರಿಗೆ ಪ್ರಾಣಭಯವಾಗಿ ಪ್ರಾಣಾಪಾಯ' ಆಗಿದೆ ಹೇಳಿ ಕೇಳಿ, ಮಂತ್ರಿಗಳ ಕಡೆಗೆ ದಾಖಲೆಗಳ ಸ ಧಿಯುತ್ತಿರುವ ರಿಂದ, ಇದರ ಬಹುಮತದ ದಾರಿಯನ್ನು ತಾವೆನ್ನು ಒಕ್ಕಟ್ಟಕ್ಕೆ ತರಲಿಲ್ಲೆಂದು ಮಂತ್ರಿಗಳು ಹೇಳಿ, ಪಾರಾ ಗಿದ್ದಾರೆ.

